
# ರಂಗಸಂಪನ್ನರು



## ಡಾ॥ ಚಂದ್ರಶೇಖರ ಕಂಬಾರ

• ಶ್ರೀಮತಿ ಡಾ॥ ಎಚ್. ನಾಗವೇಣಿ

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಡಾ|| ಚಂದ್ರಶೇಖರ ಕಂಬಾರ

**ಡಾ|| ಎಚ್. ನಾಗವೇಣಿ**

**ಕರ್ನಾಟಕ ನಾಟಕ ಅಕಾಡೆಮಿ**
ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

Dr. Chandrashekhar Kambar : A Monograph in Kannada by
Dr. H. Nagaveni

Published by
R. S. Dalawai
Registrar, Karnataka Nataka Academy
Ravindra Kalakshetra, J.C. Road, Bangalore - 560 002

First Impression : March, 2004
Pages : 100 + 8 Photos
Cover Design : H. K. Dwarakanath (Dwaraki Rangayana)
© Author

Printed by
Lipi Mudrana, No. 1, Bugle Rock Road, Bangalore - 560 004
Ph : 080-26522061
Price : Rs. 40 /-

ಡಾ॥ ಚಂದ್ರಶೇಖರ ಕಂಬಾರ : ರಂಗಸಂಪನ್ನರ ಕಿರು ಜೀವನ ಚರಿತ್ರೆ

ಲೇಖಕರು : ಡಾ॥ ಎಚ್. ನಾಗವೇಣಿ

ಮುಖಪುಟ ವಿನ್ಯಾಸ : ಎಚ್. ಕೆ. ದ್ವಾರಕಾನಾಥ್ (ದ್ವಾರಕಿ ರಂಗಾಯಣ)

ಪ್ರಕಾಶಕರು : ಆರ್. ಎಸ್. ದಳವಾಯಿ
ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು - ೫೬೦ ೦೦೨

ಪ್ರಥಮ ಮುದ್ರಣ : ಮಾರ್ಚ್ ೨೦೦೪

ಪುಟ : ೧೦೦ + ೮

ಮುದ್ರಣ : ಲಿಪಿ ಮುದ್ರಣ,
ನಂ. ೧, ಬ್ಯೂಗಲ್ ರಾಕ್ ರಸ್ತೆ ಬೆಂಗಳೂರು - ೪
೦೮೦-೨೬೫೨೨೦೬೧

ಬೆಲೆ : ರೂ. ೪೦/-

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ಭೂತಪೂರ್ವ ಅಧ್ಯಕ್ಷರಾಗಿದ್ದ ಪ್ರೊ. ಸಿ. ಜಿ ಕೃಷ್ಣಸ್ವಾಮಿ ಅವರು ತಮ್ಮ ಅವಧಿಯಲ್ಲಿ ಪ್ರಾರಂಭಿಸಿದ ಅನೇಕ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದು - 'ರಂಗಸಂಪನ್ನರು' ಪುಸ್ತಕ ಮಾಲಿಕೆಯ ಪ್ರಕಟಣೆ. ಇದರ ಮಹತ್ವ ಹಾಗೂ ಉಪಯುಕ್ತತೆಯನ್ನು ಮನಗಂಡು 'ರಂಗಸಂಪನ್ನರು' ಮಾಲಿಕೆಯನ್ನು ಈ ಅಕಾಡೆಮಿಯೂ ಮುಂದಿವರಿಸಿರುತ್ತದೆ. ಕರ್ನಾಟಕ ನಾಟಕ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾಗಿದ್ದ ಶ್ರೀ ಗಿರೀಶ್ ಕಾರ್ನಾಡರಿಂದ ಮೊದಲುಗೊಂಡು ಕಳೆದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಸಿ. ಜಿ. ಕೃಷ್ಣಸ್ವಾಮಿಯವರ ವರೆವಿಗೂ ಆಗಿ ಬಂದ ಎಲ್ಲ ಅಧ್ಯಕ್ಷರುಗಳ ಪರಿಚಯ ಕೃತಿಯನ್ನು (ಈಗಾಗಲೇ ಹಿಂದಿನ ಅಕಾಡೆಮಿ ಹೊರತಂದಿರುವ ನಾಟಕ ಅಕಾಡೆಮಿ ಅಧ್ಯಕ್ಷರುಗಳನ್ನು ಹೊರತುಪಡಿಸಿ) ನಾಡಿನ ಪ್ರಸಿದ್ಧ ರಂಗ ಚಿಂತಕರುಗಳ ಮೂಲಕ ಸಿದ್ಧಗೊಳಿಸಿ ಹೊರತರುವ ಕಾರ್ಯ ಈ ಪುಸ್ತಕ ಮಾಲಿಕೆಯಡಿ ಹಮ್ಮಿಕೊಂಡಿದ್ದೇವೆ. ಈ ಪ್ರಕಟಣಾಕಾರ್ಯದಲ್ಲಿ ನೆರವಾದ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೆ ಕೃತಜ್ಞತೆಗಳು.

ಡಾ|| ಚಂದ್ರಶೇಖರ ಕಂಬಾರರು 1982 ರಿಂದ 1987ರ ಅವಧಿಯಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದು ಇವರ ಅವಧಿಯಲ್ಲಿ ಜಾನಪದ ಹಾಗೂ ಗುಡ್ಡಗಾಡು ಕ್ಷೇತ್ರಗಳಲ್ಲಿನ ರಂಗಭೂಮಿಯ ವಿಶೇಷವಾದ ಒತ್ತನ್ನುಪಡೆದುಕೊಂಡಿತು. ಗಡಿನಾಡು ಪ್ರದೇಶಕ್ಕೂ ಅಕಾಡೆಮಿಯ ಕಾರ್ಯ ಚಟುವಟಿಕೆಗಳು ಹಬ್ಬಿಕೊಂಡವು. ಕನ್ನಡ ರಂಗಭೂಮಿಗೆ ಜಾನಪದ ಸೊಗಡಿನ ಮಹತ್ತರ ನಾಟಕಗಳಾದ ಜೋಕುಮಾರಸ್ವಾಮಿ, ಸಿರಿಸಂಪಿಗೆ, ಮಹಾಮಾಯಿ ಮೊದಲಾದ ವೈಶಿಷ್ಟ್ಯಪೂರ್ಣನಾಟಕಗಳನ್ನು ನೀಡಿದರು ಕಂಬಾರರು. ಕನ್ನಡ ನಾಟಕಗಳಿಗೆ ತಮ್ಮ ಈ ನಾಟಕಗಳ ಮೂಲಕ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮನ್ನಣೆಯನ್ನು ಒದಗಿಸಿಕೊಟ್ಟರು. ನಾಟಕಕಾರ ಅಷ್ಟೇ ಅಲ್ಲದೆ ಉತ್ತಮ ಸಂಗೀತಗಾರರು ಹಾಗೂ ನಾಟಕ ನಿರ್ದೇಶಕರಾಗಿ ಸಂಗ್ಯಾ ಬಾಳ್ಯಾದಂತಹ ನಾಟಕವನ್ನು ಆಧುನಿಕ ಪರಿಕಲ್ಪನೆಯೊಂದಿಗೆ ರಂಗಕ್ಕೆ ತಂದರು. ನಡಕೊಂತ ಬರುತ್ತಿದ್ದ ಕಲಾವಿದ ಕುಣಕೊಂತ ಬಂದ, ಆಡುಕೊಂತ ಬರುವ ಪಾತ್ರಗಳು ಹಾಡುಕೊಂತ ಬಂದವು ಇವರ ಪ್ರಯೋಗಗಳಲ್ಲಿ. ಇವರ ರಂಗಪ್ರಯೋಗಗಳನ್ನು ನೋಡುತ್ತಾ ನಾಟಕಾಸಕ್ತ ಪ್ರೇಕ್ಷಕ ಬೆರಗಾದ. ಡಾ|| ಚಂದ್ರಶೇಖರ ಕಂಬಾರರ ಪ್ರವೇಶದೊಂದಿಗೆ ಕನ್ನಡ ರಂಗಭೂಮಿ ಹೊಸ ದಿಕ್ಕನ್ನು ಕಂಡುಕೊಂಡಿತು.

ಕಂಬಾರರ ಗದ್ಯ ನಾಟಕಗಳಾದ ಹರಕೆಯ ಕುರಿ ಮತ್ತು ಜೈಸಿದ ನಾಯಕ ನಾಟಕಗಳನ್ನು ರಂಗಕ್ಕೆ ತಂದ ನನಗೆ, ಕಂಬಾರರು ಇವುಗಳಲ್ಲಿಯೂ ಕಾವ್ಯದ ಧ್ವನಿಯನ್ನು, ಜಾನಪದದ ಲಯ, ಮಾಧುರ್ಯಗಳನ್ನು ಹೊರಮೂಡಿಸಿರುವುದು ಅಚ್ಚರಿಯನ್ನುಂಟು ಮಾಡಿದವು. ನಮ್ಮ ಸಾಂಸ್ಕೃತಿಕ ಪರಂಪರೆಯೇ ಇತ್ತೀಚಿನ ದಿನಗಳಲ್ಲಿ ಅಪರಿಚಿತಗೊಳ್ಳುತ್ತಿದೆಯೇನೋ ಎನ್ನುವ ಸಂದರ್ಭದಲ್ಲಿ

ಡಾ|| ಚಂದ್ರಶೇಖರ ಕಂಬಾರರು ದೇಸಿ ಸಂಸ್ಕೃತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ತಮ್ಮೆಲ್ಲ ನಾಟಕ ಕೃತಿಗಳಲ್ಲಿ ಪ್ರಯೋಗಿಸಿರುತ್ತಾರೆ. ಆಧುನಿಕ ರಂಗಸಂವೇದನೆಗೆ ಜಾನಪದದ ಸತ್ವವನ್ನು ಕಸಿಗೊಳಿಸಿದ ಡಾ|| ಚಂದ್ರಶೇಖರ ಕಂಬಾರರ ಪರಿ ಕೇವಲ ಕನ್ನಡ ರಂಗಭೂಮಿಯ ಸಂದರ್ಭದಲ್ಲಷ್ಟೇ ಅಲ್ಲದೆ, ಈ ಕಾರ್ಯ ಭಾರತೀಯ ರಂಗಭೂಮಿಗೆ ಇವರು ನೀಡಿದ ಮಹತ್ವದ ಕೊಡುಗೆ.

ಇದರ ಬದುಕು, ಬರಹ ಕುರಿತಂತೆ ಡಾ|| ನಾಗವೇಣಿಯವರು ನಮ್ಮ ಈ ಪುಸ್ತಕ ಮಾಲಿಕೆಗೆ ಕೃತಿಯೊಂದನ್ನು ರಚಿಸಿಕೊಟ್ಟಿದ್ದಾರೆ. ಈ ಕೃತಿ ರಚನೆಗೆ ಒಪ್ಪಿಗೆ ನೀಡಿದ ಡಾ|| ಚಂದ್ರಶೇಖರ ಕಂಬಾರರಿಗೆ ನಮ್ಮೆಲ್ಲರ ವಿಶೇಷ ಧನ್ಯವಾದಗಳು. ಕೃತಿ ರಚನೆ ಮಾಡಿಕೊಟ್ಟ ಡಾ|| ನಾಗವೇಣಿಯವರಿಗೆ, ಈ ಕೃತಿ ಸಿದ್ಧತೆ ಹಾಗೂ ಪ್ರಕಟಣೆಯಲ್ಲಿ ವಿಶೇಷವಾಗಿ ನೆರವಾದ ಪ್ರಕಟಣಾ ಸಮಿತಿಯ ಎಲ್ಲಾ ಸದಸ್ಯರಿಗೆ ಹಾಗೂ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಆರ್. ಎಸ್. ದಳವಾಯಿ ಅವರಿಗೆ ಮತ್ತು ಸಿಬ್ಬಂದಿ ವರ್ಗಕ್ಕೂ ಧನ್ಯವಾದಗಳು. ಈ ಕಾರ್ಯದಲ್ಲಿ ಹೆಚ್ಚಿನ ಆಸ್ಥೆವಹಿಸಿದ ಹೆಚ್. ಜಿ. ಸೋಮಶೇಖರರಾವ್, ಶಶಿಧರ ಭಾರಿಘಾಟ್ ಹಾಗೂ ಈ ಕೃತಿಯನ್ನು ಅತ್ಯಲ್ಪ ಕಾಲಾವಧಿಯಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಲಿಪಿ ಮುದ್ರಣ, ಬೆಂಗಳೂರು ಇವರಿಗೂ ಅಕಾಡೆಮಿ ಆಭಾರಿ. ರಂಗಭೂಮಿಯೊಡನೆ ಆತ್ಮೀಯ ಸಂಬಂಧ ಉಳಿಸಿಕೊಂಡಿರುವ ಲಿಪಿ ಮುದ್ರಣದ ಶ್ರೀ ಬಾಕಿನ ಸಹಜವಾಗಿಯೇ ವಿಶೇಷ ಆಸ್ಥೆವಹಿಸಿ ಈ ಕಾರ್ಯವನ್ನು ನಿರ್ವಹಿಸಿರುತ್ತಾರೆ.

**ಆರ್. ನಾಗೇಶ್**

# ಲೇಖಕರ ಮಾತು

ಚಂದ್ರಶೇಖರ ಕಂಬಾರ ಅವರು ಕನ್ನಡ ನಾಡು ಕಂಡ ಅಪೂರ್ವ ಸೃಜನಶೀಲ ಪ್ರತಿಭೆ. ಕನ್ನಡದ ಮಹತ್ವದ ಕವಿಯಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ ಜಾನಪದತಜ್ಞರಾಗಿ, ಸಂಶೋಧಕರಾಗಿ, ಹಾಡುಗಾರರಾಗಿ, ಸಿನಿಮಾ-ನಾಟಕ ನಿರ್ದೇಶಕರಾಗಿ.. ಹೀಗೆ ಹಲವು ಸೃಜನಶೀಲ ಕ್ಷೇತ್ರಗಳಲ್ಲಿ ತಮ್ಮನ್ನು ದುಡಿಸಿಕೊಂಡಿರುವ ಚಂದ್ರಶೇಖರ ಕಂಬಾರರು ರಾಷ್ಟ್ರಮಟ್ಟದಲ್ಲಿ ಕನ್ನಡ ಸಾಹಿತ್ಯದ ಹಿರಿಮೆಯನ್ನು ಎತ್ತಿಹಿಡಿದವರು.

ತನ್ನ ಹುಟ್ಟು ನೆಲದ ಬದುಕಿನಿಂದ ಸ್ಫೂರ್ತಿ ಪಡೆದ ಕಂಬಾರರು, ಗ್ರಾಮೀಣ ಸಂಸ್ಕೃತಿಯ ಸ್ಮೃತಿ-ಸಂವೇದನೆ, ಸಂಘರ್ಷದ ಎಳೆಗಳಿಂದ ತಮ್ಮ ಕೃತಿಗಳನ್ನು ಕೌಶಲ್ಯಪೂರ್ಣವಾಗಿ ಹಾಗೂ ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಹೆಣೆದು, ನವ್ಯದ ಸಂದರ್ಭದಲ್ಲೂ ತಮ್ಮ ಸಮಕಾಲೀನ ಬರಹಗಾರರಿಗಿಂತ ಭಿನ್ನವಾಗಿ ಗುರುತಿಸಿಕೊಂಡವರು. ಗ್ರಾಮ್ಯ ಮತ್ತು ಶಿಷ್ಟ ಭಾಷೆಗಳೆರಡರಲ್ಲೂ ಪ್ರಭುತ್ವ ಸಾಧಿಸಿರುವ ಕಂಬಾರರು ಗ್ರಾಮೀಣ ಬದುಕಿನ ವಾಸ್ತವ್ಯ - ಜಾನಪದ ತಂತ್ರದ ಬಳಕೆಗಳಿದ್ದೂ ನವ್ಯದ ದೇಕಿ (ಶೈಲಿ) ಯುಳ್ಳ ಹಲವು ಸೃಜನಶೀಲ ಕೃತಿಗಳನ್ನು ರಚಿಸಿ ಸಾರಸ್ವತ ಲೋಕದಲ್ಲಿ ತಮ್ಮ ಸಾಹಿತ್ಯ ಪ್ರತಿಭೆಯ ಬಗ್ಗೆ ಬೆರಗು ಮೂಡಿಸಿದವರು.

ಡಾ|| ಎಚ್. ನಾಗವೇಣಿ

## ಬಾಲ್ಯ - ಪ್ರಾಥಮಿಕ ಶಿಕ್ಷಣಾವಸ್ಥೆ

ಕಮ್ಮಾರಿಕೆ ವೃತ್ತಿಯ ಬಡ ಕುಟುಂಬದಲ್ಲಿ ಹುಟ್ಟಿದ ಕಂಬಾರರು ಸಾಂಸ್ಕೃತಿಕವಾದ ಸಿರಿವಂತಿಕೆಯಲ್ಲಿ ಬೆಳೆದರು. ಘೋಡಗೇರಿ ಪುಟ್ಟ ಹಳ್ಳಿಯಾದರೂ ಸಾಂಸ್ಕೃತಿಕವಾಗಿ ಸದಾ ಜೀವಂತಿಕೆಯ ಒರತೆ ಇರುವ ಹಳ್ಳಿ. ಎಲ್ಲ ಹಳ್ಳಿಗಳಲ್ಲಿರುವಂತೆ ಬಡತನ-ಸಿರಿತನ-ಹಾದರ-ವೈರ-ಪ್ರೀತಿ-ಕೊಲೆ ಇತ್ಯಾದಿ ಆ ಹಳ್ಳಿಯಲ್ಲೂ ಇದ್ದರೂ ಅವೆಲ್ಲದರ ಮಧ್ಯೆ ಜಾತಿ-ಮತ-ಭೇದವಿಲ್ಲದ ಸಹಕಾರ-ಸಹಬಾಳ್ವೆ ಅಲ್ಲಿತ್ತು. ಘೋಡಗೇರಿಯಲ್ಲಿ ಬಡತನವಿದ್ದರೂ ಅಲ್ಲಿ ಶಿಕ್ಷಣಕ್ಕೆ ಮಾತ್ರ ಬಡತನವಿರಲಿಲ್ಲ. 1960ರಿಂದಲೇ ಆ ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯಿತ್ತು. ಕಂಬಾರರ ಅಪ್ಪ ಬಸವಣ್ಣೆಪ್ಪನವರು ಆ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದದ್ದರಿಂದ ಮಗನನ್ನೂ ಅದೇ ಶಾಲೆಯ ಮೆಟ್ಟಿಲುಗಳಿಗೆ ಹತ್ತಿಸಿಬಿಟ್ಟರು. ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯಿದ್ದರೂ ಆ ಶಾಲೆಯ ದಿಕ್ಕಿಗೆ ತಲೆಹಾಕಿ ಮಲಗುವವರು ವಿರಳ.

ಉತ್ತರ ಕರ್ನಾಟಕದ ದೇಸೀಯ ಮೇಲೆ ಪ್ರಭುತ್ವ ಸಾಧಿಸಿರುವ ಕವಿ ಕಂಬಾರರು ಹುಟ್ಟಿದ್ದು ಬೆಳಗಾವಿ ಜಿಲ್ಲೆಯ ಘೋಡಗೇರಿಯಲ್ಲಿ 1937 ಜನವರಿ 2ರಂದು. ಅವರ ತಂದೆ ಬಸವಣ್ಣಪ್ಪ ತಾಯಿ ಚೆನ್ನಮ್ಮ ಅವರು.

ಶಾಲೆಯ ಮೆಟ್ಟಿಲು ಹತ್ತದ ತನ್ನ ವಾರಗೆಯವರೆಲ್ಲ ದನ ಕಾಯಲು ಹೊರಡುವುದು... ಘಟಪ್ರಭಾದಲ್ಲಿ ಈಜಿ ಮೋಜು ಮಾಡುವುದು. ಉಢಾಳರಂತೆ ಊರು ಸುತ್ತುವುದು...! ತಾವು ಮಾತ್ರ ದಿನಾ ಶಾಲೆಗೆ ಹೊರಡಬೇಕು. ಇದೆಂಥಾ ನ್ಯಾಯ! ಬಾಲಕ ಕಂಬಾರರ ಕಣ್ಣಿಗೆ ಇದು ಸರಿ ಹೊಂದಲಿಲ್ಲ. ಆಗಾಗ ತಾನೂ ಅಪ್ಪನ ಕಣ್ತಪ್ಪಿಸಿ ತನ್ನ ಅತ್ಯಂತ ಪ್ರಿಯವಾದ ದನಕಾಯುವ ಕೆಲಸವನ್ನೂ ಮಾಡಿದರು. ''ಶಾಲೆ ನನಗೆ ಇಷ್ಟವಾದದ್ದಲ್ಲ ; ಒತ್ತಾಯದಿಂದ, ಒಂದೆರಡು ಸಲ ನನ್ನಣ್ಣ ಕೈಕಾಲು ಕಟ್ಟಿ ಶಾಲೆಯಲ್ಲಿ ಚೆಲ್ಲಿ ಬಂದುದರಿಂದ ಅನಿವಾರ್ಯವಾಗಿ ಕಲಿಯಲೇಬೇಕಾಯಿತು''.

ಬಾಲಕ ಕಂಬಾರರು ಮೂರನೇ ತರಗತಿ ಬರುವವರೆಗೂ ಆಗಾಗ್ಗೆ ದನ ಕಾಯುವ ಆಟವನ್ನು ಯಶಸ್ವಿಯಾಗಿ ಮುಂದುವರಿಸಿದ್ದರು. ವರುಷ ಉರುಳಿದಂತೆ ಕಂಬಾರರಿಗೆ ಶಾಲೆಯ ಆಕರ್ಷಣೆ ನಿಧಾನಕ್ಕೆ ಬಲಿಯಿತು. ಆ ವಯಸ್ಸಲ್ಲೇ ಸಣ್ಣ ಪುಟ್ಟ ಪದ್ಯ ಬರೆದು, ನಾಟಕಗಳಲ್ಲಿ ಪಾತ್ರವಹಿಸಿ, 'ಹುಡ್ಗ ಭಾಳ ಛಲೋ ಅದಾನ...' ಎಂದು ಊರವರಿಂದ - ಮೇಷ್ಟ್ರುಗಳಿಂದ ಭೇಷ್ ಅನ್ನಿಸಿಕೊಂಡ ನಂತರ ಶಾಲೆ ಸ್ವಲ್ಪ ಪ್ರಿಯವಾಗತೊಡಗಿತ್ತು. ಆ ಹೊತ್ತಿಗಾಗಲೇ ಗ್ರಾಮೀಣ ಬದುಕಿನ ಉಸಿರಾಗಿದ್ದ ಸಂಗ್ಯಾಬಾಳ್ಯಾ, ಶ್ರೀಕೃಷ್ಣ ಪಾರಿಜಾತ, ಲಾವಣಿ-ಗೀಗಿ ಮೇಳವೆಲ್ಲ ಬಾಲಕ ಕಂಬಾರರ ಹೃದಯ ಸೂರೆಗೊಂಡು ಅವರ ಮನದಾಳಕ್ಕಿಳಿದಿದ್ದವು. ಘೋಡಗೇರಿಯಲ್ಲಿದ್ದ ಸಾಂಸ್ಕೃತಿಕ ವಾತಾವರಣವೇ ಬಾಲಕ ಕಂಬಾರರಲ್ಲಿ ಸಾಂಸ್ಕೃತಿಕ ಚೈತನ್ಯವನ್ನು ಉಕ್ಕಿಸಿತೆನ್ನಬಹುದು. ನಾಲ್ಕು ಗೋಡೆಗಳ ಮಧ್ಯೆ ಕೂತು ಕಲಿಯುವ ಒಣಪಾಠಕ್ಕಿಂತ - ಬಯಲಲ್ಲಿ ಲಾವಣಿ-ಗೀಗೀ ಮೇಳ, ಶ್ರೀಕೃಷ್ಣ ಪಾರಿಜಾತ ತಂಡಗಳ ಜತೆ ಸುತ್ತುವುದು ಅತ್ಯಂತ ಪ್ರಿಯವಾಗಿದ್ದ ಆ ವಯಸ್ಸಿನಲ್ಲೆ ಹುಟ್ಟು ನೆಲದ ಬದುಕನ್ನು ಜಾನಪದವನ್ನು ಬಾಲಕ ಕಂಬಾರರು ಹೀರತೊಡಗಿದ್ದರು. ತನ್ನ ಬಾಲ್ಯವನ್ನು ಕಂಬಾರರು ಹೀಗೆ ಮೆಲುಕು ಹಾಕುತ್ತಾರೆ. ''... ಶಾಲೆ ನನಗೇನೂ ಅಷ್ಟು

ಇಷ್ಟವಾದುದಲ್ಲ - ಆದರೂ ಅಪ್ಪನ ಬಲವಂತಕ್ಕೆ ಶಾಲೆಯ ಮೆಟ್ಟಲು ಏರಿದೆ..., ಒಂದು... ಎರಡು ಹೇಗೊ ಕಳೆಯಿತು. ಮೂರನೇ ತರಗತಿಯಲ್ಲಿ ನಾನು ಊರವರಿಗೆ - ಮೇಷ್ಟ್ರುಗಳಿಗೆ ಮೆಚ್ಚಿನವನಾದೆ. ನನ್ನ ಭಾಷೆಯಲ್ಲಿ ನನಗರ್ಥವಾಗುವಂತಹ ಸಣ್ಣಪುಟ್ಟ ಪದ್ಯ-ಲಾವಣಿಗಳನ್ನು ಬರೆಯುತ್ತಿದ್ದೆ. ಮೂರನೇ ತರಗತಿಯಿಂದಲೇ ನಾನು ಶಾಲೆಯ ನಾಟಕಗಳಲ್ಲಿ ಪಾತ್ರವಹಿಸತೊಡಗಿದೆ. ಒಮ್ಮೆ ನನ್ನ ನಾಟಕದ ಪಾತ್ರವನ್ನು ಮೆಚ್ಚಿ ಊರವರು ನನಗೆ 4 ರೂ ಇನಾಮು ಕೊಟ್ಟರು. ನಾನು ಇನಾಮು ಪಡೆದುದನ್ನು ಕಂಡು ನನ್ನಪ್ಪ ಅಭಿಮಾನದಿಂದ ನನ್ನನ್ನು ತೀರಾ ಹೊಗಳಿದರು. ಅದರ ಮರುದಿನವೇ ಅವರು ಕುಲುಮೆಯ ತಿದಿ ಊದಲು ಕರೆದಾಗ, ನನಗಾ ಕೆಲಸ ಸರಿಯಾಗಿ ಬರದ್ದಕ್ಕೆ ನನ್ನನ್ನು ಊರಿಡೀ ಅಟ್ಟಾಡಿಸಿದ್ದರು..., ನಾನು ಪ್ರಾಥಮಿಕ ಶಾಲೆಯಲ್ಲಿ ಇರುವಾಗಲೇ 'ಸಂಗ್ಯಾ ಬಾಳ್ಯ' ಬಯಲಾಟದಲ್ಲಿ ಕೋಚು (ಹಾಡು) ಹೊಡೆಯುತ್ತಿದ್ದೆ ಬಹಳ ಚೆನ್ನಾಗಿಯೇ ಕೋಚು ಹೊಡೆಯುವುದನ್ನು ಕಂಡು ಊರವರ ಜತೆ ಅಪ್ಪನೂ ಹಿಗ್ಗಿದ್ದಿದೆ. ಸ್ವಲ್ಪ ದೊಡ್ಡವನಾಗುತ್ತಲೇ 'ಸಂಗ್ಯಾಬಾಳ್ಯ'ದಲ್ಲಿ ಆಡತೊಡಗಿದೆ. ನಮ್ಮೂರಿಗೆ ಬರುತ್ತಿದ್ದ ಲಾವಣಿ-ಗೀಗೀ ತಂಡಗಳು ಹಾಡುತ್ತಿದ್ದ ಪದಗಳೆಲ್ಲ ನನಗೆ ಬಹುಮಟ್ಟಿಗೆ ಬಾಯಿಪಾಠವಾಗಿದ್ದವು. ಅದೂ ನನ್ನ 'ಘನತೆ'ಯನ್ನು ಸ್ವಲ ಹೆಚ್ಚಿಸಿದ್ದಿದೆ. ಆದರೆ ನನ್ನ ಈ ಎಲ್ಲ 'ಹೊರಾಂಗಣ ಚಟುವಟಿಕೆ'ಗಳು ಅಪ್ಪನನ್ನು ಭಯಗೊಳಿಸಿದ್ದವು. ಇವು ಮುಂದೆ ಶಾಲೆಯ ಬದುಕಿಗೆ ಎಳ್ಳು-ನೀರು ಬಿಡಿಸಬಲ್ಲ-ಮಗನ ದಾರಿತಪ್ಪಿಸಬಲ್ಲ ಚಟುವಟಿಕೆಗಳೆಂದು ಅಪ್ಪ ಜಾಗರೂಕರಾಗ ತೊಡಗಿದ್ದರು''.

ಮಗನಿಗೆ ತನ್ನ ಕಮ್ಮಾರಿಕೆ ವೃತ್ತಿಯನು ಕಲಿಸಬೇಕೆಂದು ಅಪ್ಪ ಬಸವಣ್ಣನವರು ಪ್ರಯತ್ನಿಸಿದ್ದರು. ಆದರೆ ಕಂಬಾರರಿಗೆ ಆ ವೃತ್ತಿಯ ಮೇಲೆ ಎಳ್ಳಷ್ಟೂ ಆಸಕ್ತಿ ಇಲ್ಲ. ಕನಿಷ್ಠ ತಿದಿ ಊದಲಾದರೂ ಕಲಿತುಕೊಳ್ಳಲಿ ಎಂದು ಬಲವಂತದಿಂದ ಮಗನನ್ನು ಎಳೆದುತಂದು ಕೂರಿಸಿದರೆ, ಆತ ಇದ್ದಿಲನ್ನು ಭಸ್ಮಮಾಡುವಂತೆ ತಿದಿ ಊದಿ, ಓಣಿ ತುಂಬಾ ಬೂದಿ ಎಬ್ಬಿಸುವುದನ್ನು ಕಂಡು ಅಪ್ಪ ಕೆಂಡಾಮಂಡಲವಾಗುತ್ತಿದ್ದರು. ''ಆ ವೃತ್ತಿಗಾರಿಕೆಯಲ್ಲಿ ಇದ್ದಿಲು ಊದುವುದಕ್ಕೂ ಒಂದು ಕ್ರಮವಿದೆ, ಅದೊಂದು ಜಾಣ್ಮೆಯ ಕೆಲಸ. ಇದ್ದಲಿ ಸುಟ್ಟು ಬೂದಿಯಾಗದಂತೆ ತಿದಿ ಊದಬೇಕು. ಆದರೆ ಇವರ ತಿದಿ ಊದಾಟದಲ್ಲಿ ಇದ್ದಿಲು ಸುಟ್ಟು ಬೂದಿ ಹಾರುತಿತ್ತು. ಅಪ್ಪ ಸಿಟ್ಟಿನಿಂದ 'ನೀನು ಬರಿ ಬೂದಿ ಹಾರಿಸುವವ... ತಿದಿ ಊದುವವ ಅಲ್ಲ... ಎನ್ನುತ್ತ ಅಟ್ಟಿಸಿಕೊಂಡು ಬರುತ್ತಿದ್ದರು'' ಬಸವಣ್ಣೆಪ್ಪನವರಿಗೆ ಮಗನ ಭವಿಷ್ಯದ ಬಗ್ಗೆ ವಿಪರೀತ ಕಾಳಜಿ ಇದ್ದ ಕಾರಣ ಮಗನನ್ನು ಸರಿದಾರಿಗೆ ತರಬಲ್ಲ ಎಲ್ಲ ದಾರಿಗಳನ್ನು ಪ್ರಯತ್ನಿಸುತ್ತಿದ್ದರು. ಬಾಲಕ ಕಂಬಾರರು ಮಾತ್ರ ತನ್ನ ಬಾಲಪ್ರತಿಭೆಗಳಿಂದಲೇ ಊರವರ ಗಮನ ಸೆಳೆಯುತ್ತಿದ್ದರು.

ಕಂಬಾರರ ಹಳ್ಳಿ ಘೋಡಗೇರಿಗೆ ವರ್ಷವೂ ಕೆಲವು ಪಾರಿಜಾತ ಕಂಪನಿಗಳು ಬರುತ್ತಿದ್ದವು. ಅದರಲ್ಲಿ ಕೌಜಲಗಿ ನಿಂಗಮ್ಮನ ಪಾರಿಜಾತ ತಂಡವಂತೂ ಖಾಯಂ ಬರುತ್ತಿದ್ದ ತಂಡ. ಘೋಡಗೇರಿಯ ಪಾರಿಜಾತ ರಸಿಕರಿಗೆ ಕೌಜಲಗಿ ನಿಂಗಮ್ಮನ 'ಪಾರಿಜಾತ'ವೆಂದರೆ ಅಚ್ಚುಮೆಚ್ಚು. ಕೌಜಲಗಿ ನಿಂಗಮ್ಮನಿಗೂ ಘೋಡಗೇರಿಯ ಪಾರಿಜಾತದ ರಸಿಕರನ್ನು ತನ್ನ ಅಪೂರ್ವ ಸ್ವರ ಸಂಗೀತ-ಹಾಡಿನಿಂದ-ಪಾತ್ರದಿಂದ ಮೆಚ್ಚಿಸುವ ಹುಚ್ಚು. ಕೌಜಲಗಿ ನಿಂಗಮ್ಮನಿಗೂ ಆ ಊರಿಗೂ ವರ್ಣಿಸಲು ಅಸಾಧ್ಯವಾದಂತಹ ಒಂದು ರೀತಿಯ ಭಾವನಾತ್ಮಕ ಮತ್ತು ಸಾಂಸ್ಕೃತಿಕವಾದ ಸಂಬಂಧವಿತ್ತು. ಬಾಲಕ ಕಂಬಾರರು ಪಾರಿಜಾತ ಪ್ರದರ್ಶನ ನೋಡುವ ಕಾಲಕ್ಕೆ ಕೌಜಲಗಿ

ನಿಂಗಮ್ಮನ ಸ್ಥಾನಕ್ಕೆ ಆಕೆಯ ದತ್ತು ಮೊಮ್ಮಗಳು ಸೇರ್ಪಡೆಯಾಗಿತ್ತು. ಬಾಲಕ ಕಂಬಾರರಿಗೆ ಕೌಜಲಗಿ ನಿಂಗಮ್ಮ ಒಂದು ದಂತಕತೆಯಾಗಿದ್ದಳು. ''ನನ್ನ ಅಪ್ಪನ ಮೂಲಕ ಶ್ರೀಕೃಷ್ಣ ಪಾರಿಜಾತವನ್ನು ನನಗೆ ಕಟ್ಟಿಕೊಟ್ಟವಳು-ಕೌಜಲಗಿ ನಿಂಗಮ್ಮ. ಪಾರಿಜಾತದೊಳಗೆ ಭಕ್ತಿಪರವಶಳಾಗಿ ಆಕೆ ಹಾಡುವ ಹಾಡು... ಆ ಮ್ಯೂಸಿಕ್‌ನ ಸ್ಟ್ರಕ್ಚರ್... ದೃಶ್ಯದ ಸಂದರ್ಭ-ಸನ್ನಿವೇಶಕ್ಕೆ ತಕ್ಕಂತೆ (ಕೊರವಂಜಿ ಬರುವಾಗಿನ ಉದಯಕಾಲದ ಹಾಡು..., ಗಣೇಶ ಪ್ರಾರ್ಥನೆಯಿಂದ ಆರಂಭವಾಗುವ ಸಂಧ್ಯಾಕಾಲದ ಹಾಡು..., ಕೃಷ್ಣ-ರುಕ್ಮಿಣಿ-ಸತ್ಯಭಾಮೆಯರ ಆಗಮನದ ಕಾಲಕ್ಕೆ ಹಾಡುವ ಹಾಡು) ಆಕೆ ಏರಿಳಿಸುವ ಧ್ವನಿ, ರಾಗ ಸಂಯೋಜಿಸಿ ಹಾಡುವ ಪರಿ ಅವೆಲ್ಲವನ್ನು ನಮ್ಮಪ್ಪನ ಬಾಯಿಂದಲೇ ಕೇಳಬೇಕು. ಅಪ್ಪ ಹೇಳುತ್ತಿದ್ದ 'ಆಕೆ ಒಬ್ಬ ಅಪ್ಸರೆ' ಎಂದು. ಅಪ್ಪನಿಗೆ ಮಾತ್ರವಲ್ಲ ಘೋಡಗೇರಿಯವರೆಲ್ಲರ ಕಣ್ಣಿಗೂ ಆಕೆ ಅಪ್ಸರೆಯೇ ಅಂತೆ! ಅಪ್ಸರೆ ಎಂದರೆ ಹೇಗೆ? ಆಕೆಯ ಮಾತುಗಾರಿಕೆಯಲ್ಲಿ; ಆಕೆಯ ಹಾಡುಗಾರಿಕೆಯಲ್ಲಿ, ಆಕೆಯ ಕಲಾವಂತಿಕೆಯಲ್ಲಿ - ಆಕೆ ಅಪ್ಸರೆ ! 'ಪಾರಿಜಾತ' ಬಯಲಾಟ ಆರಂಭವಾದೊಡನೆ, ಎರೇಮಣ್ಣಿನ (ಕರ‍್ರಗೆ) ಬಣ್ಣದ, ಯಾವುದೇ costume makeup ಇಲ್ಲದ, ತೀರಾ ಸಾಮಾನ್ಯ ರೂಪದ ಕಲಾವಿದೆಯೊಬ್ಬಳು ತನ್ನ ವೈಶಿಷ್ಟ್ಯಪೂರ್ಣವಾದ ಕಂಠ, ಮಾತುಗಾರಿಕೆ, ಹಾಡುಗಾರಿಕೆಯಿಂದ ಪ್ರೇಕ್ಷಕ ಸಮೂಹವನ್ನು ಸಂಪೂರ್ಣ ತನ್ನತ್ತ ಆಕರ್ಷಿಸಿ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವುದರಲ್ಲೇ ಆಕೆಯ 'ಚಂದ' ಅಡಗಿತ್ತು. ಆ ಅಪ್ರತಿಮ ಪ್ರತಿಭೆಯೇ ಆಕೆಯ ಬಾಹ್ಯ ಸೌಂದರ್ಯವನ್ನು ಗೌಣವಾಗಿಸಿ ಅವಳಿಗೆ 'ಅಪ್ಸರೆ'ಯ ಚೆಲುವನ್ನು ದಯಪಾಲಿಸುತ್ತಿತ್ತು. ಆ ಕಲಾವಿದೆಯ ಹಾವ-ಭಾವ, ಮಾತುಕತೆ, ಹಾಡು ಕುಣಿತಗಳೆಲ್ಲ ಪ್ರೇಕ್ಷಕರಿಗೆ ಒಂದು ರೀತಿಯ ಅಲೌಕಿಕ ಜಗತ್ತಿನ ಭ್ರಮೆ ಬರಿಸುತಿತ್ತಲ್ಲದೆ, ಪೌರಾಣಿಕತೆಯೂ ಆದಾದುದರಿಂದ ಪ್ರೇಕ್ಷಕರನ್ನು ಪುರಾಣದ ಜಗತ್ತಿಗೆ ಕೊಂಡೊಯ್ಯುವ ಸಾಮರ್ಥ್ಯವೂ ಆಕೆಗಿದ್ದುದು ಆಕೆಯ ವಿಶಿಷ್ಟತೆ''. ''ಆಕೆ ಕೈ ಎತ್ತಿ 'ಕೃಷ್ಣಾ' ಎಂದು ಹಾಡುತ್ತಿದ್ದರೆ ಅವಳಿಗೆ ಮೆತ್ತಿದ ಎರೇಮಣ್ಣು ಕರಗಿ ಅದರೊಳಗಿಂದ ಒಬ್ಬ ಅಪ್ಸರೆ ಪ್ರತ್ಯಕ್ಷಳಾಗುತ್ತಿದ್ದಳಂತೆ!''

''ಕಲ್ಪಿತ ಅಪ್ಸರೆಗೆ ಮಾರುಹೋದ ನಮ್ಮೂರ ಕುಲಕರ್ಣಿ 'ಬಾ...ನನ್ನ ಹಾಸಿಗೆಗೆ' ಎಂದು ಕರೆದನಂತೆ. 'ಕೃಷ್ಣ ಮುಟ್ಟಿದ ಗಡಿಗೆಯಿದು... ಇದನ್ಯಾಕೆ ಅಪೇಕ್ಷಿಸ್ತೀಯೋ?' ಎಂದು ಅಂದುಬಿಟ್ಟಳಂತೆ. ಕುಲಕರ್ಣಿ ಆ ದೊಡ್ಡ ಮಾತಿನೆದುರು ಸಣ್ಣವನಾಗಿ ತಟ್ಟನೆ ಆಕೆಯ ಕಾಲು ಹಿಡಿದು ಕ್ಷಮಾಪಣೆ ಕೇಳಿಕೊಂಡನಂತೆ''.

ಬಾಲ್ಯದಿಂದಲೇ ಅಜ್ಜೀಕತೆ, ದೆವ್ವದ ಕತೆ, ಅಲೌಕಿಕ ಜಗತ್ತಿನ ಕಟ್ಟುಕತೆಗಳು, ಜನಪದ ಕತೆ-ಪುರಾಣಕತೆಗಳೆಂದರೆ ಇಷ್ಟಪಡುತ್ತಿದ್ದ ಬಾಲಕ ಕಂಬಾರರು ಈ ಇಷ್ಟಕ್ಕಾಗಿ ಅವಲಂಬಿಸುತ್ತಿದ್ದುದು ಹತ್ತಿರದಲ್ಲಿದ್ದ ಅಮ್ಮನನ್ನು ಮತ್ತು ದೂರದ ಊರು ಸುಲದಾಳದಲ್ಲಿದ್ದ ದೊಡ್ಡಮ್ಮನನ್ನು, ಅವರಿಬ್ಬರ ಸಂಗ್ರಹದಲ್ಲಿರುವ ಹಾಡು-ಕತೆಗಳ ಖಜಾನೆ ಎಂದೂ ತುಂಬಿ ತುಳುಕುತ್ತಿತ್ತು. ಶಾಲೆಯ ರಜಾ ಕಾಲದಲ್ಲೆಲ್ಲ ದೊಡ್ಡಮ್ಮನ ಬಳಿಯೇ ಇರಲು ಇಷ್ಟಪಡುತ್ತಿದ್ದ ಕಂಬಾರರು, ಅಲ್ಲಿ ಇರುವಷ್ಟು ದಿನವೂ ದೊಡ್ಡಮ್ಮನಿಂದ ಹಾಡು-ಕತೆ ಹೇಳಿಸಿಕೊಂಡು ಆ ಅದ್ಭುತ ಕತೆಗಳ ಕಲ್ಪನಾ ಲೋಕದಲ್ಲಿ ವಿಹರಿಸಿ ನಂತರ ಊರಿಗೆ ಮರಳುತ್ತಿದ್ದರು. ಊರಿಗೆ ಮರಳಿ ಬಂದೊಡನೆ ಕತೆ ಹೇಳುವ ಸರದಿ ಅಮ್ಮ ಚೆನ್ನಮ್ಮನವರದ್ದು. ಹೀಗೆ ಜನಪದ ಮಿಥ್‌ಗಳನ್ನು ಹಳೆತಲೆಗಳಿಂದ ಶ್ರಾವ್ಯಮಾರ್ಗದಿಂದಲೇ ಬಾಚಿ ಪಡೆಯುವ ಅದೃಷ್ಟ ಕಂಬಾರರದ್ದಾಗಿತ್ತು.

ಬರವಣಿಗೆ ವಿಚಾರ ಬಂದಾಗ ಈಗಲೂ ಕಂಬಾರರು, "ಅಪ್ಪ ನನಗೆ ಯೋಚನಾಕ್ರಮವನ್ನು ಕಲಿಸಿದರು, ತಾಯಿ ನನಗೆ 'ಲಾಂಗ್ವೇಜ್' ಕಲಿಸಿದಳು. ನನಗೆ ಪ್ರತಿಮೆ, ರೂಪಕಗಳ ಲೋಕವನ್ನು ಪರಿಚಯಿಸಿದವಳೇ ನನ್ನ ತಾಯಿ" ಎಂದು ಹೇಳುವುದಿದೆ. 'ಅಪ್ಪನ ಕಂಬಾರಸಾಲೆ'ಯೂ ಕಂಬಾರರನ್ನು ಬೌದ್ಧಿಕವಾಗಿ, ಸಾಹಿತ್ಯಿಕವಾಗಿ ಬೆಳೆಸಿತ್ತೆನ್ನಬಹುದು. ಕಂಬಾರಸಾಲೆಗೆ ದಿನನಿತ್ಯ ಬರುತ್ತಿದ್ದ ಹಳ್ಳಿಯ ಹಲವು ತಲೆಗಳು ಆ ಶಾಲೆಯನ್ನು ಚರ್ಚಾಕೇಂದ್ರವನ್ನಾಗಿ ಮಾರ್ಪಡಿಸಿದ್ದವು. ಅಲ್ಲಿ ಚರ್ಚೆಗೆ ಬಾರದ ಕಥೆಗಳಿಲ್ಲ - ವಸ್ತುಗಳಿಲ್ಲ. ಎಲ್ಲ ವಿಷಯಗಳು ಅಲ್ಲೇ ಚರ್ಚೆಯಾಗಿ ಮತ್ತೆ ಹೊರದಾರಿ ನೋಡಿಕೊಳ್ಳಬೇಕಿತ್ತು. ಅಲ್ಲಿ ಅಪ್ಪನ ಯೋಚನಾ ಕುಲುಮೆಯಲ್ಲಿ ಕಾದು ಹೊರಬಂದ ಹಲವು ವಿಚಾರಗಳು ಈಗಲೂ ಕಂಬಾರರೊಳಗೆ ಅಡ್ಡಾಡುತ್ತಿವೆ. "ಒಮ್ಮೆ ನನ್ನ ಬಾಲ್ಯದಲ್ಲಿ ಒಂದು ವಾರವಿಡಿ ಆ ಕಂಬಾರ ಸಾಲೆಯಲ್ಲಿ ಒಂದು ಚರ್ಚೆ ನಡೆಯಿತು. ಪ್ರಪಂಚದಲ್ಲಿ ಅತ್ಯಂತ ಸುಂದರ-ಸುಂದರಿ ಯಾರು ಎನ್ನುವುದೇ ಚರ್ಚೆ. ಒಬ್ಬ ಹೇಳಿದ, ರಾಜಕುಮಾರ ಚಂದ-ರಾಜಕುಮಾರಿ ಅಂದ ಅಂತಾ. ಮತ್ತೊಬ್ಬ ಹೇಳಿದ, ನೆಹರು ಚಂದ-ನೆಹರು ಹೆಂಡತಿ ಚಂದ ಅಂತಾ. ಇನ್ನೊಬ್ಬ ಹೇಳಿದ, ಗಾಂಧಿ ಚಂದ-ಗಾಂಧಿ ಹೆಂಡತಿ ಚಂದ ಅಂತಾ. ಆದರೆ ನನ್ನ ಅಪ್ಪ ಹೇಳಿದ, ಚೊಚ್ಚಲ ಬಸುರಿ ಚಂದ-ದುಡಿಯುವ ಗಂಡ ಚಂದ, ಅಂತಾ. ನೋಡ್ರಿ ನನ್ನ ಅಪ್ಪನ ಯೋಚನಾ ಕ್ರಮ ಹೇಗಿತ್ತು ಅಂತಾ". "ನನ್ನ ಅಪ್ಪನ ಯೋಚನಾ ಕ್ರಮ ಅಂತಿಂಥದ್ದಲ್ಲ. ನಾನು ಕನ್ನಡಿ ನೋಡಿಕೊಳ್ಳುವಾಗಲೆಲ್ಲ ನನ್ನ ಅಪ್ಪ ಹೇಳುತ್ತಿದ್ದ 'ಆ ಕನ್ನಡಿ ನೋಡಿದರೆ ಏನು ಕಾಣಸುತ್ತೆ - ನೀನು ಒಬ್ಬನೇ ಕಾಣಿಸುತ್ತೀ ಹೊಂಡದ ನೀರಿನಲ್ಲಿ ನಿನ್ನನ್ನು ನೋಡಿಕೋ, ನಿನ್ನ ಜೊತೆಗೆ ಸೂರ್ಯ, ಆಕಾಶ, ಮೋಡ, ಹಾರುವ ಹಕ್ಕಿಗಳು, ಸುತ್ತಲ ಮರ ಗಿಡ ಬಳ್ಳಿಗಳು ಕಾಣಿಸುತ್ತೆ. ನಿನ್ನನ್ನು ಮಾತ್ರ ನೋಡಿಕೊಳ್ಳುವುದಲ್ಲ, ನಿನ್ನ ಜೊತೆ ನಿನ್ನ ಕರುಳಬಳ್ಳಿಯನ್ನೆಲ್ಲ ನೋಡಿಕೊಳ್ಳುವುದನ್ನು ಕಲಿ...' ಎಂದು ಅಪ್ಪ ನನ್ನಲ್ಲಿ ಸಮುದಾಯ ಪ್ರಜ್ಞೆಯನ್ನು ಬೆಳೆಸಿದನಲ್ಲದೆ ಎಲ್ಲ ರೀತಿಯಲ್ಲಿ ನನ್ನ ಯೋಚನಾ ಕ್ರಮವನ್ನು ಬದಲಾಯಿಸ ತೊಡಗಿದ".

ಕಂಬಾರರ ತಾಯಿ ಚೆನ್ನಮ್ಮನವರು ಮತ್ತು ಅಕ್ಕಂದಿರು ಬೀಸುಗಲ್ಲಿನ ಮುಂದೆ ಕೂತು ಹಾಡುತ್ತಿದ್ದ ಹಾಡೊಂದನ್ನು ಕಂಬಾರರು ತಮ್ಮ ಸ್ಮೃತಿಪಟಲದಿಂದ ಈಚೆಗೆಳೆಯುತ್ತಾರೆ. ಅದು 'ಮುಂಬೈ ರಿಟರ್ನ್'ಗಳ ಬಗ್ಗೆ ಬೀಸುಗಲ್ಲಿನೆದುರು ಕೂರುವ ಮಹಿಳೆಯರು ಕಟ್ಟಿರುವ ಹಾಡು. ಆ ಹಾಡು ಮತ್ತು ಹಾಡು ಹುಟ್ಟಿಕೊಂಡ ಸನ್ನಿವೇಶ ಸಂದರ್ಭವನ್ನು ಕವಿ ಕಂಬಾರರು ಹೀಗೆ ವರ್ಣಿಸುತ್ತಾರೆ. 'ಆ ಕಾಲದಲ್ಲೂ ಹೊಟ್ಟೆಪಾಡಿಗಾಗಿ... ಅಥವಾ ಮುಂಬೈ ಆಕರ್ಷಣೆಗೊಳಗಾಗಿ ಹಳ್ಳಿಯಿಂದ ಮುಂಬೈಗೆ ಹೋಗುವವರ ಸಂಖ್ಯೆ ಕಮ್ಮಿಯೇನೂ ಇರಲಿಲ್ಲ. ಘೋಡಗೇರಿಯಿಂದಲೂ ಮುಂಬೈಗೆ ಹೋದವರಿದ್ದರು. ಹಾಗೆ ಹೋದವರನ್ನು ಮುಂಬೈ ನಗರ ಕಿಸೆಗಳ್ಳರನ್ನಾಗಿ... ರೌಡಿಗಳನ್ನಾಗಿ... ದರೋಡೆಕೋರರನ್ನಾಗಿ ಬದಲಿಸುತ್ತದೆ ಮತ್ತು ಕೆಟ್ಟಚಾಳಿಗಳನ್ನೆಲ್ಲ ಕಲಿಸುತ್ತದೆ ಎಂಬ ನಂಬಿಕೆ ಹಳ್ಳಿಯವರಲ್ಲಿತ್ತು. ಅವರಿಗೆ 'ಮುಂಬೈ ಭಾಂಪ್ಯಾ' ಎಂದು ನಾಮಕರಣ ಮಾಡಲಾಗುತ್ತಿತ್ತು. ನಮ್ಮಲ್ಲಿಹಾಗೆ ಹೋದವರಲ್ಲಿ 'ಈಟಿ ಈರ್‌ಭದ್ರ' ಮಹಾ ಪ್ರಚಂಡ ಕಿಸೆಗಳ್ಳ. ಅವನಲ್ಲಿ ಏನು ಕೇಳಿದ್ರೂ ಕ್ಷಣಮಾತ್ರದಲ್ಲಿ ಎಲ್ಲಿಂದಾದ್ರೂ ಪಿಕ್‌ಪಾಕೆಟ್ ಮಾಡಿ ತಂದುಕೊಡೋನು. ನಾನೊಮ್ಮೆ 'ಒಂದು ಪೆನ್ ಕೊಡೋ' ಎಂದು ಕೇಳಿದರೆ,

ಕ್ಷಣಮಾತ್ರದಲ್ಲಿ ಯಾರದೋ ಜೇಬಿನಿಂದ ಕದ್ದು ಒಂದಲ್ಲ... ನಾಲ್ಕು ಪೆನ್ ತಂದುಕೊಟ್ಟು 'ತಗೋ... ಇಟ್ಕೋ' ಅಂದ. ಮುಂಬೈ ಶಹರ ಅವನನ್ನು ಎಷ್ಟು ಪಳಗಿಸಿತ್ತು ನೋಡಿ. ಅಂಥವರ ಬಗ್ಗೆ ಕೇಳಿಯೇ ನಮ್ಮ ಹೆಣ್ಣುಮಕ್ಕಳು ಬೀಸುಗಲ್ಲು ಮುಂದೆ ಕೂತು ಈ ಹಾಡು ಹಾಡುತ್ತಿದ್ದಿರಬೇಕು -

'ಏನ್ ಬೆರಕೆ ಎವ್ವಾ
ಮುಂಬೈನನ ಹಾಟ್ಯಾಗೋಳ
ಕಡ್ಡಿಯರೆ ಕೊರೆಯುರ
ಬೀಡಿಯರ ಸೇದುರ
ನಾರುವ ಬಾಯಿಂದ ಪುಸು ಪುಸು ಹೊಗೆ ಬಿಡವರ
ಪುಸು ಪುಸು ಹೊಗೆ ಬಿಡವರ ॥ ಏನು ಬೆರಕೆ ಎವ್ವಾ ॥'

ಕಿಸೆಗಳ್ಳ ಈರಭದ್ರನ ಕೈಚಳಕವನ್ನು ಪ್ರಶಂಸಿಯೂ, ಆತನಿಂದ ಕದ್ದ ಮಾಲನ್ನ ಪಡೆದೂ ಬಾಲಕ ಕಂಬಾರರು ಆತನ ಅನುಯಾಯಿಯಾಗಿ, ಕಿಸೆಗಳ್ಳನಾಗದೆ ಸಾಹಿತ್ಯಲೋಕ ಪ್ರವೇಶಿಸುವುದಕ್ಕೆ ಮುಖ್ಯ ಕಾರಣ ಅವರಪ್ಪ, ಬಸವಣ್ಣೆಪ್ಪ ಅವರ ಬಿಗಿಕಣ್ಗಾವಲು ಎಂದೆಂದೂ ಮಗನ ಮೇಲಿತ್ತು.

ಬಸವಣ್ಣೆಪ್ಪನವರು ಮಗನಲ್ಲಿ ಶಾಲೆ ಕಲಿಯುವ ಅಗತ್ಯದ ಬಗ್ಗೆ ಹೇಳಿ 'ನೀನು ಕಲಿತು ಜರ್ಮನ್‌ರಂತೆ ಸೈಂಟಿಸ್ಟ್ ಆಗಬೇಕು. ನಮ್ಮ ಕಮ್ಮಾರಿಕೆಯಲ್ಲಿ ಏನನ್ನಾದರೂ ಹೊಸದನ್ನು ಕಂಡು ಹಿಡಿಯಬೇಕು' ಎಂದು ಹೇಳುತ್ತಿದ್ದರೆ, ಮಗ 'ಸಂಗ್ಯಾಬಾಳ್ಯಾ'ದ ಹಾಡನ್ನು ಗುನುಗುತ್ತ ತಲೆ ಅಲ್ಲಾಡಿಸುತ್ತಿದ್ದ.

ಅಪ್ಪ ಬಸವಣ್ಣೆಪ್ಪ ಬಡವರಾದರೂ ಓದಿದವರು, ಅದರ ಮಹತ್ವ ತಿಳಿದವರು. ಬಡತನದಲ್ಲೂ ಅವರಲ್ಲಿ ರಾಷ್ಟ್ರೀಯ ಪ್ರಜ್ಞೆ ಗಾಢವಾಗಿತ್ತು. ಆ ಹಳ್ಳಿಯ ವಿಶೇಷವೇ ಅದು. ಅಲ್ಲಿ ಶಾಲೆಯಿದ್ದರೂ ಹಳ್ಳಿಯಲ್ಲಿ ಅನಕ್ಷರಸ್ಥರದ್ದೇ ಮೇಲುಗೈ. ಅನಕ್ಷರಸ್ಥರೇ ಬಹಳಷ್ಟು ಇದ್ದರೂ ಆ ಹಳ್ಳಿಯಲ್ಲಿ ಸ್ವಾತಂತ್ರ್ಯ ಹೋರಾಟದ ಕೆಚ್ಚು ಎಲ್ಲೆಡೆ ಹರಡಿದ್ದುದು ವಿಶೇಷ. ಬಸವಣ್ಣೆಪ್ಪನವರನ್ನು ಒಳಗೊಂಡಂತೆ ಹಳ್ಳಿಯ ಹಲವು ಮಂದಿ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲೂ ಪಾಲ್ಗೊಂಡಿದ್ದರು. ದೇಶದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸುದ್ದಿಯನ್ನು ಹಳ್ಳಿಗರಿಗೆ ಬಿತ್ತರಿಸಲು ದಿನಾ ದಿನಪತ್ರಿಕೆಯನ್ನು ಓದುತ್ತಿದ್ದವರು ಕಂಬಾರರ ಅಪ್ಪ ಬಸವಣ್ಣೆಪ್ಪನವರು. ಇಂಥವರ ಮಗ ಚಂದ್ರಶೇಖರ ಕಂಬಾರರು, ಅಪ್ಪನ ಜತೆ ಈ ರಾಷ್ಟ್ರೀಯ ಚಳುವಳಿಗೆ ತಮ್ಮದೂ ಒಂದು ಕಾಣಿಕೆ ಇರಲಿ ಎಂದು ಒಂದು ಲಾವಣಿ ಬರೆದು ಶಾಲೆಯಲ್ಲಿ ಹಾಡಿದರು. ಆ ಲಾವಣಿಯ ತುಣುಕು ಇದು -

*ಽಽಽ ಖೊಟ್ಟಿಗಿಟ್ಟಿ ಅಲ್ಲ ತಗಿ ದಿಟ್ಟ ಮಾತ ಹೇಳತೇನ
ಕಿವಿಗೊಟ್ಟ ಕೇಳ್ರಿ ಕುಂತ ನಿಂತವರ
ಹಿಂಗಾ ಮಾರಿ ಮ್ಯಾಗ ಮೀಸಿ ಹೊತ್ತ ಗಂಡಸರಾ
ಸಣ್ಣ ದೊಡ್ಡವರ । ಮತ್ತು ಹೆಂಗಸರಾ ॥*

*ವ್ಯಾಸುಳ್ಳ ದೇಶ ತುಂಬಾ ಹೇಸಿ ಬೆಂಕಿ ಹಚ್ಚಿದಾರ*
*ಕೆಂಪು ಮೋತಿ ಇಂಗರೇಜಿ ಸರಕಾರ ॥ ಗೀ ಗೀ ॥*
*ಸತ್ತಾರೋ ಮಂದಿ ಸಾವಿರಾ*
*ಗುಂಡಿಗಿ ಸೆಡ್ಡ ಹೊಡೆದವರಾ*
*ಜೀವ ಹುಲ್ಲಿಗಿಂತ ಕಡೆ ಅಂದವರಾ ॥ ಗೀ ಗೀ ॥*

ಹಾಗೆ ನೋಡಿದರೆ ಬಾಲಕ ಕಂಬಾರರಿಗೆ 1944ರಲ್ಲೇ ರಾಷ್ಟ್ರೀಯ ಪ್ರಜ್ಞೆ ಮೊಳೆತಿತ್ತು ಎಂದು ಹೇಳಬಹುದು. 1944ರಲ್ಲಿ ಏಳರ ಹರೆಯದ ಕಂಬಾರರು ರಾಷ್ಟ್ರೀಯ ಸ್ವಯಂಸೇವಾ ಸಂಘಕ್ಕೆ ಲಾಠಿ ತಿರುವಲು ತೆರಳುತ್ತಿದ್ದರಂತೆ. ಧ್ವಜಾರೋಹಣ-ಕವಾಯಿತು-ಲಾಠಿ ತಿರುವುದು-ಪ್ರಾರ್ಥನೆ ಇವು ದಿನಾ ಬಾಲಕ ಕಂಬಾರರ ಇಷ್ಟದ ದಿನಚರಿಯಾಗಿತ್ತು. ಅಲ್ಲಿ ಭಾರತಾಂಬೆಯ ಬಗ್ಗೆ ಹೇಳುತ್ತಿದ್ದ ಮಾತುಗಳು ಅವರಲ್ಲಿ ಕಣ್ಣೀರು ಬರಿಸುತ್ತಿತ್ತಂತೆ. 'ಈ ಬ್ರಿಟಿಷರಿಂದಾಗಿ ದಿನಾ ನಮ್ಮ ಭಾರತಾಂಬೆ ಕಣ್ಣೀರು ಸುರಿಸುತ್ತಾಳೆ'' 'ಹೆಡಗೆವಾರ ಅವರು ದಿನಾ ಭಾರತಾಂಬೆಯ ಬಗ್ಗೆ ಎಷ್ಟು ಚಿಂತನೆ ಮಾಡುತ್ತಿದ್ದರೆಂದರೆ ನಿಮಿಷಕ್ಕೆ ಅವರಲ್ಲಿ ಒಂದು ಹನಿ ರಕ್ತ ಸುಡುತ್ತಿತ್ತಂತೆ' ಹೀಗೆ ಅಲ್ಲಿ ಹೇಳುತ್ತಿದ್ದ ಮಾತುಗಳಿಂದ ಕಂಬಾರರಿಗೆ ಬಿಳಿದೊಗಲಿನವರ ಮೇಲೆ ಅತ್ಯಂತ ರೋಷ ಹುಟ್ಟುತ್ತಿತ್ತು. ಕಂಬಾರರಿಗಿನ್ನೂ ನೆನಪಿದೆ ; ಆರ್.ಎಸ್.ಎಸ್.ನ ನಾಯಕ ಜಗನ್ನಾಥರಾವ್ ಜೋಷಿ ಘೋಡಗೇರಿಗೆ ಬಂದಿದ್ದು ; ಗೊಲ್ವಾಲ್ಕರ್ ಗುರೂಜಿ ಗೋಕಾಕ್‌ಗೆ ಬಂದಿದ್ದು.

1948ರಲ್ಲಿ ಕಂಬಾರರು ರಾಷ್ಟ್ರೀಯ ಸೇವಾ ಸಂಘವನ್ನು ಬಿಟ್ಟದ್ದಕ್ಕೆ ಅವರು ಕೊಡುವ ಕಾರಣ ಹೀಗಿದೆ. ''1948ರಲ್ಲಿ ಗಾಂಧಿ ಕೊಲೆಯಾದ ಸುದ್ದಿ ಬಂದೊಡನೆ ಘೋಡಗೇರಿಯ ಎಲ್ಲ ಜನರು ಅಪಾರ ದುಃಖಿತರಾಗಿದ್ದರು. ನಾನು ಕೂಡ ಬಾಳ ದುಃಖಿತನಾಗಿದ್ದೆ. ಆ ದಿನ ನಮ್ಮ ಸಂಘದಲ್ಲಿ ಏನೂ ಕಾರ್ಯಕ್ರಮ ಬೇಡವೆಂದು ಕೆಲವರು ಸಲಹೆ ನೀಡಿದರು. ಆ ಸಲಹೆ ನನಗೂ ಸರಿಯೆನಿಸಿತ್ತು. ರಾಷ್ಟ್ರಪಿತನೇ ಧರೆಗುರುಳಿರುವಾಗ ಪ್ರಭಾತಪೇರಿಯಾಕೆ-ಪ್ರಾರ್ಥನೆಯಾಕೆ-ಲಾಠಿ ಯಾಕೆ ಕವಾಯಿತು ಯಾಕೆ? ಆದರೆ ಆ ದಿನವೂ ಎಂದಿನಂತೆ ಪ್ರಭಾತಪೇರಿಯಾಯ್ತು, ಲಾಠಿ ತಿರುವಿ-ಕವಾಯತೂ ನಡೆಯಿತು. ನಾನು ಆ ದಿನ ಅದರಲ್ಲಿ ಭಾಗವಹಿಸಲಿಲ್ಲ. ಗಾಂಧಿ ಸತ್ತ ದಿನವೂ ಶೋಕಾಚರಣೆ ಮಾಡದೆ ಹೀಗೆ ಮಾಡಿದ್ದು ದುಃಖವೆನಿಸಿತ್ತು. ನನಗೆ ಸರಿಯೆನಿಸಲಿಲ್ಲ. ಅದೇ ಕೊನೆ ಮರುದಿನದಿಂದ ನಾನಲ್ಲಿಗೆ ಕಾಲಿಡಲಿಲ್ಲ''.

ಬಾಲಕ ಕಂಬಾರರು ಪುಸ್ತಕ ಓದುವುದರಲ್ಲಿ ನಿಸ್ಸೀಮರು. ಪ್ರಾಥಮಿಕ ಶಿಕ್ಷಣದ ಕೊನೆ ತಲುಪುವುದರೊಳಗೆ ಅವರು 300 ಪುಸ್ತಕಗಳನ್ನು ಓದಿ ಮುಗಿಸಿದ್ದರು. ಗ್ರಾಮ ಕರಣಿಕ (ಶ್ಯಾನುಭೋಗ) ದತ್ತು ಕುಲಕರ್ಣಿಯ ಒತ್ತಾಯಕ್ಕೆ ಮಣಿದು, ಗ್ರಾಮಪಂಚಾಯತ್ ಗ್ರಂಥಾಲಯದಲ್ಲಿದ್ದ ಎಲ್ಲ ಪುಸ್ತಕಗಳನ್ನು ಕರಣಿಕನಿಗೆ ಓದಿ ಹೇಳುವ ಕಾಯಕ ಕಂಬಾರರದ್ದಾಗಿತ್ತು. 'ತಾನು ಎಲ್ಲ ಓದಿರುವೆನೆಂಬ' ಜಂಬ ಮಾತ್ರ ಕುಲಕರ್ಣಿಯದಾಗಿತ್ತು. ಆದರೆ ಆ ಒತ್ತಾಯದ ಕಾಯಕದಿಂದಲೂ ಕಂಬಾರರು ಸಾಕಷ್ಟು ಜ್ಞಾನ ಸಂಪಾದಿಸಿಕೊಂಡದ್ದಲ್ಲದೆ, ಸಾಹಿತ್ಯದ ಆಸಕ್ತಿಯನ್ನೂ ವೃದ್ಧಿಸಿಕೊಂಡರು. ಅವರು ಆಗ ಓದಿರುವ ಪುಸ್ತಕಗಳಲ್ಲಿ ಕೆಲವುಗಳನ್ನು ಅವರು ಜ್ಞಾಪಿಸಿಕೊಳ್ಳುತ್ತಾರೆ. ಗಳಗನಾಥರ 'ಈಶ್ವರಿಯ ಸೂತ್ರ', ಮಧುರಚೆನ್ನರ ಒಂದು ಸಂಗ್ರಹ,

ಪರಮೇಶ್ವರ ಭಟ್ಟರ 'ವಿಕ್ರಮ ಊರ್ವಶೀಯ', ಕೃಷ್ಣಮೂರ್ತಿ ಪುರಾಣಿಕರ ಎಲ್ಲ ಕಾದಂಬರಿಗಳನ್ನು ನಾನು ಓದಿ ಮುಗಿಸಿದ್ದೆ. ಆದರೆ ಈ ತರದ ಓದುಗಳನ್ನು ಘೋಡಗೇರಿಯವರು ಲೆಕ್ಕಕ್ಕಿಟ್ಟುಕೊಳ್ಳುತ್ತಿರಲಿಲ್ಲ. ಏನಿದ್ದರೂ ಅವರಿಗೆ 'ಲಾ' ಓದಬೇಕು, ಇಲ್ಲಾ 'ಸೇಯನ್ಸ್' ಓದಬೇಕು. ಗದುಗಿನಲ್ಲಿ ಮಲ್ಲಿಕಾರ್ಜುನ ಸ್ವಾಮಿಗಳು ಘೋಡಗೇರಿ ಮಂದಿಗೆಲ್ಲಾ 'ಪುರಾಣ ಪ್ರವಚನದ ಮೂಲಕ ಆಧ್ಯಾತ್ಮಿಕ ಗುಂಗುಹಿಡಿಸಿದ್ದರೂ ಹಳ್ಳಿಯವರ 'ಲಾ-ಸೇಯನ್ಸ್' ಗುಂಗು ಮಾತ್ರ ಕಿಂಚಿತ್ತೂ ಕಮ್ಮಿಯಾಗಿರಲಿಲ್ಲ.

## ಪ್ರೌಢಶಿಕ್ಷಣ

ಕಂಬಾರರು ಮುಲ್ಕೀ ಪರೀಕ್ಷೆ ಪಾಸು ಮಾಡಿದರು. ತಂದೆ 'ಜರ್ಮನ್ ಸ್ಪೆಂಟ್ಸ್'ನ ಕನಸು ಕಂಡು ವಿದ್ಯಾರ್ಥಿವೇತನವನ್ನು ಅಥವಾ ಫ್ರೀ-ಶಿಪ್ ನಿರೀಕ್ಷಿಸಿ ಮಗನನ್ನು ಗೋಕಾಕ್‌ನ ಮುನ್ಸಿಪಾಲ್ ಸ್ಕೂಲ್‌ಗೆ ಕಳುಹಿಸಿದರು. ಗೋಕಾಕ್ ಹೈಸ್ಕೂಲಿಗೆ ಕಾಲ್ನಡಿಗೆಯಲ್ಲಿ ಹೋಗುವಾಗ ಗೋಕಾಕ್ ಫಾಲ್ಸ್ ಮೂಲಕವೇ ಹಾದು ಹೋಗಬೇಕಿತ್ತು. ಹಾಗೆ ಹಾದು ಹೋಗುವಾಗಲೆಲ್ಲ ಕಂಬಾರರಿಗೆ ಬಿಳಿಯರ 'ಲೋಕದ' ಜತೆಗೆ ಮುಖಾಮುಖಿಯಾಗುತ್ತಿತ್ತು. ಅದು ಬ್ರಿಟಿಷ್ ಮಂದಿಯ ಕೇಂದ್ರ. ಗೋಕಾಕ್ ಫಾಲ್ಸ್ ಸುತ್ತ ಬ್ರಿಟಿಷರ ವಸತಿ ತಾಣಗಳಿದ್ದವು. (ಬೆಳಗಾವಿಯಲ್ಲಿ ಬ್ರಿಟಿಷ್ ಮಿಲಿಟರಿ ನೆಲೆಯಿತ್ತು.)

ಬ್ರಿಟಿಷರ ಮ್ಯಾನರಿಸಂ-ಮ್ಯಾನರ್ಸ್‌ಗಳು ಅವರ ಹ್ಯಾಟ್-ಕೋಟ್-ಬೂಟ್-ಗೌನುಗಳು ಕಂಬಾರರನ್ನು ಬೆರಗುಗೊಳಿಸಿದ್ದವು. ಅವರು ಬಳಸುವ ಹಲವು ವಿಲಾಸೀ ವಸ್ತುಗಳೂ ಹಳ್ಳಿಯ ಕಂಬಾರರಿಗೆ 'ಹೊಸ ಪರಿಚಯ'ವಾಗಿ ಅವುಗಳ ಬಗ್ಗೆ ಕುತೂಹಲ ಉಂಟಾಗುತ್ತಿತ್ತು. ಅವರು ಮೊಟ್ಟಮೊದಲ ಬಾರಿಗೆ ಕಂಡ, ಗ್ರಾಮಫೋನು ಮತ್ತದರ ಹಾಡಿನ ಬಗ್ಗೆ ಕಂಬಾರರ ಮಾತು ಹೀಗಿದೆ :

'...ಎನ್ರೀ ಆ ಗ್ರಾಮಫೋನು ! ನನಗೆ ಭಾಳ ಅಚ್ಚರಿ ಹುಟ್ಟಿಸಿದ ಸಾಧನವದು. ಅದರಲ್ಲಿ ಬರುವ ಹಾಡುಗಳಾದ್ರೂ ಎಂಥದ್ದು. ಈಗಲೂ ಆ ಹಾಡುಗಳು ನನ್ನಲ್ಲೇ ಇವೆ. ಒಂದು ಹಾಡಿನ ತುಣುಕು ಹಾಡ್ತೀನಿ ಕೇಳಿ...

*'ಅಖಿಯಾ ಮಿಲಾ ಕೇ*
*ಪಿಯಾ ಬರ ಮಾಕೇ*
*ಚಲೋ ನಹೀ ಜಾನಾ*
*ಓ... ಓ... ಚಲೋ ನಹೀ ಜಾನಾ...'* ಕಂಬಾರರ ಹಾಡು ಮುಂದರಿದಿತ್ತು.

ಬಾಲಕ ಕಂಬಾರರು ಬ್ರಿಟಿಷರ ಬದುಕನ್ನು ಗಮನಿಸುತ್ತಲೇ ಗೋಕಾಕದ ದಾರಿ ಸವೆಸುತ್ತಿದ್ದರು. ಹಾಗೆ ಒಂದು ಬಾರಿ ಗೋಕಾಕ್‌ಫಾಲ್ಸ್ ಮೂಲಕ ಹಾದು ಹೋಗುವಾಗ ಬ್ರಿಟಿಷರು ಸ್ನಾನ ಮಾಡುತ್ತಿದ್ದ ಕೃತಕ ಹೊಂಡ ಬಳಸಿ ಹೋಗುವ ಸಂದರ್ಭವದು. ಬ್ರಿಟಿಷರು ತಮ್ಮ ಮೋಜಿನ ಸ್ನಾನಕ್ಕಾಗಿ ಅಲ್ಲಲ್ಲಿ ಇಂಥ ಹೊಂಡಗಳನ್ನು ನಿರ್ಮಿಸಿಕೊಂಡಿದ್ದರು. ಕಂಬಾರರು ಗೆಳೆಯರ ಜತೆ ಒಂದು ಹೊಂಡದ ಬಳಿ ಸಾಗುವಾಗ ಬ್ರಿಟಿಷರು ಅಲ್ಲಿಂದ ಆಗ ತಾನೆ ಸ್ನಾನ ಮುಗಿಸಿ

ತೆರಳುತ್ತಿದ್ದರು. ಅವರು ಸ್ನಾನ ಮುಗಿಸಿ ಬಿಟ್ಟು ಹೋಗಿರುವ ಸವೆದ ಸೋಪಿನ ತುಣುಕೊಂದು ಅಲ್ಲೇ ಉಜ್ಜುಕಲ್ಲಿನ ಬಳಿ ಉಳಿದಿತ್ತು. ಸೋಪನ್ನು ನೋಡಿದ್ದೇ ತಡ ಗೆಳೆಯರ ಗುಂಪು ತಟ್ಟನೆ ನೀರಿಗಿಳಿದು ಆ ಸೋಪಿನ ತುಣುಕನ್ನು ಮನಬಂದಂತೆ ಪೈಪೋಟಿಯಲ್ಲಿ ತಿಕ್ಕುತ್ತ ನೀರಲ್ಲಿ ನೊರೆ ಎಬ್ಬಿಸಿ ಕೈಮೂಸಿ ಪರಿಮಳ ಆಸ್ವಾದಿಸತೊಡಗಿತು. ಪೈಪೋಟಿಯಲ್ಲಿ ಸೋಪಿನ ತುಣುಕು ಕಂಬಾರರ ಕೈಗೆ ಬಂದಾಗ ಮೊದಲಿಗೆ ಅವರೂ ಕೈ ಮೂಸಿ ಸೋಪಿನ ಪರಿಮಳ ಆಘ್ರಾಣಿಸಿ... ನಂತರ ಆ ಸೋಪಿನ ತುಣುಕನ್ನು ಉಜ್ಜುಕಲ್ಲಿಗೆ ಬರಬರನೆ ಉಜ್ಜಿದರಂತೆ. ಉಜ್ಜಿದ ಕಾರಣ-ಬ್ರಿಟಿಷರ ಮೇಲಿನ ಕೋಪಕ್ಕೆ. ಹಾಗಾದರೆ ಸೋಪಿನ ಪರಿಮಳ ಮೂಸಿದ್ದ್ಯಾಕೆ?

ಬಾಲಕ ಕಂಬಾರರಿಗೆ ಬ್ರಿಟಿಷರ ಮೇಲೆ ಕೋಪಕ್ಕೆ ಕಾರಣ ಅವರು ನಮ್ಮ ದೇಶಕ್ಕೆ ಬಂದು, ನಮ್ಮ ಸ್ವಾತಂತ್ರ್ಯ ಕಸಿದುಕೊಂಡು ನಮ್ಮನ್ನಾಳುತ್ತಿದ್ದಾರೆ ಎಂಬುದೊಂದೇ ಅಲ್ಲ ನಮ್ಮ ಮಣ್ಣಿನ ಆಟವಾದ 'ಸಂಗ್ಯಾಬಾಳ್ಯಾ'ವನ್ನು ಆಡಲೂ ನಾವು ಬ್ರಿಟಿಷ್ ಸರಕಾರದ ಅನುಮತಿ ಪಡೆಯಬೇಕಾಗಿತ್ತು ಎಂಬ ಕಾರಣವೂ ಜತೆ ಸೇರಿತ್ತು. ಬ್ರಿಟಿಷ್ ಸರಕಾರ 'ಸಂಗ್ಯಾಬಾಳ್ಯಾ' ಪ್ರದರ್ಶನದ ಮೇಲೆ ನಿರ್ಬಂಧ ಹೇರಿದ್ದು ಹಳ್ಳಿಯ ಎಲ್ಲರಂತೆ ಬಾಲಕ ಕಂಬಾರರಿಗೂ ಅಸಹನೆ-ಕೋಪ ಬರಿಸಿತ್ತು.

ಮಗ ದಿನಾ ಘೋಡಗೇರಿಯಿಂದ 20 ಕಿ.ಮೀ. ದೂರದ ಗೋಕಾಕ್‌ಗೆ ಗೆಳೆಯರ ಜತೆಯಲಿ 'ನಡೆದುಕೊಂಡು' ಹೋಗುವುದನ್ನು ಬಸವಣ್ಣೆಪ್ಪನವರಿಂದ ನೋಡಲಾಗಲಿಲ್ಲ. ಗೋಕಾಕದ ತಮ್ಮ ದೂರದ ಸಂಬಂಧಿಕರ ಮನೆಯಲ್ಲಿ ಮಗನ ವಾಸ್ತವ್ಯಕ್ಕೆ ಮಾಡಿದರು. ಕಂಬಾರರಿಗೆ ಆ ಹೈಸ್ಕೂಲ್ ಬಲು ಪ್ರಿಯವಾಯಿತು. ಕಾರಣ ಅಲ್ಲಿನ ಗುರುಗಳಾದ ಸಾಹಿತಿ ಕೃಷ್ಣಮೂರ್ತಿ ಪುರಾಣಿಕರು. ಪುರಾಣಿಕರು ಬರೆದಿರುವ ಸಮಸ್ತ ಸಾಹಿತ್ಯ ಸರಕನ್ನು ಮಾತ್ರವಲ್ಲ ಇನ್ನೂ ಹಲವು ಸಾಹಿತ್ಯ ಕೃತಿಗಳನ್ನು ಕಂಬಾರರು ಆಗಲೇ ಓದಿ ಅರಗಿಸಿಕೊಂಡಿರುವುದರಿಂದ ಪುರಾಣಿಕರಿಗೂ ಶಿಷ್ಯ ಕಂಬಾರರ ಮೇಲೆ ಅಭಿಮಾನ ಹುಟ್ಟಲು ಕಾರಣವಾಯಿತು. ಪುರಾಣಿಕರು ವಿದ್ಯಾರ್ಥಿಗಳಿಗಾಗಿ ರಜಾದಿನಗಳಲ್ಲಿ ಸಾಹಿತ್ಯದ ಚರ್ಚೆ ನಡೆಸುತ್ತಿದ್ದರು ; ಜತೆಗೆ ವಿದ್ಯಾರ್ಥಿಗಳು ಬರೆದಿರುವ ಕಥೆ-ಕವನ-ಪ್ರಬಂಧಗಳನ್ನು ಅಲ್ಲಿ ಓದಿಸುತ್ತಿದ್ದರು ; ತಿದ್ದ ಬೇಕಾದೆಡೆ ತಿದ್ದಿ ಎಲ್ಲ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದ್ದರು.

ಆಗಾಗ್ಗೆ ತಾವು ನಡೆಸುತ್ತಿದ್ದ ಸಾಹಿತ್ಯ ಚರ್ಚಾಗೋಷ್ಠಿಯಿಂದಾಗಿ ಪುರಾಣಿಕರು ಒಬ್ಬ ಚಿಗುರು ಕವಿಯನ್ನು ಗುರುತಿಸಿ ತೆಗೆಯುವುದರಲ್ಲಿ ಸಫಲರಾದರು. ಕಂಬಾರರು ಬರೆಯುತ್ತಿದ್ದ ಕವನಗಳನ್ನೆಲ್ಲ ಪುರಾಣಿಕರು ಸಾವಕಾಶದಿಂದ ಓದುತ್ತಿದ್ದರು. ಹುಡುಗನ ಕವಿತ್ವವನ್ನು ಕಂಡು ಪುರಾಣಿಕರು ಬೆರಗಾಗುತ್ತಿದ್ದರು. ಹೈಸ್ಕೂಲ್ ಸೇರಿದ ಕೇವಲ ನಾಲ್ಕು ತಿಂಗಳಲ್ಲೇ ಪುರಾಣಿಕರು ಕಂಬಾರರಿಗೆ ಜೀವದಂತಾದರು. ಆದರೆ ಕೆಲ ದಿನಗಳಲ್ಲೆ ಕಂಬಾರರು ತನ್ನ ಹೈಸ್ಕೂಲ್ ಶಿಕ್ಷಣಕ್ಕೆ (ನಾಲ್ಕೇ ತಿಂಗಳಲ್ಲಿ) ತಿಲಾಂಜಲಿ ಇಡುವ ಸಂದರ್ಭ ಒದಗಿ ಬಂತು. ಬಡತನದ ಬೇಗೆಯಲ್ಲಿದ್ದ ಬಸವಣ್ಣೆಪ್ಪನವರು ವಿದ್ಯಾಭ್ಯಾಸಕ್ಕೆ ಫ್ರೀ-ಶಿಪ್ ನಿರೀಕ್ಷಿಸಿ ಮಗನನ್ನು ಶಾಲೆಗೆ ಸೇರಿಸಿದ್ದರು. (ಆಗ ಸಿಗುತ್ತಿದ್ದ freeship 5 ರೂಪಾಯಿ). ಆದರೆ ಕಂಬಾರರಿಗೆ ಫ್ರೀ-ಶಿಪ್ ಸಿಗದ ಕಾರಣ ಅನಿವಾರ್ಯವಾಗಿ ವಿದ್ಯಾಭ್ಯಾಸ ಮೊಟಕುಗೊಳಿಸಲೇ ಬೇಕಾಯ್ತು. ವಾಸ್ತವ್ಯ ಇದ್ದ ಮನೆಯಲ್ಲೂ

ಕಂಬಾರರಿಗೆ ಹೊಂದಿಕೆಯಾಗದ ಕಾರಣ ಮತ್ತು ಸ್ವಂತ ದುಡ್ಡಿನಲ್ಲಿ ಉಳಕೊಳ್ಳುವ ವ್ಯವಸ್ಥೆ ಮಾಡಲಾಗದ್ದರಿಂದ ಕಂಬಾರರು ವಿದ್ಯಾಭ್ಯಾಸ ನಿಲ್ಲಿಸಿ ಹಳ್ಳಿಗೆ ಮರಳಿದರು. ಆದರೆ ಗುರು-ಶಿಷ್ಯರ ಸಂಬಂಧವಿದೆಯಲ್ಲ ! ಕೃಷ್ಣಮೂರ್ತಿ ಪುರಾಣಿಕರು, ಹುಡುಗ ಕಂಬಾರರಲ್ಲಿನ ಪ್ರತಿಭೆಯನ್ನು ಮಣ್ಣುಪಾಲು ಮಾಡಬಾರದೆಂದು ನಿರ್ಧರಿಸಿ ತಾವೇ ಮುತುವರ್ಜಿ ವಹಿಸಿ ಶಾಲೆಯಲ್ಲಿ ಶಿಕ್ಷಣದ ಶುಲ್ಕ ಮಾಫಿ ಮಾಡಿಸಿದರು. ವಸತಿ ವ್ಯವಸ್ಥೆಗಾಗಿ ಸಾವಳಗಿ ಮಠದ ಸ್ವಾಮಿಗಳಲ್ಲಿ ಗೆಳೆಯರಿಂದ ಮಾತನಾಡಿಸಿ ಅದನ್ನೂ ಒದಗಿಸಿಕೊಟ್ಟರು. ಸಾವಳಗಿ ಮಠದ ಕೂಸಾದರು - ಕಂಬಾರರು.

ಕಂಬಾರರ ಬದುಕಿನಲ್ಲಿ ಸಾವಳಗಿ ಸ್ವಾಮಿಗಳು ಪ್ರವೇಶ ಪಡೆದಿದ್ದು ಈ ಸಂದರ್ಭದಲ್ಲಿ. ತಾಯ ಪ್ರೀತಿಯನ್ನು ತೋರುತ್ತಿದ್ದ ಸಾವಳಗಿ ಸ್ವಾಮಿಯವರು ತನ್ನ ವ್ಯಕ್ತಿತ್ವ ರೂಪಿಸುವಲ್ಲಿ ತೋರುತ್ತಿದ್ದ ಕಾಳಜಿ-ಪ್ರೀತಿ-ಆಶೀರ್ವಾದವನ್ನು ಕಂಬಾರರು ಎಷ್ಟೋ ಕಡೆ ಅತ್ಯಂತ ಭಕ್ತಿಭಾವುಕರಾಗಿ ಸ್ಮರಿಸಿಕೊಳ್ಳುತ್ತ ತಮ್ಮ ಕೃತಿಗಳಲ್ಲಿ ಅದನ್ನು ನಿವೇದಿಸಿಕೊಳ್ಳುವುದರಲ್ಲೇ ಸಾವಳಗಿ ಸ್ವಾಮಿಯವರ ವ್ಯಕ್ತಿತ್ವದ ಚಿತ್ರಣವನ್ನು ನಮಗೆ ಅವರು ಕಟ್ಟಿಕೊಡುತ್ತಾರೆ. ಸಾವಳಗಿ ಮಠದಲ್ಲಿರುವಾಗಲೇ ಕಂಬಾರರಿಗೆ ಸಾಹಿತಿ ಬಸವರಾಜ ಕಟ್ಟೀಮನಿಯವರ ಪರಿಚಯವಾಯಿತು. ಕಂಬಾರರ ಕವಿತೆ ಓದುತ್ತಲೇ ಅವರಿಬ್ಬರ ಆತ್ಮೀಯತೆ ಬೆಳೆಯಿತು. ಪುರಾಣಿಕರು ಮತ್ತು ಸಾವಳಗಿ ಸ್ವಾಮಿಗಳ ಪ್ರೀತಿ ಮತ್ತು ಆರ್ಥಿಕ ಸಹಾಯದ ಬಲದಿಂದ ಕಂಬಾರರು ಎಸ್.ಎಸ್.ಎಲ್.ಸಿ. ಪಾಸಾದರು. ಅಂತು ಒಂದು ಹಂತ ತಲುಪಿದ್ದಾಯಿತು. ಇನ್ನು ಮುಂದಿನ ದಾರಿಯ ಪ್ರಶ್ನೆ. ಕಂಬಾರರು ಈ ಬಡತನದಲ್ಲಿ ಇನ್ನು ಶಿಕ್ಷಣ ಮುಂದುವರಿಸುವುದು ಸಾಧ್ಯವಿಲ್ಲವೆಂದು ಹಳ್ಳಿಗೆ ಮರಳಲು ನಿರ್ಧರಿಸಿದರು. ಆದರೂ ಇದುವರೆಗೆ ಆಸರೆ ಕೊಟ್ಟು 'ದಾರಿದೀಪ'ವಾದ ಸಾವಳಗಿ ಸ್ವಾಮಿಗಳಲ್ಲಿ ಒಂದು ಮಾತು ಕೇಳಲು ನಿರ್ಧರಿಸಿ, ವಿದ್ಯಾಭ್ಯಾಸ ಮುಂದುವರಿಸಬೇಕೆನ್ನುವ ತನ್ನ ಆಸೆಯನ್ನು ಹೇಳಿಕೊಂಡರು. ಸ್ವಾಮಿಯವರು ಇಲ್ಲವೆನ್ನಲಿಲ್ಲ - ಮುನ್ನೂರು ರೂಪಾಯಿಯೊಂದಿಗೆ ಆಶೀರ್ವದಿಸಿ ಕಳುಹಿಸಿಕೊಟ್ಟರು. ಕಂಬಾರರ ಸಂತಸಕ್ಕಿಂತಲೂ ತಂದೆ ಬಸವಣ್ಣೆಪ್ಪನವರ ಸಂತಸ ಹೇಳತೀರದು. 'ಮಗ ಜರ್ಮನ್‌ರಂಥ ಸೈಂಟಿಸ್ಟ್ ಅಥವಾ 'ಜರ್ಮನ್ ಇಂಜಿನಿಯರ್ ಆಗಬೇಕು' ಎನ್ನುವ ತನ್ನಾಸೆ ಕೊನೆಗೂ ಕೈಗೂಡಿತಲ್ಲ ಎಂಬ ಸಂತೋಷ ಅವರಿಗೆ. ಮಗನನ್ನು ಬೆಳಗಾವಿಗೆ ಸೈನ್ಸ್ ಕಲಿಯಲು ಕಳಿಸುವೆ - ಎಂದು ತೀರ್ಮಾನಿಸಿ ಸೈನ್ಸ್ ಓದಲು ಹೇಳಿ ಬೆಳಗಾವಿಗೆ ಕಳುಹಿಸಿಕೊಟ್ಟರು.

ಅಪ್ಪನಲ್ಲಿ ಹಾಗೆ ಒಪ್ಪಿಹೋದ ಮಗ ಬೆಳಗಾವಿಯಲ್ಲಿ ಸೇರಿದ್ದು ಆರ್ಟ್ಸ್‌ಗೆ. ಮಗ ಕಾಲೇಜಿನಲ್ಲಿ ಸೈನ್ಸ್‌ಗೆ ಸೇರಿಲ್ಲ ಎಂಬ ಸುದ್ದಿಕೇಳಿ ತುಂಬಾ ನೊಂದುಕೊಂಡರು. ಬಸವಣ್ಣೆಪ್ಪನವರು ಮಗ 'ಜರ್ಮನ್ ಸೈಂಟಿಸ್ಟ್ ಅಥವಾ ಜರ್ಮನ್ ಇಂಜಿನಿಯರ್' ಆಗಬೇಕೆಂದು ಬಯಸಿದ್ದು ಯಾಕೆ ಎಂದು ಕಂಬಾರರನ್ನು ಕೇಳಿದರೆ ಅವರು ಹೇಳುತ್ತಾರೆ -

'ಆಗಿನ ಕಾಲಕ್ಕೆ ಸೂಕ್ಷ್ಮ ತಾಂತ್ರಿಕತೆಗೆ, accuracyಗೆ ನಿಖರತೆಗೆ ಜರ್ಮನ್ ತಾಂತ್ರಿಕತೆ ಹೆಸರುವಾಸಿಯಾದುದು. ತಮ್ಮ ಕಮ್ಮಾರಿಕೆ ವೃತ್ತಿಯಲ್ಲಿ ಅಪಾರ ವೃತ್ತಿ ಕೌಶಲ್ಯ ತೋರುತ್ತಿದ್ದ ಅಪ್ಪ ಆ ವೃತ್ತಿಯಲ್ಲಿ ಹೆಸರು ಮಾಡಿದ್ದೇ ಕೆಲಸದ ಸೂಕ್ಷ್ಮತೆ ಹಾಗೂ ಕುಶಲತೆಗಾಗಿ. ಅವರು ಕಮ್ಮಾರಿಕೆಯನ್ನು ಒಂದು ರೀತಿಯ ಇಂಜಿನಿಯರಿಂಗ್ ಎಂದು ಅರ್ಥೈಸಿಕೊಂಡಿದ್ದರಿಂದ ತನ್ನ

ಮಗನೂ ಜರ್ಮನ್ ಸೈಂಟಿಸ್ಟ್ ಆಗಿ ಸೂಕ್ಷ್ಮ ತಾಂತ್ರಿಕತೆ ಕಲಿತು ಈ ವೃತ್ತಿಯಲ್ಲಿ ಕೆಲವು ಹೊಸ ಕೌಶಲ್ಯ ತಂತ್ರಜ್ಞಾನವನ್ನು ಆವಿಷ್ಕಾರ ಮಾಡಿಯಾನು ಎಂದು ಆಸೆ ಅವರಿಗಿತ್ತು' ಎಂದು.

## ಕಾಲೇಜು ಶಿಕ್ಷಣ

1954ರಲ್ಲಿ ಕಂಬಾರರು ಕಾಲೇಜಿಗೆ ಸೇರಿದಾಗ ಅವರ ವಾಸ್ತವ್ಯ ನಾಗನೂರು ಶಿವಬಸವ ಸ್ವಾಮಿಗಳ ಮಠದಲ್ಲಿ ಏರ್ಪಾಡಾಯಿತು. ಹಳ್ಳಿಯ ವಾತಾವರಣದಲ್ಲಿ ಬೆಳೆದ ಕಂಬಾರರು ನಗರದ ಬದುಕಿನಿಂದಾಗಿ ಕೆಲ ಕಾಲ ಕಂಗಾಲಾದರು. ಕಾಲೇಜಿನ ಶಿಷ್ಟ ವಾತಾವರಣವೂ ಅವರನ್ನು ಕಂಗೆಡಿಸಿತ್ತು. ಆದರೆ ನಿಧಾನಕ್ಕೆ ಕಂಬಾರರೊಳಗಿನ ಕವಿ ಹೊರಬರುತ್ತಿದ್ದಂತೆ ಅವರು ಕಾಲೇಜಿನಲ್ಲಿ ಗುರುತಿಸುವಂತಾದರು. ಅದೇ ವರ್ಷ ಕಂಬಾರರ ಒಂದು ಹೊಸ ಕವನವನ್ನು ಎಲ್ಲೋ ಓದಿದ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ.ಎಸ್.ಎಸ್. ಭೂಸನೂರುಮಠರು ಶಿಷ್ಯನ ಕಾವ್ಯಶಕ್ತಿಯನ್ನು ಕಂಡು ಅಚ್ಚರಿಪಟ್ಟರು. ಕಂಬಾರರು ಆಗಲೇ 'ಅಣ್ಣ ತಂಗಿ' ಎಂಬ ಕಾದಂಬರಿ ಬರೆದು ಗುರುವಿನ ಮುಂದಿಟ್ಟಿದ್ದರು. ಗುರುಗಳು ಕಂಬಾರರನ್ನು ಕರೆದು ಬೆನ್ನುತಟ್ಟಿ ಮತ್ತಷ್ಟು ಸತ್ವವುಳ್ಳ ಕವನ ಕಾದಂಬರಿಗಳನ್ನು ಬರೆಯುವಂತೆ ಪ್ರೋತ್ಸಾಹಿಸಿದರು. ಈ ಮೂಲಕ ಕಂಬಾರರ ಸಾಹಿತ್ಯ ಬದುಕಿಗೆ ಗುರು ಪ್ರೊ. ಭೂಸನೂರಮಠರು ಪ್ರವೇಶಿಸುವುದರೊಂದಿಗೆ ಅವರ ಬರವಣಿಗೆಯ ಬದುಕು ಒಂದು ಅರ್ಥಪೂರ್ಣದಾರಿಯನ್ನು ಪಡೆದುಕೊಂಡಿತು.

ಅಂದು ತನ್ನ ಬರವಣಿಗೆಗೆ ಸೂಕ್ತ ಕಾಲದಲ್ಲಿ ಸ್ಪಷ್ಟದಾರಿ ತೋರಿ, ಪ್ರೀತಿ ಪ್ರೋತ್ಸಾಹಗಳ ಧಾರೆ ಎರೆದ ಪ್ರೊ. ಭೂಸನೂರಮಠ ಅವರನ್ನು ಕಂಬಾರರು ಗೌರವಪೂರ್ವಕವಾಗಿ ತಮ್ಮ ಕೃತಿಗಳಲ್ಲಿ ಸ್ಮರಿಸಿಕೊಂಡಿದ್ದಾರೆ. ಭೂಸನೂರಮಠರು ತನ್ನ ಪ್ರಿಯ ಶಿಷ್ಯ ಕಂಬಾರರಿಗೆ 'ವಚನಸಾಹಿತ್ಯವನ್ನು ಅರೆದು ಕುಡಿಯುವಂತಹ' ಒಂದು ಅವಕಾಶವನ್ನು ಒದಗಿಸಿಕೊಟ್ಟದ್ದು ಕಂಬಾರರ ಸಾಹಿತ್ಯಿಕ ಬದುಕಿಗೆ ಹೊಸ ಆಯಾಮವನ್ನು ನೀಡಿದಂತಾಯ್ತು. ಇಂದಿನ ಸಾಹಿತ್ಯ ಸಂದರ್ಭದಲ್ಲಿ ಕಂಬಾರರು ವಚನಸಾಹಿತ್ಯದ ಬಗ್ಗೆ ಅಥೆಂಟಿಕ್ ಆಗಿ ಮಾತನಾಡಬಲ್ಲರಾದರೆ ಅದಕ್ಕೆ ಕಾರಣರು ಪ್ರೊ. ಭೂಸನೂರಮಠರು. ಆಗ ಭೂಸನೂರಮಠರು ತಾನು ಸಂಪಾದಿಸುತ್ತಿದ್ದ 'ವಚನ ಸಾಹಿತ್ಯ ಸಂಗ್ರಹ' ಕೃತಿಯ ಕೆಲಸಕ್ಕೆ ಶಿಷ್ಯ ಕಂಬಾರರನ್ನೂ ತೊಡಗಿಸಿಕೊಂಡರಲ್ಲದೆ ವಚನಗಳನ್ನು ಓದಿ ಪ್ರತಿ ಮಾಡುವ ಮುಖ್ಯ ಹಿಡಿತದ ಕೆಲಸವನ್ನೂ ಅವರಿಗೆ ವಹಿಸಿಕೊಟ್ಟರು. ಭೂಸನೂರಮಠರ ಕೆಲಸ ಹಗುರವಾಗುವುದರೊಂದಿಗೆ ವಿದ್ಯಾರ್ಥಿ ಕಂಬಾರರಿಗೆ ವಚನಲೋಕದ ಆಳ-ಹರವುಗಳ ಅನುಭವವಾಯಿತು. ಅವರ ವಚನ ಪಾಂಡಿತ್ಯದಲ್ಲಿ ಏರಿಕೆಯುಂಟಾಯ್ತು. ಕಂಬಾರರ ಕಾವ್ಯಕಟ್ಟುವ ಕೆಲಸಕ್ಕೆ ಇದು ಪರೋಕ್ಷವಾಗಿ ತುಂಬ ಸಹಕಾರಿಯಾಯಿತು.

ಕಂಬಾರರು ಕಾವ್ಯಲೋಕದಲ್ಲಿನಿಂತು ನಾಟಕಲೋಕವನ್ನೂ ಹೊಗುವ ಸಾಹಸ ಆರಂಭಿಸಿದ್ದು ಅವರು ಇಂಟರ್ ಮೀಡಿಯಟ್ ಓದುತ್ತಿದ್ದಾಗ. 'ಬೆಂಬತ್ತಿದ ಕಣ್ಣು' ಎಂಬ ಏಕಾಂಕ ನಾಟಕ ಬರೆದು ತರುಣ ಅಧ್ಯಾಪಕ ಸುಮತೀಂದ್ರ ನಾಡಿಗರ ಒಲವು-ಪ್ರೋತ್ಸಾಹ-ಸ್ನೇಹವನ್ನು ಸಂಪಾದಿಸಿಕೊಂಡರು. ನಾಡಿಗರ ಮುತುವರ್ಜಿಯಿಂದ ಆ ನಾಟಕ ಧಾರವಾಡ ಆಕಾಶವಾಣಿಯಲ್ಲಿ ಪ್ರಸಾರವಾಯಿತು. ಇದರಿಂದಾಗಿ ಕಂಬಾರರೊಳಗಿನ 'ನಾಟಕಕಾರ' ಇನ್ನಷ್ಟು ಬಲವಾಗಿ ಬೆಳೆಯುವಂತಾಯಿತು. ನಾಡಿಗರ 'ಸ್ನೇಹದಿಂದಾಗಿ ಕಂಬಾರರು ತಮ್ಮ ವಿದ್ಯಾರ್ಥಿ ದೆಸೆಯಲ್ಲೇ

ಶಿವರಾಮಕಾರಂತ, ಗೋಪಾಲಕೃಷ್ಣ ಅಡಿಗರೊಂದಿಗೆ ಪರಿಚಯ-ಸಾಹಿತ್ಯ ಸಂಬಂಧವನ್ನು ಬೆಳೆಸಿಕೊಂಡರು. ವಿದ್ಯಾರ್ಥಿ ಬದುಕಿನಲ್ಲೇ ತನ್ನ ಸಾಹಿತ್ಯ ಪ್ರತಿಭೆಯಿಂದಾಗಿ ಸಾಕಷ್ಟು ಸಾಹಿತ್ಯ ವ್ಯಕ್ತಿಗಳೊಂದಿಗೆ ಪರಿಚಯ, ಸಲಿಗೆ ಬೆಳಸಿಕೊಂಡ ಕಂಬಾರರು 1957ರಲ್ಲಿ ಅಂದಿನ ತನ್ನ ಅತ್ಯಂತ ಪ್ರೀತಿಯ ಕವಿಗಳಾದ ಕುವೆಂಪು ಅವರನ್ನು ಭೇಟಿಯಾದರು. ಅದು ಧಾರವಾಡದ ಸಾಹಿತ್ಯ ಸಮ್ಮೇಳನದಲ್ಲಿ.

1958ರಲ್ಲಿ ಬಿ.ಎ. ಮುಗಿಯುತ್ತಿದ್ದಂತೆ ಅವರ ಪ್ರಥಮ ಕವನ ಸಂಕಲನ 'ಮುಗುಳು' ಪ್ರಕಟವಾಯಿತು. ನವ್ಯದ ಘೋಷಣೆಯ ಆರಂಭದ ಕಾಲ ಮತ್ತು ನವೋದಯದ ಕೊನೆಯ ಹಂತದಲ್ಲಿ ಪ್ರಕಟವಾದ ಈ ಸಂಕಲನದ ಕವನಗಳಲ್ಲಿ ನವೋದಯದ ಸ್ಪಷ್ಟ ಛಾಯೆಯಿದೆ. ಯುವಕವಿಯ ಈ ಪಕ್ವ ಕವನ ಸಂಕಲನ ಅವರಿಗೆ ಕನ್ನಡ ಕಾವ್ಯಲೋಕದಲ್ಲಿ ಒಂದು ಮಣೆಯನ್ನು ಶಾಶ್ವತವಾಗಿ ಹಾಕಿ ಕೂರಿಸಿತು. ಬೆಳಗಾವಿಯಲ್ಲಿ ಕಲಿಯುತ್ತಿದ್ದಾಗ ಪ್ರೊ.ಎ.ಕೆ. ರಾಮಾನುಜನ್ ಅವರೂ ಇವರಿಗೆ ಗುರುಗಳಾಗಿದ್ದರು. ಆದರೆ ಪರಿಚಯ ಗಾಢವಾದದ್ದು ಮುಂದೆ ರಾಮಾನುಜನ್ ಅವರು 'ಹೇಳತೇನ ಕೇಳ'ವನ್ನು ಓದಿ ಇಂಗ್ಲಿಷಿಗೆ ಅನುವಾದಿಸಬೇಕೆಂದು ಅಪೇಕ್ಷೆಪಟ್ಟಾಗ.

## ಉನ್ನತ ಶಿಕ್ಷಣ

1958ರಲ್ಲಿ ಕಾಲೇಜಿನಲ್ಲಿ ಬಿ.ಎ. ಮುಗಿಸಿದ ಕಂಬಾರರು ಸ್ನಾತಕೋತ್ತರ ಪದವಿ ಶಿಕ್ಷಣಕ್ಕಾಗಿ ಧಾರವಾಡವನ್ನು ಆಶ್ರಯಿಸಿದರು. ಪ್ರೊ. ಭೂಸನೂರಮಠದ ಸಹಾಯ, ಮಾರ್ಗದರ್ಶನದಲ್ಲೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಶಿಕ್ಷಣವನ್ನು ಮುಂದುವರಿಸಿದರು. ಬಾಡಿಗೆ ಕೊಠಡಿಯಲ್ಲಿದ್ದು ಬಹಳ ಆರ್ಥಿಕ ಕಷ್ಟ ಎದುರಿಸುತ್ತಲೇ ಎಂ.ಎ. ಶಿಕ್ಷಣ ಮುಗಿಸಿದರು. ಎಂ.ಎ. ಮುಗಿಸುವಷ್ಟರಲ್ಲಿ ಅವರು ಧಾರವಾಡದ ಹಲವು ಸಮಾನ ಮನಸ್ಕ ಸಾಹಿತ್ಯ ಗೆಳೆಯರನ್ನು ಸಂಪಾದಿಸಿಕೊಂಡರು. ಪ್ರೊ. ಬಿ.ಟಿ. ದೇಸಾಯಿ, ಪ್ರೊ. ಗಿರಡ್ಡಿ ಗೋವಿಂದರಾಜು, ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ ಪ್ರೊ. ಚಂದ್ರಶೇಖರ ಪಾಟೀಲ ಇವರೆಲ್ಲರೂ ಕಂಬಾರರ ವಿದ್ಯಾರ್ಥಿದೆಸೆಯ ಸ್ನೇಹಿತರು. ಕಂಬಾರರ ಸಾಹಿತ್ಯಿಕ ಚಿಂತನೆ ಈ ಸ್ನೇಹಿತವಲಯದಿಂದ ಗಟ್ಟಿಗೊಂಡಿತು. 1962ರಲ್ಲಿ ಎಂ.ಎ. ಪದವಿ ಪಡೆದ ಕಂಬಾರರು, ಮತ್ತೆ 1975ರಲ್ಲಿ ಇದೇ ವಿಶ್ವವಿದ್ಯಾಲಯದಿಂದ ತಮ್ಮ 'Origin and Development of Karnataka folk theatre' ಎಂಬ ಮಹಾಪ್ರಬಂಧಕ್ಕಾಗಿ ಪ್ರೊ.ಎಸ್.ಎಸ್. ಭೂಸನೂರಮಠ ಅವರ ಮಾರ್ಗದರ್ಶನದಲ್ಲಿ ಪಿ.ಎಚ್.ಡಿ. ಪದವಿ ಪಡೆದರು. ಕಂಬಾರರ ಸಾಂಪ್ರದಾಯಿಕ ಶಿಕ್ಷಣ ಕಲಿಕೆಯ ಬದುಕು ಇಲ್ಲಿಗೆ ಮುಕ್ತಾಯವಾಯಿತು.

## ಉದ್ಯೋಗ

ಕಂಬಾರರು ಎಂ.ಎ. ಮುಗಿಸಿದೊಡನೆ ತಾನು ಕಲಿತ ಬೆಳಗಾವಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಗಿಳಿದರು. ಅಲ್ಲಿ ಮತ್ತೆ ಗುರು-ಶಿಷ್ಯರ ಮಿಲನವಾಗಿ, ಭೂಸನೂರಮಠರ ಒಡನಾಟ ಮತ್ತಷ್ಟು ಬಲಿಯಿತು. ಕಂಬಾರ ಆಗ ಶಿಷ್ಯ-ಈಗ ಸಹೋದ್ಯೋಗಿ. ಆದರೂ ಗುರು ಭೂಸನೂರಮಠರು ಗುರುಪಟ್ಟದಲ್ಲೇ ಮುಂದುವರಿಯುವಂತೆ ಕಂಬಾರರು ಬಯಸಿದರು. ಭೂಸನೂರಮಠರ

ಮಾರ್ಗದರ್ಶನದಲ್ಲೇ ತಮ್ಮ ಮುಂದಿನ ದಾರಿಯನ್ನು ಹುಡುಕಬಯಸಿದರು. ಈ ಸಮಯದಲ್ಲೇ ಎ.ಕೆ. ರಾಮಾನುಜನ್ ಅವರೊಂದಿಗೆ ಸ್ನೇಹ-ಸಲಿಗೆ ಇನ್ನಷ್ಟು ಬೆಳೆಯಿತು. ಜಗತ್ತಿನ ಜಾನಪದದ ಬಗ್ಗೆ ಸಮಗ್ರ ಅಧ್ಯಯನ ಆಸಕ್ತಿ ಹೊಂದಿದ್ದ ಎ.ಕೆ. ರಾಮಾನುಜನ್ ಅದರ ಪೂರ್ವಭಾವಿಯಾಗಿ ತಾವು ಕೈಗೊಂಡಿದ್ದ ಜನಪದ ಕತೆಗಳ ಸಂಗ್ರಹಣೆಯ ಕೆಲಸಕ್ಕೆ ಕಂಬಾರರ ನೆರವು ಪಡೆದರು. ಕಂಬಾರರು ಕರ್ನಾಟಕದ ಅದರಲ್ಲೂ ಉತ್ತರ ಕರ್ನಾಟಕದ ಸಾವಿರಾರು ಜನಪದ ಕತೆಗಳನ್ನು ಸಂಗ್ರಹಿಸಿದರಲ್ಲದೆ, ಆ ಸಂಗ್ರಹಣಾ ಕಾರ್ಯದ ಸಂದರ್ಭದಲ್ಲಿ ಜನಪದ ಸಾಹಿತ್ಯದ ಒಳಹೊರಗನ್ನು ಅಭ್ಯಸಿಸಿದರು. ಜನಪದ ಸಾಹಿತ್ಯದ ಸತ್ವ-ಶಕ್ತಿ ಎಲ್ಲಿದೆ ಎಂಬುದನ್ನು ಕಂಡುಕೊಂಡರು. ಅವರ ಮುಂದಿನ ಬರವಣಿಗೆಗೆ ಇದು ಅತ್ಯಂತ ಸಹಕಾರಿ ಎನಿಸಿತು.

ಕಂಬಾರರು ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗಲೆ 1964ರಲ್ಲಿ 'ಹೇಳತೇನ ಕೇಳ' ಎಂಬ ಕವನ ಸಂಕಲನವೊಂದನ್ನು ಪ್ರಕಟಿಸಿದ್ದರು. ನವ್ಯದ ಮೇಲುಗೈ ಇರುವ ಕಾಲವಾದರೂ ಕಂಬಾರರು ಇತರ ನವ್ಯ ಕವಿಗಳ ಜಾಡಿನಲ್ಲಿ ಸಾಗದೆ, ಅತ್ತ ನವ್ಯವೂ ಅಲ್ಲ ಇತ್ತ ನವೋದಯ ಪಂಕ್ತಿಯಲ್ಲೂ ನಿಲ್ಲದ, ಸಮಕಾಲೀನ ಕಾವ್ಯ ಪರಂಪರೆಗೆ ಭಿನ್ನವಾದ ತನ್ನದೇ ಆದ ವಿಶಿಷ್ಟ ಕಾವ್ಯ ಶೈಲಿಯನ್ನು ಹುಟ್ಟುಹಾಕಿದ್ದು ಆ ಸಂಕಲನದ ವೈಶಿಷ್ಟ್ಯ ಆ ಸಂಕಲನದಲ್ಲಿನ ಮುಖ್ಯ ಕಥನ ಕವನ 'ಹೇಳತೇನ ಕೇಳ' ಒಂದು ನವ್ಯ ಲಾವಣಿ. ಅದನ್ನೊಂದು ಹಾಡುಗಬ್ಬವೆಂದರೂ ಸರಿ.

ಜನಪದ ಕಾವ್ಯದಲ್ಲಿನ ಲಯಗಾರಿಕೆ, ಭಾಷಾಸಮೃದ್ಧಿಯನ್ನು ಈ ನವ್ಯ ಲಾವಣಿಯಲ್ಲಿ ಬೆಸೆದಿರುವ ಕಂಬಾರರು, ಲಾವಣಿಯ ಮೂಲಕ ಆಧುನಿಕ ವೈಚಾರಿಕತೆಯನ್ನು ಪ್ರತಿಬಿಂಬಿಸ ಹೊರಟಿರುವುದು ಕನ್ನಡ ಕಾವ್ಯ ಪರಂಪರೆಯಲ್ಲೇ ಹೊಸ ಪ್ರಯೋಗ.

'ಹೇಳತೇನ ಕೇಳ' ಕಂಬಾರರಿಗೆ ಹೊಸಗನ್ನಡ ಕಾವ್ಯಲೋಕದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ದೊರಕಿಸಿಕೊಟ್ಟಿತು. ಕಂಬಾರರು ಕನ್ನಡದ ಮಹತ್ವದ ಕವಿಯಾದರು.

'ಹೇಳತೇನ ಕೇಳ' ಬರೆದ ಕಾಲದಲ್ಲಿನ ತನ್ನ ಮನಸ್ಥಿತಿಯನ್ನು, ಮತ್ತು ಅದಕ್ಕೆ ಬಂದ ಪ್ರತಿಕ್ರಿಯೆಯನ್ನು ಕಂಬಾರರು ಹೀಗೆ ನೆನಪಿಸಿಕೊಂಡಿದ್ದಾರೆ. "... ನನಗೆ ನನ್ನ ಕಾವ್ಯದ ಮೇಲೆ ಅಷ್ಟೊಂದು ಭರವಸೆ ಇರಲಿಲ್ಲ ಮತ್ತು ನಂಬಿಕೆ ಇರಲಿಲ್ಲ. ಆಗ 'ಹೇಳತೇನ ಕೇಳ' ಬರೆದಿದ್ದೆನು. ಅದನ್ನು ಸ್ನೇಹಿತರೆದುರು ಓದಿಯೂ ಇದ್ದೆನು. ಆದರೆ ಅವರು ಯಾರೂ ನಾನು ಬಯಸಿದಂತಹ ವಿಮರ್ಶೆಯ ಶಬ್ದಗಳಲ್ಲಿ ಹೊಗಳಿರಲಿಲ್ಲ. ಆದ್ದರಿಂದ ನನ್ನ ಕಾವ್ಯ ಶಕ್ತಿಯಲ್ಲಿ ನನಗೆ ನಂಬಿಕೆ ಬರಲಿಲ್ಲ. ಒಂದು ದಿನ ನಾನು ಧಾರವಾಡಕ್ಕೆ ಬಂದಾಗ ಜಿ.ಬಿ. ಜೋಶಿಯವರ ಬಳಿಗೆ ಹೋದೆನು. ಆಗ ಅವರು ಬಹಳ ದುಃಖದಲ್ಲಿದ್ದರು. ಕಾರಣ ನನಗೆ ತಿಳಿದಿರಲಿಲ್ಲ. ಅಲ್ಲಿಯೇ ಇದ್ದ ಕುರ್ತಕೋಟಿಯವರು ನನ್ನ ಕೈಚೀಲ ತೆಗೆದುಕೊಂಡು ಅದರೊಳಗಿದ್ದ 'ಹೇಳತೇನ ಕೇಳ' ಪದ್ಯವನ್ನು ಓದಲು ಹೇಳಿದರು. ಜೋಶಿಯವರು ದುಃಖದಲ್ಲಿದ್ದಾರೋ ಅಥವಾ ಸಂತೋಷದಲ್ಲಿದ್ದಾರೋ ಎಂಬುದನ್ನು ನೋಡದೇ ನಾನು ಹಾಡುವುದಕ್ಕೆ ಪ್ರಾರಂಭಿಸಿದೆನು. ಸುಮಾರು ಎರಡು ತಾಸು ಹಾಡಿದೆನು. ಜೋಶಿಯವರೂ ಮೇಲೇಳಲಿಲ್ಲ. ಕುರ್ತಕೋಟಿಯವರು ನಡು ನಡುವೆ ಸಂಗೀತ ಕಚೇರಿಗೆ ಪ್ರೋತ್ಸಾಹ ನೀಡುವ ರೀತಿ ಪ್ರೋತ್ಸಾಹಿಸುತ್ತಿದ್ದರು. ಜೋಶಿಯವರು ಆ ದಿನವಷ್ಟೆ ಬಾಯಿ ತೆರೆದು ಮಾತನಾಡಿದರು. ನನ್ನ ಪದ್ಯ ಅಷ್ಟು ಪರಿಣಾಮ

ಬೀರಿತ್ತು. ಕುರ್ತಕೋಟಿಯವರು ಸುಮಾರು ಹದಿನೈದು ನಿಮಿಷ ನನ್ನನ್ನು ಹೊಗಳಿದರು. ಆದರೆ ಅದರಿಂದ ನನಗೇನೂ ಸಂತೋಷವಾಗಲಿಲ್ಲ. ಏಕೆಂದರೆ ಅವರು ವಿಮರ್ಶಕರಲ್ಲವೆಂಬುದು ನನಗೆ ತಿಳಿದಿತ್ತು. ಬಳಿಕ ಕುರ್ತಕೋಟಿಯವರು 'ನೀನು ಜೋಶಿಯವರ ಬಾಯಿ ತೆರೆಸಿದ್ದಿಯಾ ಮಾರಾಯ' ಎಂದರು. ಆಗ ನನಗೆ ನಿಜವಾಗಿಯೂ ಸಂತೋಷವಾಯಿತು'', (ಸಿರಿಸಂಪಿಗೆ ಕಂಬಾರ 60, ನನ್ನ ಬದುಕು-ಬರಹ, ಪುಟ - 167).

1962ರಿಂದ 1964ರವರೆಗೆ ಬೆಳಗಾವಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ ಕಂಬಾರರು 1964ರಿಂದ ಸಾಗರದ ಲಾಲ್‌ಬಹದ್ದೂರ್ ಶಾಸ್ತ್ರಿ ಕಾಲೇಜಿನಲ್ಲಿ ಅಧ್ಯಾಪಕನ ವೃತ್ತಿ ಕೈಗೊಂಡರು. ಆಗ ಆ ಕಾಲೇಜಿನ ಪ್ರಾಂಶುಪಾಲರು - ಕವಿ ಗೋಪಾಲಕೃಷ್ಣ ಅಡಿಗರು. ಅಡಿಗರ ಸತತ ಒಡನಾಟದಿಂದ ಕಂಬಾರರ ಸಾಹಿತ್ಯದ ಕಾವ್ಯಶೈಲಿ ಹೊಸರೂಪ ಪಡೆಯಿತು. ಕಂಬಾರರು ನಿಧಾನಕ್ಕೆ ನವ್ಯದ ಪ್ರಭಾವಕ್ಕೊಳಗಾದರು. ಆದರೂ ಅವರಿಗೆ ತನ್ನ ಬರಹದಲ್ಲಿರಬೇಕಾದ 'ತನ್ನತನ'ದ ಬಗ್ಗೆ ಸ್ಪಷ್ಟ ನಿರ್ಧಾರವಿತ್ತು. ನವ್ಯವನ್ನು ನಿರಾಕರಿಸದೆ, ಅದರ ಜತೆಗೇ ಜನಪದ ಶೈಲಿ-ಜನಪದ ತಂತ್ರ-ದೇಸಿಸತ್ವವನ್ನು ತನ್ನ ಬರಹದಲ್ಲಿ ಎಲ್ಲಿ-ಎಷ್ಟು-ಹೇಗೆ ಬಳಸಬಹುದು ಎಂಬ ಹೊಸ ಪ್ರಯೋಗದಲ್ಲೇ ಕಂಬಾರರು ಅಲ್ಲಿ ಕೆಲವು ವರ್ಷಗಳನ್ನು ಕಳೆದರು. ನವ್ಯರು ನಿರ್ಲಕ್ಷಿಸಿದ ಗೇಯತೆ-ದೇಸಿಯತೆಯನ್ನು ಕಂಬಾರರು ತನ್ನ ಬರವಣಿಗೆಯ ಬತ್ತಳಿಕೆಯಲ್ಲಿ ಜೋಪಾನವಾಗಿ ಹೆಕ್ಕಿಟ್ಟುಕೊಂಡು ಮುಂದೆ ಅದನ್ನು ನವ್ಯದ ಆಲೋಚನೆಯೊಂದಿಗೆ ಹೆಣೆದು, ಸುಂದರ ಕೃತಿಮಾಲೆಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಲು ಸಾಧ್ಯವಾದದ್ದು - ಈ ಅವಧಿಯ ಚಿಂತನೆಯಿಂದಲೆ.

ಕಂಬಾರರು ಸಾಗರದಲ್ಲಿದ್ದಾಗ (1965) ಅವರು 'ಉತ್ತರ ಕರ್ನಾಟಕದ ಜಾನಪದ ರಂಗಭೂಮಿ' ಎಂಬ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದರು. ಸಾಕಷ್ಟು ಶ್ರಮದ ಅಧ್ಯಯನ ಮತ್ತು ಕ್ಷೇತ್ರಕಾರ್ಯಗಳಿಂದ ಉತ್ತರ ಕರ್ನಾಟಕದ ಜಾನಪದ ರಂಗ ಪ್ರಕಾರಗಳ ಸಮಗ್ರ ಮಾಹಿತಿ ನೀಡುವ ಈ ಪ್ರಬಂಧ, ಜಾನಪದ ಕ್ಷೇತ್ರಕ್ಕೆ ಕಂಬಾರರು ಕೊಟ್ಟ ಒಂದು ಮುಖ್ಯ ಕೊಡುಗೆ.

ಕಂಬಾರರು ಬೆಳಗಾವಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಸಂದರ್ಭದಲ್ಲಿ ಬರೆದ ಕವನ ಸಂಕಲನ 'ಹೇಳತೇನ ಕೇಳ' ಅವರು ಸಾಗರಕ್ಕೆ ಬಂದ ಹೊಸತರಲ್ಲಿ ಪ್ರಕಟವಾಯಿತು. ಕಿರಿಯನ ಆ ಕೃತಿ ಪ್ರಕಟಿಸುವಲ್ಲಿ ಹಿರಿಯ ಕವಿಗೋಪಾಲಕೃಷ್ಣ ಅಡಿಗರು ಬಹಳ ಮುತುವರ್ಜಿ ವಹಿಸಿದ್ದರು. ಅಡಿಗರ ಆ ಮುತುವರ್ಜಿ ಬಗ್ಗೆ ಆ ಕೃತಿಯ ಪ್ರಕಾಶಕರಾದ (ಮೈಸೂರಿನಲ್ಲಿ 1963ರಲ್ಲಿ ಗೆಳೆಯರಾದ ಕಡಿದಾಳು ಶಾಮಣ್ಣ ಮತ್ತು ಪೂರ್ಣಚಂದ್ರ ತೇಜಸ್ವಿಯವರು ಜತೆ ಸೇರಿ ಆರಂಭಿಸಿದ ಸಹ್ಯಾದ್ರಿ ಪ್ರಕಾಶನ) ಕಡಿದಾಳು ಶಾಮಣ್ಣ ಅವರು ಹೀಗೆ ಹೇಳುತ್ತಾರೆ - ''1964ರಲ್ಲಿ ಅಡಿಗರು ಸ್ವತಃ ಆ ಹಸ್ತಪ್ರತಿಯನ್ನು ಮೈಸೂರಿಗೆ ತಂದು 'ಇದೊಂದು ಮಹತ್ತ್ವದ ಕೃತಿ ಕಣಯ್ಯ... ಇದು ತಕ್ಷಣ ಪ್ರಕಟವಾಗ್ಲೇ ಬೇಕು...' ಎಂದು ಶಿಫಾರಸು ಮಾಡಿ, ತಮ್ಮ ಮುನ್ನುಡಿಯನ್ನೂ ಕೊಟ್ಟರು. ಇದರ ಜತೆಗೆ ತರುಣ ಕಂಬಾರರ ಕಾವ್ಯ ಸೃಷ್ಟಿಯಲ್ಲಿರುವ ವಿಶಿಷ್ಟತೆಯನ್ನೂ ನಮಗೆ ವಿವರಿಸಿದರು. ಅಡಿಗರೆಂದ ಮೇಲೆ ನಾವು ಮತ್ತೆ ಯೋಚಿಸುವುದಿದೆಯೇ... ಅದು ತಕ್ಷಣ ಪ್ರಕಟವಾಯಿತು''. ಆಗ ತಾನೇ ಬಲಿಯುತ್ತಿದ್ದ ಕಂಬಾರರು ಕಾವ್ಯ ಹುಡುಕುವ ಪರಿಯಿಂದ, ಕವನ ಕಟ್ಟುವ

ಸಾಮರ್ಥ್ಯದಿಂದ - ಶೈಲಿಯಿಂದ ಬಲಿತ ಸಾಹಿತಿಗಳನ್ನು ಹೇಗೆ 'ವಶೀಕರಿಸುತ್ತಿದ್ದರು' ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಸಾಗರದಲ್ಲಿದ್ದಾಗ ಕಂಬಾರರಿಗೆ ಅವರ 'ಹೇಳತೇನ ಕೇಳ'ದ ಪ್ರಭಾವದಿಂದ ಸಮಾಜವಾದಿಗಳಾದ ಶಾಂತವೇರಿ ಗೋಪಾಲಗೌಡ, ಕೋಣಂದೂರು ಲಿಂಗಪ್ಪ, ಬಿ.ಎಚ್. ಚಂದ್ರಶೇಖರ್, ಜೆ.ಎಚ್. ಪಟೇಲ್, ಕೆ. ವಿ. ಸುಬ್ಬಣ್ಣ ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಇವರ ಪರಿಚಯವಾಯಿತು. ಆ ಪರಿಚಯವೇ ಕಾಲಕ್ರಮೇಣ ಗೆಳತನಕ್ಕೂ ತಿರುಗಿತು. ಕಾವ್ಯ ಪ್ರೇಮಿ ಗೋಪಾಲಗೌಡರು ಸಾಗರದಲ್ಲಿದ್ದಾಗ ತಂಗುತ್ತಿದ್ದುದು ಕಾಗೋಡು ತಿಮ್ಮಪ್ಪ ಅವರ ಮನೆಯಲ್ಲಿ. ತಮಗೆ ಕಂಬಾರರ ಕವನ ಕೇಳಬೇಕೆನಿಸಿದಾಗಲೆಲ್ಲ ತನ್ನ ಒಡನಾಡಿಗಳೊಂದಿಗೆ ಕಂಬಾರರ ಮನೆಗೆ ಬಂದು ಅವರಿಂದ ಕವನ ಓದಿಸಿಕೊಂಡು ಹೋಗುತ್ತಿದ್ದರಂತೆ. ಕಂಬಾರರ ಕವಿತೆಗಳಲ್ಲಿನ ಗೇಯತೆ-ಜತೆಗೆ ಕಂಬಾರರ ಹಾಡುಗಾರಿಕೆಗೆ ಮನಸೋತು, ಗೋಪಾಲ ಗೌಡ್ರು ಆ್ಯಂಡ್ ಪಾರ್ಟಿ ಮೂಡ್ ಕೆಟ್ಟಾಗಲೆಲ್ಲ ಕಂಬಾರರ ಕವನ ಕೇಳಲು ಬರುತ್ತಿದ್ದುದನ್ನು ಕಂಬಾರರು ಸೊಗಸಾಗಿ ವರ್ಣಿಸುತ್ತಾರೆ.

"...ನಾನು ಸಾಗರದಲ್ಲಿ ಎಲ್ಲಾದ್ರು ಭಾಷಣ ಮಾಡುತ್ತಿದ್ದರೆ... ಹಾಡುತ್ತಿದ್ದರೆ... ಗೋಪಾಲಗೌಡ್ರು ಮತ್ತವರ ಶಿಷ್ಯ ಗೆಳೆಯರು ಬಂದು ಮೆತ್ತಗೆ ಕೂತು ಕೇಳಿಸಿಕೊಳ್ಳೋರು. ಆಗಾಗ್ಗೆ ಗೋಪಾಲಗೌಡ್ರು ತಮ್ಮ ಸಭೆಗಳಲ್ಲಿ ನನ್ನ ಕವಿತೆಗಳನ್ನು 'ಕೋಟ್' ಮಾಡುತ್ತಿದ್ದರು. 'ಒಬ್ಬ ತರುಣ ಕವಿ ವಸಾಹತುಶಾಹಿಯನ್ನು ವಿರೋಧಿಸಿ ಹೇಗೆ ಬರೆದಿದ್ದಾರೆ... ಎಷ್ಟು ಚೆನ್ನಾಗಿ ಬರೆದಿದ್ದಾರೆ! ಬ್ರಿಟಿಷರು ಬಂದು ಒಂದು ಹಳ್ಳಿಯ ಸಮಗ್ರತೆಯನ್ನು ನಾಶಮಾಡುವುದನ್ನು ತನ್ನ ಕವಿತೆಯಲ್ಲಿ ಹೇಗೆ ತಂದಿದ್ದಾರೆ' ಎಂದು ಎಲ್ಲರೆದುರು ಹೊಗಳುತ್ತಿದ್ದರು. 'ವಸಾಹತುಶಾಹಿ' ಎಂಬ ಹೊಸ ಪದ ಕೇಳಿದ್ದೇ ನಾನು ಆವಾಗ. ಗೋಪಾಲಗೌಡರು ಆಗಾಗ್ಗೆ ನನ್ನ ಕವಿತೆಗಳನ್ನು ಕೇಳಿಸಿಕೊಳ್ಳುವುದಿತ್ತು. ಒಮ್ಮೆ ಅವರು ಬಿ.ಎಚ್. ಚಂದ್ರಶೇಖರ್, ಜೆ.ಎಚ್. ಪಟೇಲ್, ಕಾಗೋಡು ತಿಮ್ಮಪ್ಪ... ಅವರೊಂದಿಗೆ ನಮ್ಮ ಮನೆಗೆ ಬಂದು ಮತ್ತೆ 'ಹೇಳತೇನ ಕೇಳ' ಕವಿತೆಯನ್ನು ನನ್ನಿಂದ ಹಾಡಿಸಿಕೊಂಡು, ನನ್ನ ಬೆನ್ನು ತಟ್ಟಿ ಸಂತೋಷದಿಂದ ತೆರಳಿದ್ದು ನನಗಿನ್ನೂ ಕಣ್ಣ ಮುಂದಿದೆ. ಮತ್ತೊಮ್ಮೆ ಅದೇ ಗೋಪಾಲ ಗೌಡ್ರು, ಸಾಗರಕ್ಕೆ ಬಂದ ಲೋಹಿಯಾ ಅವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದು 'ಹೇಳತೇನ ಕೇಳ'ದ ಎರಡು ಖಂಡಗಳನ್ನು ಓದಿಸಿ... ಹಾಡಿಸಿ ಅದನ್ನು ಚರ್ಚಿಸಿ, ಲೋಹಿಯಾ ಅವರಿಂದ ಬೆನ್ನು ತಟ್ಟಿಸಿ ಕರೆದೊಯ್ದದ್ದಿದೆ'. ಸಾಗರದಲ್ಲಿರುವಾಗಲೆ ಕಂಬಾರರು 'ಬಣ್ಣಿಸಿ ಹಾಡವ್ವ ನನ ಬಳಗ' ಎಂಬ ಜನಪದ ತ್ರಿಪದಿಗಳ ಸಂಗ್ರಹದ ಕೆಲಸವನ್ನು ಆರಂಭಿಸಿದರು. ಈ ನಡುವೆ ಕೀರ್ತಿನಾಥ ಕುರ್ತಕೋಟಿಯವರ ಜತೆಗೂಡಿ ಸಂಪಾದಿಸಿದ್ದ 'ಸಂಗ್ಯಾಬಾಳ್ಯ' ಬಯಲಾಟ ಕೃತಿಯೂ ಪ್ರಕಟಗೊಂಡಿತು (1966). ಸಾಗರದಲ್ಲಿದ್ದಾಗಲೇ 'ಋಷ್ಯಶೃಂಗ' ನಾಟಕವನ್ನೂ ಬರೆದರು.

1964ರಿಂದ 67ರ ವರೆಗೆ ಸಾಗರದಲ್ಲಿದ್ದ ಕಂಬಾರರು ಮುಂದೆ ಉದ್ಯೋಗದ ದಾರಿ ಹಿಡಿದಿದ್ದು - ಘಟ್ಟದ ಕೆಳಗಡೆಗೆ, 1967ರಲ್ಲಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿಗೆ ಸೇರಿಕೊಂಡ ಕಂಬಾರರು ಅಲ್ಲಿ ಆರು ತಿಂಗಳು ಕಳೆಯುವುದರೊಳಗೆ (1968) ಎ.ಕೆ. ರಾಮಾನುಜನ್

ಅವರಿಂದ ಅಮೇರಿಕಕ್ಕೆ ಕರೆಬಂತು. ಫುಲ್‌ಬ್ರೈಟ್ ಸ್ಕಾಲರ್ ಶಿಪ್‌ನಲ್ಲಿ ಅಮೇರಿಕಾದ ಚಿಕಾಗೊ ವಿಶ್ವವಿದ್ಯಾಲಯಕ್ಕೆ ಹೋದ ಕಂಬಾರರು 1968-1969ರ ವರೆಗೆ ಅಲ್ಲಿ 'ಫುಲ್‌ಬ್ರೈಟ್ ಸ್ಕಾಲರ್' ಆಗಿದ್ದು 1970ರ ವರೆಗೆ ಅಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿದರು.

ಕಂಬಾರರು ಉಡುಪಿಯಲ್ಲಿರುವಾಗ 'ಬಣ್ಣಿಸಿ ಹಾಡವ್ವ ನನ ಬಳಗ' ಕೃತಿ (269 ಜನಪದ ತ್ರಿಪದಿಗಳ ಸಂಗ್ರಹ) ಪ್ರಕಟವಾಯಿತು. ಆ ಹೊತ್ತಿಗಾಗಲೇ ಕಂಬಾರರ ಚಿತ್ತದಲ್ಲಿ 'ನಾರ್ಸಿಸಸ್' ನಾಟಕದ ವಸ್ತು ಗಿರಕಿ ಹೊಡೆಯುತ್ತಿತ್ತು. ಅಮೇರಿಕಾದಿಂದ ಹಿಂದಿರುಗುವುದರೊಳಗೆ 'ನಾರ್ಸಿಸಸ್' ಬೆಳಕು ಕಂಡಿತ್ತು. ಹಲವು ಕನಸುಗಳನ್ನು ಕಟ್ಟಿಕೊಂಡು ಅಮೇರಿಕಾಗೆ ಹೋದ ಕಂಬಾರರು ಅಲ್ಲಿಂದ ಮರಳಿ ಬರುವಾಗ 'ಕಾಲಿ'ಯಾಗಿ ಮರಳಲಿಲ್ಲ. ಇಲ್ಲಿನದ್ದನ್ನು 'ಇಷ್ಟು' ಕೊಟ್ಟು ಅಲ್ಲಿನದ್ದನ್ನು 'ಅಷ್ಟು' ತಂದರು. ಕಂಬಾರರು ಹಾಗೆಯೆ-ತಾನು ಕಲಿಯಬೇಕಾದ, ತಿಳಿದುಕೊಳ್ಳಬೇಕಾದ ಜ್ಞಾನದ ಒರತೆಯನ್ನೇ ಪತ್ತೆ ಮಾಡಿ ಅದರಿಂದ ಬೇಕಾದಷ್ಟನ್ನು ಮೊಗೆದು ತೆಗೆವವರು. ಅಲ್ಲಿನ ರಂಗಭೂಮಿ-ಕಲೆಗಳ ಬಹಳಷ್ಟನ್ನು ತಿಳಿದುಕೊಂಡು ಅದನ್ನು ತನ್ನ ಸೃಜನಶೀಲತೆಯ ಗೂಡಲ್ಲಿ ಕೂಡಿಟ್ಟರು. ತಮ್ಮ ಬರವಣಿಗೆಯ ಬಗ್ಗೆ ಹೊಸ ದಿಕ್ಕಿನಲ್ಲಿ ಚಿಂತನೆ ನಡೆಸುವ ಅವಕಾಶ ಕಂಬಾರರಿಗೆ ಒದಗಿ ಬಂದಿತ್ತು.

1970ರಲ್ಲಿ ಅಮೇರಿಕದಿಂದ ಮರಳಿಬಂದ ಕಂಬಾರರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ ಸೇರಿಕೊಂಡರು. ಈ ನಡುವಿನ ಅವಧಿಯಲ್ಲಿ ಅವರು 'ಋಷ್ಯಶೃಂಗ' ನಾಟಕವನ್ನು ಬರೆದರು. ಆ ನಾಟಕ 1971ರಲ್ಲಿ ಪ್ರಕಟವಾಯಿತು. ದೃಶ್ಯ ಕಾವ್ಯದಂತಿರುವ 'ಋಷ್ಯಶೃಂಗ'ವೂ ಜಾನಪದ ತಂತ್ರದ ನಾಟಕವಾಗಿರುವುದರಿಂದ ಮತ್ತು ಆಧುನಿಕವೆನ್ನಬಹುದಾದ ವಸ್ತುವನ್ನು ಪರಂಪರಾಗತವಾದ ಶೈಲಿಯಲ್ಲಿ ಹೇಳ ಹೊರಟಿರುವುದರಿಂದ ಇದನ್ನು ಕನ್ನಡ ನಾಟಕ ಪರಂಪರೆಯಲ್ಲಿ ವಿಶಿಷ್ಟವೆಂದು ಗುರುತಿಸಲಾಯಿತು 1970ರಿಂದ 1991ರ ವರೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ದುಡಿದ ಕಂಬಾರರು, 1992ರಿಂದ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕುಲಪತಿಗಳಾಗಿ ನೇಮಕಗೊಂಡರು. ಕನ್ನಡದ ಕೆಲಸಕ್ಕಾಗಿ ಬಂದ ಕಂಬಾರರು 1998ರ ವರೆಗೆ 6 ವರುಷಗಳ ಕಾಲ ಕನ್ನಡ ವಿಶ್ವವಿದ್ಯಾಲಯದಲ್ಲಿದ್ದು ಅದನ್ನು ಅತ್ಯಂತ ಕಾಳಜಿಯಿಂದ ಕಟ್ಟಿ ಬೆಳೆಸಿದರು. ಘೋಡಗೇರಿಯಿಂದ ಉದ್ಯೋಗ ಅರಸಿ ಬಂದ ಕನ್ನಡದ ಪ್ರತಿಭೆ ಕನ್ನಡದ ಪುಣ್ಯ ಭೂಮಿಯಾದ ಹಂಪಿಯ ಮಣ್ಣಲ್ಲಿ ಆ 'ಪರ್ವ'ವನ್ನು ಮುಗಿಸಿದ್ದು ಒಂದು ಅಪೂರ್ವ ಸಾಧನೆ. ಇದು ಕಂಬಾರರ ಸಾಧನೆ !

## ಮದುವೆ-ಸಂಸಾರ

ಮಗ ಎಂದಿಗೆ 'ಸಂಗ್ಯಾಬಾಳ್ಯಾ' ಬಯಲಾಟ ಆಡತೊಡಗಿದನೋ - ಅಲ್ಲಿಂದಲೆ ತಂದೆ ಬಸವಣ್ಣೆಪ್ಪ ಅವರಿಗೆ ಆತಂಕ ಆರಂಭವಾಗಿತ್ತು. ಕಂಬಾರರು ಪ್ರಾಥಮಿಕ ಶಾಲೆಯಲ್ಲಿ ಇರುವಾಗಲೆ 'ಸಂಗ್ಯಾಬಾಳ್ಯ'ದಲ್ಲಿ ಕೋಚು ಹೊಡೆಯುತ್ತಿದ್ದರು. ಕೋಚು ಹೊಡೆಯುವ ಮೂಲಕ ಮುಂದೆ 'ಸಂಗ್ಯಾಬಾಳ್ಯ'ದಲ್ಲಿ ಆಡಲು ಅವಕಾಶ ಪಡೆಯುವುದು ಅವರಿಗೆ ಸುಲಭವಾಯಿತು. ಪ್ರೌಢ ಶಿಕ್ಷಣ

ಮುಗಿಸುವುದೊಳಗೆ ಅವರು 'ಸಂಗ್ಯಾಬಾಳ್ಯಾ'ದಲ್ಲಿ ಆಡಲೂ ತೊಡಗಿದ್ದರು. ಆ ಆಟದ ಹಾಡು, ಕುಣಿತ, ಮಣಿತ, ಚಿಮ್ಮಾನ ಜತೆ ಸರಸ, ಬಣ್ಣಗಾರಿಕೆ ಇವೆಲ್ಲವೂ ಅವರನ್ನೊಳಗೊಂಡಂತೆ ಆ ವಯಸ್ಸಿನ ಹುಡುಗರಿಗೆಲ್ಲ ಹುಚ್ಚು ಹಿಡಿಸುತ್ತಿದ್ದವು. ಆಗ ಬಯಲಾಟದಲ್ಲಿ ಪಾತ್ರವಹಿಸುತ್ತಿದ್ದ ನಟವರ್ಗದಲ್ಲಿ ಶಾಲೆಯಲ್ಲಿ ಮೆಟ್ಟಲು ಹತ್ತಿದವರು ಕಂಬಾರರು ಒಬ್ಬರೇ. ಶಾಲೆಯ ಮೆಟ್ಟಲು ಹತ್ತಿದಂವ... ಹೀಗೆ ಹದಿಹರೆಯದವರ ನಿದ್ದೆಗೆಡಿಸುವಂತಹ ಸಂಗ್ಯಾಬಾಳ್ಯಾ ಆಡಿದನೆಂದರೆ ಹೇಗೆ? ಓದು ಮುಂದುವರಿಸಿಯಾನೆ? ಎಂಬ ಪ್ರಶ್ನೆಯನ್ನು ಊರವರು ತಂದೆ ಬಸವಣ್ಣೆಪ್ಪನವರಲ್ಲಿ ಕೇಳಿದಾಗಲೆಲ್ಲ ಅವರು ಚಿಂತೆಯಲ್ಲಿ ಮುಳುಗಿ ಹೋಗುತ್ತಿದ್ದರು. ಅವರನ್ನು ಮತ್ತೊಂದು ಚಿಂತೆಯೂ ಕಾಡುತ್ತಿತ್ತು.

ಹರೆಯದ ಮಕ್ಕಳು ಸಂಗ್ಯಾಬಾಳ್ಯಾದಲ್ಲಿ ಆಡಿದರೆಂದರೆ '... ಮದಿವಿ ವಯ್ಸಿಗೆ ಬಂದೀವಿ.. ಇನ್ನಾದ್ರು ಹೆಣ್ಣು ಹುಡುಕ್ಕಕ ಹೊರಡ್ರಲ್ಲಾ...' ಎಂದು ಹೆತ್ತವರಿಗೆ ಕೊಡುವ 'ನೋಟೀಸು' ಎಂದೇ ಅರ್ಥೈಸಿಕೊಳ್ಳಬೇಕು. 'ಸಂಗ್ಯಾಬಾಳ್ಯ'ವೆಂದರೆ ಹಾದರದ ಕಥಾವಸ್ತುವುಳ್ಳ ಬಯಲಾಟ ಎಂಬ ಹೀಗಳಿಕೆ ಆಗಿನ ಸಮಾಜದಲ್ಲಿದ್ದ ಕಾರಣ ಮಹಿಳೆಯರು ಮತ್ತು ಮೇಲ್ಜಾತಿಯವರು ಆ ಬಯಲಾಟವನ್ನು ನೋಡುತ್ತಿರಲಿಲ್ಲ. ಪ್ರಣಯ, ರಸಿಕತೆ ಮತ್ತು ಹಾದರ ಮುಖ್ಯ ವಸ್ತುವಾಗುಳ್ಳ 'ಸಂಗ್ಯಾಬಾಳ್ಯ'ವನ್ನು ತಮ್ಮ ಹರೆಯದ ಹುಡುಗರು ಆಡುವುದು... ಹೆತ್ತವರಿಗೆ ಏನೋ ಎಲ್ಲೋ ಒಂದು ರೀತಿಯ ಆತಂಕ.

ಹಾಗೆ ಕಂಬಾರರು 'ಸಂಗ್ಯಾಬಾಳ್ಯ' ಆಡತೊಡಗಿದಾಗ ಅವರ ತಂದೆಯವರು 'ಮಗನಿಗೊಂದು ಮೂಗುದಾರ' ಹಾಕುವ ಸೊಸೆಯನ್ನು ತರಲು ತೀರ್ಮಾನಿಸಿ ಸುತ್ತಲ ನಾಕೂರಿಗೆ ಕಣ್ಣಾಡಿಸಿದ್ದರು. ಆಗ ಅವರ ಕಣ್ಣ ಸೀಮೆಗೆ ಸಿಕ್ಕಾಕೆ 'ಪಕ್ಕದ ಹಳ್ಳಿ ಅಕ್ಕತಂಗೇರ ಹಳ್ಳದ' ಸಂಬಂಧಿಯ ಮಗಳು ಹನ್ನೆರಡರ ಹರೆಯದ ಬಾಲೆ - ಸತ್ಯಭಾಮೆ.

ಮದುವೆ ಮಾತುಕತೆಯಾಗಿ ವರುಷ ಕಳೆಯುವುದರೊಳಗೆ, ಕಂಬಾರರು ಪದವಿ ಮುಗಿಸಿದೊಡನೆ (1958) ಮದುವೆ ನಿಶ್ಚಿತಾರ್ಥವೂ ಮುಗಿಯಿತು. ಆಗ ಬಾಲಕಿ ಸತ್ಯಭಾಮೆಯವರ ವಯಸ್ಸು 13 - ಕಂಬಾರರ ವಯಸ್ಸು 21.

ನಿಶ್ಚಿತಾರ್ಥವಾದೊಡನೆ ಹುಡುಗಿಯನ್ನು ಶಾಲೆ ಬಿಡಿಸುವಂತೆ ಕಂಬಾರರು 'ಆದೇಶ'ವಿತ್ತರು. ಆಗತಾನೆ ಏಳನೇ ತರಗತಿ ಮುಗಿಸಿದ್ದ ಸತ್ಯಭಾಮ ಅವರು ಅಲ್ಲಿಗೇ ತಮ್ಮ ಶಾಲೆ ಕಲಿಕೆ ನಿಲ್ಲಿಸಿದರು. ತಮ್ಮ ಭಾವಿ ಮಡದಿಯನ್ನು ಅಂದು ಶಾಲೆ ಬಿಡಿಸಿದ್ದಕ್ಕೆ ಕಂಬಾರರು ಈಗ ಕೊಡುವ ಕಾರಣ ಇದು : 'ಆಗ ಈಕೆ ಹಾಲು ಬೆಳ್ಳಗೆ... ಕೆಂಪು ಕೆಂಪಾಗಿ ತುಂಬಾ ಸುಂದರಿ ಇದ್ಲು ಕಣ್ರಿ...; ನನ್ನ ಹೆಣ್ತಿ ಬೇರೆಯವರ ಕಣ್ಣಿಗೆ ಬೀಳಬಾರದೆಂದೇ ಶಾಲೆ ಬಿಡಲು ಹೇಳಿದೆ. ಅದಕ್ಕೆ ಮತ್ತೊಂದು ಕಾರಣವೂ ಇದೆ. ಆಗಿನ ಸಾಮಾಜಿಕ ಪರಿಸರದಲ್ಲಿ ಹೆಣ್ಣು ಮಕ್ಳು ಹೆಚ್ಚು ಕಲಿಯುದನ್ನ ಇಷ್ಟಪಡುತ್ತಿರಲಿಲ್ಲ, ನಮ್ಮ ಸಂಪ್ರದಾಯಸ್ಥ ಮನೆತನದಲ್ಲೂ ಅಷ್ಟೆ..., ಅದ್ಕೆ ಶಾಲೆ ಬಿಡ್ಸಬಿಟ್ಟೆ'.

ತನ್ನ ಹುಡುಗಿಯನ್ನು ಶಾಲೆ ಬಿಡಿಸಿದ ನಂತರ ಕಂಬಾರರು ತಮ್ಮ ಸ್ನಾತಕೋತ್ತರ ಶಿಕ್ಷಣವನ್ನು ನಿರಾತಂಕವಾಗಿ ಮುಂದುವರಿಸಿದರು. 1962ರಲ್ಲಿ ಎಂ.ಎ. ಮುಗಿಸಿದ ನಂತರ ಬೆಳಗಾವಿಯ

ಕಾಲೇಜಿನಲ್ಲಿ ಎರಡು ವರ್ಷ ಅಧ್ಯಾಪಕರಾಗಿ ದುಡಿದು ಸಾಗರದ ಕಾಲೇಜಿಗೆ ಅಧ್ಯಾಪಕರಾಗಿ ಹೊರಡುವ ಸಂದರ್ಭದಲ್ಲಿ ಅವರ ಮದುವೆ ನಡೆಯಿತು. ಅದು 1964ರಲ್ಲಿ ಜೂನ್ ತಿಂಗಳಲ್ಲಿ.

ನಿಶ್ಚಿತಾರ್ಥವಾಗಿ ಸುಮಾರು 6 ವರ್ಷಗಳ ನಂತರ ಮದುವೆ ನಡೆಯಿತಾದರೂ ಆ ನಡುವಿನ ಸುದೀರ್ಘ ಕಾಲಾವಧಿಯಲ್ಲಿ ಕಂಬಾರರು ತಮ್ಮ ಹುಡುಗಿಗೆ ಸಾಕಷ್ಟು ಪತ್ರಗಳನ್ನು ಬರೆದು ಪ್ರೇಮ ನಿವೇದಿಸಿಕೊಳ್ಳುತ್ತಿದ್ದರಂತೆ. ಈ ಬಗ್ಗೆ ಕಂಬಾರರು ಹೇಳುತ್ತಾರೆ 'ಪತ್ರಮುಖೇನ ಪ್ರೇಮ ನಿವೇದಿಸಿಕೊಳ್ಳುವ ಭರದಲ್ಲಿ ನಾನು ಆಗಾಗ್ಗೆ ಬೋರು ಹೊಡೆವ ದೀರ್ಘಾತಿದೀರ್ಘ ಪತ್ರ ಬರೆದು ಮಿತಿ ಮೀರ್ತಿದ್ದೆ ಕಣ್ರಿ..., ಆದ್ರೆ ಆ ಕಡೆಯಿಂದ ಬರುವ ಪತ್ರಗಳು ಮಾತ್ರ ಮಾಮೂಲಾಗಿದ್ದು ಸಂಯಮ ಮೀರದೆ - ಗಂಭೀರವಾಗಿ - ತೂಕದಲ್ಲೆ ಪ್ರೇಮವನ್ನು ರವಾನಿಸುತ್ತಿದ್ದವು. ಒಮ್ಮೆ ನಾನು ಆಕೆ ಮುಖವನ್ನು ಮನಸಲ್ಲೇ ಕಲ್ಪಿಸಿಕೊಂಡು ಆಕೆಯ ಪೈಂಟಿಂಗ್ ಮಾಡಿ ಕಳುಹಿಸಿದ್ದೆ. ಅದನ್ನು ಆಕೆ ಇತ್ತೀಚಿನವರೆಗೂ ಜೋಪಾನವಾಗಿಟ್ಟುಕೊಂಡು ಸಂಭ್ರಮಿಸಿಕೊಳ್ಳುತ್ತ ನೋಡುತ್ತಿದ್ದಳು. ಆಕೆಗೆ ನಾನು ಹಲವು ಕವನಗಳನ್ನೂ ಬರೆದು ಪ್ರೇಮ ರವಾನಿಸಿದ್ದೆ. ಆದರೆ ಆಕೆಗೆ ಅದೆಷ್ಟು ಅರ್ಥವಾಗುತ್ತಿತ್ತೋ... ಎಷ್ಟು ಪ್ರೇಮ ತಲುಪುತ್ತಿತ್ತೋ... ನಾ ಕಾಣೆ...'

ಕಂಬಾರರಿಗೆ ಈಗ 66ರ ಹರೆಯ. ಅವರೀಗ ನೆನಪಿನಾಳಕ್ಕಿಳಿದು ತಾರುಣ್ಯ ಹಂತದಲ್ಲಿ ನಿಂತು, ರಂಗೇರಿಸಿಕೊಳ್ಳುತ್ತಿರುವಾಗ ಅವರ ಮನಸ್ಸು - ಭಾವಕ್ಕೆ ಬರೀ 26ರ ಹರೆಯವಷ್ಟೆ 66ರ ಈ ಇಳಿವಯಸ್ಸಲ್ಲೂ ಆರೋಗ್ಯಪೂರ್ಣ ದೇಹ ಮತ್ತು ಮನಸ್ಸುಳ್ಳ ಹಣ್ಣು ಸೌತೆಯಷ್ಟು ಚಂದಕ್ಕೆ ಮೈತುಂಬಿ ಕೊಂಡಿರುವ ಕಂಬಾರರು, ಪೊದೆ ಮೀಸೆ ತುಂಬಾ ನಗುವರಳಿಸುತ್ತ ಮೈ ಕುಲುಕಿ ನಗುವುದೇ ಒಂದು ಚಂದ. ಅದು ಅವರ ಒಟ್ಟು ವ್ಯಕ್ತಿತ್ವದ ಚಂದ !

ಜಮೀನ್ದಾರಿ ವ್ಯವಸ್ಥೆಯುಳ್ಳ ಘೋಡಗೇರಿಯ ಮಣ್ಣಿನ ಸಾರವನ್ನು ಹೀರಕೊಂಡಿರುವ ಕಂಬಾರರ ನಡವಳಿಕೆ, ವ್ಯಕ್ತಿತ್ವ ಸ್ವಲ್ಪ ಮಟ್ಟಿಗೆ ಹಳ್ಳಿ ಗೌಡಿಕೆಯ ದೇಕಿಯಂತೂ ಇದೆ. ಸಾಂಪ್ರದಾಯಿಕವಾದ ಸಂಗೀತ ಶಿಕ್ಷಣವಿರದಿದ್ದರೂ ಅತ್ಯುತ್ತಮ ಹಾಡುಗಾರರಾಗಿರುವ ಕಂಬಾರರು ತಮ್ಮ ಕವನಗಳನ್ನು ತಾವೇ ಮೈದುಂಬಿ ಹಾಡುವ ಮೂಲಕ ಹಾಕುವ ಮೋಡಿ ಅಂತಿಂಥದ್ದಲ್ಲ. ಅವರು ಅಂದು ಕನ್ನಡ ವಿಶ್ವವಿದ್ಯಾಲಯದಲ್ಲಿ ಮನ ತುಂಬುವಂತೆ ಹಾಡಿದ್ದ 'ಚಂದಿರನಾ ಬೇಟೆಗೆ ಹೋದಾ... ಕೈ ಮೀರಿದಾ...' 'ಮರೆತೇನೆಂದರೆ ಮರೆಯಲಿ ಹೆಂಗಮಾವೋತ್ಸೆ ತುಂಗ...' ಇತ್ಯಾದಿ ಹಾಡುಗಳನ್ನು ಇಂದು ನೆನಪಿಸಿಕೊಂಡಾಗಲೆಲ್ಲ ಅವು ಕಂಬಾರರನ್ನು ನಮ್ಮೆದುರಿಗೆ ತಂದು ನಿಲ್ಲಿಸಿ ಬಿಡುತ್ತವೆ.

ಈ ಆಧುನಿಕ ಕಾಲದಲ್ಲೂ ಅಲೌಕಿಕ ಶಕ್ತಿಯ ಮೇಲೆ ಅಗಾಧ ನಂಬಿಕೆಯನ್ನಿಟ್ಟುಕೊಂಡಿರುವ ಕಂಬಾರರಿಗೆ ನಾಟಿವೈದ್ಯ, ಜ್ಯೋತಿಷ್ಯ, ವಾಸ್ತು ಶಕುನದಲ್ಲೂ ಒಂದು ರೀತಿಯ ನಂಬಿಕೆಯಿದೆ. ಸಾವಳಗಿಯ ಶಿವಲಿಂಗ, ಹಂಪಿಯ ವಿರೂಪಾಕ್ಷ ಕಂಬಾರರ ನಂಬುಗೆಗೆ ಇಂಬು ಕೊಡುವ ಆರಾಧ್ಯ ದೇವರಾದರೆ, ಅಲ್ಲಮನು ಇವರ ಅತ್ಯಂತ ಇಷ್ಟದ ಕವಿದೇವ. ಅವರು ತೋರಿದ ದಾರಿಯಲ್ಲೇ ನಾನು ನಡೆದವ ಮತ್ತು ಮುಂದೆಯೂ ನಡೆವವನು ಎಂದು ಕಂಬಾರರು ಇಂದೂ ಸ್ಪಷ್ಟವಾಗಿ ಹೇಳುತ್ತಾರೆ.

ಸಾಂಪ್ರದಾಯಿಕ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ಕಂಬಾರರಿಗೆ ಭಾರತದ ಕಮ್ಯುನಿಸಂ ಬಗ್ಗೆ ಭಿನ್ನಾಭಿಪ್ರಾಯವಿದೆ. 'ಭಾರತದ ಕಮ್ಯುನಿಸ್ಟ್‌ಗಳು ಈ ದೇಶಕ್ಕೆ committ ಆದವರಲ್ಲ. ಏನಿದ್ದರೂ ವಿದೇಶಿ ತತ್ತ್ವಕ್ಕೆ committ ಆದವರು. ನಮ್ಮನ್ನು ಜಾಗತೀಕರಣಕ್ಕೆ ತಳ್ಳಿದವರೇ ಅವರು. ನಮ್ಮ ಮಣ್ಣಿನಲ್ಲಿ, ನಮ್ಮ ಆಲೋಚನೆಗಳಿಗೆ, ನಮ್ಮ ಅಗತ್ಯವನ್ನು ಪೂರೈಸುವ, ನಮ್ಮ ಸಮಾಜದ ಪರಿಸ್ಥಿತಿ ಪರಿಸರಕ್ಕೆ ದಕ್ಕುವಂತಹ ಕಮ್ಯುನಿಸಂ ಬೇಕೇ ವಿನಾ ವಿದೇಶದಲ್ಲಿ ರಚನೆಗೊಂಡ ಕಮ್ಯುನಿಸಂ ಬೇಕಿಲ್ಲ' ಎಂದು ಕಮ್ಯುನಿಸಂನ ಬಗ್ಗೆ ಇರುವ ಭಿನ್ನಾಭಿಪ್ರಾಯವನ್ನು ಅವರು ಹೀಗೆ ವ್ಯಕ್ತಪಡಿಸುತ್ತಾರೆ.

ಸುಮಾರು 4 ದಶಕಗಳ ದಾಂಪತ್ಯ ಜೀವನ ಸಾಗಿಸಿರುವ ಕಂಬಾರ ದಂಪತಿಗಳದ್ದು ಈಗ ತುಂಬು ಸಂಸಾರ. ಒಬ್ಬ ಮಗ, ಮೂರು ಹೆಣ್ಣುಮಕ್ಕಳಿದ್ದ ಸಂಸಾರಕ್ಕೀಗ ನಾಲ್ಕು ಮಂದಿ ಮೊಮ್ಮಕ್ಕಳ ಸೇರ್ಪಡೆಯಾಗಿದೆ. ಸೃಜನಶೀಲ ಪತಿಯ ಚಟುವಟಿಕೆಗಳಿಗೆ ಎಲ್ಲೂ ಕುಂದುಂಟಾಗದಂತೆ ಮನೆ-ಮಕ್ಕಳ ಜವಾಬ್ದಾರಿಯನ್ನು ಬಹುಪಾಲು ತಾನೇ ಹೊತ್ತುಕೊಂಡು ಅದನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದ ಪ್ರೀತಿಯ ಸಹಧರ್ಮಿಣಿ ಸತ್ಯಭಾಮೆಯ ಮೇಲೆ ಕಂಬಾರರಿಗೆ ಅಪಾರವಾದ ಕೃತಜ್ಞತೆ ಇದೆ - ಗೌರವವಿದೆ.

ತಮ್ಮ ನೆಮ್ಮದಿಯ ಗೂಡು 'ಸಿರಿಸಂಪಿಗೆ'ಯಲ್ಲಿ ಕೂತು ಕಂಬಾರರು ಈಗ 'ವಿಶ್ರಾಂತ' ಜೀವನವನ್ನು ದೂಡುತ್ತಿದ್ದಾರೆ ಎಂದು ಯಾರಾದರೂ ಕಲ್ಪಿಸಿಕೊಂಡಿದ್ದರೆ ಅದು ಸುಳ್ಳು. ಕಂಬಾರರು ವಿಶ್ರಾಂತ ಜೀವನದಲ್ಲಿರುವಾಗಲೇ ನಾಟಕ ಕೃತಿ ಮಹಾಮಾಯಿ ಬರೆದರು. ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಗಾಗಿ ಆಧುನಿಕ ಭಾರತೀಯ ನಾಟಕಗಳನ್ನು ಎರಡು ಸಂಪುಟಗಳಲ್ಲಿ ಸಂಪಾದಿಸಿ ಸಂಕಲನವೊಂದನ್ನು ಸಿದ್ಧಪಡಿಸಿಕೊಟ್ಟರು. ಈಗ ಕಂಬಾರರು 'ಹುಲಿಯ ನೆರಳು' ನಾಟಕದ ಪರಿಷ್ಕೃತ ಆವೃತ್ತಿಯನ್ನು ಹೊರತರಲು ಸಿದ್ಧತೆ ನಡೆಸುತ್ತಿದ್ದು, ಅದಕ್ಕಾಗಿ ಹೊಸ ಹಾಡುಗಳನ್ನು ಕಟ್ಟುವ ಸಂಭ್ರಮದಲ್ಲಿದ್ದಾರೆ. ಇದರ ಜತೆ ಜತೆಗೆ 'ಚಕೋರಿ'ಯ ಎರಡನೇ ಭಾಗ (ಮುಂದುವರಿದ ಭಾಗ)ವನ್ನು ಬರೆಯುತ್ತಿರುವ ಕಂಬಾರರು 'ಚೆನ್ನಮುತ್ತನ' ಬಗ್ಗೆ ಕನಸಿನ ಕಾವ್ಯವನ್ನು ಮುಂದುವರಿಸುವ ಸನ್ನಾಹದಲ್ಲಿದ್ದಾರೆ. ಇವೆಲ್ಲದರ ಮಧ್ಯೆ ಕಂಬಾರರು, ಸಪ್ತಸಾಗರದಾಚೆಗೆ ನಮ್ಮ ಪ್ರಧಾನಿ ವಾಜಪೇಯಿ ಅವರ ಜತೆಗೆ ಕವನ ವಾಚಿಸಲು ಅಮೇರಿಕಾಕ್ಕೆ ಹಾರಿದ್ದಾರೆ. ಎಲ್ಲಿದೆ ಕಂಬಾರರಿಗೆ ವಿಶ್ರಾಂತಿ ! ಕಂಬಾರರು ಈಗಲೂ ತಮ್ಮನ್ನು ಅನೇಕ ಸೃಜನಶೀಲ ಮತ್ತು ಜವಾಬ್ದಾರಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ತಮ್ಮ ಬರವಣಿಗೆಯ ಮೂಲಕ ತಮ್ಮ ಆಲೋಚನೆ-ಮನಸ್ಸನ್ನು ಆರೋಗ್ಯಕರವಾಗಿ ಕಾಪಾಡಿಕೊಳ್ಳುತ್ತ ಇನ್ನೂ ತನ್ನ ಅಖಂಡವಾದ ಘೋಡಗೇರಿಯ ಮಣ್ಣನ್ನು ಘಟಪ್ರಭಾದ ಸೆಳವನ್ನು ಧ್ಯಾನಿಸುತ್ತಿದ್ದಾರೆ. ಇಂದಿಗೂ ಅವರ ಧ್ಯಾನದೊಳಗೆ ಬಾಲ್ಯದ ಬೂಸಿ ದತ್ತಕುಲಕರ್ಣಿ ಇದ್ದಾರೆ... ಕತೆ ಹೆಣೆಯಬಲ್ಲ ಗುಡ್ಸ್ಯಾನೂ ಇದ್ದಾನೆ. ಅಷ್ಟೇಕೆ ಸಂಗ್ಯಾಬಾಳ್ಯಾರ ಜತೆಗೆ ಪಾರಿಜಾತದ ನಾಯಕಿ ಕೌಜಲಗಿ ನಿಂಗವ್ವಳೂ ಇದ್ದಾಳೆ.

## ಬರಹ

ಪ್ರಖರ ಪ್ರತಿಭೆಯ ಸಾಹಿತಿ ಕಂಬಾರರು ತಮ್ಮ ವಿಶಿಷ್ಟ ಶೈಲಿಯ ಬರವಣಿಗೆಯಿಂದಾಗಿ ಕನ್ನಡ ಸಾಹಿತ್ಯ ಲೋಕದಲ್ಲೆ ಒಂದು ರೀತಿಯ ಬೆರಗನ್ನು ಉಂಟು ಮಾಡಿದವರು. ಗ್ರಾಮೀಣ ಬದುಕಿನ

ದಟ್ಟ ಅನುಭವ, ಹುಟ್ಟು ನೆಲದ ಬದುಕು ಜಾನಪದದೊಂದಿಗೆ ಅವರು ಬೆಸೆದುಕೊಂಡಿರುವ ಸಂಬಂಧ, ಆಧುನಿಕತೆಯಿಂದುಂಟಾಗುವ ತಲ್ಲಣಗಳು, ನಾಶವಾಗುತ್ತಿರುವ ಸಾಮಾಜಿಕ ಮೌಲ್ಯಗಳು - ಕಂಬಾರರನ್ನು ಹೊಸ ರೀತಿಯ ಬರವಣಿಗೆಗೆ ತೊಡಗಿಸಿತೆನ್ನಬಹುದು.

ನವೋದಯದ ಅಂತಿಮ ಘಟ್ಟದಲ್ಲಿ ಸಾಹಿತ್ಯಲೋಕಕ್ಕೆ ಪ್ರವೇಶ ಪಡೆದ ಕಂಬಾರರು, ನವ್ಯಸಾಹಿತ್ಯದ ನೆಲೆಯಲ್ಲಿ ಸೇರಿದಾಗಲೂ, ಜಾನಪದ ಪ್ರಜ್ಞೆ ಹಾಗೂ ಆಧುನಿಕ ಸಂವೇದನೆಯನ್ನೂ ಜತೆಯಾಗಿ ಸುಮತೂಗಿಸಿಕೊಂಡು ವೈಶಿಷ್ಟ್ಯಪೂರ್ಣವಾದ ಭಾಷೆ-ಶೈಲಿ ಹಾಗೂ ಲಯಗಳಿಂದ ಕೂಡಿದ ಸಾಹಿತ್ಯ ರಚನೆ ಮಾಡಿ ನವ್ಯಸಾಹಿತ್ಯ ಸಂದರ್ಭದ ಎಲ್ಲ ಬರಹಗಾರರಿಗಿಂತ ವಿಭಿನ್ನರಾಗಿ, ವಿಶಿಷ್ಟರಾಗಿ ಕಾಣಿಸಿಕೊಂಡರು.

ಆಧುನಿಕ ಪ್ರಜ್ಞೆ ಇರುವ ತಮ್ಮ ಬರವಣಿಗೆಯಲ್ಲಿ, ಗ್ರಾಮೀಣ ಬದುಕಿನ ಸತ್ಯಗಳು - ಮಿಥ್ಯಗಳು - ತಲ್ಲಣಗಳು ಅವುಗಳ ಜತೆಗೆ ಜಾನಪದ ತಂತ್ರದ ಪ್ರಯೋಗಗಳಿದ್ದರೂ, ನವ್ಯದ ಛಾಪು ಕಾಣಿಸುವ ಆದರೆ ಅಪ್ಪಟ ನವ್ಯವೂ ಅಲ್ಲದ ಕೃತಿಗಳನ್ನು ರಚಿಸಿದ ಕೀರ್ತಿ ಕಂಬಾರರದ್ದು. ಕಂಬಾರರ ಒಟ್ಟು ಸಾಹಿತ್ಯದಲ್ಲಿ ಒಂದು ಅಖಂಡತೆಯ ಹುಡುಕಾಟವಿದೆ. ಈ ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟರಾದ ಕಂಬಾರರು ತಮ್ಮ ಕೃತಿಗಳಲ್ಲಿ ಜಾನಪದ ಸಂಭ್ರಮದೊಡನೆ ಆಧುನಿಕ ಬದುಕಿನ ವಿಷಾದಗಳನ್ನು ಮತ್ತು ಆ ಬದುಕಿನ ವಿವಿಧ ಮಗ್ಗುಲುಗಳನ್ನು ಶೋಧಿಸುವ ಪರಿ ಅನನ್ಯವಾದುದು.

ಹೊಸ ಬಗೆಯ ವೈಚಾರಿಕತೆಯನ್ನು ಜನಾಂಗದ ಸಂವೇದನೆಗೆ ದಕ್ಕುವಂತೆ, ಜನಪದ ಮಿಥ್ ಹಾಗೂ ಸಾಂಪ್ರದಾಯಿಕವಾದ ಆಡುನುಡಿ-ನುಡಿಗಟ್ಟುಗಳ ಮೂಲಕ ಅಭಿವ್ಯಕ್ತಿಸಲು ಅತ್ಯಂತ ಶಕ್ತರಾಗಿರುವ ಕಂಬಾರರು ಜನಪದ ಕತೆಯ ಹಂದರವೊಂದನ್ನು ಬಳಸಿಕೊಂಡು ಸಮಾಜದಲ್ಲಾಗುವ ಮೌಲ್ಯ ಪರಿವರ್ತನೆಯನ್ನು ಹಿಡಿದುಕೊಡಬಲ್ಲರು. ಕತೆಯ ಅಂಶವಿಲ್ಲದ ಬರವಣಿಗೆಯನ್ನೆಂದೂ ಇಷ್ಟಪಡದ ಕಂಬಾರರ ಸಾಹಿತ್ಯ ಲೋಕದಲ್ಲಿ ಮನುಷ್ಯ ಲೋಕ-ಪ್ರಾಣಿಲೋಕ-ಸಸ್ಯಲೋಕದ ಜತೆಗೆ ನೆಲೆ-ಮುಗಿಲು-ಆಕಾಶ, ಸ್ವರ್ಗ-ನರಕ-ಕೈಲಾಸ ಪಾತಾಳಗಳೂ ಇದ್ದು ದೆವ್ವ-ದೇವ ರಾಕ್ಷಸರ ಹಾಜರಾತಿಯೊಂದಿಗೆ ದ್ವೇಷ-ಕಾಮ-ಪ್ರಣಯದ ಸಮೃದ್ಧತನ ಇರುವುದು ಅವರ ಕವಿ ಕಲ್ಪನೆಯ ವಿಶೇಷತೆ. ಅವರ ಒಟ್ಟು ಬರವಣಿಗೆಯ ತುಡಿತ ಒಂದು ಅಖಂಡ ಸ್ಥಿತಿಯ ಬಗೆಗಿನ ಹಂಬಲವೇ ಆಗಿರುವುದು ಕೂಡಾ ಅವರ ವಿಶಿಷ್ಟತೆ.

ಕಂಬಾರರು ತನ್ನ ಸಾಹಿತ್ಯದಲ್ಲಿ ಬಳಸಿಕೊಳ್ಳುವ ಜನಪದ ತಂತ್ರಗಳು, ಕೃತಿಗೆ ಸಾಕಷ್ಟು ಸಂಭ್ರಮ ಮತ್ತು ಸಮೃದ್ಧತೆ ತಂದುಕೊಡುವುದರ ಜತೆಗೆ ಒಂದ ಸಂಸ್ಕೃತಿಯ - ಒಂದು ಜನಾಂಗದ ಅಭಿವ್ಯಕ್ತಿಯಾಗಿ ರೂಪುಗೊಳ್ಳುತ್ತದೆ. ಆದರೆ ಕಂಬಾರರು ತಮ್ಮ ಕೃತಿಗಳಲ್ಲಿ ಜನಪದದ ತಂತ್ರ ಅಥವಾ ಅಂಶ ಬಳಸಿಕೊಳ್ಳುವ ಬಗ್ಗೆ ಕನ್ನಡದ ಪ್ರಮುಖ ಜಾನಪದ ಸಂಶೋಧಕರಾದ ಪುರುಷೋತ್ತಮ ಬಿಳಿಮಲೆಯವರು ಕೆಲವು ತಾತ್ತ್ವಿಕ ಪ್ರಶ್ನೆಗಳನ್ನು ಎತ್ತಿದ್ದಿದೆ. ಆಧುನಿಕ ವಿಚಾರಗಳಿಗೆ ಜಾನಪದ ವೇಷ ತೊಡಿಸುವ ಕಂಬಾರರು, ಜಾನಪದವನ್ನು ಅದರ ಉತ್ಸಾಹ ಮತ್ತು ಸಮೃದ್ಧತೆಯಲ್ಲಿ ಮಾತ್ರ ಗ್ರಹಿಸಲು ಏಕೆ ಸಮರ್ಥರಾಗುತ್ತಾರೆ ಮತ್ತು ಅವರು ಕೇವಲ ಭಾವನಾತ್ಮಕ ನೆಲೆಗಳಲ್ಲಿ ಮಾತ್ರ ಜನಪದ ತಂತ್ರಗಳನ್ನು ಯಾಕೆ ಬಳಸಿಕೊಳ್ಳುತ್ತಾರೆ ಎಂಬ ಮುಖ್ಯ ಪ್ರಶ್ನೆ ಬಿಳಿಮಲೆಯವರದ್ದು.

ಆ ಪ್ರಶ್ನೆಗಳಿಗೆ ಬಿಳಿಮಲೆಯವರೇ ಕೊಡುವ ಸಮಜಾಯಿಷಿ ಹೀಗಿದೆ. ''ಕಂಬಾರರು ಜಾನಪದದಲ್ಲಿ ಕೇವಲ ಸಂಭ್ರಮ, ಸಮೃದ್ಧತೆಗಳನ್ನು ಮಾತ್ರ ಕಾಣುವುದಕ್ಕೆ ಅವರ ಒಟ್ಟು ಚಿಂತನೆ ನಗರ ಕೇಂದ್ರಿತ ನೆಲೆಗಳಿಂದ ಹೊರಟಿರುವುದೇ ಕಾರಣವಾಗಿದೆ. ನಗರದಲ್ಲಿ ತಾವು ಏನನ್ನು ಕಳೆದುಕೊಂಡಿರುತ್ತಾರೋ ಅದನ್ನು ಅವರು ಹಳ್ಳಿಯ ಸಂವೇದನೆಯಲ್ಲಿ ಕಾಣುವ ಪ್ರಯತ್ನವಿದೆ ಮತ್ತು ಕಂಬಾರರು ತಾತ್ವಿಕ ಗ್ರಹಿಕೆಯೆಂದರೆ ನಗರದಲ್ಲಿ ಜಾನಪದ ಇಲ್ಲ, ಹಾಗಾಗಿಯೇ ಅದನ್ನು ಹಳ್ಳಿಯಿಂದ ನಗರಕ್ಕೆ ತರಲಾಗುತ್ತದೆ ಎಂಬುದು''. (ಸಿರಿಸಂಪಿಗೆ ಕಂಬಾರ 60 : ಕಂಬಾರರ ಸಾಹಿತ್ಯ ಜನಪದ ತಂತ್ರ : ಪುರುಷೋತ್ತಮ ಬಿಳಿಮಲೆ : ಪುಟ 79) ಇಂತಹ ತಾತ್ವಿಕ ಪ್ರಶ್ನೆಗಳಿಗೆ ಕಂಬಾರರ ಪ್ರತಿಕ್ರಿಯೆ ಹೀಗಿದೆ.

'ಜಾನಪದ ನಾಟಕಕಾರ ತನ್ನ ರಚನೆಯ ಜೊತೆಗೆ ಒಂದಾಗಿ ಹೋಗುತ್ತಾನೆ. ಆದರೆ ಆಧುನಿಕ ನಾಟಕಕಾರ ವೈಯಕ್ತಿಕ ಪ್ರಜ್ಞೆಯಿಂದ ಬರೆಯುವವನಾದ್ದರಿಂದ ಅವನಿಗೂ ಜಾನಪದೀಯ ಅಂಶಗಳಿಗೂ ನಡುವೆ ಅಂತರ ಸೃಷ್ಟಿಯಾಗಿ ಬಿಡುತ್ತದೆ. ನನ್ನ ಬಗ್ಗೆಯೇ ಹೇಳುವುದಾದರೆ ಇಡಿಯಾಗಿ ಜಾನಪದೀಯ ಅಂಶಗಳನ್ನು ಹಾಗೆ ಹಾಗೆಯೇ ಬಳಸಲು ನನಗೆ ಸಾಧ್ಯವಿಲ್ಲ. ಅವನ್ನು ಒಂದು ತಂತ್ರವಾಗಿ ಒಂದು ಉದ್ದೇಶಕ್ಕೆ ಬಳಸುತ್ತೇನೆ. ನೃತ್ಯ ಸಂಗೀತಗಳನ್ನು ಅಲಂಕರಿಕವಾಗಿಸದೆ ಅದರಲ್ಲೂ ಕ್ರಿಯೆ ಇರುವ ಹಾಗೆ ಮಾಡುತ್ತೇನೆ. ಏಕೆಂದರೆ ನಾನು ಬರೆಯುವುದು ಬೆಂಗಳೂರಿನ ಪ್ರೇಕ್ಷಕರಿಗೆ. ಆದರಿಂದ ಜಾನಪದದ ಗುಣಗಳನ್ನು ವಿವಿಧ ಸಾಧ್ಯತೆಯತ್ತ ತಿರುಗಿಸಲು ಯತ್ನಿಸುತ್ತೇನೆ.''

ಕಂಬಾರರು ಜಾನಪದ ಕವಿಯೂ ಅಲ್ಲ, ನವ್ಯವನ್ನು ಹದವಾಗಿ ಬೆರಸಿ ಜನಾಂಗದ ಸ್ಪಂದನೆಗೆ ಹತ್ತಿರವಾಗುವಂತಹ ಸೃಜನಶೀಲ ಬರಹಗಳನ್ನು ರಚಿಸುವಂತಹ ಆಧುನಿಕ ಕವಿ-ನಾಟಕಕಾರ-ಕಾದಬಂರಿಕಾರರೂ ಹೌದು. ವಿಮರ್ಶಕರಾದ ಬಸವರಾಜ ಕಲ್ಗುಡಿ ಅವರ ಅಭಿಪ್ರಾಯದಂತೆ - '... ಕಂಬಾರರು ಜಾನಪದ ಸಂವೇದನೆಯುಳ್ಳ ಕವಿ ಅಲ್ಲ, ಅವರು ಆಧುನಿಕ ಮನಸ್ಸಿನ, ಬಹುಮುಖ್ಯವಾಗಿ ನವ್ಯ ಮಾರ್ಗದವರು. ಯಾವುದನ್ನು ಗಾಢವಾದ ಸೃಜನಶೀಲ ಚೌಕಟ್ಟಿನಲ್ಲಿ ಹಿಡಿಯಲಾರದೇ ಹೋದರೋ ಅಂಥ ಒಂದು ಸಂವೇದನೆಯನ್ನು ಬಹಳ ಡಿಫರೆಂಟ್ ಆದ ಲಯ ಚೌಕಟ್ಟುಗಳಲ್ಲಿ ಹಿಡಿದ ಕವಿ' (ಕಂಬಾರರ ನಾಟಕಗಳು : ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ಸಾಂಸ್ಕೃತಿಕ ಚಲನೆಯ ಸ್ವರೂಪಗಳು : ಬಸವರಾಜು ಕಲ್ಗುಡಿ, ಪು. 27, 2001) ಎಂಬುದು ಕೂಡಾ ನಿಜ.

ಕಂಬಾರರ ಕೃತಿಗಳಲ್ಲಿ ಕಾಮಕ್ಕೆ ಬಹಳ ಮಹತ್ತ್ವವಿದೆ. ಕಾಮದ ಸ್ಪರ್ಶವಿಲ್ಲದೆ ಅವರ ಕೈಯಿಂದ ಯಾವ ಬರವಣಿಗೆನೂ ಹೊರಬರಲಾರದೇನೋ ಎಂಬ ಆರೋಪ ಕೂಡ ಬಹಳ ಹಳೆಯದ್ದು. ಕಂಬಾರರ ಬಹಳಷ್ಟು ಕೃತಿಗಳಲ್ಲಿ, ಕಾಮವು ಹೇಗೆ ವರ್ಣಿತಗೊಳ್ಳುತ್ತಿದೆಯೆಂದರೆ, ಅದು ದಾಂಪತ್ಯದ ಸರಸದಲ್ಲಿ ನಯವಾಗಿ ಹರಿದುಬರುತ್ತಿದ್ದರೆ, ವಿವಾಹೇತರ ಸಂಬಂಧಗಳಲ್ಲಿ, ಕದ್ದು ಮುಚ್ಚಿ ನಡೆಯುವ ಕಳ್ಳ ಪ್ರಯಣದಾಟಗಳಲ್ಲಿ ಅತ್ಯಂತ ಅತಿರೇಕ ಎನಿಸುವಷ್ಟು ಸಂಭ್ರಮದಿಂದ, ಮಹತ್ವದಿಂದ ವರ್ಣಿಸಲ್ಪಡುತ್ತದೆ. ಈ ಬಗೆಗೆ ಕವಿ ವಿಮರ್ಶಕ ಎಚ್.ಎಸ್. ಶಿವಪ್ರಕಾಶ್ ಅವರು '... ಇನ್ನು ಎಲ್ಲವನ್ನೂ ಲೈಂಗಿಕತೆಯ ಮೂಲಕ ಗ್ರಹಿಸುವ ಅವರ (ಕಂಬಾರರ) ಆ ನೋಟ!

ಇದನ್ನು 'ವೃಷಣ ತೊಂದರೆ' ಎಂದು ಡಿ.ಎಸ್. ನಾಗಭೂಷಣ ಅವರು ಒಂದು ಕಡೆ ಬರೆದಿದ್ದರು. ನಾನು ಹಾಗನ್ನವಷ್ಟು ದೂರ ಹೋಗುವುದಿಲ್ಲ. ಆದರೆ ಈ ಪ್ರವೃತ್ತಿ ನನಗೂ ಅತಿಯಾಗಿ ಕಂಡಿದೆ. ಇದು ಕೇವಲ ಕಂಬಾರರ ದೃಷ್ಟಿ ಎಂದೂ ಜಾನಪದರ ದೃಷ್ಟಿಯಲ್ಲವೆಂದೂ ಗೆಳೆಯ ಬಳಿಮಲೆ ಸಮರ್ಥವಾಗಿ ವಾದಿಸಿದ್ದಾರೆ...' (ಸಿರಿಸಂಪಿಗೆ ಕಂಬಾರ 60 : ಕಂಬಾರರ ರುದ್ರವಿಲಾಸ : ಎಚ್.ಎಸ್. ಶಿವಪ್ರಕಾಶ್, ಪುಟ.32) ಎಂದು ಕಂಬಾರರ ಕೃತಿಗಳೊಳಗಿನ ಹಸಿಹಸಿ ಕಾಮದ ವಾಸನೆಯ ಬಗ್ಗೆ ಬರೆಯುತ್ತಾರೆ.

ಶಿವಪ್ರಕಾಶ್ ಅವರ ಈ ಅಭಿಪ್ರಾಯವನ್ನು ಸಮರ್ಥಿಸುವಂತೆ ವಿಮರ್ಶಕ ಬಸವರಾಜ ಕಲ್ಗುಡಿಯವರೂ... 'ಕಂಬಾರರ ಸೃಜನಶೀಲ ಕೃತಿಗಳಲ್ಲಿ ಬರುವ ಕಾಮ ಕೂಡಾ ಬರೀ ಕಾಮವಾಗದೆ ವಿಕೃತವಾದ ನೆಲೆಗಳನ್ನು ಮುಟ್ಟುತ್ತದೆ. ಇದು ಅವರ ನಾಟಕಗಳಲ್ಲಿ, ಕವನಗಳಲ್ಲಿ ಮತ್ತೆ ಮತ್ತೆ ಅನುಭವಕ್ಕೆ ಬರುವುದು. 'ಋಷ್ಯಶೃಂಗ'ದಲ್ಲಿ ಬರುವ ಪಾರಿ, ಕಮಲಿ, ಗೌಡ್ತಿಯಲಿರ ಕುಣಿತ ಏನಿದೆ ಅದು ವಿಕೃತವಾದಂಥ ಕುಣಿತ...' (ಕಂಬಾರರ ನಾಟಕಗಳು : ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ಸಾಂಸ್ಕೃತಿಕ ಚಲನೆಯ ಸ್ವರೂಪಗಳು : ಬಸವರಾಜು ಕಲ್ಗುಡಿ, ಪುಟ.32,2001) ಎಂದು ಬರೆಯುತ್ತಾರೆ.

ಆದರೆ ವಿಮರ್ಶಕ ಜಿ.ಎಸ್. ಆಮೂರರು '... ಈ ಪ್ರೇಮ ಕಾಮ ಬೇರೆ ಬೇರೆ ಆಶಯಗಳಲ್ಲ. ಯಾಕೆ ಕಂಬಾರರು ಕಾಮಕ್ಕೆ ಇಷ್ಟು ಮಹತ್ವ ಕೊಡುತ್ತಾರೆ ಅನ್ನೋದರ ಬಗ್ಗೆ ತಾತ್ವಿಕವಾಗಿ ಹೇಳೋದಾದ್ರೆ... ಕಂಬಾರರಿಗೆ ಈ ಕಾಮ ಕೂಡಾ ಅಖಂಡ ಸತ್ಯದ ಶೋಧದ ಒಂದು ನೆಲೆ ಆಗಿ ಪರಿಣಮಿಸುತ್ತದೆ...' ಎಂದು ಕಂಬಾರರ (ಪು. 26) ಬರವಣಿಗೆಯೊಳಗಿನ ಕಾಮದ ವಾಸನೆಯನ್ನು ತಾವು ಸಮರ್ಥಿಸಿಕೊಳ್ಳುತ್ತಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತಮ್ಮತನವನ್ನು ಸ್ಥಾಪಿಸಿಕೊಳ್ಳಲು ನಿರ್ಧರಿಸಿದ್ದ ಕಂಬಾರರು 'ಪಶ್ಚಿಮದಿಂದ ನಮಗೆ ಬಂದಂತಹ ನವ್ಯವಾದದ ಸಂರಚನೆಗಳು ನಾನು ನನ್ನ ಪರಿಸರದೊಂದಿಗೆ ಸಂಬಂಧ ಕಟ್ಟಿಕೊಳ್ಳುವ ಕ್ರಿಯೆಗೆ ಅವಶ್ಯವಾದಂತಹ ಸಾಧನೆಗಳಲ್ಲವೇನೋ ಎಂದೆನಿಸುತ್ತದೆ' ಎಂದು ಹೇಳುತ್ತಲೇ ಅತ್ತ ನವ್ಯಕ್ಕೂ ಪೂರ್ತಿ ಬಾಗದೆ, ಇತ್ತ ಜಾನಪದವನ್ನು ಪೂರ್ತಿ ನಿರಾಕರಿಸದೆ ತನ್ನದೇ ಆದ ಶೈಲಿಯಲ್ಲಿ 'ನವ್ಯತನ'ವನ್ನು ಕಟ್ಟಿಕೊಟ್ಟರು.

ಬಹುಮುಖ ಪ್ರತಿಭೆಯುಳ್ಳ ಕಂಬಾರರು ಅನೇಕ ಮಹತ್ವದ ಕಾವ್ಯ-ನಾಟಕ-ಕಾದಂಬರಿಗಳನ್ನು ಬರೆದವರಾದರೂ, ಅವರು ತನ್ನನ್ನು ಮೊದಲಿಗೆ ಕವಿ ಎಂದು ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆ. ಈ ಮಾತಿಗೆ ಅವರು ಕೊಡುವ ಸಮರ್ಥನೆ ಹೀಗಿದೆ : 'ನಾನು ಮೂಲತಃ ಕವಿ-ನಂತರ ನಾಟಕಕಾರ : ನಾನು ಕವಿಯಾಗಿಯೇ ನಾಟಕ ಬರೆಯುವುದು. ಕವಿಯಾಗಿಯೇ ಕಾದಂಬರಿ ಬರೆಯುವುದು, ಕವಿಯಾಗಿಯೇ ನಮ್ಮ ಗ್ರಾಮೀಣ ಬದುಕಿನ ತಲ್ಲಣಗಳಿಗೆ ಸ್ಪಂದಿಸುವುದು, ಕವಿಯಾಗಿಯೇ ಜಾನಪದ ಲೋಕದ ಜೀವಂತಿಕೆಯನ್ನು ಕಂಡು ಸಂಭ್ರಮಿಸುವುದು ಮತ್ತು ಜಾನಪದ ಜಗತ್ತಿನ ವಿವಿಧ ಮಗ್ಗುಲುಗಳನ್ನು ಶೋಧಿಸುವುದು. ನನ್ನ ಕಾವ್ಯವೇ ಒಂದು ನಾಟಕ, ನಾಟಕವೇ ಒಂದು ಕಾವ್ಯ, ನಾಟಕ ಅಂದ್ರೆ ಅದು ಕಾವ್ಯದ ಒಂದು ಉತ್ಕೃಷ್ಟ ರೂಪ ಅಷ್ಟೆ. ನಾನು ರಸಾನುಭವದ ಮೂಲಕವೇ ಆ narrative poetry ಕಟ್ಟಲು

ಸಾಧ್ಯ'. ಎನ್ನುತ್ತಾರೆ. ಈ ಮಾತನ್ನು ಸಮರ್ಥಿಸುವಂತೆ ಪಿ. ಲಂಕೇಶ್ ಅವರು 'ಕಂಬಾರರ ಪದ್ಯಗಳು ನಾಟಕಕಾರರ ಕೃತಿಯೆಂಬಂತೆ ಕಾಣುತ್ತದೆ ; ಇದು ಕೇವಲ ಕಾಲ್ಪನಿಕ ವರ್ಣನೆಯಲ್ಲ ... ಘಟನೆ ಮತ್ತು ಘರ್ಷಣೆಯನ್ನು ಹೆಚ್ಚಾಗಿ ಆಧರಿಸುವ ಅನುಭವ ನಾಟಕದತ್ತ ಹೊರಳುವಂಥದ್ದು' ಎಂದು 'ನಾರ್ಸಿಸಸ್' ನಾಟಕಕ್ಕೆ ಮುನ್ನುಡಿ ಬರೆಯುತ್ತ ಕಂಬಾರರ ಕವನದೊಳಗಿರುವ 'ನಾಟಕ'ವನ್ನು ಗುರುತಿಸುತ್ತಾರೆ, ಕವಿ ಕಂಬಾರರೊಳಗಿನ ನಾಟಕಕಾರರನ್ನು ಗುರುತಿಸುತ್ತಾರೆ.

ಕಂಬಾರರ ಹಲವು ನಾಟಕಗಳೊಳಗಿನ ಕಾವ್ಯವಂತಿಕೆ ಕಥನ ಶೈಲಿ, ಅವರನ್ನು ಮೊದಲಿಗೆ ಕವಿಯೆಂದೇ ಸಮರ್ಥಿಸುತ್ತಲೇ ನಂತರ ನಾಟಕಕಾರರೆಂದು ಗುರುತಿಸುತ್ತದೆ. ಅವರವರ ಭಾವಕ್ಕೆ-ಅವರವರ ತಿಳುವಳಿಕೆ ತಕ್ಕಂತೆ ಕಂಬಾರರನ್ನು ಗುರುತಿಸುವುದು ಬೇಡವೇ ಬೇಡ ಎಂಬಂತೆ ಒಂದು 'ಸರಳ ಸಮೀಕರಣ'ವನ್ನು ಜಿ.ಎಸ್. ಆಮೂರರು ಇಲ್ಲಿ ಸೂಚಿಸುತ್ತಾರೆ. '... ಕಂಬಾರರು ಕಾವ್ಯ ಬರೆದಿದ್ದಾರೆ, ನಾಟಕಗಳನ್ನು ಬರೆದಿದ್ದಾರೆ, ಕಾದಂಬರಿಗಳನ್ನು ಬರೆದಿದ್ದಾರೆ, ಸಂಶೋಧನೆ, ಜಾನಪದವನ್ನು ಬರೆದಿದ್ದಾರೆ. ಆದರೆ ಅವರನ್ನು ಕಾದಂಬರಿಕಾರರಾಗಿ ಕಂಬಾರರು, ನಾಟಕಕಾರರಾಗಿ ಕಂಬಾರರು ಅಂತ ಹೀಗೆ ಪ್ರತ್ಯೇಕವಾಗಿ ಹೇಳೋದಿಕ್ಕೆ ಆಗೋದಿಲ್ಲ. ಅವರ ಯಾವುದೇ ನಾಟಕ ತೆಗೆದುಕೊಂಡರೂ ಕೂಡಾ ಅದರಲ್ಲಿ ಕಾವ್ಯ-ಕಥನ ಇರ್ತದೆ. ಈ ಮೂರು ಒಟ್ಟಿಗೇನೆ ಬರೋದು ಅವರ ನಾಟಕಗಳ ವೈಶಿಷ್ಟ್ಯ. ಅವರ ಕಾವ್ಯದಲ್ಲೂ ಕೂಡಾ ನಾಟಕ ಇರ್ತದೆ. ಕಥನ ಇರ್ತದೆ, ಕಥನ ಕಂಬಾರರಿಗೆ ಬಹಳ ಪ್ರೀತಿಯ ವಿಷಯ... ; ಇಲ್ಲಿ ನಾನು ಮುಖ್ಯವಾಗಿ ಹೇಳಬೇಕಾದದ್ದು ಕಂಬಾರರ ಪ್ರತಿಭೆಯ ಎಲ್ಲ ಮುಖಗಳು, ಬೇರೆ ಬೇರೆಯಾಗಿ ಕಾಣಿಸಿಕೊಳ್ಳೇನೆ ಒಂದೇ ಕೃತಿಯಲ್ಲಿ ಎಲ್ಲ ಕೂಡಿ ಕೆಲಸ ಮಾಡ್ತಾವಲ್ಲ- ಅದು ಕನ್ನಡಕ್ಕೆ ವಿಶಿಷ್ಟವಾದದ್ದು, ಆಧುನಿಕ ಸಂದರ್ಭದಲ್ಲಿ ಇನ್ನೂ ಬಹಳ ವಿಶಿಷ್ಟವಾದದ್ದು ಅಂತ ನನಗೆ ಅನಿಸ್ತದೆ...'

ಜಿ.ಎಸ್. ಆಮೂರರ ಮೇಲಿನ ಸಮರ್ಥನೆ ಒಪ್ಪಕೊಡುವಂತೆ ಇಲ್ಲಿ ಒಂದು ಉದಾಹರಣೆಯನ್ನು ನೀಡಬಹುದು : ಕಂಬಾರರ ಕಾದಂಬರಿ 'ಕರಿಮಾಯಿ'ಯೊಳಗಿನ 'ನಾಟಕ'ವನ್ನು ಗುರುತಿಸಿದ ಖ್ಯಾತ ನಿರ್ದೇಶಕಿ ಬಿ. ಜಯಶ್ರೀ ಅವರು ಅದನ್ನು ನಾಟಕ ರೂಪಕ್ಕೆ ಅಳವಡಿಸಿ ಯಶಸ್ವಿಯಾಗಿ ಪ್ರದರ್ಶಿಸಿದರು.

ಒಟ್ಟನಲ್ಲಿ ಈ ವಿಶಿಷ್ಟ ರೀತಿಯ ಸಾಹಿತ್ಯ 'ತಾಕತ್ತಿ'ನಿಂದಾಗಿಯೇ ಕಂಬಾರರು ಸಾಹಿತ್ಯ ಲೋಕದಲ್ಲಿ ಒಂದು ವಿಸ್ಮಯವನ್ನುಂಟು ಮಾಡಿದ್ದಾರೆ ಎಂಬ ಮಾತಂತೂ ಸತ್ಯ.

## ಕಂಬಾರರ ನಾಟಕಗಳು

ವಿದ್ಯಾರ್ಥಿದೆಸೆಯಲ್ಲಿ ತನ್ನ ಮೊಟ್ಟಮೊದಲ 'ಬೆಂಬತ್ತಿದ ಕಣ್ಣು' (1956) ಎಂಬ ಏಕಾಂಕ ನಾಟಕ ಬರೆದು ವಿದ್ಯಾರ್ಥಿ ಸಮುದಾಯದಲ್ಲಿ ಪ್ರತಿಭಾವಂತ ಎಂದು ಗುರುತಿಸಲ್ಪಟ್ಟ ಕಂಬಾರರು ಮತ್ತೆ ನಾಟಕ ಬರೆದದ್ದು ನವ್ಯದ ಕಾಲದಲ್ಲಿ.

ಆಗ ಸಾಗರದಲ್ಲಿ ಕಂಬಾರರು 'ಋಷ್ಯಶೃಂಗ' ಎಂಬ ನಾಟಕವನ್ನು ಬರೆದು (1967) ಸ್ನೇಹಿತರಲ್ಲಿ ಅಚ್ಚರಿ ಮೂಡಿಸಿದರು. ಮುಂದೆ ನಾಟಕಗಳ ಬಗ್ಗೆ ಅವರ 'ಪ್ರಯೋಗ' ಹಾಗೇ ಮುಂದುವರಿಯಿತು. 1968ರಿಂದ 1970ರ ರವರೆಗೆ ಚಿಕಾಗೋದಲ್ಲಿ ವಾಸ್ತವ್ಯದಲ್ಲಿದ್ದ ಕಂಬಾರರಿಗೆ

ಅಲ್ಲಿನ ರಂಗಭೂಮಿಯ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಅವಕಾಶ ಒದಗಿಬಂತು. ಆಗ ಅಮೇರಿಕಾದಲ್ಲಿ ಪ್ರಚಾರದಲ್ಲಿದ್ದುದು-ಲಿವಿಂಗ್ ಥಿಯೇಟರ್ ಪ್ರಯೋಗ. ನಟರು ಮತ್ತು ಪ್ರೇಕ್ಷಕರು ಕೂಡಿಯೇ ಒಂದು ನಾಟಕವನ್ನು ಕಟ್ಟಿ ಪ್ರಯೋಗಿಸುವ ಕ್ರಮವದು. ಕಂಬಾರರು ಆ ಪ್ರಯೋಗವನ್ನು ಮೆಚ್ಚಿ ಅಲ್ಲಿನ ರಂಗಭೂಮಿಯ ಬಗ್ಗೆ ತನ್ನಲ್ಲಿ ಮತ್ತಷ್ಟು ಆಲೋಚನೆಗಳನ್ನು ತುಂಬಿಕೊಂಡು ಭಾರತಕ್ಕೆ ಮರಳಿ ಬರುವಷ್ಟರಲ್ಲಿ 'ನಾರ್ಸಿಸಸ್' ನಾಟಕವನ್ನು (1970) ಬರೆದರು.

ಅಮೇರಿಕಾದಿಂದ ಹೊಸ ಆಲೋಚನೆಗಳನ್ನು ಹೊತ್ತು ಬಂದ ಕಂಬಾರರನ್ನು ಕಾಡಿದ್ದು ಹೊಸತೇನಿಲ್ಲದೆ ನಿಂತ ನೀರಾಗಿದ್ದ ಕನ್ನಡ ರಂಗಭೂಮಿ. ವೃತ್ತಿ ರಂಗಭೂಮಿಯು ತನ್ನ ಮಾಮೂಲು ವಸ್ತು, ನಟನೆ, ಹಾಡು, ಅಲಂಕರಣ ಪ್ರಸಾಧನದಿಂದ ಚೈತನ್ಯ ಕಳೆದುಕೊಂಡು ಜಡ್ಡುಗಟ್ಟಿ ಹೋಗಿತ್ತು. ವಾಸ್ತವವಾದಿ ಮತ್ತು ಅಸಂಗತ ನಾಟಕಗಳು ಅತಿಯಾದ ವೈಚಾರಿಕತೆ, ಬೌದ್ಧಿಕ ಕಸರತ್ತುಗಳಿಂದ ಪ್ರೇಕ್ಷಕರಿಗೆ ಅತಿಭಾರವೆನಿಸಿದ್ದವು. ಹಿಂದೊಮ್ಮೆ ಎಲ್ಲ ವರ್ಗದ ಪ್ರೇಕ್ಷಕರಿಗೆ ಅತಿ ಪ್ರಿಯರಾಗಿದ್ದ ಟಿ. ಪಿ. ಕೈಲಾಸಂ, ಹಿರಣ್ಣಯ್ಯನವರ ಅತಿಮಾತು-ಭಾಷಣಗಳು ಬುದ್ಧಿವಂತ ಪ್ರೇಕ್ಷಕರಿಗೂ ಬೋರು ಹಿಡಿಸತೊಡಗಿದ್ದವು. ಇಂತಹ ಸಂದರ್ಭದಲ್ಲಿ ಕಂಬಾರರು ಆಧುನಿಕ ಕನ್ನಡ ರಂಗಭೂಮಿಗೆ ಹೊಸ ಕಾಯಕಲ್ಪವನ್ನು ಕೊಡುವಂತಹ 'ಜೋಕುಮಾರಸ್ವಾಮಿ' ನಾಟಕ ಕೃತಿಯನ್ನು ರಚಿಸಿದರು (1972). ಬಯಲಾಟದ ತಂತ್ರಗಳನ್ನು ಅಳವಡಿಸಿಕೊಂಡಿರುವ ಈ ನಾಟಕ, ಹವ್ಯಾಸಿ ರಂಗಭೂಮಿ ನಿರ್ಲಕ್ಷಿಸಿದ್ದ ಹಾಡು-ಕುಣಿತ-ಸಂಗೀತಗಳನ್ನು ಒಳಗೊಂಡು ಅತ್ತ ಬಯಲಾಟವೂ ಅಲ್ಲದ ಇತ್ತ ಸಾಂಪ್ರದಾಯಿಕ ಅಥವಾ ಜನಪದ ನಾಟಕವೂ ಅಲ್ಲದ ವಿಶಿಷ್ಟ ನಾಟಕವೆನಿಸಿತು. ಆಧುನಿಕ ಕನ್ನಡ ನಾಟಕ ಪರಂಪರೆಯಲ್ಲೇ ಅತ್ಯಂತ ವಿಶಿಷ್ಟ ಕೃತಿಯೆನಿಸಿದ 'ಜೋಕುಮಾರಸ್ವಾಮಿ'ಯ ರಂಗಪ್ರಯೋಗದಿಂದ ರಂಗಭೂಮಿಗೆ ಮರುಜೀವ ಬಂದಂತಾಯಿತು.

ನಾಟಕ ಕೃತಿಯನ್ನು ರಚಿಸಿದ ವರ್ಷವೇ ಬೆಂಗಳೂರಿನಲ್ಲಿ ಅದರ ರಂಗ ಪ್ರಯೋಗ ನಡೆಯಿತು. ಅದರ ನಿರ್ದೇಶಕರು ಖ್ಯಾತ ರಂಗಕರ್ಮಿ ಬಿ.ವಿ. ಕಾರಂತರು. ಅತ್ಯಂತ ಯಶಸ್ಸು ಕಂಡ ಈ ಪ್ರಯೋಗದಿಂದ ಕಂಬಾರರು ಸಮಕಾಲೀನ ಕನ್ನಡ ನಾಟಕಕಾರರು ಮಾತ್ರವಲ್ಲ ಭಾರತೀಯ ನಾಟಕಕಾರರಲ್ಲಿ ಪ್ರಮುಖರೆನಿಸಿದರು. ಕನ್ನಡ ರಂಗಭೂಮಿಗೆ ಹೊಸ ಆಯಾಮವನ್ನು ನೀಡಿದ ಈ ನಾಟಕ, ಕನ್ನಡ ರಂಗಭೂಮಿಯ ಚರಿತ್ರೆಯಲ್ಲೇ ಒಂದು ಮೈಲಿಗಲ್ಲಾಯಿತು. ನಮ್ಮ ರಂಗಭೂಮಿಗೆ ಮತ್ತೆ ಜೀವಕಳೆ ತಂದ ಈ ನಾಟಕದ ಬಗ್ಗೆ ಅದನ್ನು ನಿರ್ದೇಶಿಸಿದ ಬಿ.ವಿ. ಕಾರಂತರು ಉದ್ಗರಿಸಿದ್ದು ಹೀಗೆ : 'ಕಂಬಾರರು ಕನ್ನಡದ ರಂಗಭೂಮಿಗೆ ಮಳೆ ತಂದ ಋಷ್ಯಶೃಂಗರು. ಹಾಡುಗಳೆಂದರೆ ಕಂಪನಿ ಹಾಡುಗಳೆಂದು ಮಾತ್ರ ಅರ್ಥವಿದ್ದಾಗ. ಮೊಟ್ಟ ಮೊದಲಿಗೆ 'ತೊಡಗಿಸುವ' 'ಗತ್ಯಾತ್ಮಕ' ಹಾಡುಗಳ ನಾಟಕ ಬರೆದ ಕಂಬಾರರ ಕವಿ ಸಾಮರ್ಥ್ಯದ ಬಗ್ಗೆ ನನಗಂತೂ ತುಂಬ ಗೌರವ, ಭಯ, ಅಸೂಯೆ. ನಮ್ಮಲ್ಲಿ ನಾಟಕಕಾರ ಮತ್ತೆ ಕವಿಯೆನಿಸಿಕೊಂಡಿದ್ದಾನೆ, ಕಂಬಾರರ ಮೂಲಕ. ಅವರ ಜೋಕುಮಾರಸ್ವಾಮಿಯನ್ನು ನಾನು ಹುಡುಕಿದೆನೋ ಅಥವಾ ಜೋಕುಮಾರಸ್ವಾಮಿ ನನ್ನನ್ನು ಹುಡುಕಿದನೋ ನನಗಂತೂ ಅದರ ಪ್ರಯೋಗ ಯುರೇಕಾ ಅನ್ನುವಂಥಾ ಸರಳ ಅನುಭವ'.

'ಜೋಕುಮಾರ' ಕೃತಿ ರಚನೆಯ ನಂತರ ಕಂಬಾರರು ಮತ್ತೂ ಮಹತ್ವದ ನಾಟಕ ಕೃತಿಗಳನ್ನು ರಚಿಸಿದ್ದಾರೆ. ಆಧುನಿಕ ಕನ್ನಡ ಪರಂಪರೆಯಲ್ಲಿ ಕಂಬಾರರು ಸಾಗಿ ಬಂದ ಪರಿಯನ್ನು ತಿಳಿಯುವುದಕ್ಕಾಗಿ, ಅವರ ಸಾಹಿತ್ಯಿಕ ನಿಲುವಿನಲ್ಲಾದ ಗ್ರಹಿಕೆ-ತಿಳುವಳಿಕೆಗಳ ಬದಲಾವಣೆಗಳನ್ನು ಗಮನಿಸುವುದಕ್ಕಾಗಿ ಅವರ ಕೆಲವು ಕೃತಿಗಳನ್ನು ಇಲ್ಲಿ ಸಮೀಕ್ಷೆಗೊಳಪಡಿಸಲಾಗಿದೆ.

## ಬೆಂಬತ್ತಿದ ಕಣ್ಣು (1956)

ಇದು ಏಕಾಂಕ ನಾಟಕ. ಕಂಬಾರರು ವಿದ್ಯಾರ್ಥಿ ಬದುಕಿನಲ್ಲಿ ಬರೆದ ಮೊದಲ ನಾಟಕ. ಇದರ ವಸ್ತು ಹೀಗಿದೆ. ಉಷಾ-ಸದಾಶಿವ ದಂಪತಿಗಳು. ಉಷಾಳಿಗೆ ಸದಾಶಿವನ ಗೆಳೆಯ ಶ್ರೀನಿವಾಸನಲ್ಲಿ ಆಕರ್ಷಣೆ. ಅವನಿಗೂ ಅಷ್ಟೆ. ಇಬ್ಬರಲ್ಲೂ ಮೋಹ-ಕಾಮ ಬಲಿಯುತ್ತದೆ. ಅವರಿಬ್ಬರ ಮುಕ್ತ ಪ್ರಣಯಕ್ಕೆ ಸದಾಶಿವ ಅಡ್ಡಿಯಾದಾನೆಂಬ ಭಯ ಅವರಿಬ್ಬರಲ್ಲೂ. ಒಮ್ಮೆ ಸದಾಶಿವನಿಗೆ ಕಣ್ಣು ನೋವು ಬಂದಾಗ ಔಷಧಿ ಹಾಕುವ ಬದಲು, ಮಡದಿ ಉಷಾ ಆತನ ಕಣ್ಣಿಗೆ ಕುರುಡಾಗುವಂತಹ ಅಂಜನ ಹಾಕುತ್ತಾಳೆ. ಆದರೆ ಆತ ಕುರುಡಾಗುವುದಿಲ್ಲ ಆ ಜೀವಂತ ಕಣ್ಣಲ್ಲೇ (ಕುರುಡನಂತೆ ನಟಿಸಿ) ಉಷಾಳ ಪ್ರಣಯವನ್ನು ದಿಟ್ಟಿಸುತ್ತಾನೆ. ಒಂದು ಹಂತದಲ್ಲಿ ಉಷಾ-ಶ್ರೀನಿವಾಸ ಇಬ್ಬರೂ ಓಡಿ ಹೋಗಲು ನಿರ್ಧರಿಸುತ್ತಾರೆ. ಆದರೆ ಇದ್ದಕ್ಕಿದ್ದಂತೆ ಶ್ರೀನಿವಾಸ ಮನಸ್ಸು ಬದಲಾಯಿಸಿಕೊಳ್ಳುತ್ತಾನೆ. ಆತನಿಗೆ ತನ್ನ ಈ ಅನೈತಿಕ ಸಂಬಂಧದ ಬಗ್ಗೆ ಜಿಗುಪ್ಸೆ ಮೂಡುತ್ತದೆ. ಗೆಳೆಯನಿಗೆ ಬಗೆದ ದ್ರೋಹದ ಬಗ್ಗೆ ಅತ್ಯಂತ ಪಶ್ಚಾತ್ತಾಪ ಮೂಡುತ್ತದೆ. ಆದರೆ ಆ ಹಂತದಲೂ ಉಷಾ ಆತನನ್ನು ಓಡಿ ಹೋಗೋಣ ಎಂದು ಒತ್ತಾಯಿಸುತ್ತಿರುತ್ತಾಳೆ. ಶ್ರೀನಿವಾಸ ಒಪ್ಪುವುದಿಲ್ಲ. ಆತ ಸದಾಶಿವನಲ್ಲಿ ಕ್ಷಮೆ ಕೇಳುತ್ತಾನೆ - ಗೆಳೆಯ ಸದಾಶಿವ ಆತನನ್ನು ಕ್ಷಮಿಸಿದರೂ ಆತನೊಳಗಿನ ಪಾಪಪ್ರಜ್ಞೆಯಿಂದ ತಾನೆ ಪಿಸ್ತೂಲಿನಿಂದ ಗುಂಡು ಹಾರಿಸಿಕೊಂಡು ಸಾಯುತ್ತಾನೆ.

ಕಂಗೆಟ್ಟು ಬಂದ ಮಡದಿ ಉಷಾಳನ್ನು ಸದಾಶಿವ ಮತ್ತೆ ಸ್ವೀಕರಿಸುತ್ತಾನೆ. "ಅವರನ್ನು ದ್ವೇಷಿಸಬಾರದು, ನಾವು ಹುಟ್ಟಿರೋದು ತಿರಸ್ಕರಿಸಲಿಕ್ಕಲ್ಲ, ಪ್ರೇಮಿಸುವುದಕ್ಕೆ" ಎಂದು ಅನ್ನುತ್ತ ಸದಾಶಿವ ಹೃದಯ ವೈಶಾಲ್ಯವನ್ನು ತೋರುತ್ತಾನೆ. ಗಂಡಿನೆದುರಿಗೆ ಹೆಣ್ಣು ಎಷ್ಟು ಚಂಚಲೆ - ನೀತಿಗೆಟ್ಟವಳು - ಹೃದಯಹೀನೆ - ಎಂಬುದನ್ನು ನಿರೂಪಿಸುತ್ತ - ಪುರುಷಪ್ರಧಾನ ಸಮಾಜಕ್ಕೆ ಅತ್ಯವಶ್ಯಕವಾಗಿ ಬೇಕಾದಂತಹ ಪುರುಷನ ಹೃದಯ ವೈಶಾಲ್ಯವನ್ನು ತೋರುವ ಈ ನಾಟಕದ ಒಟ್ಟು ತಿರುಳು-ಹೆಣ್ಣು ನೀತಿಯ ಚೌಕಟ್ಟನ್ನು ಮೀರಿ ಹೋದರೆ ಆಗುವ ಶಾಸ್ತಿ, ಕಾಮುಕ ಆಕರ್ಷಣೆಯ ಬಂಧ ಅದೆಷ್ಟು ಸಡಿಲ ಹಾಗೂ ಮತ್ತು ಗಂಡಿನ ಕ್ಷಮಾಗುಣ ಅತ್ಯಂತ ಭಾವುಕ ನೆಲೆಯಲ್ಲಿ ಸಾಂಪ್ರದಾಯಿಕ ಸಮಾಜಕ್ಕೆ ತಕ್ಕಂತೆ ಪ್ರತಿಬಿಂಬಿತಗೊಂಡಿದೆ.

## ನಾರ್ಸಿಸಸ್ (1968)

ಇದೊಂದು ಅಸಂಗತ ನಾಟಕ. ನಾಣಿ, ಗೀತಾ ಕಾಲೇಜು ದಿನಗಳ ಪ್ರೇಮಿಗಳು. ನಾಣಿ ಹೆಣ್ಣುಗಳನ್ನು ಕಾಡುವ, ಪ್ರೇಮಿಸುವ, ತಿರಸ್ಕರಿಸುವ ಗುಣವುಳ್ಳ ಮಹಾ ಆತ್ಮಾರಾಧಕ. ಆತ್ಮಾರಾಧನೆ ಪ್ರವೃತ್ತಿಯಿಂದಾಗಿ ಆತನಲ್ಲಿ ಕ್ರೌರ್ಯ, ಜಾಣತನ, ಅಹಂಕಾರ, ಆತ್ಮವಂಚನೆ ಎಲ್ಲವೂ ಹೆಪ್ಪುಗಟ್ಟಿವೆ. ಒಮ್ಮೆ ಆತನಲ್ಲಿಗೆ ವಿವಾಹಿತ ಗೀತಾ ಕದ್ದು ಬರುತ್ತಾಳೆ. ಗೀತಾಗೆ ಮದುವೆಯಾದರೂ ಆಕೆಗೆ

ನಾಣಿಯ ಆಕರ್ಷಣೆ. ಆದರೆ ನಾಣಿಗೆ ಸ್ವಪ್ರೀತಿ ಜತೆಗೆ ಭಯವೂ ಇದೆ, ಪಾಪಪ್ರಜ್ಞೆಯ ಕಾಡುವಿಕೆಯೂ ಇದೆ. ಆ ಪ್ರಜ್ಞೆಯಿಂದಲೇ ನಾಣಿ ಅವಳ ವೇಷ ಮರೆಸಲು ಯತ್ನಿಸುತ್ತಾನೆ. ಗೀತಾ ಎನ್ನುವ ಬದಲು 'ಸುಧಾ' ಎಂದು ಕರೆಯುತ್ತಾನೆ. ತನ್ನ ಹೆಸರನ್ನೂ ಮುಚ್ಚಿಡಲು ಯತ್ನಿಸುತ್ತಾನೆ. ಆತ್ಮಾರಾಧನೆಯ ಪ್ರಕ್ರಿಯೆ ಅವನೊಳಗೆ ಕ್ರೌರ್ಯವನ್ನು ಪ್ರೇರೇಪಿಸುವುದು, ಗೀತಾಳನ್ನು ಹಿಂಸಿಸಲು ಆತನ ಮನಸ್ಸು ಹಾತೊರೆಯುವುದು ನಾಣಿಯ ಅಂತರಂಗದ ತಾಕಲಾಟವೂ ಹೌದು.

ಗೀತಾ ನಾಣಿಯ ಮನೆಯಲ್ಲಿದ್ದಂತೆ ಆತನ ಮನೆಯೊಳಗಡೆ ಹೆಣ್ಣುಗಳು ಕಿರಿಚಿದ ಧ್ವನಿಗಳು ಬರುತ್ತವೆ. ನಾಣಿ, ಅದು ಪಕ್ಕದ ಮನೆಯ ಹುಡುಗ, ಪೊಲೀಸ್ ಫೌಜುದಾರರ ಹೆಂಡತಿಯನ್ನು ಓಡಿಸಿಕೊಂಡು ಬಂದು ಬಂಧನದಲ್ಲಿಟ್ಟಿದ್ದಾನೆ ಎಂದು ಹೇಳುತ್ತಾನೆ. ಆ ಕ್ಷಣವೇ ಆಳು ಭೀಮ್ಯಾ ಬಂದು 'ಹೊರಗಡೆ ಪೋಲೀಸ್‌ನವನು ಪಿಸ್ತೂಲು ಹಿಡಿದುಕೊಂಡು ನಿಂತಿದ್ದಾನೆ' ಎಂದು ಹೇಳಿದಾಗ ಗೀತಾ 'ಅದು ತನ್ನ ಗಂಡನೇ ಆಗಿರಬೇಕೆಂದು' ಭಯ ಗಾಬರಿಗೆ ಒಳಗಾಗುತ್ತಾಳೆ. ಆಕೆ ಹೊರಗೆ ಹೋಗಲು ಯತ್ನಿಸಿದಾಗ ನಾಣಿ ಮತ್ತು ತಲೆ ಹಿಡುಕ ಭೀಮ್ಯಾ ಆಕೆಯನ್ನು ಬಿಡದೆ ಆಕೆಯ ತೇಜೋವಧೆ ಮಾಡುತ್ತಾರೆ. ಅಷ್ಟರಲ್ಲಿ ಜೋಗತಿಯ ಪ್ರವೇಶವಾಗುತ್ತದೆ. ಆಕೆ ತಾನು ಹಚ್ಚಿಕೊಂಡಿರುವ ಅತ್ತರೆಣ್ಣೆಯ ಮಹಿಮೆಯನ್ನು ಸಾರುತ್ತಾಳೆ. ಜೋಗತಿಯ 'ಜಗತ್ತು' ನಾಣಿಯ 'ಜಗತ್ತಿ'ಗಿಂತ ಬಹಳ ವಿಸ್ತಾರವಾದುದು. ನಾಣಿಯ ಜಗತ್ತು ಆ ಜೋಗ್ತಿಯ ಜಗತ್ತಿನೊಂದಿಗೆ ಹಣಾಹಣಿಸುತ್ತದೆ. ನಾಣಿಯ ಹೊಕ್ಕಳ ನೋವನ್ನು ನಿವಾರಿಸಲು ಪ್ರಯತ್ನಿಸಿದ ಜೋಗ್ತಿಯನ್ನು ನಾಣಿ ಪಿಸ್ತೂಲಿಯಿಂದ ಹೊಡೆದು ಕೊಲ್ಲುತ್ತಾನೆ - ಜೋಗ್ತಿಯ ಭವಿಷ್ಯವನ್ನು ನಿಜವಾಗಿಸಿ ಭೀಮ್ಯಾ ಪೋಲೀಸನಾಗುತ್ತಾನೆ - ಬದುಕಿನೆದುರು ಸೋತ ನಾಣೀ ಪೋಲೀಸರ ವಶವಾಗುತ್ತಾನೆ. ಜೋಗತಿ ದೇವರನ್ನು ಅವಾಹಿಸಿಕೊಂಡು ಕುಣಿಯುವುದು, ಅತೃಪ್ತಜೀವಿ ನಾಣಿಯ ನಾರ್ಸಿಸಸ್ ಪ್ರವೃತ್ತಿಗೆ ವಿರುದ್ಧವಾದ ಶಕ್ತಿಯಾಗಿ ಹಣಾಹಣಿಸುತ್ತಿದೆ ಎಂಬುದನ್ನು ಸೂಚಿಸುತ್ತದೆ. ಜೋಗತಿಯನ್ನು ಕೊಲ್ಲುವ ಮೂಲಕ ನಾಣಿ ಜಗತ್ತಿನ ಪುರುಷ ರೂಪದ ಚೈತನ್ಯಶಕ್ತಿಯನ್ನು ಒಪ್ಪಲು ನಿರಾಕರಿಸುತ್ತಾನೆ ಎಂದು ಅರ್ಥೈಸಬಹುದು.

ಈ ನಾಟಕ ಇತರ ಅಸಂಗತ ನಾಟಕಗಳಿಗಿಂತ ಭಿನ್ನವಾದುದು. ಇತರ ನಾಟಕಗಳಲ್ಲಿ ಇರದ 'ಕತೆ' ಈ ನಾಟಕದಲ್ಲಿದೆ. ಪಾತ್ರ ಪೋಷಣೆಯಿಂದ ಹಿಡಿದು, ವೈಚಾರಿಕತೆಯಲ್ಲೂ ಬಹಳಷ್ಟು ಭಿನ್ನವಾಗಿರುವ ಈ ನಾಟಕ ಎಲ್ಲ ದೃಷ್ಟಿಯಿಂದಲೂ ಒಂದು ಪ್ರಯೋಗಶೀಲ ರಚನೆ.

## ಋಷ್ಯಶೃಂಗ (1970)

ಜನಪದ ತಂತ್ರಗಳನ್ನು ವಿಪುಲವಾಗಿ ಬಳಸಿಕೊಂಡ ನಾಟಕವಿದು. ಕಂಬಾರರ ಮಹತ್ವದ ಕಥನ ಕವನ ಅಥವಾ ಆಧುನಿಕ ಲಾವಣಿ ಎನ್ನಬಹುದಾದ 'ಹೇಳತೇನ ಕೇಳ'ದ ಮುಂದುವರಿದ ಭಾಗವೇ 'ಋಷ್ಯಶೃಂಗ'ವೆಂಬ ದೃಶ್ಯಕಾವ್ಯ. 'ಹೇಳತೇನ ಕೇಳ'ದ ನಾಯಕನಾದ ರಾಮಗೊಂಡನ ತಮ್ಮ ಬಾಳಗೊಂಡ ಈ ನಾಟಕದ ನಾಯಕ.

ರಾಮಗೊಂಡನ ಅಪ್ಪನಾದ ಊರಗೌಡ, ಏಳುಪಟ್ಟೆಯ ಹುಲಿಯನ್ನು ಬೇಟೆಯಾಡಲು ಹೋದಾಗ, ಆ ಹುಲಿ ರೂಪದ ರಾಕ್ಷಸ, ಗೌಡನನ್ನು ಕೊಂದು ಆತನ ರೂಪದಲ್ಲಿಯೇ ಬಂದು

ಗೌಡ್ತಿಯನ್ನು ಸೇರಿಕೊಂಡಿದ್ದಾನೆ. ರಾಕ್ಷಸ ಗೌಡನಿಂದ ಬಸಿರಾದ ಗೌಡ್ತಿಗೆ ಹುಟ್ಟಿದಾತ ಈ ನಾಟಕದ ನಾಯಕ ಬಾಳಗೊಂಡ. ಬಾಳಗೊಂಡ ಶಾಲೆ ಕಲಿಯಲು ಬೇರೆ ಊರಿಗೆ ಹೋಗಿದ್ದಾನೆ. ರಾಕ್ಷಸ-ಗೌಡ್ತಿಯರ ಅಸಹಜ ಸಂಯೋಗದಿಂದ ಹುಟ್ಟಿದ ಬಾಳಗೊಂಡ, ಬರಗಾಲದಿಂದ ಕಂಗಾಲಾದ ಊರವರಿಗೆ ಒಂದು ಭರವಸೆಯಾಗಿದ್ದಾನೆ. ಮಳೆಯಿಲ್ಲದ ಊರಲ್ಲಿ ಅನೇಕ ಅಪಶಕುನಗಳು, ಕೆಟ್ಟ ಘಟನೆಗಳು ನಡೆದಾಗ ದೈವ 'ಪಾರಂಬಿ ಕರೆವ್ವ' ಪೂಜಾರಿ ಮೈಯಲ್ಲ ತುಂಬಿ ಬಂದು 'ಬಾಳಗೊಂಡ ಬಂದ ಊರ ಅಗಸ್ಯಾಗ ಮೂರ ಹೆಜ್ಜಿ ಇಟ್ಟದ್ದಾದರ, ಪಳಪಳ ಮಳಿ ಬರತೈತಿ' ಅಂತ ಹೇಳಿದಾಗ ಊರವರು ಬಾಳಗೊಂಡನ ಆಗಮನವನ್ನು ನಿರೀಕ್ಷಿಸಿ ಅಗಸೆ ಬಾಗಿಲಲ್ಲಿ ಕಾಯುತ್ತಾ ನಿಂತಿದ್ದಾರೆ. ಅಷ್ಟರಲ್ಲಿ ಹೊಲೇರ ಪಾರುವಿನ ಮಗಳು ಕಮಲಿ ಹಾಲಿನ ಗಡಿಗೆ ಹಿಡಿದು ಬರುತ್ತಾಳೆ. ತನಗೆ ಕನಸು ಬೀಳದಂತೆ ಕರೆವ್ವಗೆ ಹಾಲೆರೆಯಲು ಹಾಲಗಡಿಗೆ ತಂದ ಕಮಲಿಯೆದುರು ಬಾಳಗೊಂಡ ಕಾಣಿಸಿಕೊಂಡು ಆ ಗಡಿಗೆ ಕಸಿದುಕೊಂಡು ಹಾಲು ಕುಡಿಯುತ್ತಾನೆ. '... ಕೊಳ್ಳಾಗಿನ ಮುತ್ತಿನ ಸರಕ್ಕೆ ಚಿಟಿಮುದ್ದ ಕೊಟ್ಟ ನನ್ನ ಮ್ಯಾಲ ಒಗದ... ಕುದರಿ ಓಡಿಸಿದಾ...' ಎಂದು ಕಮಲಿ ಸಂಭ್ರಮಿಸುತ್ತಾಳೆ. ಕೊನೆಗೂ ಬಾಳಗೊಂಡ ಊರ ಅಗಸಿ ಬಾಗಿಲಿಗೆ ಬಂದು ತಲುಪುತ್ತಾನೆ - ಊರ ಜನರು ಆತನನ್ನು ಸಂಭ್ರಮದಿಂದ ಸ್ವಾಗತಿಸುತ್ತಾರೆ. ಆದರೂ ಮಳೆಯ ಸುಳಿವಿಲ್ಲ, ಜನರು ಮತ್ತೆ ಕಂಗಾಲಾಗುತ್ತಾರೆ.

ಒಂದು ದಿನ ಬಾಳಗೊಂಡನಿಗೆ ಒಬ್ಬ ಯಕ್ಷಿಣಿ ಕಾಣಿಸಿಕೊಂಡು '... ನಿನ್ನಣ್ಣ ನಿನಗೊಂದು ಒಸಗೆಯ ಇತ್ತಾನು, ಸೆರಗೊಡ್ಡು ಕಂದಾ, - ಮಾಣಿಕ್ಯವಿದು. ಉತ್ತಮಾಂಗದಲಿ ಇದ ಧರಿಸಿ ಹಾಲಗಡಿಗೆಯ ಮುಗ್ಧೆಯ ಸಹವಾಸ ಮಾಡೆ, ಅಂತ್ಯದ ತಿಳಿ ಬೆವರು ಮಳೆಯಾಗಿ ಸುರಿಯುವುದು. ತುದಿಯಲಿ ತಾನೇ ಬಂದು ನಿನ್ನ ನಿಲವ ತೋರುವನು ರಾಮು...' ಎಂದು ಮಾಣಿಕ್ಯದ ಹರಳನ್ನು ನೀಡಿ ವರ ನೀಡುತ್ತಾಳೆ. ಇದನ್ನು ಕದ್ದು ನೋಡಿದ ರಾಕ್ಷಸಗೌಡ (ಮುದಿಗೌಡ), ಮಗ ಬಾಳಗೊಂಡ ರಾತ್ರಿ ಮಲಗಿದ್ದ ವೇಳೆ ಆತ ಮುಡಿಯಲ್ಲಿಟ್ಟುಕೊಂಡಿದ್ದ ಮಾಣಿಕ್ಯದ ಹರಳನ್ನು ಅಪಹರಿಸಿ ತನ್ನ ಮುಡಿಗೇರಿಸಿಕೊಳ್ಳುತ್ತಾನೆ. ಮಾಣಿಕ್ಯ ಮುಡಿಗೇರಿದೊಡನೆ ಉನ್ಮತ್ತನಾದ ಮುದಿಗೌಡ ಮೊದಲು ಗೌಡ್ತಿಯನ್ನು ಸೇರುತ್ತಾನೆ. ಗೌಡ್ತಿಯೂ ಉನ್ಮತ್ತ ಕಾಮಿಯಾಗಿ ಹಾಡುತ್ತ ಕುಣಿಯ ತೊಡಗುತ್ತಾಳೆ. ಗೌಡ್ತಿಯ ಹಾಡು ಬಾಳಗೊಂಡನಿಗೆ ಕಮಲಿಯ ಸ್ವರವೆಂಬಂತೆ ಭಾಸವಾಗುತ್ತದೆ. ಕಮಲಿಯದೇ ಸ್ವರವೆಂದು ಕಾಮಾತುರನಾಗಿ ಹೊರಡುವಷ್ಟರಲ್ಲಿ ಮುಡಿಯೊಳಗಿನ ರತ್ನದ ನೆನಪಾಗುತ್ತದೆ. ರತ್ನವಿಲ್ಲ! ಅಷ್ಟರಲ್ಲಿ ಗೌಡ್ತಿಯನ್ನು ಸೇರಿದ ಮುದಿಗೌಡ ಹೊಲೆಯರ ಕಮಲಿಯ ಮನೆಗೆ ಬಾಳಗೊಂಡನ ರೂಪದಲ್ಲಿ ಹೋಗಿ ಅವಳನ್ನೂ ಸೇರುತ್ತಾನೆ. ಕಮಲಿಗೆ ರಾಕ್ಷಸಗೌಡನ ಈ ಕೃತ್ಯ ತಿಳಿಯುವುದಿಲ್ಲ. ಬಾಳಗೊಂಡ, ಅಪ್ಪ ಮುದಿಗೌಡನಿಂದ ಮುಡಿರತ್ನ ಪಡೆಯಲು ಕಮಲಿಯ ಮನೆಗೆ ಕುಡುಗೋಲಿನೊಂದಿಗೆ ಬರುತ್ತಾನೆ. ಮುದಿಗೌಡ ತಪ್ಪಿಸಿಕೊಳ್ಳುತ್ತಾನೆ. ಕೊನೆಗೂ ಬಾಳಗೊಂಡ ರಾಕ್ಷಸಗೌಡನನ್ನು ಕೊಂದು ಮಾಣಿಕ್ಯ ರತ್ನ ಕುಡುಗೋಲುಗಳನ್ನು ತಾನು ಪಡೆಯುತ್ತಾನೆ. ಹಾಗೆ ಮಾಣಿಕ್ಯರತ್ನವನ್ನು ಮುಡಿಗೇರಿಸಿಕೊಂಡು ತಾನೂ ಕಾಮಕೇಳಿಯಾಡುತ್ತಾನೆ. ಊರಿಡೀ ಮಳೆ ಸುರಿಯತೊಡಗುತ್ತದೆ.

ಈ ನಾಟಕದಲ್ಲಿ ಬಾಳಗೊಂಡ ನೀಚ ಅಪ್ಪ ರಾಕ್ಷಸಗೌಡನನ್ನು ಕೊಂದು ಗೆದ್ದೆನೆಂದು ಬೀಗುವುದರೊಳಗೆ ಮತ್ತೆ ಸೋಲುತ್ತಾನೆ. ಕಂಬಾರರು ನಾಟಕದೊಳಗಿನ ಸಂಕೀರ್ಣ ವಸ್ತುವನ್ನು

ಅಭಿವ್ಯಕ್ತಿಗೊಳಿಸಲು ಜನಪದ ಕಾವ್ಯ ಭಾಷೆಯನ್ನು ಹಾಗೂ ಸಣ್ಣಾಟ, ದೊಡ್ಡಾಟ, ಕೃಷ್ಣಪಾರಿಜಾತಗಳ ಹಲವು ಅಂಶಗಳನ್ನು ತಾಂತ್ರಿಕವಾಗಿ ಬಳಸಿಕೊಂಡಿದ್ದಾರೆ.

## ಜೋಕುಮಾರಸ್ವಾಮಿ (1972)

ಜೋಕುಮಾರಸ್ವಾಮಿ ಬಯಲಾಟ ಮಾದರಿಯ ನಾಟಕ. ನಾಟಕದ ಆರಂಭ ಜೋಕುಮಾರಸ್ವಾಮಿಯ ಪೂಜೆಯಿಂದ ಮೊದಲ್ಗೊಳ್ಳುತ್ತದೆ. ಫಲವಂತಿಕೆಯ ದೇವರಾದ ಜೋಕುಮಾರಸ್ವಾಮಿ ಪಡುವಲಕಾಯಿಯಲ್ಲಿ ಆವಾಹಿಸಲ್ಪಟ್ಟಿರುತ್ತಾನೆ. ಜೋಕುಮಾರ ಹುಣ್ಣಿಮೆಯೆಂದು ಸ್ವಾಮೀನ (ಪಡುವಲಕಾಯಿ ರೂಪದಲ್ಲಿನ ಜೋಕುಮಾರಸ್ವಾಮಿ) ಯಾವಾಕೆ ಪೂಜೆಗೊಳ್ಳುತ್ತಾಳೋ ಆಕೆ ಕುಮಾರಿಯಾಗಿದ್ದರೆ ಗಂಡನನ್ನೂ, ಬಂಜೆಯಾಗಿದ್ದರೆ ಮಕ್ಕಳನ್ನೂ, ಸೂಳೆಯಾಗಿದ್ದರೆ ಗಿರಾಕಿಯನ್ನೂ ಹೊಂದುವಳೆಂಬ ಪ್ರತೀತಿ. ಅಂತೆಯೇ ಜೋಕುಮಾರಸ್ವಾಮಿಯನ್ನು ಹೊಲೇರಿ ಸೂಳೇ ಶಾರಿ ಒಯ್ಯುತ್ತಾಳೆ.

ಹಿರಿಯನಾದ ಊರಿನ ಗೌಡ ಷಂಡ. ಆತ ಊರನ್ನು ಆಳುವುದಲ್ಲದೆ, ಊರಿನ ಹೆಣ್ಣುಗಳೆಲ್ಲ ತನ್ನ ಆಸ್ತಿ ಎಂದೂ, ಊರಿನ ನೆಲವೂ ತನ್ನದೇ ಎಂದು ದರ್ಪಾಡಳಿತ ನಡೆಸುತ್ತಿರುತ್ತಾನೆ. ತನ್ನ ಬಂದೂಕಿನಿಂದಲೇ ಎಲ್ಲವನ್ನೂ ಸಮತಟ್ಟು ಮಾಡುವೆನೆಂದು ಹೆದರಿಸುತ್ತಿರುವಾಗ ಬಸಣ್ಣ ಎಂಬಾತ (ನಾಟಕದ ನಾಯಕ) ಗೌಡನನ್ನು ಎದುರಿಸಿ ನಿಲ್ಲುತ್ತಾನೆ. ತನ್ನ ತಂದೆ ತನ್ನದೇ ಹೊಲದಲ್ಲಿ ರಾತ್ರಿ ಮಲಗಿದ್ದಾಗ ಸತ್ತದ್ದಕ್ಕೆ ಗೌಡನಿಂದ ವಿವರಣೆ ಕೇಳುತ್ತಾನೆ. ನಿನ್ನಪ್ಪ ಮಲಗಿದ್ದು ದೆವ್ವದ ಹೊಲದಲ್ಲಿ, ಅದಕ್ಕೇ ಸತ್ತ - ಎಂದು ಗೌಡ ವಿವರಣೆ ನೀಡಿದರೂ, ಅಪ್ಪನನ್ನು ಕೊಲೆ ಮಾಡಿಸಿದ್ದು ಗೌಡನೇ ಎಂಬ ನಿಜಸಂಗತಿ ಬಸಣ್ಣನಿಗೆ ತಿಳಿದಿದ್ದ ಕಾರಣ ಆತ ಅದನ್ನು ಒಪ್ಪುವುದಿಲ್ಲ. ಅದು ದೆವ್ವದ ಹೊಲವಲ್ಲ, ಕಾಡು ಕಡಿದು ಕಷ್ಟಪಟ್ಟು ಸಂಪಾದಿಸಿದ ಹೊಲ - ಅದನ್ನು ಅನುಭವಿಸುವ ಹಕ್ಕು ತನಗಿದೆ ಎಂದು ಹೇಳಿ ಬಸಣ್ಣ ಗೌಡನ ಬಂದೂಕನ್ನು ಒದ್ದು ಹೋಗುತ್ತಾನೆ, ಶೋಷಣೆಗೆ ಒಳಗಾದ ಗೌಡನ ಆಳು ಗುರ್ಯಾನಿಗೆ ಧೈರ್ಯ ತುಂಬಿ ಆತ ಗೌಡನನ್ನು ಸಮರ್ಥವಾಗಿ ಎದುರಿಸುವಷ್ಟು ಶಕ್ತನನ್ನಾಗಿ ಮಾಡುತ್ತಾನೆ.

ಮನೆಗೆ ಬಂದ ಗೌಡನಲ್ಲಿ ಗೌಡ್ತಿ ತನ್ನ ಬಂಜೆತನದ ನೋವನ್ನು ಹೇಳಿಕೊಂಡು, ಈ ದಿನ ಜೋಕುಮಾರ ಹುಣ್ಣಿಮೆ, ಜೋಕುಮಾರಸ್ವಾಮಿ (ಪಡುವಲಕಾಯಿ) ಪಲ್ಯ ಮಾಡಿಕೊಂಡು ತಿಂದರೆ ಮಕ್ಕಳಾಗುತ್ತದೆ. ಈ ರಾತ್ರಿ ಊಟಕ್ಕೆ ಮನೆಗೇ ಬರಬೇಕೆಂದು ಬೇಡಿಕೊಳ್ಳುತ್ತಾಳೆ.

ಆದರೆ ಜೋಕುಮಾರಸ್ವಾಮಿಯನ್ನು ಶಾರಿ ತನ್ನ ಹೊಲಗೇರಿಗೆ ಒಯ್ದಿದ್ದಾಳೆ ಎಂಬ ವಿಷಯ ಗೌಡ್ತಿಗೆ ತಿಳಿದು ಸ್ವತಹ ಆಕೆಯೇ ಹೊಲಗೇರಿಗೆ ಹೋಗುತ್ತಾಳೆ. ಶಾರಿಯಲ್ಲಿ ವಿನಂತಿಸಿ ಜೋಕುಮಾರಸ್ವಾಮಿಯನ್ನು ಪಡೆದರೂ ತನ್ನ ಗಂಡನ ಷಂಡತನವನ್ನು ಆಕೆಯಲ್ಲಿ ವರ್ಣಿಸಿ ; ನಿಜಸಂಗತಿ ತಿಳಿಸುತ್ತಾಳೆ.

ಗೌಡ್ತಿ ಜೋಕುಮಾರಸ್ವಾಮಿಯನ್ನು ಪಲ್ಲೆ ಮಾಡಿ ಗೌಡನ ದಾರಿ ಕಾಯುತ್ತಿರುತ್ತಾಳೆ. ಆದರೆ ಹೊಲದ ವಿಷಯದಲ್ಲಿ ಗೌಡನಿಗೂ - ಬಸಣ್ಣನಿಗೂ ಮಾತು ನಡೆದು "ಜೋಕುಮಾರ ಹುಣ್ಣಿಮೆಯಾದ ಇಂದು ಬೆಳಗಿನತನಕ ಯಾರು ಹೊಲದಲ್ಲಿ ಮಲಗುತ್ತಾರೋ ಅವರಿಗೆ ಹೊಲ

ಸೇರಬೇಕು' ಎಂದು ಗೌಡ ಷರತ್ತು ಹಾಕುತ್ತಾನೆ. ಬಸಣ್ಣನನ್ನು ಮೋಸದಿಂದ ಕೊಲೆ ಮಾಡುವ ಉದ್ದೇಶ ಗೌಡನದ್ದು. ಬಸಣ್ಣ ಗೌಡನ ಷರತ್ತಿಗೊಪ್ಪುತ್ತಾನೆ. ಗೌಡನೂ ತನ್ನ ಊಟ ಹೊಲಕ್ಕೆ ಕಳಿಸುವಂತೆ ಗೌಡ್ತಿಗೆ ಹೇಳಿಕಳಿಸಿ, ತಾನು ಹೊಲದಲ್ಲಿ ಮಲಗದೆ ಶಾರಿಯ ಮನೆಯಲ್ಲಿ ಮಲಗುತ್ತಾನೆ. ಗೌಡನ ಆದೇಶದಂತೆ ಆತನ ಆಳುಗಳು ಬಸಣ್ಣನನ್ನು ಮುಗಿಸಲು ಆತನ ಮೇಲೇರುತ್ತಾರೆ. ಆದರೆ ಬಸಣ್ಣ ಅವರನ್ನೆಲ್ಲ ಹೊಡೆದೋಡಿಸಿ ಅವರಿಂದ ಕಸಿದುಕೊಂಡಿದ್ದ ಗೌಡನ ಕಂಬಳಿಯನ್ನು ಹೊದ್ದುಕೊಂಡು ಮಲಗುತ್ತಾನೆ. ಗೌಡನಿಗಾಗಿ ಊಟ ತಂದ ಗೌಡ್ತಿ ಬಸಣ್ಣನನ್ನು ಗೌಡ ಎಂದು ತಪ್ಪಾಗಿ ತಿಳಿದು ತಾನೇ ಉಣಿಸುತ್ತಾಳೆ. ಊಟ ಮುಗಿದೊಡನೆ ಜೋಕುಮಾರಸ್ವಾಮಿಯ ಪ್ರಭಾವಕ್ಕೆ ಒಳಗಾದ ಬಸಣ್ಣ ಗೌಡ್ತಿಯನ್ನು ಸೇರಲು ಬಲವಂತ ಮಾಡಿ ಆಕೆಯ ಸೆರಗೆಳೆಯುತ್ತಾನೆ. ಗೌಡ್ತಿಗೆ ನಿಜ ಸಂಗತಿ ಅರಿವಾಗಿ ಗಾಬರಿಯಾಗುತ್ತದೆ. ತನ್ನ ಶೀಲಹರಣ ಮಾಡಲೆತ್ನಿಸುತ್ತಿದ್ದ ಬಸಣ್ಣನನ್ನು ನಿಂದಿಸುತ್ತಾಳೆ - ನಿರಾಕರಿಸುತ್ತಾಳೆ. ಆದರೆ ಕೊನೆಗೆ ಮನಸ್ಸು ಬದಲಾಯಿಸಿ ಬಸಣ್ಣನನ್ನು ಕೂಡುತ್ತಾಳೆ. ಗೌಡ್ತಿ ಬಸಿರಾಗುತ್ತಾಳೆ. ಗೌಡನಿಗೆ ಬಸಿರಿನ ಗುಟ್ಟು ತಿಳಿಯುತ್ತದೆ. ಬಸಣ್ಣನನ್ನು ಗೌಡ ಆಳುಗಳಿಂದ ಹೊಡೆಸಿ ಸಾಯಿಸುತ್ತಾನೆ. ಗೌಡ್ತಿ ತಪ್ಪಿಸಿಕೊಳ್ಳುತ್ತಾಳೆ.

ಫಲವತ್ತಿನ ಸಂಕೇತವಾದ ಜೋಕುಮಾರಸ್ವಾಮಿ ಕತೆಯೊಂದಿಗೆ, 'ಉಳುವವನಿಗೆ ಭೂಮಿ' ಎಂಬ ಸಮಾಜವಾದಿ ಘೋಷಣೆ ಮತ್ತು ಪೌರುಷತ್ವ ಉಳ್ಳವನಿಗೆ - ಹೆಣ್ಣನ್ನು 'ಒಲಿಸಿ ಆಳುವ ಹಕ್ಕಿದೆ' ಎಂಬ ಸಂದೇಶವನ್ನು ಈ ನಾಟಕದಲ್ಲಿ ಹೊಂದಿಸಲಾಗಿದೆ. ಜಾನಪದ ದೇವತೆ ಜೋಕುಮಾರಸ್ವಾಮಿ ತನ್ನ ಮುಕ್ತ ಪ್ರಣಯದಿಂದ ದುರಂತದ ಸಾವನ್ನಪ್ಪುವಂತೆ, ಜೋಕುಮಾರಸ್ವಾಮಿಯನ್ನು ಆವಾಹಿಸಿಕೊಂಡು ಬಸಣ್ಣನೂ ದುರಂತದ ಸಾವನ್ನು ಕಾಣುತ್ತಾನೆ. ಮಣ್ಣು ಮತ್ತು ಹೆಣ್ಣುಗಳನ್ನು ತನ್ನ ಸುತ್ತಲಿಟ್ಟುಕೊಂಡು ಪೊಳ್ಳು ದರ್ಪ ಆಡಂಬರವನ್ನು ಮೆರೆಯುತ್ತಿದ್ದ ಗೌಡನ ಅಹಂನ್ನು ಬಸಣ್ಣ ಮತ್ತು ಗುರ್‍ಯಾ ಒಟ್ಟಾಗಿ ಮುರಿಯಲು ಪಡೆಯುವ ಈ ಧೈರ್ಯ - ಸಮಾಜವಾದ ಮತ್ತು ಪ್ರಜಾಪ್ರಭುತ್ವದ ಕೊಡುಗೆ. ಆದರೂ ಇಲ್ಲಿ ಕೊನೆಗೆ ಊಳಿಗಮಾನ್ಯ ವ್ಯವಸ್ಥೆಯೇ ಬಲಶಾಲಿಯಾಗುತ್ತದೆ. ಜಮೀನ್ದಾರಿ ವ್ಯವಸ್ಥೆಗೆ ಸಡ್ಡು ಹೊಡೆದು ನಿಂತ ಬಸಣ್ಣ ತನ್ನ ಜೀವನ ತೆರಬೇಕಾಗುತ್ತದೆ.

## ಚಾಳೀಶ (1973)

'ಚಾಳೀಶ'ವೂ ಒಂದು ಅಸಂಗತ ನಾಟಕ. ಮಧ್ಯಮ ವರ್ಗದ ಗೋವಿಂದ - ಕಾಶಿ ದಂಪತಿಗಳು ವಾಸ್ತವವನ್ನು ಇಷ್ಟ ಪಡದವರು. ವಾಸ್ತವದಲ್ಲಿ ಸಿಗಲಾರದ್ದನ್ನು ಕಾಲ್ಪನಿಕ ಜಗತ್ತಿನಲ್ಲಿ ತಮ್ಮದಾಗಿಸಿಕೊಂಡು ಸಮಾಧಾನ ಪಡುವ ದಂಪತಿಗಳಿವರು. ಆ ದಂಪತಿಗಳು ಧರಿಸುವ ಕಪ್ಪು ಚಾಳೀಸು ವಾಸ್ತವವನ್ನು ನಿವಾರಿಸುವಂತಹದ್ದು. ಚಾಳೀಸು ಕಳಚಿದೊಡೆ ಅವರು ವಾಸ್ತವ ಸ್ಥಿತಿಗೇ ಮರಳಿ ಬರಬೇಕಾಗುತ್ತದೆ. ಚಾಳೀಸು ಧರಿಸಿಕೊಂಡು ರಾಜರಾಣಿಯಾಗಿ ಸಂಭ್ರಮಪಡುವುದು... ತಮಗಿಲ್ಲದ ಏನೇನೋ ಸುಖವನ್ನು ಕಲ್ಪಿಸಿಕೊಂಡು ಸುಖ ಪಡುವುದು... ಹೀಗೆ ಅವರ ಜೀವನ ನಡೆಯುತ್ತಿರುತ್ತದೆ.

ಈ ದಂಪತಿಗಳ ಮಧ್ಯೆಯೂ ಒಂದು ಅಸಮಧಾನದ ಎಳೆಯಿದೆ. ಗಂಡನಿಂದ ಲೌಕಿಕ ಸುಖಗಳು ದೊರೆತಿಲ್ಲ ಎಂಬ ಅಸಮಾಧಾನ ಹೆಂಡತಿಗಿದೆ. ಆಕೆ ಆ ಬಗ್ಗೆ ಮಾತೆತ್ತಿದಾಗಲೆಲ್ಲ ಆಕೆಯನ್ನು ಎದುರಿಸಿ ಸಮಸ್ಯೆಯನ್ನು ಪರಿಹರಿಸುವ ಸಾಮರ್ಥ್ಯವಿಲ್ಲದ್ದರಿಂದ ತಕ್ಷಣ ವಾಸ್ತವದಿಂದ ಪಾರಾಗಲು ಗಂಡ ಚಾಳೀಸಿನ ಮೊರೆ ಹೋಗುತ್ತಾನೆ.

ಒಂದು ಬಾರಿ ಚಾಳೀಸು ಧರಿಸಿಕೊಂಡು ತಮಗಿಲ್ಲದ ಮಗನನ್ನು ಕಲ್ಪಿಸಿಕೊಂಡು ಖುಷಿ ಪಡುತ್ತಿರುವಾಗ ಆ ಕಾಲ್ಪನಿಕ ಮಗ ನಾಟಕದಲ್ಲಿ ನಿಜವಾಗಿಯೂ ಪ್ರವೇಶಿಸುತ್ತಾನೆ. ಆ ಮಗನ ಹೆಸರು ಶಿವಶಂಕರ. ಆತನ ಆಳು ಹುಶಪ್ಪ. ಇವ ಗೋರಿ ತೋಡುವುದರಲ್ಲಿ ಅನುಭವಸ್ಥ ಕಲ್ಪನೆಯಲ್ಲಿ ಮಗನಂತೆ ಬಂದವನು ಹೆಂಡತಿ ಆಳುಗಳೊಂದಿಗೆ ತಮ್ಮ ಮನೆಯಲ್ಲಿ ತಳ ಊರಿದಾಗ ದಿಕ್ಕು ತೋಚದವರಾಗುತ್ತಾರೆ. ಅವರನ್ನು ಪ್ರಶ್ನಿಸುವ ಧೈರ್ಯ ದಂಪತಿಗಳಿಗಿಲ್ಲ. ಕಲ್ಪನೆಗಳು ಅವರನ್ನು ಹೆದರಿಸತೊಡಗಿದಾಗ ಯಾಕಾಗಿ ನಾವು ಚಾಳೀಸು ಹಾಕಿದೆವೋ... ವಾಸ್ತವವನ್ನು ಎದುರಿಸಲೇಬೇಕಿತ್ತು ಎಂದು ದಂಪತಿಗಳು ಅಂದುಕೊಳ್ಳುತ್ತ ತಮ್ಮ ಪಾಲಿನ ವಾಸ್ತವವನ್ನು ಎದುರಿಸಲೇಬೇಕೆಂಬ ನಿರ್ಧಾರಕ್ಕೆ ಬರುತ್ತಾರೆ. ಕಲ್ಪನೆ-ಕಾಲ್ಪನಿಕ ಜಗತ್ತಿಗಿಂತ ವಾಸ್ತವವೇ ಎಷ್ಟೋ ಮೇಲು ಎಂಬ ಸೂತ್ರ ಈ ನಾಟಕದಲ್ಲಿದೆ.

## ಸಂಗ್ಯಾಬಾಳ್ಯಾ ಅನಬೇಕೋ ನಾಡೊಳಗ (1975)

ಬೆಂಗಳೂರಿನ 'ಪ್ರತಿಮಾರಂಗ' ತಂಡಕ್ಕಾಗಿ ಕಂಬಾರರು ರಚಿಸಿದ ಮತ್ತು ನಿರ್ದೇಶಿಸಿದ 'ಸಂಗ್ಯಾಬಾಳ್ಯಾ'ದ ರಂಗ ಪ್ರತಿಯಿದು. ಜನಪದರ ಬಯಲಾಟದ 'ಸಂಗ್ಯಾಬಾಳ್ಯಾ'ವನ್ನು ಹವ್ಯಾಸಿ ರಂಗಭೂಮಿಗೆ ಅದರಲ್ಲೂ ನಗರದ ಜನರ ಅಭಿರುಚಿಗೆ ತಕ್ಕಂತೆ ನಾಟಕವಾಗಿಸುವಲ್ಲಿ ಕಂಬಾರರು ಯಶಸ್ವಿಯಾಗಿದ್ದಾರೆ. ಹವ್ಯಾಸಿ ರಂಗಭೂಮಿ ಜಡಗಟ್ಟಿದ್ದ ಸಂದರ್ಭದಲ್ಲಿ 'ಜೋಕುಮಾರಸ್ವಾಮಿ'ಯ ಪ್ರಯೋಗ ಹೇಗೆ ರಂಗಭೂಮಿಗೊಂದು ಹೊಸ ಆಯಾಮ - ಲವಲವಿಕೆಯನ್ನು ತಂದುಕೊಟ್ಟಿತೋ ಅದೇ ಉತ್ಸಾಹವನ್ನು ಮತ್ತೆ ರಂಗಭೂಮಿಗೆ ತರಲು ಈ ನಾಟಕ ಪ್ರಯೋಗದಿಂದ ಸಾಧ್ಯವಾಯಿತು. ಕುರ್ತಕೋಟಿಯವರೊಂದಿಗೆ ತಾವು ಸಂಪಾದಿಸಿದ್ದ 'ಸಂಗ್ಯಾಬಾಳ್ಯಾ' ಪಠ್ಯವನ್ನಾಧರಿಸಿದ ಈ ರಂಗಪ್ರತಿಯಲ್ಲಿ ಸ್ಪಷ್ಟ ಕಥಾ ನಿರೂಪಣೆಯಿದ್ದು, ಇಲ್ಲಿ ಆಶು ಸಂಭಾಷಣೆಗಳಿಗೆ ಸ್ಪಷ್ಟ ಲಿಖಿತ ರೂಪ ನೀಡಿರುವುದರಿಂದ ಹಾಗೂ ನಾಟಕ ಪ್ರಯೋಗದಲ್ಲಿ ವಿಶೇಷ ರಂಗತಂತ್ರ ಪರಿಕರಗಳ ಅಳವಡಿಕೆಯಿಂದಾಗಿ ಜನಪದ ರಂಗಕೃತಿಯಾಗಿದ್ದೂ ಹೊಸ ರೂಪವನ್ನು ಪಡೆದುಕೊಂಡಿತು. ಉತ್ತರ ಕರ್ನಾಟಕದ ರಂಗಭೂಮಿಯನ್ನಷ್ಟೇ ಆಳುತ್ತಿದ್ದ ಈ ಜನಪದ ಸಣ್ಣಾಟ - ಸಂಗ್ಯಾಬಾಳ್ಯಾ-ವು ಈ ರಂಗಪ್ರತಿಯ ಮೂಲಕ ಇಡೀಯ ಕರ್ನಾಟಕದ ರಂಗಭೂಮಿಗೆ ತಲುಪಲು ಕಂಬಾರರು ಕಾರಣರಾದರು.

## ಜೈ ಸಿದ ನಾಯಕ (1975)

ಜಮೀನ್ದಾರಿ ವ್ಯವಸ್ಥೆಯನ್ನು ಮಟ್ಟ ಹಾಕಿದ ಹೊಸ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಯತ್ನಿಸುವ ಹಳ್ಳಿಯ 'ಕತೆ' ಇದು. ಬರಗಾಲ ಮತ್ತು ದೇಸಾಯಿಗಳ ಮಿತಿಮೀರಿದ ದೌರ್ಜನ್ಯದಿಂದ ಊರವರು ಗುಳೆ ಹೊರಡುವ ಸಿದ್ಧತೆಯಲ್ಲಿದ್ದಾರೆ. ಎಲ್ಲರಂತೆ ಗುಳೆ ಹೊರಡುವ ಸಿದ್ಧತೆಯಲ್ಲಿದ್ದ

ಉರಿನಿಂಗನ ಮನೆ ಮೇಲೆ ದೇಸಾಯಿ ದಾಳಿ ಮಾಡಿಸುತ್ತಾನೆ. ತನಗೆ ಬರಬೇಕಾದ ಬಾಕಿ ಎಂಟು ನೂರು ರೂಪಾಯಿಗಳನ್ನು ಕೂಡಲೇ ಕೊಡಬೇಕು ಇಲ್ಲವೇ ಹೆಂಡತಿ ಚಿನ್ನಿಯನ್ನು ತನಗೆ ಒಪ್ಪಿಸಬೇಕು - ಎಂಬ ಷರತ್ತು ದೇಸಾಯಿಯದ್ದು. ಷರತ್ತಿಗೆ ಒಪ್ಪದ ಉರಿನಿಂಗನನ್ನು ಆತನ ಹೆಂಡತಿ ಸಮೇತ ಹೆಡೆಮುರಿಕಟ್ಟಿ ತನ್ನಲ್ಲಿಗೆ ಕರೆದೊಯ್ಯುತ್ತಾನೆ.

ಊರಲ್ಲಿ ಇಂತಹ ಅನ್ಯಾಯ ನಡೆಯುತ್ತಿರುವಾಗ ಬೆಳಗಾವಿಗೆ ಶಾಲೆ ಕಲಿಯಲು ಹೋದ ಸಿದ ನಾಯ್ಕ ಊರಿಗೆ ಮರಳುತ್ತಾನೆ. ಬೆಳಗಾವಿ ನಗರದಲ್ಲಿ ಓದಿದವನಾದ್ದರಿಂದ ತಲೆ ತುಂಬ ಪ್ರಜಾಪ್ರಭುತ್ವ - ಸಮಾಜವಾದದ ಕನಸನ್ನು ತುಂಬಿಕೊಂಡಿದ್ದ ಆತ ಗುಳೇ ಹೊರಟವರನ್ನು ತಡೆದು ನಿಲ್ಲಿಸಿ ದೇಸಾಯಿ ವಿರುದ್ಧವೇ ಅವರನ್ನು ಸಂಘಟಿಸುತ್ತಾನೆ. ಸಿದನಾಯ್ಕನನ್ನು ದೇಸಾಯಿ ಆಮಿಷ ತೋರಿಸಿ ತನ್ನ ಕಡೆ ಸೆಳೆಯಲು ಪ್ರಯತ್ನಿಸುತ್ತಾನೆ. ಸಿದನಾಯ್ಕ ಒಪ್ಪುವುದಿಲ್ಲ. ಕೊನೆಗೊಮ್ಮೆ ದೇಸಾಯಿ ವಾಡೇ ಮೇಲೆ ಜನರ ಆಕ್ರಮಣ ನಡೆಯುತ್ತದೆ. ದೇಸಾಯಿಯನ್ನು ಜನಸಮೂಹ ಕೊಂದು ಹಾಕುತ್ತದೆ, 'ಜೈ ಸಿದನಾಯ್ಕ' ಎಂದು ಘೋಷಣೆ ಕೂಗುತ್ತದೆ. ಜನನಾಯಕನಾದ ಸಿದನಾಯ್ಕ, 'ಇಲ್ಲಿ ಎಲ್ಲರೂ ಪ್ರಭುಗಳು, ಎಲ್ಲರು ಪ್ರಜೆಗಳು, ಎಲ್ಲರು ಎಲ್ಲರಿಗಾಗಿ ಬದುಕೋಣ' ಎಂದು ಹೇಳುತ್ತ ಊರು ನಡೆಸುವುದಕ್ಕಾಗಿ ತನ್ನನ್ನು ಸೇರಿಸಿಕೊಳ್ಳುತ್ತ ಐದು ಮಂದಿಯ ಕಮಿಟಿ ಮಾಡುತ್ತಾನೆ.

ಇದುವರೆಗೂ ದೇಸಾಯಿಯ ವಶದಲ್ಲಿದ್ದ ಭೂಮಿಯನ್ನು ಊರವರು ಹಂಚಿಕೊಳ್ಳಬೇಕು. ಆದರೆ ಹಾಗೆ ಮಾಡಿದರೆ ಕೊಲೆಗೆ ಭೂಮಿ ಪಡೆದವರೆಲ್ಲ ಕಾರಣರಾಗುತ್ತಾರೆ ಎಂಬ ಭಯ. ಅದಕ್ಕೊಂದು ಉಪಾಯ ಹೂಡುತ್ತಾರೆ. ಮಕ್ಕಳಿಲ್ಲದೇ ಸತ್ತ ದೇಸಾಯಿ ತನ್ನ ಭೂಮಿಯನ್ನೆಲ್ಲ ಸಿದನಾಯ್ಕನ ಹೆಸರಿಗೇ ಬರೆದಿಟ್ಟಿದ್ದಾನೆಂಬ ಖೋಟಾ ಕಾಗದದ ಪತ್ರ ತಯಾರಿಸಿ ಪೋಲೀಸರಿಗೆ ತೋರಿಸುವುದು. ನಂತರ ನಿಧಾನಕ್ಕೆ ಭೂಮಿ ಹಂಚಿಕೊಳ್ಳುವುದು. ಸಿದನಾಯ್ಕ ಈ ರೀತಿಯ ಉಪಾಯಕ್ಕೆ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾನೆ. ಆದರೆ ನಂತರ ಆ ಭೂಮಿಯನ್ನು ಜನರಿಗೆ ಹಂಚಿಕೊಡಲು ಸಿದನಾಯ್ಕ ನಿರಾಕರಿಸುತ್ತಾನೆ. ಜನರು ಸಿದನಾಯ್ಕನ ಮೇಲೆ ಸಿಟ್ಟಿಗೇಳುತ್ತಾರೆ. ಆತನ ಮೇಲೆ ಹಲ್ಲೆ ನಡೆಸಲು ಸಿದ್ಧರಾಗುತ್ತಾರೆ.

ಊರ ಜನರು ಚಿನ್ನಿಗೂ ಸಿದನಾಯ್ಕನಿಗೂ ಸಂಬಂಧ ಕಲ್ಪಿಸಿ ಮಾತನಾಡುತ್ತಾರೆ. ಊರಿನಿಂಗನೂ ಹೆಂಡತಿ ಚಿನ್ನಿಯನ್ನು ತಿರಸ್ಕರಿಸುತ್ತಾನೆ. ಸಿಟ್ಟಿಗೆದ್ದ ಸಿದನಾಯ್ಕ ಮರುದಿನ ಸೇರಿದ ಊರಸಭೆಯಲ್ಲಿ ಚಿನ್ನಿಯನ್ನು ಸ್ವೀಕರಿಸುವಂತೆ ಉರಿನಿಂಗನಿಗೆ ಒತ್ತಾಯಿಸುತ್ತಾನೆ. ಆತ ಒಪ್ಪದಿದ್ದಾಗ ಸಿಟ್ಟಿನ ಆವೇಶದಲ್ಲಿ ಉರಿನಿಂಗನ ಕತ್ತು ಹಿಸುಕಿ ಕೊಲ್ಲುತ್ತಾನೆ. ತನ್ನ ಬಂದೂಕಿನವರಿಗೆ 'ಈ ನಾಯಿ ಉರಿನಿಂಗನನ್ನು ಈ ಊರಿನ ಅತಿ ಎತ್ತರದ ಮರಕ್ಕೆ ತೂಗು ಹಾಕಿ ಗುಂಡು ಹಾರಿಸಿ... ಯಾರಾದರೂ ಹೀಗ್ಯಾಕೆ ಎಂದು ಕೇಳಿದರೆ ಅವರನ್ನೂ ಕೊಂದು ಬಿಡಿ... ನನ್ನ ಹೆಸರಿಗೆ ಜೈ ಅನ್ನದವರನ್ನು ಗುಂಡುಹಾಕಿ ಕೊಲ್ಲಿ, ಚಿನ್ನಿ ಎಲ್ಲಿದ್ದರೂ ಎತ್ತಿ ತಂದು ನನ್ನ ವಾಡೇದಾಗ ಇಡಿ...' ಎಂದು ಆಜ್ಞಾಪಿಸುತ್ತಾನೆ.

ನಗರದಿಂದ ಸಮಾಜವಾದದ ಕನಸನ್ನು ಹೊತ್ತು ಬಂದು, ಹಳ್ಳಿಯಲ್ಲಿ ಬಲವಾಗಿ ಬೇರು ಬಿಟ್ಟಿದ್ದ ಜಮೀನ್ದಾರಿ ವ್ಯವಸ್ಥೆಯ ಬೇರನ್ನೆ ಕಿತ್ತು ಕ್ರಾಂತಿ ಮಾಡಿದ ಸಿದನಾಯ್ಕ ತನ್ನ ಕೈಗೆ ದೇಸಗತಿ

ಅಧಿಕಾರ ಬಂದೊಡನೆ ಸರ್ವಾಧಿಕಾರಿ ದೇಸಾಯಿಯಂತೆ ಮಾರ್ಪಡುವುದು - ಈ ವ್ಯವಸ್ಥೆಯ ವ್ಯಂಗ್ಯವಾಗಿದೆ. ನಾಟಕದ ಪಾತ್ರವಾದ ಕೆಂಚ, ದೇಸಗತಿಯನ್ನು ಸಿದನಾಯ್ಕನಿಗೆ ಒಪ್ಪಿಸುವ ಮಾತು ಬಂದಾಗ ಹೇಳುವ ಮಾತು "ದೇಸಗತಿ ಒಮ್ಮೆ ಕೈಗೆ ಸಿಕ್ಕಿತೆಂದರ ನರಮನಿಶ್ಯಾ ಹಾಂಗS ಹಿಂಗS ಬದಲಾದಾನಂತ ಹೇಳಕಾಗಾಣೆಲ್ಲರೀ" ಎಂದು ಹೇಳುವುದು, ಉಳ್ಳವ ಊಳಿಗಮಾನ್ಯ ವ್ಯವಸ್ಥೆಯ ಹರಿಕಾರ ಆಗಿಯೇ ಆಗುತ್ತಾನೆ ಎಂಬ ಸತ್ಯವನ್ನು ಧ್ವನಿಸುತ್ತದೆ.

## ಕಾಡುಕುದುರೆ (1976)

ಉತ್ಕಟ ಕಾಮದ ಸಂಕೇತವಾಗಿರುವ ಕಾಡುಕುದುಗೆ ಮತ್ತು ಅದರ ಯಜಮಾನ ಹುಲಿಗೊಂಡ ಈನಾಟಕದ ಕೇಂದ್ರಬಿಂದುವಾಗಿದ್ದಾರೆ. ಕುಟುಂಬವೊಂದರ ವಿಧವೆ ಗೌಡ್ತಿ ದರ್ಪದ ಸ್ವಭಾವದಾಕೆ. ಆಕೆಗೆ ಮೂವರು ಹೆಣ್ಣುಮಕ್ಕಳು. ಹಿರಿಯವಳು ಪಾರ್ವತಿ, ನಡುವಿನವಳು ಶೀಲಾ, ಕಿರಿಯವಳು ಚಂಪಿ. ಪಾರ್ವತಿಯ ಗಂಡ ಹುಲಿಗೊಂಡ ಮನೆ ಅಳಿಯ. ಸದಾ ಕಾಡು ಕುದುರೆಯನ್ನು ಪಳಗಿಸುವುದರಲ್ಲಿ - ಅದರಲ್ಲಿ ಸವಾರಿ ಮಾಡುವುದರಲ್ಲಿ ಆತ ಆಸಕ್ತ. ಹೆಂಡತಿ ಪಾರ್ವತಿ ಕ್ಷಯ ರೋಗಿ. ಆಕೆಯ ಹೆಸರಿನಲ್ಲಿ ಸಾಕಷ್ಟು ಆಸ್ತಿ ಇದೆ. ಆದರೆ ಆತನಿಗೆ ಆಕೆಯಿಂದ ಸುಖವಿಲ್ಲ. ಹುಲಿಗೊಂಡನಿಗೆ ಕಿರಿಯ ನಾದಿನಿ ಚಂಪಿಯೆಂದರೆ ಇಷ್ಟ. ಒಮ್ಮೆ ಆತ ಚಂಪಿಯನ್ನು ಕುದುರೆ ಮೇಲೆ ಕೂಡಿಸಿಕೊಂಡು ತಿರುಗಾಡಿ ಬರುತ್ತಾನೆ. ಇದನ್ನು ಕೇಳಿ ಪಾರ್ವತಿ ಕೋಪಗೊಳ್ಳುತ್ತಾಳೆ. ಆದರೂ ಚಂಪಿ-ಹುಲಿಗೊಂಡರ ಪ್ರಣಯ ಎಗ್ಗಿಲ್ಲದೆ ಮುಂದುವರಿಯುತ್ತದೆ. ಚಂಪಿ ಬಸಿರಾಗುತ್ತಾಳೆ. ಅತ್ತ ಗೌಡ್ತಿ ಚಂಪಿಗೆ ಮದುವೆ ನಿಶ್ಚಯ ಮಾಡುತ್ತಾಳೆ. ಮದುವೆ ಸಂಭ್ರಮ ನಡೆದ ದಿನ ರಾತ್ರಿ ಹುಲಿಗೊಂಡ ಚಂಪಿಯೊಂದಿಗೆ ಕಾಡುಕುದುರೆ ಏರಿ ಮನೆಬಿಟ್ಟು ಹೊರಡುತ್ತಾನೆ. ಗೌಡ್ತಿಗೆ ಈ ವಿಚಾರ ತಿಳಿದು ಗುಂಡು ಹಾರಿಸುತ್ತಾಳೆ. ಗುಂಡಿನ ಗುರಿ ತಪ್ಪುತ್ತದೆ. ಪ್ರೇಮಿಗಳಿಬ್ಬರೂ ಕಾಡು ಸೇರಿ ತಮ್ಮ ಗುರಿ ಸಾಧಿಸಿಕೊಳ್ಳುತ್ತಾರೆ.

ಊಳಿಗಮಾನ್ಯ ವ್ಯವಸ್ಥೆಯನ್ನು ಪೋಷಿಸುವ ಕುಟುಂಬವೊಂದರ ನೈತಿಕ ಅಧಃಪತನದ ಚಿತ್ರಣದೊಂದಿಗೆ, ಆಸ್ತಿ ಅಂತಸ್ತುಗಳನ್ನು ತಿರಸ್ಕರಿಸಿ, ಜೀವ ವಿರೋಧಿ ನೀತಿ-ನಿಯಮ-ಸಂಪ್ರದಾಯಗಳನ್ನು ಮುರಿದು, ಅತ್ಯಂತ ಸಹಜ ಪ್ರೇಮದ ನೆಲೆಯಲ್ಲಿ ಪ್ರೇಮಿಗಳು ಒಂದಾಗುವುದು ಈ ನಾಟಕದ ಮುಖ್ಯ ಧೋರಣೆಯಾಗಿದೆ.

## ನಾಯೀಕತೆ (1976)

ಈ ನಾಟಕದ ಕಥಾವಸ್ತು ಇದು : ಶಿವಾಪುರದ ಸಾಹುಕಾರ ಸೋಮಣ್ಣ - ಆತನ ಜೀತದಾಳು ನಾಯಿಮಗ. ಸಾಹುಕಾರನಿಗೆ ಈ ಪರಮ ವಿಧೇಯ ನಾಯೀಮಗನ ಮೇಲೆ ಅತ್ಯಂತ ತಿರಸ್ಕಾರ. ಮಹಾ ವಿಷಯಲಂಪಟನಾದ ಸಾಹುಕಾರನಿಗೆ ಊರ ಹೆಣ್ಣುಗಳ ಮೇಲೆಲ್ಲ ಕಣ್ಣು. ಒಮ್ಮೆ ಚೆಲುವಿ ಎಂಬಾಕೆ ಈತನ ಕಾಮದಾಟಕ್ಕೆ ಬಲಿಯಾಗಿ ಬಾವಿಗೆ ಬಿದ್ದು ಸಾಯುತ್ತಾಳೆ. ಆಕೆಯ ಗಂಡ ಮಾರುತಿ ಸಾಹುಕಾರನ ಮನೆಗೆ ಆಳಾಗಿ ಬಂದು ಸೇರುತ್ತಾನೆ. ಒಮ್ಮೆ ಊರಿಗೆ ಬಂದ ದಾಸರಾಟದ ಶಾರಿ (ಸಂಗೀತ)ಗೆ ಸಾಹುಕಾರ ಮನಸೋತು - ಆಕೆಯ ತಂಡವನ್ನು ಕರೆತಂದು ತೋಟದ

ಮನೆಯಲ್ಲಿಟ್ಟುಕೊಳ್ಳುತ್ತಾನೆ. ಶಾರಿಯ ತಂದೆ ತಾಯಿಗೆ ರೊಕ್ಕದ ಮೇಲೆ ಕಣ್ಣು-ಆಕೆಯನ್ನು ಸಾಹುಕಾರನಿಗೆ ಒಪ್ಪಿಸಲು ಸಿದ್ಧರಾಗಿದ್ದಾರೆ. ಆದರೆ ಶಾರಿ ಅದಕ್ಕೊಪ್ಪುತ್ತಿಲ್ಲ. ಆಕೆ ಅಲ್ಲಿಂದ ಓಡಿ ಪಾರಾಗಲು ಪ್ರಯತ್ನಿಸಿದಾಗ ಸಾಹುಕಾರ ತನ್ನ ಆಳು ನಾಯೀಮಗನನ್ನು ಅಲ್ಲಿ ಕಾವಲಿಡುತ್ತಾನೆ. ದಿನನಿತ್ಯದ ಒಡನಾಟದಿಂದ ಶಾರಿಗೂ - ನಾಯಿಮಗನಿಗೂ ಆತ್ಮೀಯತೆ ಬೆಳೆಯುತ್ತದೆ. ನಿಧಾನಕ್ಕೆ ಶಾರಿ ಆತನ ಕೀಳರಿಮೆಯನ್ನು ಹೋಗಲಾಡಿಸಿ ಆತನಲ್ಲಿ ಸ್ವಾಭಿಮಾನ, ಆತ್ಮಸ್ಥೈರ್ಯವನ್ನು ಬಡಿದೆಬ್ಬಿಸುತ್ತಾಳೆ. ಸೋಮಣ್ಣ ತನ್ನ ಹೆಂಡತಿಯಲ್ಲಿ ನಿರಾಸಕ್ತನಾಗಿ ಆಕೆಯನ್ನು ನಿರ್ಲಕ್ಷಿಸಿ ಶಾರಿಯನ್ನು ಮದುವೆಯಾಗಲು ತಯಾರಿ ನಡೆಸುತ್ತಾನೆ. ಆದರೆ ಶಾರಿ ನಾಯಿಮಗನೇ ತನ್ನ ಗಂಡ ಎಂದು ಘೋಷಿಸುತ್ತಾಳೆ. ಸಾಹುಕಾರ ಸಿಟ್ಟಿನಿಂದ ಶಾರಿಯ ಮೇಲೇರಿ ಹೋಗುತ್ತಾನೆ. ಸಾಹುಕಾರನ ಬಲಾತ್ಕಾರಕ್ಕೆ ನಾಯೀಮಗ ಸೆಟೆದು ನಿಲ್ಲುತ್ತಾನೆ. ನಿಷ್ಠಾವಂತ ಆಳು ತನ್ನ ಮೇಲೆ ಕೈಮಾಡಿದ್ದನ್ನು ಕಂಡು ಸಾಹುಕಾರ ಆಘಾತಕ್ಕೊಳಗಾಗುತ್ತಾನೆ. ನಾಯೀಮಗ - ಶಾರಿ ಓಡಿ ಹೋಗಬೇಕೆನ್ನುವಷ್ಟರಲ್ಲಿ ಮನೆಯ ಆಳು ಮಾರುತಿ ಸಾಹುಕಾರನ ಹೆಂಡತಿಯನ್ನು ಓಡಿಸಿಕೊಂಡು ಹೋದ ಸುದ್ದಿ ಬರುತ್ತದೆ. ಶಾರಿ ನಾಯೀಮಗನನ್ನು ಸುಟ್ಟು ಬಿಡಲೆಂದು ಎತ್ತಿದ್ದ ಬಂದೂಕನ್ನು ಗೌಡ ಕೆಳಗಿಳಿಸಿ ಖಿನ್ನನಾಗುತ್ತಾನೆ.

ಊಳಿಗಮಾನ್ಯ ವ್ಯವಸ್ಥೆಯಲ್ಲಿ ನಡೆಯುವ ಕ್ರೌರ್ಯ, ಶ್ರೇಣೀಕೃತ ಸಮಾಜದ ವಿರುದ್ಧ ನೆಲೆಗಳಲ್ಲಿ ಅತಿರೇಕಗಳನ್ನು ಬಿಚ್ಚಿಡುತ್ತ ಈ ನಾಟಕ ಚಲಿಸುತ್ತದೆ. ಪ್ರೀತಿ, ಪ್ರೇಮ ದುಡ್ಡಿಗಿಂತ ದೊಡ್ಡದು ಎಂಬ ಆಶಯವುಳ್ಳ ಈ ನಾಟಕವನ್ನು ಜನಪದ ತಂತ್ರಗಳಿಂದ ನಾಜೂಕಾಗಿ ಹೆಣೆಯಲಾಗಿದೆ.

ಈ ನಾಟಕದೊಳಗಿನ 'ಕಥೆಗಾರ' ನಾಟಕ ಪರಂಪರೆಯ ಸೂತ್ರಧಾರನಾಗಿ ಮತ್ತು ನಾಟಕದ ನಿರ್ದೇಶಕನಾಗಿಯೂ ಕಾರ್ಯನಿರ್ವಹಿಸುವುದು ಒಂದು ವಿಶೇಷ ತಂತ್ರ. ಶಾರಿ ಮತ್ತು ನಾಯೀಮಗ ಇಬ್ಬರೂ, ಪಾರಂಪರಿಕ - ಸಾಂಪ್ರದಾಯಿಕ ವ್ಯವಸ್ಥೆಯನ್ನು ಮುರಿದು, ಶೋಷಕ ಸಂಸ್ಕೃತಿಯನ್ನು ಸೀಳುವ ಶಕ್ತಿಗಳಾಗುವ ಕಾರಣ ಈ ನಾಟಕ ಬಹುಮುಖ್ಯವೆನಿಸುತ್ತದೆ.

## ಖರೋಖರ (1977)

ಈ ನಾಟಕದ ಪ್ರಮುಖ ಪಾತ್ರ ಹೆಡ್‌ಕಾನ್‌ಸ್ಟೇಬಲ್ 'ಹದಿನೆಂಟು'. ನಾಟಕದ ಆರಂಭದಲ್ಲಿ ಈತನೆ ಸೂತ್ರಧಾರನಂತೆ ನಿಂತು ಪ್ರೇಕ್ಷಕರಿಗೆ ತನ್ನನ್ನು ಪರಿಚಯಿಸುತ್ತಾನೆ. ತಾನು ಪೋಲೀಸ್ ಆಗುವುದಕ್ಕೆ ಕಾರಣವೇನಿತ್ತು? ಬಾಲ್ಯದಲ್ಲಿ ಒಬ್ಬ ಪೋಲೀಸ್ ಪೇದೆ ತನ್ನ ಮೇಲೆ ಹೇಗೆ ಪ್ರಭಾವ ಬೀರಿದ್ದ? ಆ ಪೋಲೀಸಿನ ದಿರಿಸು - ಆತನ ಬೀಡಿ, ಆತನ ಗಮ್ಮತ್ತಿನ ಬಗ್ಗೆ ವರ್ಣಿಸುವ ಹೆಡ್‌ಕಾನ್‌ಸ್ಟೇಬಲ್ ನಂಬರ್ ಹದಿನೆಂಟು, ತಾನು ಕಾನ್‌ಸ್ಟೇಬಲ್ ಆದ ದಿನ ತಿರುಪತಿ ತಿಮ್ಮಪ್ಪ ತನ್ನ ಕನಸಲ್ಲಿ ಬಂದು 'ಖರೆ' (ಸತ್ಯ)ಯ ಬಗ್ಗೆ ಕೊಟ್ಟ ಎಚ್ಚರಿಕೆ - ಹಿತವಚನವನ್ನು ನೆನಪಿಸಿಕೊಳ್ಳುತ್ತಾನೆ. ತಿರುಪತಿ ತಿಮ್ಮಪ್ಪ ಕನಸಲ್ಲಿ ಕೊಟ್ಟ ಹಿತವಚನವನ್ನು ತಪ್ಪದೆ ಪಾಲಿಸಿಕೊಂಡು ಬಂದ 'ಹದಿನೆಂಟು' ಲಂಚ ತಿನ್ನದ, ಸುಳ್ಳು ಹೇಳದ, ಸತ್ಯವನ್ನೆಂದೂ ಬಿಡಲಾರದ ಅಪರೂಪದ ಪ್ರಾಮಾಣಿಕ ಪೋಲೀಸ್. ಪೋಲೀಸ್ ಹದಿನೆಂಟುವಿನ ಸಮಗ್ರ ವ್ಯಕ್ತಿತ್ವ ನಾಟಕದ ವಸ್ತುವಿನ ಜತೆಗೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ.

ಆಡುಮಾತಿನ ಸೊಗಸು ಮತ್ತು ಹಾಸ್ಯಲೇಪನವುಳ್ಳ ಸಂಭಾಷಣೆ ನಾಟಕಕ್ಕೆ ಸಾಕಷ್ಟು ಪುಷ್ಟಿ ನೀಡಿದೆ. ಖರೆ ಅಂದರೆ ಯಾವುದು? ಅದನ್ನು ತೀರ್ಮಾನಿಸುವುದು ಹೇಗೆ? ಎಂಬ ಗಂಭೀರ ವಿಚಾರವನ್ನು ಹಾಸ್ಯದ ವಾತಾವರಣದಲ್ಲಿಟ್ಟು ನಾಟಕ ರಚಿಸಲಾಗಿದೆ.

## ಮತಾಂತರ (ಭಾರತಾಂಬೆ) (1978)

ಸಮಕಾಲೀನ ಭಾರತದಲ್ಲಿ ಕೋಮುವಾದಿಗಳು - ರಾಜಕೀಯ ಶಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಅಮಾಯಕರನ್ನು ಹೇಗೆ ಬಲಿಪಶುಗಳನ್ನಾಗಿರಿಸಿಕೊಳ್ಳುತ್ತಾರೆ, ಜಾತಿ-ವರ್ಗವನ್ನು ಮುಂದಿಟ್ಟುಕೊಂಡು ತಮ್ಮ ಸಮಯ ಸಾಧಕತನವನ್ನು ಹೇಗೆ ಸಾಧಿಸಿಕೊಳ್ಳುತ್ತಾರೆ ಎಂಬ ವಸ್ತುವನ್ನೊಳಗೊಂಡ ನಾಟಕವಿದು.

ಹರಿಜನ ಮಹಿಳೆ ರಾಮಕ್ಕನ ಮಗಳು ಬಂಗಾರಿ. ರಾಮಕ್ಕನ ತಮ್ಮ ಕರಿನಿಂಗ ಬಂಗಾರಿಯ ಗಂಡ. ಮಂತ್ರಿಯ ಮಗ ಬಶೀರ್, ಬಂಗಾರಿಯನ್ನು ಕೆಡಿಸುತ್ತಾನೆ. ಕೇಸು ಪೋಲೀಸು ಠಾಣೆ ಹತ್ತುತ್ತದೆ. ಇದೇ ನೆಪದಲ್ಲಿ ಹಿಂದೂ-ಮುಸ್ಲಿಂ ಗಲಭೆ ನಡೆಯುತ್ತದೆ. ಇಲ್ಲಿ ಅನ್ಯಾಯಕ್ಕೊಳಗಾಗಿ ಅವಮಾನದಿಂದ ನಲುಗುತ್ತಿರುವ ಬಡ ಕುಟುಂಬ, ಬಂಗಾರಿ ಮುಖ್ಯವಾಗದೆ 'ಕೋಮು ದ್ವೇಷ'ವೇ ಮುಖ್ಯವಾಗುತ್ತದೆ. ಮುಸ್ಲಿಮರ ಮೇಲೆರಗಲು ಇದೇ ಅವಕಾಶವೆಂದು ಹಿಗ್ಗುವ ಹಿಂದೂಗಳು, ತಮ್ಮ ಕಾರ್ಯ ಸಾಧನೆಗಾಗಿ ರಾಮಕ್ಕನ್ನು ಸಿಡಿದೇಳುವಂತೆ ಭಾವನಾತ್ಮಕವಾಗಿ ಹುರುಪು ನೀಡುವ ಹಿಂದೂವಾದಿಗಳು, ರೊಕ್ಕದ ಆಮಿಷ ತೋರಿಸಿ ನ್ಯಾಯದ ಬಾಯಿ ಮುಚ್ಚಿಸಲು ಪ್ರಯತ್ನಿಸುವ ಮುಸ್ಲಿಂ ಪರ ಸ್ವಾರ್ಥಿಗಳು, ಕೊನೆಗೆ ತನ್ನ ರಾಜಕೀಯ ಭವಿಷ್ಯವನ್ನು ಚಿಂತಿಸಿ ರಾಮಕ್ಕನನ್ನು ತನ್ನ ಚತುರ ಮಾತುಗಾರಿಕೆಯಿಂದ ಒಪ್ಪಿಸಿ ಆಕೆಯಿಂದ ಸಹಿ ಮಾಡಿಸಿಕೊಳ್ಳುವ ಮಂತ್ರಿ - ಇವೆಲ್ಲವನ್ನೂ ಸಮಕಾಲೀನ ಭಾರತದ ಸಮಸ್ಯೆಗಳ ಹಿನ್ನೆಯಲ್ಲಿಟ್ಟು ಹೆಣೆದಿರುವ ನಾಟಕವಿದು.

ತಮ್ಮ ಸ್ವಾರ್ಥಸಾಧನೆಗೆ ಎಂಥದ್ದೇ ರೀತಿಯ ಸಮಾಜದ್ರೋಹ, ತಲೆಹಿಡುಕತನದ ಕೆಲಸಕ್ಕೂ ಇಳಿಯಲು ಹೇಸದ ಭಾರತಾಂಬೆಯ ಮಕ್ಕಳ ಗುಣವನ್ನು ಈ ನಾಟಕವು ಪ್ರತಿಬಿಂಬಿಸುತ್ತದೆ.

## ಹರಕೆಯ ಕುರಿ (1983)

ಕಂಬಾರರ ಈ 'ಹರಕೆಯ ಕುರಿ' ನಾಟಕ ಅವರ ಹಿಂದಿನ ಇತರ ನಾಟಕಗಳಿಗಿಂತ ತೀರಾ ಭಿನ್ನವಾದ ಕಥಾವಸ್ತುವುಳ್ಳದ್ದು. ಸಮಕಾಲೀನ ರಾಜಕೀಯದೊಳಗಿನ ಅಸಾಮಾನ್ಯ ಕ್ರೌರ್ಯ, ಕುತಂತ್ರ, ಕುಟಿಲತೆ, ಸ್ವಾರ್ಥತನ ಮತ್ತು ಆ ದುಷ್ಟ ರಾಜಕೀಯ, ಜನಸಾಮಾನ್ಯರಲ್ಲಿ ಹುಟ್ಟುಹಾಕುವ ಭಯ, ನಡೆಸುವ ಅಮಾನವೀಯ ಜೀವವಿರೋಧಿ ದುರಾಕ್ರಮಣ - ದುರಂತವನ್ನು ಈ ನಾಟಕವು ಬಿಚ್ಚಿಡುತ್ತಾ ಸಾಗುತ್ತದೆ.

ರಾಜಕೀಯದ ಕೊಳಕಲ್ಲಿ ಪಳಗಿದ, ಅತೀ ಅಧಿಕಾರದಾಸೆ ಮಹತ್ವಾಕಾಂಕ್ಷೆಯುಳ್ಳ ಕ್ಷುದ್ರ ರಾಜಕಾರಣಿ ರುದ್ರಪ್ಪ ರಾಜಕೀಯದಲ್ಲಿ ತನ್ನ ನಿರಂಕುಶ ಬೆಳವಣಿಗೆಗಾಗಿ ಮತ್ತು ಅಧಿಕಾರ ಆಡಳಿತದ ಉತ್ತುಂಗಕ್ಕೇರಲು ತನ್ನ ಪ್ರತಿಸ್ಪರ್ಧಿ ರಾಜಕಾರಣಿ ಹಾಗೂ ರಾಜಕೀಯ ಪಕ್ಷವನ್ನೂ

ಉರುಳಿಸಲು ಮಾಡುವ ಸಂಚು, ನಡೆಸುವ 'ಬಲಿಕಾರ್ಯ'ವನ್ನು, ಅದಕ್ಕೆ ಬಲಿಯಾಗುವ 'ಹರಕೆಯ ಕುರಿ'ಗಳ ಒಳ ಮನಸ್ಸು, ವೇದನೆ, ಹಪಹಪಿಕೆ, ಅಸಹಾಯಕತೆ, ಸಂದರ್ಭಗಳ ಚಿತ್ರಣವನ್ನು ನಾಟಕಕಾರರು ಸಮರ್ಥವಾಗಿ, ಶಕ್ತಿಯುತವಾಗಿ, ಇಲ್ಲಿ ಬಿಂಬಿಸಿದ್ದಾರೆ.

ಮಹಾನಗರದೊಳಗೆ ಸಂತೃಪ್ತ ಸಹಜ ಜೀವನವನ್ನು ನಡೆಸುತ್ತಿದ್ದ ಮಧ್ಯಮವರ್ಗದ ಉದ್ಯೋಗಸ್ಥ ದಂಪತಿಗಳಾದ ಪ್ರಕಾಶ-ಸರೋಜರ ಮನೆ ಹಾಗೂ ಬದುಕನ್ನೇ ಅವರಿಗರಿವಿಲ್ಲದಂತೆ ತನ್ನ ರಾಜಕೀಯ ಚದುರಂಗದಾಟಕ್ಕಾಗಿ ಆಯ್ದುಕೊಳ್ಳುವ ರುದ್ರಪ್ಪ ತನ್ನ ಬಲಗೈ ಬಂಟ ಸಿದ್ಧಲಿಂಗು ಎಂಬಾತನ ಮೂಲಕ ತನ್ನ 'ಬಲಿಕಾರ್ಯ'ವನ್ನು ಆರಂಭಿಸುತ್ತಾನೆ. ಸೃಜನಶೀಲತೆ, ಪ್ರೀತಿ ಪ್ರಣಯ ನಂಬಿಕೆ ವಿಶ್ವಾಸಗಳೇ ತುಂಬಿದ ಆ ದಂಪತಿಗಳ ಸುಂದರ ಬದುಕನ್ನು ಹೊಸಕಬೇಕಾದ ಕ್ರಿಯೆ ಆರಂಭವಾದ ಅಂದು... ಕತ್ತಲಾಗುತ್ತಿದ್ದಂತೆ ಪ್ರಕಾಶ ಚುನಾವಣಾ ಭಾಷಣ ಕೇಳಲು ಹೊರಗೆ ಹೋಗಿರುತ್ತಾನೆ. ಮಡದಿ ಸರೋಜ ಅಡುಗೆ ಕೆಲಸದಲ್ಲಿ ತಲ್ಲೀನಳಾಗಿದ್ದಾಳೆ. ಅಷ್ಟರಲ್ಲಿ ರುದ್ರಪ್ಪನ ಬಂಟ ಸಿದ್ಧಲಿಂಗ, ರುದ್ರಪ್ಪನ ಪಕ್ಷದವನೇ ಆದ, ಮುಂದೆ ಆತನಿಗೆ ಪ್ರತಿಸ್ಪರ್ಧಿಯಾಗಬಹುದಾದ ಗ್ಲಾಮರಸ್ ರಾಜಕಾರಣಿ ಶ್ರೀಕಾಂತನನ್ನು ಕೊಲೆ ಮಾಡಿ ಸರೋಜಳ ಮನೆಗೆ ನುಗ್ಗಿ ಆಕೆಯನ್ನು ಯಾರಿಗೂ ಈ ವಿಷಯ ತಿಳಿಸಬಾರದೆಂದು ಬೆದರಿಸಿ ಅಡಗಲು ಆಶ್ರಯ ಪಡೆಯುತ್ತಾನೆ. ತಾನೊಬ್ಬ ರಾಜಕೀಯ ಕೊಲೆಗಾರ, ತನ್ನೀ ಕೊಲೆಯಿಂದ ತನ್ನ ಮುಖಂಡನನ್ನು ಹೇಗೆ ರಾಜಕೀಯ ಗದ್ದುಗೆಗೇರಿಸಬಲ್ಲೆ... ಎಂಬ ಹಮ್ಮಿನಿಂದ ಆಶ್ರಯ ನೀಡಿದ ಸರೋಜಳ ಮುಂದೆ, 'ತಾನು ರುದ್ರಪ್ಪನ ಕೈಯ ಕತ್ತಿ, ರುದ್ರಪ್ಪನ ಸಂಚು, ಲೆಕ್ಕಾಚಾರ, ಆಣತಿಯಂತೆ ಈ ಬಲಿಕಾರ್ಯ ನಡೆದಿದೆ ಎಂಬುದನ್ನು ಮರೆತು ಅಥವಾ ಆ ಕ್ಷಣದ ಕಾರ್ಯಸಾಧನೆಯ ಅಮಲಿನಲ್ಲಿ ಮರೆತವನಂತೆ, ಹೆಣ್ಣು-ಹೆಂಗಸು - ಮಧ್ಯಮವರ್ಗದ ಆಸೆ, ಆಕಾಂಕ್ಷೆ, ಭಾವನೆಗಳನ್ನು ಗೇಲಿಮಾಡುತ್ತ ವ್ಯಂಗ್ಯ ವಿಡಂಬನಾತ್ಮಕವಾಗಿ ಮಾತನಾಡುವುದು ಇಲ್ಲಿ ನಾಟಕಕಾರರು ಸೃಷ್ಟಿಸಿದ ಒಂದು ಪರಿಣಾಮಕಾರಿ ಸನ್ನಿವೇಶ. ಇಲ್ಲಿ ಕೊಲೆಗಾರ ಅಡಗಿರುವ ವಿಚಾರವನ್ನು ಗಂಡನಿಗೆ ತಿಳಿಸಿದ್ದಲ್ಲಿ ಇಂದು ಆತನದ್ದೂ ಕೊಲೆಯಾಗುತ್ತದೆ - ಎಂಬ ಸಿದ್ಧಲಿಂಗುವಿನ ಬೆದರಿಕೆಯಿಂದಾಗಿ ಸರೋಜ ಮನೆಗೆ ಬಂದ ಗಂಡನನ್ನು ಉಪಾಯದಿಂದ ತಡೆದು ನಿಲ್ಲಿಸಿ ಕೊಲೆಗಾರನಿಗೆ ಪರಾರಿಯಾಗಲು ಅವಕಾಶ ಮಾಡಿಕೊಡುತ್ತಾಳೆ.

ಇತ್ತ ವಿರೋಧಪಕ್ಷದ ಮುಖಂಡ ರುದ್ರಪ್ಪನ ಲೆಕ್ಕಾಚಾರದಂತೆ, ಶ್ರೀಕಾಂತನ ಕೊಲೆಯ ಅಪವಾದ ಆಡಳಿತ ಪಕ್ಷದ ಮೇಲೆ ಹೋಗಿ, ರುದ್ರಪ್ಪನ ಪಕ್ಷ ಚುನಾವಣೆಯಲ್ಲಿ ಗೆಲ್ಲುತ್ತದೆ. ಶ್ರೀಕಾಂತನ ಕೊಲೆಯಿಂದಾಗಿ ರುದ್ರಪ್ಪನಿಗೆ ಪ್ರಬಲ ಪ್ರತಿಸ್ಪರ್ಧಿರ ಇಲ್ಲವಾದರೂ ಮುಖ್ಯಮಂತ್ರಿ ಗಾದಿಗೆ ಕಣ್ಣಿಟ್ಟಿರುವ ದಾನಪ್ಪ ಮತ್ತು ಕೃಷ್ಣಪ್ಪನವರನ್ನು ರಾಜಕೀಯವಾಗಿ ಮುಗಿಸುವ ಸಂಚನ್ನು ರುದ್ರಪ್ಪ ರೂಪಿಸುತ್ತಾನೆ. ದಾನಪ್ಪನನ್ನು ಮುಗಿಸಲು ಅಮಾಯಕಳಾದ ಸರೋಜಳನ್ನು ಬಳಸುವ ಸಂಚಂತೂ ಅತ್ಯಂತ ನೀಚ ಹಾಗೂ ಜೀವವಿರೋಧಿ ಸಂಚು. ರುದ್ರಪ್ಪ ಗಂಡನಿಲ್ಲದ ವೇಳೆ ಸರೋಜಳ ಮೇಲೆ ಸೂಳೆಗಾರಿಕೆಯ ಸುಳ್ಳು ಆರೋಪ ಬರುವ ಸಂದರ್ಭ ಸನ್ನಿವೇಶವನ್ನು ಸೃಷ್ಟಿಸಿ ಆರಕ್ಷಕರಿಂದ ಸೂಳೆಗಾರಿಕೆಯ ಕೇಸು ಹಾಕಿಸಿ, ಅದರಿಂದ ಪಾರಾಗಲು ದಾನಪ್ಪನ ಬಳಿ ಹೋಗುವಂತೆ ಮನವೊಲಿಸಿ ಕಳುಹಿಸಿಕೊಡುತ್ತಾನೆ. ಅಲ್ಲಿ ಕೃತಜ್ಞತಾಭಾವದಿಂದ ಸರೋಜ ದಾನಪ್ಪನ ಪಾದಮುಟ್ಟಿ ನಮಸ್ಕರಿಸುತ್ತಿದ್ದಾಗ ಆ ಸಂದರ್ಭದ ಫೋಟೋ ತೆಗೆದು ದಾನಪ್ಪನ

ಮಾನವನ್ನು ಹರಾಜು ಹಾಕುವ ವ್ಯವಸ್ಥೆಯನ್ನು ರುದ್ರಪ್ಪ ನಿರ್ಮಿಸುತ್ತಾನೆ. ದಾನಪ್ಪನ ಮಾನ ಹರಾಜಾಗಲು ಕೃಷ್ಣಪ್ಪನೇ ಕಾರಣ ಎನ್ನುವ ಮತ್ತೊಂದು ತಂತ್ರವನ್ನೂ ರುದ್ರಪ್ಪನು ಹೆಣೆದು ದಾನಪ್ಪನನ್ನು ನಂಬಿಸುವುದರಲ್ಲಿ ಯಶಸ್ವಿಯಾಗಿ ಅವರಿಬ್ಬರನ್ನೂ ಪ್ರತ್ಯೇಕಿಸುತ್ತಾನೆ. ಆದರೆ ಈ ರಾಜಕೀಯ ಸಂಚುಗಳೆಲ್ಲ 'ವಂಡರ್‌ಫುಲ್' ಅಂತ ಒಮ್ಮೆ ನಮಗೆ ಅನಿಸಿದರೂ, ಎಲ್ಲೋ ಒಂದು ಕಡೆ ಸಿನಿಮೀಯವಾಗಿದೆ ಎಂದೂ ಅನಿಸುತ್ತದೆ. ತನ್ನ ಬಂಟ ಸಿದ್ಧಲಿಂಗುವನ್ನು ಕೊಲೆ ಗೈಯುವ ಸಂಚು ರೂಪಿಸಲು, ರುದ್ರಪ್ಪ ಸರೋಜಳ ಮೇಲೆ ಬಂದಿರುವ ಅಪವಾದದ ಲಾಭವನ್ನು ಈಗ ಸಂಪೂರ್ಣವಾಗಿ ಬಳಸತೊಡಗುತ್ತಾನೆ. ಗಂಡ-ಹೆಂಡಿರ ಮಧ್ಯೆ ಬೆಸೆದಿರುವ ವಿಶ್ವಾಸ ನಂಬಿಕೆ ಪ್ರೀತಿಯ ಎಳೆಗಳನ್ನು ರುದ್ರಪ್ಪ ನಯವಾಗಿ ಹೊಸಕಿ ಹಾಕುವುದಕ್ಕಾಗಿ ಪ್ರಕಾಶನಲ್ಲಿ, ಹೆಣ್ಣು - ಹೆಂಡತಿಯ ನೈತಿಕತೆಯ ಬಗ್ಗೆ ಆಡುವ ಮಾತುಗಳು ಅಮಾನವತೆ, ಕ್ರೌರ್ಯದ ಪರಮಾವಧಿಯಂತಿದೆ. ಆದರೆ ನುಚ್ಚುನೂರಾದ ಆ ಮುಗ್ಧ ಮನಸ್ಸುಗಳ ಮಧ್ಯೆ ಕೊಲೆಗಾರ ಸಿದ್ಧಲಿಂಗು 'ಹೀರೋ' ಆಗಿ ಮರು ಆಗಮಿಸಿ, ರುದ್ರಪ್ಪನ ನೀಚತನದ ಬಗ್ಗೆ ಆತನ ಸಂಚು ಕುತಂತ್ರಗಳ ಬಗ್ಗೆ ಸುಳಿವು ನೀಡುವುದು ನಾಟಕಕಾರರು ನೀಡಿರುವ ಜೀವಪರವಾದ ಮತ್ತು ಪರಿಣಾಮಕಾರಿಯಾದ ತಿರುವು.

ತಾನು ರುದ್ರಪ್ಪನ ನೆಚ್ಚಿನ ಬಂಟನೆಂದು ಭ್ರಮಿಸಿದ್ದ ಸಿದ್ಧಲಿಂಗುವಿಗೆ ರುದ್ರಪ್ಪನೊಳಗಿನ ಕ್ಷುದ್ರತನ, ಅಮಾನವತೆ, ಕ್ರೌರ್ಯ, ನೀಚತನದ ಅರಿವಾಗಿ, ತನ್ನ ವ್ಯಕ್ತಿತ್ವವನ್ನು ಬದಲಿಸಿಕೊಂಡ ಸಿದ್ಧಲಿಂಗು, ಅಮಾಯಕ ದಂಪತಿಗಳ ಬದುಕನ್ನು ಹೊಸಕುತ್ತಿರುವ ರುದ್ರಪ್ಪನ ನಿಜಮುಖವನ್ನು ಬಯಲಿಗೆಳೆಯಲು ಸಿದ್ಧನಾಗಿ ಬರುವುದು ಈ ನಾಟಕದಲ್ಲಿ ಪ್ರಮುಖ ಹಾಗೂ ಪರಿಣಾಮಕಾರಿಯಾದ ಮತ್ತೊಂದು ತಿರುವು. ತಾನು ಎಸಗಿದ ಕೊಲೆಯ ಮೂಲಕ ರುದ್ರಪ್ಪನ ರಾಜಕೀಯಕ್ಕೆ ಮೊದಲ 'ಹರಕೆಯಕುರಿ'ಯಾಗುವ ಸಿದ್ಧಲಿಂಗು ಅತಂತ್ರರಾದ ದಂಪತಿಗಳ ಮುಂದೆ ರುದ್ರಪ್ಪನ ಮುಖವಾಡವನ್ನು ಕಳಚಿ ಹಾಕಿದೊಡನೆ ಆತ ರುದ್ರಪ್ಪನ ಬಂಟರ ಗುಂಡಿಗೆ ಬಲಿಯಾಗುತ್ತಾನೆ. ರುದ್ರಪ್ಪ ಮಾಡಿಸಿರುವ ರಾಜಕೀಯ ಕೊಲೆಯ ಸತ್ಯ ಅಲ್ಲೇ ಸತ್ತು ಬೀಳುತ್ತದೆ.

ಸಮಕಾಲೀನವಾದ ರಾಜಕೀಯವನ್ನು ವಸ್ತುವಾಗಿ ಪಡೆದಿರುವ ಈ ನಾಟಕ ಕೃತಿಗೆ ಮುನ್ನುಡಿ ಬರೆದಿರುವ ಕುರ್ತಕೋಟಿಯವರು ಹೀಗೆ ಹೇಳುತ್ತಾರೆ. "ಕಂಬಾರರ ಮೊದಲಿನ ನಾಟಕಗಳಿಗಿಂತ ಇಲ್ಲಿ ಹೆಚ್ಚಿನ ನಾಟ್ಯಕೌಶಲ್ಯ ಕಾಣುತ್ತಿದೆಯೆಂದು ನನ್ನ ಅನಿಸಿಕೆಯಾಗಿದೆ. ಇದಕ್ಕೆ ಕಾರಣ ಹೀಗೂ ಇರಬಹುದು. ತಮ್ಮ ವಾಡಿಕೆಯ ಗೌಡ, ಸೂಳೆ ಮತ್ತು ಮಿಂಡರ ಜಗತ್ತನ್ನು ಬಿಟ್ಟು ಕಂಬಾರರು ಇನ್ನೂ ಹೆಚ್ಚು ಪರಿಷ್ಕೃತವಾದ ಮತ್ತು ನಿರ್ದಯವಾದ ರಾಜಕೀಯ ಲೋಕವನ್ನು ಪ್ರವೇಶಿಸಿದ್ದು. ಹಳ್ಳಿಗಾಡಿನ ರಾಜಕೀಯ ವ್ಯಕ್ತಿನಿಷ್ಠವಾದುದು ಮತ್ತು ಅಲ್ಲಿಯ ಸೇಡು ಮತ್ತು ಕೊಲೆಗಳು ಜೀವನ ಮೌಲ್ಯಗಳ ಕದಡುವಿಕೆಯಿಂದ ಹುಟ್ಟಿ ಬಂದವುಗಳು. ಆದರೆ ಆಧುನಿಕ ರಾಜಕೀಯ, ಆಧುನಿಕ ಯಾಂತ್ರಿಕತೆಯಿಂದ ಅವ್ಯಕ್ತವಾದ ಶಕ್ತಿಯ ಅದೃಶ್ಯಯ ಜಾಲವಾಗಿದೆ". (ಹರಕೆಯ ಕುರಿ : ಮುನ್ನುಡಿ : ಕೀರ್ತಿನಾಥ ಕುರ್ತಕೋಟಿ).

'ಹರಕೆಯ ಕುರಿ'ಯ ವಸ್ತು ಬೆಂಗಳೂರಿನದ್ದು. ಆ ಕಾರಣಕ್ಕೆ ನಾಟಕದ ವಸ್ತುವಿಗೆ ತಕ್ಕಂತೆ ಬೆಂಗಳೂರು ನಗರದ ಭಾಷೆಯನ್ನು ಕಂಬಾರರು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

## ಸಾಂಬಶಿವ ಪ್ರಹಸನ (1985)

ಇದೊಂದು ಪ್ರಹಸನ. ಹಾಸ್ಯವೇ ಪ್ರಹಸನದ ಉದ್ದೇಶ. ಇಲ್ಲಿ ಹಾಸ್ಯವೂ-ವ್ಯಂಗ್ಯ ವಿಡಂಬನೆಯ ಜತೆಗೆ ಹೆಣೆದುಕೊಂಡು, ಕಾಲ್ಪನಿಕ ಪಾತ್ರಗಳ ಮೂಲಕ ಸಮಕಾಲೀನ ರಾಜಕೀಯ ವ್ಯವಸ್ಥೆಯೊಳಗಿನ ಅವ್ಯವಸ್ಥೆ ಪೊಳ್ಳುತನ - ಭ್ರಷ್ಟತೆ, ಭಟ್ಟಂಗಿತನ - ಇವೆಲ್ಲದಕ್ಕೂ ಕನ್ನಡಿ ಹಿಡಿಯಲು ಪ್ರಯತ್ನಿಸಿದೆ.

ಸಾಂಬ-ಶಿವ ತಂದೆ ಮಕ್ಕಳು. ಅಪ್ಪ ವಿಧುರ. ಸಾಂಬನಿಗೆ ಮದುವೆಯಾಗುವ ಆತುರ. ಮಗ ಶಿವನಿಗೂ ಅಷ್ಟೇ ಆತುರ. ಗಣೇಶನ ಗುಡಿಯೆದುರು ಕೂತು ಮದುವೆಯ ವಿಚಾರವಾಗಿ ಪರಸ್ಪರ ಕಚ್ಚಾಡುತ್ತಿರುವಾಗ ಗಣೇಶ ಪ್ರತ್ಯಕ್ಷನಾಗಿ ಅವರಿಬ್ಬರಿಗೂ ಎರಡು ಅದ್ಭುತ ಕೊಡುಗೆಗಳನ್ನು ನೀಡುತ್ತಾನೆ. ಸಾಂಬನಿಗೆ ಮಾಂತ್ರಿಕ ಮುತ್ತೊಂದನ್ನು ಕೊಟ್ಟು ಆ ಮುತ್ತನ್ನು ಆತ ಬಾಯಲ್ಲಿಟ್ಟುಕೊಂಡರೆ ಹೆಂಗಸಾಗುವನೆಂದೂ ಹೇಳಿ, ಶಿವನಿಗೆ ಮಾಯದ ಕತ್ತೆಯೊಂದನ್ನು ಕೊಡುತ್ತಾನೆ. ಮುಂದೆ ಗಣೇಶನ ಇವರೆಡು ಅದ್ಭುತ ಕೊಡುಗೆಗಳು ನಾಟಕವನ್ನು ಬೆಳೆಸುತ್ತಾ ಹೋಗುತ್ತವೆ.

ಶಿವ ಊರ ಸಾಹುಕಾರನ ಮಗಳು ಗಜನಿಂಬೆಯನ್ನು ಪ್ರೀತಿಸುತ್ತಿರುತ್ತಾನೆ. ಆಕೆಯೊಂದಿಗೆ ಮಗನ ಪ್ರೀತಿಯನ್ನು ಬಲಪಡಿಸುವುದಕ್ಕಾಗಿ ಅಪ್ಪ ಸಾಂಬ ತನ್ನ ಬಾಯಲ್ಲಿ ಮುತ್ತನ್ನಿಟ್ಟು ಹಸಿರು ಸೀರೆ-ನೀಲಿ ರವಿಕೆಯುಟ್ಟ 'ಬಂಗಾರಿ' ಎಂಬ ಹೆಸರಿನ ಹೆಣ್ಣಾಳಾಗಿ ಗಂಜನಿಂಬೆಯ ಮನೆ ಸೇರುತ್ತಾನೆ.

ಆ ಸಂದರ್ಭದಲ್ಲಿ ಆ ಊರಿನ ರಾಜನಿಗೆ ಒಂದು ಹೆಣ್ಣಿನ ಹುಚ್ಚು ಅಮರಿದೆ. ಆತ ಎಲ್ಲಿಯೋ ನೋಡಿದ್ದ ಹಸಿರು ಸೀರೆ... ನೀಲಿ ರವಿಕೆಯ ಚೆಲುವೆಯೊಬ್ಬಳನ್ನು ನೆನಪಿಸಿಕೊಳ್ಳುತ್ತ ಹುಚ್ಚನಾಗಿದ್ದಾನೆ. ಆ ಚೆಲುವೆಯನ್ನು ಅರಸುತ್ತ ಬಂದ ರಾಜನ ಕಾರಭಾರಿ ಬಂಗಾರಿಯ - ದಿರಿಸನ್ನು ಕಂಡು, ಆಕೆಯೇ ರಾಜಕಂಡ ಚೆಲುವಿ ಎಂದು ತಿಳಿದು ಆಕೆಯನ್ನು ರಾಜನಲ್ಲಿಗೆ ಕರೆದೊಯ್ಯುವ ಏರ್ಪಾಡು ನಡೆಸುತ್ತಾನೆ.

ಆ ರಾಜ ಮಹಾಮೂರ್ಖ. ತನ್ನ ಸುತ್ತ 'ಬಿಳಿಯಾನೆ' ಎಂಬ ಸ್ವಾರ್ಥ ಅಧಿಕಾರಿ ಹಾಗೂ 'ಚಿಲ್ಲರೆ' ಎಂಬ ಚಾಡಿಕೋರ ಅಧಿಕಾರಿಯನ್ನು ಇಟ್ಟುಕೊಂಡು ರಾಜ್ಯವಾಳುತ್ತಿದ್ದಾನೆ. ಸಮಕಾಲೀನ ರಾಜಕೀಯದಲ್ಲಿ ಅಥವಾ ಮೂರ್ಖರಾಜನಿಗೊಬ್ಬನಿಗೆ ಅತ್ಯಗತ್ಯವಾಗಿ 'ಭೂಷಣವಾಗಿ' ಇರಬೇಕಾದ ಸ್ವಾರ್ಥಅಧಿಕಾರಿ ಮತ್ತು ಚಾಡಿಕೋರ ಅಧಿಕಾರಿಗಳಾದ 'ಬಿಳಿಯಾನೆ' ಮತ್ತು 'ಚಿಲ್ಲರೆ' ಎಂಬ ಈ ಎರಡು ಅಧಿಕಾರಿ ಪಾತ್ರಗಳು ಮುಂದೆ ಪ್ರಹಸನಕ್ಕೆ ಸಾಕಷ್ಟು ವ್ಯಂಗ್ಯಹಾಸ್ಯ ವಿಡಂಬನೆಯನ್ನು ಒದಗಿಸಿಕೊಡುತ್ತವೆ. ಈ ಅಧಿಕಾರಿಗಳು ಪ್ರಜೆಗಳನ್ನು ರಾಜನಿಂದ ದೂರವಿರಿಸುತ್ತಾರೆ. ಅರಮನೆಗೆ ಬಂದ ಪ್ರಜೆಗಳಿಗೆ ರಾಜನು ದರ್ಶನ ಕೊಡದೆ ತನ್ನ ಕಾಲನ್ನು ಕಿಟಕಿಯಿಂದ ಹೊರ ಹಾಕಿ ದರ್ಶನ ಕೊಡುತ್ತಾನೆ. ಜನರು ಕಾಲನ್ನು ಎಳೆಯಲಾರಂಭಿಸುತ್ತಾರೆ. ರಾಜ ಒದ್ದಾಡುತ್ತಾನೆ. ಅಷ್ಟರಲ್ಲಿ ತನ್ನ ಮಾಂತ್ರಿಕ ಕತ್ತೆಯೊಡನೆ ಅಲ್ಲಿಗೆ ಬಂದ ಶಿವ ಜನರನ್ನು ಒದ್ದೋಡಿಸುವಂತೆ ಕತ್ತೆಗೆ ಆಜ್ಞಾಪಿಸುತ್ತಾನೆ. ಕತ್ತೆ ಆ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುತ್ತದೆ.

ತನ್ನನ್ನು ಒದ್ದಾಟದಿಂದ ಪಾರು ಮಾಡಿದ ಕತ್ತೆಯನ್ನು ರಾಜ ತನ್ನ ಪ್ರಧಾನಮಂತ್ರಿಯನ್ನಾಗಿ ನೇಮಿಸಿ 'ಡಿಂಗ್ ಡಾಂಗ್' ಎಂದು ನಾಮಕರಣ ಮಾಡುತ್ತಾನೆ. ಕತ್ತೆಯ ಯಜಮಾನ 'ಪ್ರಧಾನ ಮಂತ್ರಿ ಕತ್ತೆ'ಯ ಪಿ.ಎ. ಆಗಿ ನೇಮಕಗೊಳ್ಳುತ್ತಾನೆ. ಕತ್ತೆಯನ್ನು ಪ್ರಧಾನ ಮಂತ್ರಿ ಮಾಡುವ ಮೂಲಕ ನಾಟಕಕಾರರು ಹಿತ್ತಾಳೆಕಿವಿಯ - ಕಟ್ಟೆಹರುಕ ಮೂರ್ಖ ರಾಜ ಹಾಗೂ ಆತನ ಬಿಳಿಯಾನೆ, ಚಿಲ್ಲರೆ ಅಧಿಕಾರಿಗಳ ಆಡಳಿತಕ್ಕೆ ಯಥೋಚಿತ ನ್ಯಾಯ ಒದಗಿಸುವಂತಹ ವಿಡಂಬನಾತ್ಮಕ ಸನ್ನಿವೇಶವೊಂದನ್ನು ಸೃಷ್ಟಿಸಿರುವುದು ತುಂಬ ಅರ್ಥಪೂರ್ಣವಾದುದು.

ಇದಕ್ಕಿದ್ದಂತೆ ರಾಜನಿಗೆ, ತನ್ನ ಪ್ರಧಾನಮಂತ್ರಿಗೊಂದು ಮದುವೆ ಮಾಡುವ ಆಲೋಚನೆ-ಆಸೆ ಎದ್ದಿದೆ. ಪ್ರಧಾನಮಂತ್ರಿಯ ಪಿ.ಎ. ಅಂದರೆ ಕತ್ತೆಯ ಯಜಮಾನನಾದ ಶಿವನ ಪ್ರೇಯಸಿ ಗಜನಿಂಬೆಯ ಜೊತೆಗೆ ಕತ್ತೆಯ ಮದುವೆ ಏರ್ಪಾಡಾಗುತ್ತದೆ. ಗಜನಿಂಬೆಗೆ ಶಿವನ ಮೇಲೆ ಪ್ರೀತಿ, ಆಕೆಗೆ ಈ ಮದುವೆ ಇಷ್ಟವಿಲ್ಲ. ಆದರೆ ಗಜನಿಂಬೆಯ ಹೆತ್ತವರಿಗೆ ಪ್ರಧಾನಮಂತ್ರಿಯ ಹುದ್ದೆಯ ಮೇಲೆ ಪ್ರೀತಿ. ಪ್ರಧಾನಮಂತ್ರಿ ಕತ್ತೆಯಾದರೂ ಪರವಾಗಿಲ್ಲ ಕತ್ತೆಗೆ ಮಗಳನ್ನು ಕಟ್ಟುವ ಆತುರ. ಆ ಮದುವೆ ನಡೆಯುತ್ತದೆ. ಮದುವೆ ದಿನ ರಾಜ ವಧುವಿನ ಮುಖ ನೋಡುತ್ತಾನೆ. ಮತ್ತೆ ಅರೆಹುಚ್ಚನಾಗುತ್ತಾನೆ. ತಾನು ಅಂದು ಎಲ್ಲೋ ನೋಡಿದ ಹಸಿರು ಸೀರೆ ನೀಲಿ ರವಿಕೆಯ ಚೆಲುವೆ ಈಕೆಯೆ! ತನ್ನ ಕಾರಭಾರಿ ಅಂದು ಊರಿಡೀ ಅರಸಿ ತಂದಿರುವುದು ಬೇರೆ ಯಾರನ್ನೋ ಈಕೆಯನ್ನಲ್ಲ ಎಂದು ತಿಳಿದು ರಾಜ ಪರಿತಪಿಸುತ್ತಾನೆ. ಇಂದು ಗಜನಿಂಬೆ ಮತ್ತು ಪ್ರಧಾನಮಂತ್ರಿ ಕತೆಯ ಪ್ರಸ್ಥ. ರಾಜ ಕಾರಭಾರಿಯ ಸಹಾಯದಿಂದ ವರ ಡಿಂಗ್‌ಡಾಂಗನ್ನು ದೂರಕ್ಕಟ್ಟುವ ಏರ್ಪಾಡು ಮಾಡಿ ತಾನೇ ಆ ಕತ್ತೆ ವೇಷಧರಿಸಿ ಗಜನಿಂಬೆಯ ಪ್ರಸ್ಥದ ಕೋಣೆಗೆ ಪ್ರವೇಶಿಸುತ್ತಾನೆ. ಸಾಂಬ ಮತ್ತು ಶಿವನಿಗೆ ಈ ವಿಚಾರ ಮೊದಲೇ ರಾಜನ ವೈರಿಗಳ ಸಹಾಯದಿಂದ ತಿಳಿದು ರಾಜನ ಕತ್ತೆ ವೇಷ ಕಳಚಿ ಬೀಳುವಂತಹ ಸನ್ನಿವೇಶವೊಂದನ್ನು ಸೃಷ್ಟಿಸಿ ರಾಜನನ್ನು ಗಡಿಪಾರು ಮಾಡುತ್ತಾರೆ. ಸಾಂಬನಲ್ಲಿರುವ ಮುತ್ತನ್ನು ರಾಜನ ಕಾಯಭಾರಿ ಕುತೂಹಲದಿಂದ ತನ್ನ ಬಾಯಲ್ಲಿಟ್ಟುಕೊಂಡ ಹೆಣ್ಣಾಗುತ್ತಾನೆ. ಆತ ಸಾಂಬನೊಂದಿಗೆ ಖಾಯಂ ಹೆಣ್ಣಾಗಿ ಇದ್ದು ಬಿಡುವನು. ಶಿವ ಗಜನಿಂಬೆಯನ್ನು ಮದುವೆಯಾಗುತ್ತಾನೆ. ಕತ್ತೆಯನ್ನು ಗಣೇಶ ದೇವರು ಕತ್ತೆ ಚಿತ್ರವನ್ನಾಗಿ ಮಾರ್ಪಡಿಸುತ್ತಾರೆ...

ನಾಟಕದ ಕತೆ ತೀರಾ ಕಾಲ್ಪನಿಕವಾಗಿದ್ದು - ಕತೆಯೂ ಗಂಭೀರವಾಗಿಲ್ಲ ಎಂದು ಮೇಲ್ನೋಟಕ್ಕೆ ಅನಿಸಿದರೂ, ಹಾಸ್ಯ ಲೇವಡಿ ವ್ಯಂಗ್ಯದಿಂದಲೇ ಸಾರ್ವಕಾಲಿಕವಾದ ರಾಜಕೀಯ 'ಸತ್ಯ'ಗಳನ್ನು ಬಿಚ್ಚಿಡಬಲ್ಲ ಸಾಮರ್ಥ್ಯ ಆ ಅನಿಸಿಕೆಯನ್ನು ಗೌಣವಾಗಿಸುತ್ತದೆ.

ನಾಟಕದ ತುಂಬ ಓಡಾಡುವ ವ್ಯಂಗ್ಯ ವಿಡಂಬನೆಗಳು ಪ್ರಸುತ್ತ ರಾಜಕೀಯಲೋಕದ ವರ್ತಮಾನದ ವಾಸ್ತವವನ್ನೇ ಬಿಂಬಿಸುತಿದೆ. ನವಿರಾದ ಹಾಸ್ಯದೊಂದಿಗೆ ನಮ್ಮ ರಾಜಕೀಯ ವ್ಯವಸ್ಥೆಯ ಜತೆಗೆ ಸಾಮಾಜಿಕ ವ್ಯವಸ್ಥೆಗಳಲ್ಲಿನ ಮೌಢ್ಯ, ಕಪಟ, ಭ್ರಷ್ಟತೆಯನ್ನೂ ಈ ಪ್ರಹಸನದಲ್ಲಿ ನಾಟಕಕಾರರು ಸಾಮರ್ಥರಾಗಿ ವಿಡಂಬಿಸಿದ್ದಾರೆ.

## ಹುಲಿಯ ನೆರಳು (1990)

ಇದು ಕಂಬಾರರ ಕಥನಕಾವ್ಯ 'ಹೇಳತೇನ ಕೇಳ'ದ ನಾಟಕ ರೂಪ ಮತ್ತು ಮುಂದುವರಿದ ಭಾಗವೂ ಹೌದು. ಜನಪದ ಕತೆಯ ವಸ್ತುವನ್ನು ರೂಪಕವನ್ನಾಗಿ ಮಾಡಿಕೊಂಡು ಮನುಷ್ಯನ ಅಸ್ತಿತ್ವದ ಸತ್ಯವನ್ನು ಹುಡುಕುವ ಪ್ರಯತ್ನ ಇಲ್ಲಿದೆ.

ಶಿವಪುರದ ಗೌಡ ರಾಯಗೊಂಡ ಏಳುಪಟ್ಟೆ ಹುಲಿಯ ಬೇಟೆಗೆ ಹೊರಟಿದ್ದಾನೆ. ಆತಂಕಕ್ಕೊಳಗಾದ ಗೌಡ್ತಿ ಆತನನ್ನು ಅಡ್ಡಗಟ್ಟಿ, ರಾತ್ರಿ ಬಿದ್ದ ಕೆಟ್ಟ ಕನಸಿನ ಬಗ್ಗೆ ಹೇಳುತ್ತಾ, ಬೇಟೆಯನ್ನು ಮುಂದೂಡುವಂತೆ ಎಚ್ಚರಿಸುತ್ತಾಳೆ. ಊರ ಮಂದಿಯೂ 'ಪಾರಂಭಿ ಕರ್ರೆವ್ವ ಬೇಟೆಗಿನ್ನೂ ಅಪ್ಪಣೆ ಕೊಟ್ಟಿಲ್ಲ - ಬೇಟೆ ಬೇಡ' ಎಂದೂ ಗೋಗರೆದರೂ ಗೌಡ ಕೇಳಲಾರ ದಿನಾ ತನ್ನೂರಿನ ದನ-ಕರುಗಳನ್ನು ಧ್ವಂಸ ಮಾಡುವ ಹುಲಿ ಬೇಟೆ ಮಾಡಿಯೇ ತೀರುವೆನೆಂದು ಕಾಡಿಗೆ ಹೊರಟೇ ಬಿಡುತ್ತಾನೆ. ಕಾಡಿನಲ್ಲಿ ಹುಲಿ ರೂಪದ ರಾಕ್ಷಸ, ರಾಯಗೊಂಡನನ್ನು ಕೊಂದು, ತಾನು ರಾಯಗೊಂಡನ ರೂಪ ತಾಳಿ, ಆತನ ರಕ್ತಮಾಂಸವನ್ನು ಹೊತ್ತು ತಂದು ಊರ ಹೊರಗಿನ ಹಾಳು ಬಾವಿಗೆ ಎಸೆಯುತ್ತದೆ.

ಬೇಟೆಗೆ ಹೋದ ಗೌಡನ ನಿರೀಕ್ಷೆಯಲ್ಲಿದ್ದ ಗೌಡ್ತಿ ಮರಳಿ ಬಂದ ಗೌಡನನ್ನು (ರಾಕ್ಷಸ ಗೌಡ) ಸಂಭ್ರಮದಿಂದಲೇ ಸ್ವಾಗತಿಸುತ್ತಾಳೆ. ರಾಕ್ಷಸ ಗೌಡ ಹುಲಿಯ ದೇಹವನ್ನು ತಾನು ಹೊತ್ತು ಹಾಕಿದ ಹಾಳು ಬಾವಿಗೆ ಯಾರೂ ಇಣುಕಬಾರದೆಂದು ಡಂಗುರ ಹೊಡೆಸುತ್ತಾನೆ. ರಾಕ್ಷಸ ಗೌಡ, ರಾಯಗೊಂಡನಂತೆ ಸಹಜವಾಗಿರಲು ಯತ್ನಿಸುತ್ತಾನೆ. ಆದರೂ ಗೌಡ್ತಿಗೆ ಆತನ ವರ್ತನೆ-ನಡವಳಿಕೆಯ ಬಗ್ಗೆ ಏನೋ ಅನುಮಾನ ಊರಮಂದಿಗೂ ಅನುಮಾನ. ಬೇಟೆಯಿಂದ ಮರಳಿಬಂದ ಗೌಡ ಮೊದಲಿನಂತೆ ಊರಿನ ಬಗ್ಗೆ ಆಸಕ್ತನಾಗಿಲ್ಲ - ಊರ ತಾಯಿ ಪಾರಂಭಿ ಕರ್ರೆವ್ವನ ಬಗ್ಗೆ ಭಕುತಿಯಿಲ್ಲ ಎಂದು ಊರ ಮಂದಿ ಪಿಸುಮಾತಲ್ಲಿ ತೊಡಗಿದ್ದಾರೆ. ಗೌಡ್ತಿ ಮಗ ರಾಮಗೊಂಡನಿಗೂ ಬಲವಾದ ಅನುಮಾನ ಕಾಡುತ್ತದೆ. ತಮ್ಮೂರಿಗೆ ಏನೋ ಕೇಡುಗಾಲ ಬಂದಿದೆ ಎಂಬ ಆತಂಕ ಎಲ್ಲರನ್ನೂ ಕಾಡುತ್ತಿದೆ. ಅಷ್ಟರಲ್ಲಿ ರಾಕ್ಷಸ ಗೌಡ ಬೆಳಗಾಂ ಸಿಟಿಯವರನ್ನು ಪಾರಂಬಿ ಕಡೆಯಲು ಕರೆಸುತ್ತಾನೆ. ಪಾರಂಭಿ ಮರವನ್ನು ದೈವ ಕರ್ರೆವ್ವನಷ್ಟೇ ಆರಾಧಿಸುತ್ತಿದ್ದ ವೃದ್ಧ ಕರಿಯಜ್ಜ, ಗೌಡ್ತಿ ಮಗ ರಾಮಗೊಂಡನಲ್ಲಿ, ಧರೆಯ ಮ್ಯಾಲಿನ ಧರ್ಮ ಆರಿಹೋಗೇತ್ಯೋ ತಮ್ಮಾ ಮೊದಲಾದರ ನಿಮ್ಮಪ್ಪ ಎದ್ದಾಗ ತಾಯೀ ಅಂತಿದ್ದ ಬಿದ್ದಾಗ ತಾಯೀ ಅಂತಿದ್ದ. ಮಗ್ಗಲಾದರೂ ತಾಯೀ ಅಂತಿದ್ದ, ಬಿದ್ದಾಗ ತಾಯೀ ಅಂತಿದ್ದ. ಹುಲಿ ಬ್ಯಾಟಗಿ ಹೋಗಿ ಬಂದಾ ನೋಡು, ತಾಯೀನ ಕಸಕಡ್ಡಿ ಮಾಡಿಟ್ಟ. ಯಾವ ಭೂತ ಅವನೊಳಗೆ ಹೊಕ್ಕೈತೋ, ಇಲ್ಲಾ ಕಲಿಕಾಲ ಅವನ ಮೈ ತುಂಬೈತೋ. ನನ್ನ ಗುರುತು ಹಿಡೀವೊಲ್ಲ, ತಾಯೀ ಗುರುತು ಹಿಡೀಲಾರದವನು ನನ್ನ ಗುರುತು ಹೆಂಗ ಹಿಡಿದಾನು ಎಂದು ಗೌಡನ ಬಗ್ಗೆ ಅನುಮಾನ ವ್ಯಕ್ತಪಡಿಸುವ ಮೂಲಕ ಊರಗೌಡನ ಮಗ ರಾಮಗೊಂಡನಲ್ಲಿ ಎಚ್ಚರಿಕೆಯ ಒಂದು ಕಿಡಿಯನ್ನು ಹಚ್ಚುತ್ತಾನೆ. ಮರಕಟುಕರಿಂದ ಮರ ಧರೆಗೆ ಉರುಳಿದೊಡನೆ ಕರಿಯಜ್ಜ ತಾನೂ ಉರುಳಿಬಿದ್ದು ಸಾಯುತ್ತಾನೆ. ಹಳ್ಳಿಯ ಸಮಗ್ರತೆಗೆ ಕಾರಣವಾದ ಸ್ಥಾಪಿತ ಮೌಲ್ಯಗಳ ಅಧಃಪತನವನ್ನು, ಮರವನ್ನು ಧರೆಗೆ ಉರುಳಿಸುವ ಸಂಕೇತದ ಮೂಲಕ ಪತನದ ಚಿತ್ರಣವನ್ನು ನಾಟಕಕಾರರು

ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಮರ ಉರುಳಿದೊಡನೆ ತಾನೂ ಉರುಳಿ ಬಿದ್ದು ಸಾಯುತ್ತಾನೆ. ಆ ಸಂದರ್ಭದಲ್ಲಿ ಗೌಡ್ತಿ ಮಗ ರಾಮಗೊಂಡನಿಗೆ ಹಾಳು ಬಾವಿಯಲ್ಲಿದ್ದ ಅವನಪ್ಪ ರಾಯಗೊಂಡನ ಭೂತದ ದರ್ಶನವಾಗುತ್ತದೆ. ಭೂತ-ಸತ್ಯವನ್ನು ಮಗನ ಮುಂದೆ ಬಿಚ್ಚಿಡುತ್ತದೆ. ರಾಮಗೊಂಡ ಯಾವುದು ನಿಜ - ಯಾವುದು ಸುಳ್ಳು ಎಂಬ ಗೊಂದಲಕ್ಕೊಳಗಾಗುತ್ತಾನೆ. ಸತ್ಯವನ್ನು ತೋರುವ ದಾರಿಗಾಗಿ ಹುಡುಕುತ್ತಾನೆ. 'ಇದನ್ನು ತಿಳಿಯುವ ಸಮೀಪದ ದಾರಿಯೆಂದರೆ ತಾಯಿಯೇ! ತಾಯಿ, ತಂದೆಯ ಆತ್ಮಕ್ಕೆ ಆತ್ಮ ಬೆಸೆದವಳು. ದೇಹಕ್ಕೆ ದೇಹ ಬೆಸೆದವಳು. ಸತ್ಯ ಸುಳ್ಳಿನ ಸಂಚು ನಿನಗೆ ತಿಳಿದಿರಬೇಕು. ತಪ್ಪಿಸಿಕೊಳ್ಳುವುದಕ್ಕಾಗಿಯೇ ನೀನು ಅರೆಹುಚ್ಚಿನಲ್ಲಿ ಅಡಗಿರಬೇಕು. ಇಕೋ ನಿನ್ನ ಭೇಟಿ ಈಗಲೇ ಈ ಕತ್ತಲಲ್ಲೇ ಆಗಬೇಕು' ಎಂದನ್ನುತ್ತ ಹೊರಡುತ್ತಾನೆ.

ಆತನಲ್ಲಿ ಸತ್ಯದನ್ವೇಷಣೆಯ ಛಲ ಹುಟ್ಟಿದೊಡನೆ ತಾಯಿಯತ್ತ ಹೊರಟು ನಿಂತಾಗ ಪಕ್ಕದ ಮರವೇ ಮುದುಕಿಯಾಗಿ ಕಾಣಿಸಿಕೊಂಡು ಆತನನ್ನು ತಡೆಯುತ್ತಾಳೆ ; ಹಾಗೆಯೇ ಅವನಲ್ಲಾದ ಬೆಳವಣಿಗೆ ಪರಿವರ್ತನೆಯನ್ನು ಬಗ್ಗೆ ಮುದುಕಿ 'ನೀನೂ ಬೆಳೆದು ದೊಡ್ಡವನಾಗಿ ಸೀಳಿಹೋಗಿದ್ದಿ. ಆಗ ರಾಮಗೊಂಡಾಗಿದ್ದಿ, ಈಗ ನಿಮ್ಮಪ್ಪನೂ ಆಗೀದಿ' ಎಂದು ಮಾರ್ಮಿಕವಾಗಿ ಹೇಳುತ್ತಾಳೆ. ರಾಮಗೊಂಡನ ಒಡೆದುಹೋದ ವ್ಯಕ್ತಿತ್ವ ಅಥವಾ ವ್ಯಕ್ತಿತ್ವದಲ್ಲಾದ ಸೀಳುವಿಕೆಯನ್ನು ಮುದುಕಿಯ ಪಾತ್ರದ ಮೂಲಕ ಕಂಬಾರರು ಹೇಳಿಸುವುದು ಒಂದು ಪರಿಣಾಮಕಾರಿ ತಂತ್ರ.

ಗೌಡ್ತಿಯ ದೇಹ-ಮನಸ್ಸುಗಳೆರಡೂ ಕುಂದಿ ಹೋಗಿವೆ. ರಾಕ್ಷಸ ಗೌಡನಿಂದ ಆಕೆ ಗರ್ಭವತಿಯಾಗಿದ್ದಾಳೆ. ಗೌಡನ ಅಸಹಜ ವರ್ತನೆಯಿಂದ ಆಕೆಗೆ ಆತನ ಮೇಲೆ ಕ್ಷಣ ಕ್ಷಣಕ್ಕೆ ಸಂಶಯವೇರುತ್ತಿದೆ. ಮನಸ್ಸೂ ಸ್ವಾಸ್ಥ್ಯ ಕಳೆದುಕೊಳ್ಳುತ್ತದೆ. ಅಂತಹ ಸಂದರ್ಭದಲ್ಲಿ ರಾಮಗೊಂಡ ಬಂದು ತಾಯಿಯಲ್ಲಿ ತಾನು ಕಂಡ ಸತ್ಯವನ್ನು ಹೇಳುತ್ತಾನೆ. ತಾಯಿಯಿಂದ ಸತ್ಯವನ್ನು ಬಯಸುತ್ತಾನೆ. ಸತ್ಯ ಹೊರ ಬರದಂತೆ ರಾಕ್ಷಸಗೌಡ ಜಾಗರೂಕನಾಗಿದ್ದಾನೆ.

ತಾಯಿ, ಮಗನ ಆತಂಕ - ಸಂಶಯವನ್ನು ನಿವಾರಿಸದೆ ಆತನ ಸಂಶಯ ಮತ್ತಷ್ಟು ಬಲಗೊಳ್ಳುವಂತೆ 'ಇದು ಕನ್ನಡಿಮನಿ' ಇಲ್ಲದ್ದವರಿಗೆಲ್ಲ ಎರಡೆರಡು ನೆರಳು ಮೂಡತಾವ. ನನಗೊಂದು ಹುಲಿ ನೆರಳೈತಿ, ಒಂದು ನಂಧ್ಯೆತಿ, ಕಾ ನೋಡು, ನಿನಗೂ ಎರಡದಾವ. ಒಂದು ನಿಂತೈತಿ ಇನ್ನೊಂದು ಹರಿದಾಡ್ತೈತಿ' ಎಂದು ಹೇಳುವ ಮೂಲಕ ಆತನ ವ್ಯಕ್ತಿತ್ವವನ್ನು ಮತ್ತಷ್ಟು ಸೀಳುತ್ತಾಳೆ. 'ಏಕಕಾಲಕ್ಕೆ ಇಬ್ಬರಿಗೂ ಮಗ ಆಗಲಾರೆ ನಾನು'. ನೀನು ಅಷ್ಟೆ ಇಬ್ಬರಿಗೆ... ಇಬ್ಬರಿಗೆ... ಈ ಇಬ್ಬರಲ್ಲಿ ಯಾರನ್ನ ನಂಬಲಿ? ನಂಬಿದರೂ ದುಃಖ, ನಂಬದಿದ್ದರೆ ಇನ್ನಷ್ಟು ದುಃಖ ಎಂದು ಮಗ ಸತ್ಯಕ್ಕಾಗಿ ಕಾತರಿಸುತ್ತಾನೆ. ತನ್ನ ಗರ್ಭದಲ್ಲಿರುವ ಮಗುವಿಗೆ ಹುಲಿಯ ಹಾಲನ್ನು ತಂದುಕೊಡುವಂತೆ ಕೇಳಿಕೊಳ್ಳುತ್ತಾಳೆ. ಸತ್ಯದ ಸ್ವರೂಪಕ್ಕಾಗಿ ಹಂಬಲಿಸುತ್ತಿದ್ದ ರಾಮಗೊಂಡ ಅದನ್ನು ಕಾಣದೆ ತಾಯಿಯ ಆಸೆ ತೀರಿಸುವುದಕ್ಕಾಗಿ ಹುಲಿಯ ಹಾಲಿಗಾಗಿ ಕುಡುಗೋಲು ಹಿಡಿದು ಕಾಡಿಗೆ ತೆರಳುತ್ತಾನೆ. ಅಲ್ಲಿ ರಾಕ್ಷಸ ಗೌಡ ಹುಲಿಯಾಗಿ ಬಂದು ರಾಮಗೊಂಡನಿಗೆ ಹಾಲು ನೀಡಿದೊಡನೆ ಆತನ ಮೇಲೆ ಆಕ್ರಮಣ ಮಾಡುತ್ತಾನೆ. ರಾಮಗೊಂಡ ಹೋರಾಡಿ ಹುಲಿಯಿಂದ ತಪ್ಪಿಸಿಕೊಳ್ಳುತ್ತಾನೆ. ಹುಲಿ ಗಾಯಗೊಳ್ಳುತ್ತದೆ. ಹುಲಿಯ ಹಾಲು

ಹಿಡಿದು ಬರುವಾಗ ರಾಮಗೊಂಡನಿಗೆ ರಾಯಗೊಂಡನ ಭೂತ ಮತ್ತು ಯಕ್ಷಿಣಿಯ ದರ್ಶನವಾಗುತ್ತದೆ. ಆ ರಾಯಗೊಂಡ ಹುಲಿ ಮಾಯಾವಿ 'ರಾಕ್ಷಸಗೌಡ'ನೆಂದು ಭೂತ ಹೇಳುತ್ತದೆ. ಯಕ್ಷಿಣಿ, ರಾಮಗೊಂಡನಿಗೆ ಆತನ ಇಷ್ಟ ಸಿದ್ಧಿಗಾಗಿ ಕನ್ನಡಿ, ಕೀಲುಕುದುರೆ ಮತ್ತು ಇರಿವ ಕೊಂಬನ್ನು ವರವಾಗಿ ನೀಡುತ್ತದೆ. ಈ ಮೂರು ವಸ್ತುಗಳೂ ಅಪ್ಪಿ ತಪ್ಪಿ ಕೈತಪ್ಪಿ ವೈರಿಯ ಹಸ್ತಸ್ಪರ್ಶಕ್ಕೊಳಗಾದರೆ ನಿನ್ನ ಜತೆ ಇವೂ ಶಕ್ತಿಗುಂದುತ್ತವೆ ಎಂದು ಯಕ್ಷಿಣಿ ಎಚ್ಚರಿಸುತ್ತದೆ.

ಯಕ್ಷಿಣಿಯಿಂದ ಪಡೆದ ಕನ್ನಡಿ - ಕೀಲುಕುದುರೆ ಮತ್ತು ಕೊಂಬುಗಳ ಸಹಾಯದಿಂದ ಸತ್ಯದ ದರ್ಶನಕ್ಕೆ ಸಿದ್ಧನಾಗಿ ಹುಲಿಯ ಹಾಲನ್ನು ತಂದ ರಾಮಗೊಂಡನನ್ನು ರಾಕ್ಷಸಗೌಡ, ಗೌಡ್ತಿಯ ಮೂಲಕವೇ ನಾಶಪಡಿಸಲು ಸಿದ್ಧನಾಗುತ್ತಾನೆ. ಗೌಡ್ತಿಯನ್ನು ಆವರಿಸಿಕೊಂಡ ಮಾಯಾವಿ ರಾಕ್ಷಸಗೌಡನ ಮಾಯಾಶಕ್ತಿಯಿಂದಾಗಿ, ಗೌಡ್ತಿ ತನ್ನ ಮಗ ರಾಯಗೊಂಡನಿಂದ ತನ್ನ ಹೊಟ್ಟೆಯೊಳಗಿನ ಮಗುವಿಗಾಗಿ ಕನ್ನಡಿ-ಕೀಲುಕುದುರೆ ಮತ್ತು ಕೊಂಬುಗಳನ್ನು ಪಡೆಯುತ್ತಾಳೆ. ರಾಕ್ಷಸಗೌಡ ಆಕೆಯಿಂದ ಅವುಗಳನ್ನು ಪಡೆದೊಡನೆ ರಾಮಗೊಂಡ ಶಕ್ತಿ ಕುಂದುತ್ತಾನೆ ; ಕುಸಿಯುತ್ತಾನೆ. ರಾಕ್ಷಸಗೌಡ ಅಟ್ಟಹಾಸ ಮುಂದುವರಿಯುತ್ತದೆ.

ದುಷ್ಟರಾಕ್ಷಸನ ಮತ್ತು ಗೌಡತಿಯ ಹುಲಿ 'ಗರ್ಭ'ದ ಸಂಹಾರಕ್ಕಾಗಿ ಯಕ್ಷಿಣಿಯ ಕನ್ನಡಿ, ಕೀಲುಕುದುರೆ ಇರಿವ ಕೊಂಬನ್ನು ವರವಾಗಿ ನೀಡಿದ್ದರೂ ರಾಮಗೊಂಡ ತಾಯಿ ಮಮತೆ-ವಾತ್ಸಲದ ಮುಂದೆ ಕರಗಿ ಮಂತ್ರಮುಗ್ಧನಾಗಿ ಬಾಗಿ ಅವೆಲ್ಲವನ್ನೂ ಕಳೆದುಕೊಳ್ಳುವುದು ನಾಟಕದಲ್ಲಿ ಹೆಚ್ಚು ಮಾನವೀಯವಾಗಿ ಮೂಡಿಬಂದಿದೆ. ಸ್ಥಾಪಿತ ಮೌಲ್ಯಗಳ ಅಧಃಪತನಕ್ಕೆ ಕಾರಣವಾಗುವ ರಾಕ್ಷಸ ಶಕ್ತಿಯೊಂದು ಕುಟುಂಬವೊಂದರ ಜೀವಂತಿಕೆಯನ್ನು ಮಾತ್ರವಲ್ಲ ಇಡೀಯ ಹಳ್ಳಿಯ ಜೀವಂತಿಕೆಯನ್ನು ಹೊಸಕಿ ಹಾಕುವ ಪ್ರಕ್ರಿಯೆ ಈ ನಾಟಕದ ತುಂಬ ಹರಿದಾಡಿದೆ. ದೇಸಿ ಭಾಷೆಯ ಮೇಲಿನ ಕಂಬಾರರ ಪ್ರಭುತ್ವ ಈ ನಾಟಕದಲ್ಲಿಯೂ ಮಿಂಚುತ್ತದೆ.

## ಬೆಪ್ಪುತಕ್ಕಡಿ ಬೋಳೇ ಶಂಕರ (1991)

ಇದು ಟಾಲ್‌ಸ್ಟಾಯ್ ಅವರ ಕತೆಯೊಂದನ್ನಾಧರಿಸಿದ ನಾಟಕ. ಕಾಲ್ಪನಿಕತೆಯ ಎಲ್ಲ ರಂಜಕ ಗುಣಗಳನ್ನು ಮೈಗೂಡಿಸಿಕೊಂಡು ಸಮಾಜವಾದಿ ಸಮಾನತೆ ಮತ್ತು ಶ್ರಮಸಂಸ್ಕೃತಿಯ ಮಹತ್ವವನ್ನು ಈ ನಾಟಕ ಹೇಳುತ್ತದೆ.

'ಬೆಪ್ಪು ತಕ್ಕಡಿ' ಎಂದು ಅಣ್ಣಂದಿರಿಂದಲೇ ನಾಮಾಂಕಿತಗೊಂಡ ಬೋಳೇಶಂಕರ ಮೂರು ಸಹೋದರರಲ್ಲಿ ಕೊನೆಯವನು. ಅಣ್ಣಂದಿರು ಹೆಂಡತಿಯರ ದಾಸರು. ಜೀವನ ಮೌಲ್ಯಗಳನ್ನು ಕಾಪಾಡಿಕೊಂಡು ಬಂದಿರುವ ಶ್ರಮಜೀವಿ ಬೋಳೇಶಂಕರನಿಗೆ ಅಣ್ಣಂದಿರು ನಿರುಪಯುಕ್ತ ಭೂಮಿಯನ್ನು ಕೊಟ್ಟು ತಾವು ಉಳಿದ ಸಂಪತ್ತನ್ನು ಹಂಚಿಕೊಳ್ಳುವರು. ಭೂಮಿಯ ಜೊತೆಗೆ ಅಣ್ಣ-ಅತ್ತಿಗೆಯರು ಕೊಡುವ ಕಿರುಕುಳವನ್ನು ಅತ್ಯಂತ ಸಹಜವಾಗಿ ಸ್ವೀಕರಿಸುವ ಸ್ವಭಾವ ಆತನದ್ದು.

ಸಾತ್ವಿಕ ಸ್ವಭಾವದ ಪ್ರಾಮಾಣಿಕ ಬೋಳೇಶಂಕರನ ಮೇಲೆ ಪಿಶಾಚಿ ಸೈತಾನಗಳ ಕಣ್ಣು. ಆತನ ಮನಸ್ಸನ್ನು ಪ್ರವೇಶಿಸಿ, ಆಗಲೇ ಪಿಶಾಚಿಯನ್ನು ಆವಾಹಿಸಿಕೊಂಡಿರುವ ಆತನ ಅಣ್ಣಂದಿರ ಸಾಲಿಗೆ

ಆತನನ್ನೂ ಸೇರಿಸಬೇಕೆಂಬ ಹಠ ಅವುಗಳಿಗೆ. ಆದರೆ ಬೋಳೇಶಂಕರ ಮೂರು ಪಿಶಾಚಿಗಳ ಯಾವುದೇ ದುಷ್ಟತಂತ್ರಗಳಿಗೆ ಬಲಿಯಾಗದೆ ಅವುಗಳನ್ನೇ ತಾನು ನಂಬುವ ಸತ್ಯದಿಂದಲೆ ಮಣಿಸುತ್ತಾನೆ. ಮಣಿದ ಪಿಶಾಚಿಗಳು ಆತನಿಗೆ ಹೊಟ್ಟೆ ನೋವು ವಾಸಿ ಮಾಡುವ ಅಪರೂಪದ ಔಷಧಿಯನ್ನು ನೀಡುತ್ತವೆ ; ಜತೆಗೆ ಧಾನ್ಯಗಳನ್ನು ಚಿನ್ನದ ನಾಣ್ಯಗಳನ್ನಾಗಿ ಮಾಡುವ ಮತ್ತು ಹುಲ್ಲಿನ ಎಸಳುಗಳನ್ನು ಸೈನಿಕರನ್ನಾಗಿ ಮಾಡುವ ಅದ್ಭುತ ಮಂತ್ರಗಳನ್ನು ವರವಾಗಿ ನೀಡುತ್ತವೆ.

ಇತ್ತ ಊರಲ್ಲಿ ಡಂಗೂರ ಕೇಳಿಸುತ್ತದೆ. ರಾಜಕುಮಾರಿಯ ಹೊಟ್ಟೆನೋವನ್ನು ಕಳೆದವನಿಗೆ ಇಡೀಯ ರಾಜ್ಯ ಮತ್ತು ರಾಜಕುಮಾರಿಯನ್ನು ಬಹುಮಾನವಾಗಿ ನೀಡಲಾಗುತ್ತದೆ ಎಂಬುದು ಡಂಗುರದ ಸಾರ. ಬೋಳೇಶಂಕರ ತನ್ನಲ್ಲಿನ ಹೊಟ್ಟೆನೋವಿನ ಮದ್ದಿನಿಂದ ರಾಜಕುಮಾರಿಯನ್ನು ಗುಣಪಡಿಸುತ್ತಾನೆ. ರಾಜ್ಯ ಮತ್ತು ರಾಜಕುಮಾರಿಯನ್ನು ಪಡೆಯಬೇಕೆಂದು ಮಂತ್ರಿ ಆಗ್ರಹ ಪಡಿಸಿದಾಗ 'ನಾನು ರಾಜನಾದರೆ ನನ್ನ ರಾಜ್ಯದಲ್ಲಿ ಸೈನ್ಯ ಇರುವುದಿಲ್ಲ, ತೆರಿಗೆಗಳು ಇರುವುದಿಲ್ಲ, ನಾಣ್ಯಗಳು ಇರುವುದಿಲ್ಲ, ರಾಜ ರಾಣಿಯರಿಂದ ಹಿಡಿದು ಎಲ್ಲರೂ ದುಡೀತಾರೆ. ಎಲ್ಲರೂ ಉಣ್ಣುತ್ತಾರೆ. ದುಡಿಯದ ಸೋಂಬೇರಿಗಳಿಗೆ ಇಲ್ಲಿ ಖಂಡಿತಾ ಅವಕಾಶವಿಲ್ಲ' ಎಂಬ ಷರತ್ತಿನ ಮೇರೆಗೆ ಅವರೆಡು ಬಹುಮಾನವನ್ನು ಪಡೆಯುತ್ತಾನೆ. ಬೋಳೇಶಂಕರ ಹಣ ಮತ್ತು ಅಧಿಕಾರವನ್ನು ಸ್ಪಷ್ಟವಾಗಿ ನಿರಾಕರಿಸಿ ಕಿರೀಟವಿಲ್ಲದ ರಾಜನಾಗಿ ತನ್ನ ರಾಣಿಯ ಜತೆ ಹೊಲದಲ್ಲಿ ದುಡಿಯುತ್ತ ರಾಜ್ಯಭಾರ ಮಾಡಿಕೊಂಡು ನೆಮ್ಮದಿಯಿಂದಿದ್ದಾನೆ. ಈ ಸುದ್ದಿಯ ಜೊತೆಗೆ ಪಿಶಾಚಿಗಳು ಕೊಟ್ಟಿರುವ ಮಂತ್ರಗಳ ಸುದ್ದಿ ಬೋಳೇಶಂಕರನ ಅಣ್ಣಂದಿರ ಕಿವಿ ತಲುಪುತ್ತದೆ. ಸ್ವಾರ್ಥತನ-ಮೈಗಳ್ಳತನ-ದುರಾಸೆ-ಮತ್ಸರಗಳಿಂದಲೆ ತುಂಬಿ ತುಳುಕುತ್ತಿದ್ದ ಅಣ್ಣಂದಿರು, ತಮ್ಮನನ್ನು ಒತ್ತಾಯಿಸಿ ಆತನ ಮಂತ್ರಗಳ ಬಲದಿಂದ ಅಪಾರ ಸೈನಿಕರನ್ನು ಮತ್ತು ಚಿನ್ನದ ನಾಣ್ಯಗಳ ಮೂಟೆಗಳನ್ನು ಪಡೆದು ತಮಗೆ ಬೇಕಾದ ಅನುಕೂಲಗಳನ್ನು ಮಾಡಿಕೊಂಡು ರಾಜರಾಗಿ ಅಹಂಕಾರಿಗಳಾಗಿ ಅಟ್ಟಹಾಸದಿಂದ ಮೆರೆಯತೊಡಗುತ್ತಾರೆ. ಅಷ್ಟರಲ್ಲಿ ಕಾಣಿಸಿಕೊಳ್ಳುವ ಸೈತಾನವೊಂದು ಹಣ ಮತ್ತು ಪ್ರಭುತ್ವದ ಅಮಲನ್ನು ಏರಿಸಿಕೊಂಡಿರುವ ಬೋಳೇಶಂಕರನ ಅಣ್ಣಂದಿಬ್ಬರಿಗೂ ಮತ್ತೆ ದುರಾಸೆಯ ಕಾಯಿಲೆಹಚ್ಚಿ ಆತ್ಮನಾಶ ಮಾಡಿಕೊಳ್ಳುವಂತಹ ಹುನ್ನಾರ ಹೂಡುತ್ತದೆ. ಅದಕ್ಕಾಗಿ ಬೋಳೇಶಂಕರನ ಅಣ್ಣನ ಸೈನ್ಯಾಧಿಕಾರಿಯಾಗಿ ರೂಪ ಬದಲಿಸಿಕೊಳ್ಳುತ್ತದೆ. ಬೋಳೇಶಂಕರನಲ್ಲಿ ಸೈತಾನನ ಪ್ರೇರಣೆಯಂತೆ ಅಣ್ಣಂದಿರು ಮತ್ತಷ್ಟು ಸೈನ್ಯ-ಚಿನ್ನದ ನಾಣ್ಯದ ಮೂಟೆಗಳನ್ನು ಕೇಳುತ್ತಾರೆ. ಬೋಳೇಶಂಕರ, ಅಪಾಯಕಾರಿಯಾದ ಅತಿಯಾಸೆ ರೋಗದ ಬಗ್ಗೆ ಅವರಿಗೆ ಎಚ್ಚರಿಕೆ ನೀಡುತ್ತಾನೆ. ಚಿನ್ನ ತಿಂದು ಬದುಕಲಾಗದು ಎಂದು ಬುದ್ಧಿವಾದ ಹೇಳುತ್ತಾನೆ. ಸಿಟ್ಟಿಗೆದ್ದ ಅಣ್ಣಂದಿರು ತಮ್ಮನ ಮೇಲೆ ಯುದ್ಧ ಸಾರುತ್ತಾರೆ. ಸೈನ್ಯಾಧಿಕಾರಿ ಸೈತಾನ. ಬೋಳೇಶಂಕರನ ರಾಜ್ಯಕ್ಕೆ ಸೈನಿಕರೊಂದಿಗೆ ಮುತ್ತಿಗೆ ಹಾಕಿದಾಗ - ಆತ ತನ್ನ ಮಂತ್ರದಿಂದಲೇ ಹುಟ್ಟಿದ ಸೈನಿಕರನ್ನು ಮತ್ತೆ ಅದೇ ಮಂತ್ರದ ಬಲದಿಂದ ಹುಲ್ಲುಗಳನ್ನಾಗಿ ಮಾಡಿ ಸೈತಾನನನ್ನು ಕಂಗೆಡಿಸುತ್ತಾನೆ - ಸೋಲಿಸುತ್ತಾನೆ.

ಸೈನ್ಯಾಧಿಕಾರಿ ಸೈತನ ಒಮ್ಮೆ ಬೋಳೇಶಂಕರನ ಅರಮನೆಗೆ ಬಂದಾಗ ಅಲ್ಲಿನ ಪದ್ಧತಿಯಂತೆ ಆತನಿಗೂ (ಅದಕ್ಕೂ) ಊಟದ ಏರ್ಪಾಡುತ್ತದೆ. ರಾಣಿಯಿಂದ ಹಿಡಿದು ರಾಜನವರೆಗೂ ಎಲ್ಲರಿಗೂ ಒಂದೇ ಪಂಕ್ತಿಯಲ್ಲಿ ಊಟ. ಆದರೆ ಅಲ್ಲಿ ಅಂಗೈ ಪರೀಕ್ಷೆ ಮುಖ್ಯ. ಸೈತಾನನ ಅಂಗೈ

ಪರೀಕ್ಷಿಸಿದ ನಂತರ ಅದಕ್ಕೆ ಎರಡನೇ ಪಂಕ್ತಿಯಲ್ಲಿ ಊಟ. ಕಾರಣ ಅದು ಶ್ರಮ ಪಡದ ಕೈ. (ಯಾರ ಕೈ ಕೆಲಸ ಮಾಡಿ ಜಡ್ಡುಗಟ್ಟಿಲ್ಲವೋ - ಅವರ ಊಟ ಆಮೇಲೆ) ಕೆಲಸ ಮಾಡಿದವರು ಉಂಡ ನಂತರ ಸೋಮಾರಿಗಳ ಊಟ-ಇದು ರಾಜ ರಾಣಿಯರ ಜೀವನ ಪದ್ಧತಿ. ಸುಖವಾಗಿ ಉಂಡ ಸೈತಾನ, ಬೋಳೇಶಂಕರ ಮತ್ತು ಅವನ ಪ್ರಜೆಗಳಿಗೆ ತಲೆಯಿಂದ ಕೆಲಸ ಮಾಡುವುದು ಕೈಗಳಿಗಿಂತ ಹೆಚ್ಚು ಲಾಭಕರ ಎಂಬ ದುಡಿಯುವ ಹಾಗೂ ಗಳಿಕೆಯ ಸೂತ್ರವನ್ನು ಕಲಿಸತೊಡಗುತ್ತದೆ. ಬೋಳೇಶಂಕರ ಅದ್ಯಾವುದನ್ನೂ ಒಪ್ಪದೆ ತಾನು ನಂಬಿಕೊಂಡು ಬಂದಿರುವ 'ಶ್ರಮಸಂಸ್ಕೃತಿ'ಯನ್ನೇ ಮುಂದುವರಿಸುತ್ತಾನೆ. ಸೈತಾನನ ಪ್ರಯತ್ನ ಕೈಗೂಡುವುದಿಲ್ಲ. ಅದು ಸಾಯುತ್ತದೆ. ಬೋಳೇಶಂಕರ ಗೆಲ್ಲುತ್ತಾನೆ.

ದುರಾಸೆ-ಸ್ವಾರ್ಥ, ಸಿಟ್ಟು ಮತ್ಸರ-ಸಿಡುಕುಗಳೇ ಮನುಷ್ಯನೊಳಗಿನ ಪಿಶಾಚಿ-ಸೈತಾನಗಳು ; ಆಧುನೀಕತೆ-ಕೈಗಾರೀಕರಣಗಳು ಆಧುನಿಕ ಸಮಾಜ ವ್ಯವಸ್ಥೆಯೊಳಗಿನ ಸೈತಾನಗಳು - ಎಂಬುದನ್ನು ಈ ನಾಟಕ ಪ್ರತಿಫಲಿಸುತ್ತದೆ. ಆಧುನಿಕತೆ, ಕೈಗಾರೀಕರಣ, ಬೌದ್ಧಿಕ ಶ್ರಮ ಇವುಗಳ ಬಗ್ಗೆ ತೀವ್ರ ಅನಾದರ ಈ ನಾಟಕದಲ್ಲಿ ಸ್ಪಷ್ಟವಾಗಿದ್ದು ಇದು ಕಂಬಾರರು ಆಧುನಿಕತೆಯನ್ನು ಇಚ್ಚಿಸದ 'ಪ್ರಗತಿಯ ಪ್ರತಿಗಾಮಿ' ಎಂಬ ಭಾವವನ್ನು ಭರಿಸಬಲ್ಲುದಾದರೂ ಪರಂಪರಾಗತವಾಗಿ ಬಂದಿರುವ ಜ್ಞಾನ, ಬದುಕುವ ದಾರಿ, ಆಲೋಚನೆ, ಮೌಲ್ಯಗಳೂ ಅಷ್ಟೇ ಪರಿಣಾಮಕಾರಿಯಾಗಿ ಸಮಾಜವನ್ನು, ಬದುಕನ್ನು ಉಳಿಸುವಂತದ್ದು ಎಂಬ ಕಂಬಾರರ ಕಾಳಜಿಯನ್ನು ಒಪ್ಪಬಹುದಾಗಿದೆ. ಸಂಯಮ-ಸರಳತೆಯೊಂದಿಗೆ ಆಧುನಿಕತೆಯ ಸೋಂಕು ತಗಲದ ಪರಂಪರಾಗತ ಜೀವನ ಶೈಲಿ ಮತ್ತು ಸಮಾನತೆಗಳನ್ನಾಧರಿಸಿ ಸಮಾಜವಾದಿ ಸಮಾಜ ಬೋಳೇಶಂಕರನ ಕನಸೂ ಹೌದು-ಕಂಬಾರರ ಕನಸೂ ಹೌದು.

## ತುಕ್ರನ ಕನಸು (1989)

ಸ್ವಾತಂತ್ರ್ಯ ಪೂರ್ವ ಪಾಳೆಯಗಾರಿ ವ್ಯವಸ್ಥೆಯಲ್ಲಿ ತುಳಿಯಲ್ಪಟ್ಟ ಸಾಮಾನ್ಯರಲ್ಲಿ ಅತಿ ಸಾಮಾನ್ಯ ವ್ಯಕ್ತಿಯೊಬ್ಬ ಕನಸುಗಾರಿಕೆಯ ಬೆನ್ನುಹತ್ತಿ ತನ್ನ ಅಸ್ತಿತ್ವವನ್ನು ಸಾಧಿಸಲಿಕ್ಕೆಂದು ಹಿಡಿಯುವ ಹಲವು ಹಾದಿಗಳು, ಇತಿಹಾಸದಲ್ಲಿ ಒಂದು ರೀತಿ ಪ್ರವೇಶವನ್ನು ಪಡೆಯಲು ಪಡುವ ಪ್ರಯತ್ನಗಳು ಈ ನಾಟಕದ ವಸ್ತು.

ತುಘಲಕನ ದರ್ಬಾರನ್ನು ಹೋಲುವ ಊರ ಪಟೇಲರ ಆಡಳಿತದಲ್ಲಿ ಪಟೇಲರು ತಮ್ಮ ವಂಶದ ತಲೆಗಳ ವಿವರ-ಸಾಧನೆ-ವಿಕ್ರಮಗಳ ದಾಖಲೆಗಳುಳ್ಳ ಕಾಲಕೋಶವನ್ನು ಹೂಳುತ್ತಿದ್ದಾಗ ಅಲ್ಲಿದ್ದ ಯಃಕಶ್ಚಿತ ಮನುಷ್ಯ ತುಕ್ರ ತಾನೂ ಆ ಪಟೇಲನ ವಂಶಜನೆಂದು ಹೇಳಿಕೊಳ್ಳುತ್ತಾನೆ. ಪಟೇಲನ ವಂಶಜ ಎನ್ನುವ ಮೂಲಕವಾದರೂ ತನ್ನನ್ನು 'ಒಬ್ಬ ಮನುಷ್ಯ'ನೆಂದು ಈ ಸಮಾಜ ಗುರುತಿಸಬಹುದು ಎಂಬ ಕನಸಿನಿಂದ ತುಕ್ರ ಹಾಗೆ ಹೇಳಿಕೊಂಡಾಗ ಅದಕ್ಕೆ 'ಬಹುಮಾನ'ವಾಗಿ ತುಕ್ರ ಪಟೇಲನಿಂದ ಸಾಕಷ್ಟು ಒದೆಗಳನ್ನು ಯಾರ ವಿರೋಧವೂ ಇಲ್ಲದೆ ತಿನ್ನಬೇಕಾಗುತ್ತದೆ. 'ಏನಾಗ್ತಾ ಇದೆ ಈ ಲೋಕದಲ್ಲಿ? ನನ್ನ ಕಣ್ಣು ನನಗೆ ಬರೀ ರಾಕ್ಷಸರನ್ನೇ ತೋರಿಸುತ್ತಿದೆ. ಒದೆಯೋ ಕಾಲು, ನೆಲದ ಧೂಳು - ಇವುಗಳ ಮಧ್ಯೆ ನಾನಿದ್ದೇನೆ. ಅಕ್ಕಪಕ್ಕ ಮನುಷ್ಯರಾರೂ

ಇಲ್ಲವೆ? ಇಲ್ಲದಿದ್ದರೆ ಬಿಡಿ, ನಾನೇ ಕೊನೆಯವನು ಅಂತಾಯ್ತು' - ಹೀಗೆ ತುಕ್ರ, ಪಟೇಲನ ದೌರ್ಜನ್ಯವನ್ನು ಪ್ರಶ್ನಿಸದ ನರಸತ್ತಂತಿರುವ ಊರ ಮಂದಿಯ ಬಗ್ಗೆ ವಿಷಾಧಿಸುವುದು ಸಮಾಜದ ಎಲ್ಲ ಸಾಮಾಜಿಕ ಹಾಗೂ ಆರ್ಥಿಕ ದುರ್ಬಲರ ವಿಷಾದವು ಹೌದಾಗಿದೆ.

ಹಾಗೆ ಚಿಂತೆಯಿಂದ ದಾರಿ ಹಿಡಿದು ಹೊರಟ ತುಕ್ರ, ಊರ ಚೆಲುವಿ ರಂಗಿಗೂ-ಪಾದ್ರಿಗೂ ಇರುವ ಸಂಬಂಧದ ಬಗ್ಗೆ ರಂಗಿಯನ್ನು ಛೇಡಿಸಿದಕ್ಕೆ ಆಕೆಯಿಂದ ಕೆನ್ನೆಗೆರಡು ಏಟನ್ನು ಏರಿಸಿಕೊಂಡು ಮತ್ತೆ ಕನಸಿನ ದಾರಿ ಹಿಡಿಯುತ್ತಾನೆ. ಹಾಗೆ ಬಂದವ ಹಾಳು ದೇವಸ್ಥಾನದ ಮುಂದೆ ಕನಸು ಕಾಣುತ್ತಾ ಕೂತಿದ್ದಾಗ, ಪಟೇಲನ ಪ್ರೇಯಸಿ ತಾರಾಮೇಡಂ ಪ್ರಿಯಕರನ್ನು ಸಂದಿಸಲು ಹೊರಟದ್ದನ್ನು ಕಂಡು, ತಾನೇ ಆ ಪೂರ್ವ ನಿರ್ಧರಿತ ರಹಸ್ಯ ಸ್ಥಳದಲ್ಲಿ ಕುಳಿತು ಆಕೆಯೊಡನೆ ಅಸಭ್ಯವಾಗಿ ವರ್ತಿಸುತ್ತಾನೆ. ತುಕ್ರನ ಈ 'ಘನ ಕಾರ್ಯಕ್ಕೆ' ಊರವರು ಆತನನ್ನು ಮನಬಂದಂತೆ ಥಳಿಸುತ್ತಾರೆ.

ಇದರಿಂದ ತೀರಾ ದುಃಖಿತನಾದ ಶುಕ್ರ ಸಾಯಲು ನಿರ್ಧರಿಸಿ, ಗೆಳೆಯ ಸಿಂಗ್ರನಿಗೆ ಗೋರಿ ತೋಡಲು ಹೇಳುವನು. ಮಾತು ತಪ್ಪದಂತೆ ಗೋರಿ ಸಿದ್ಧವಾದೊಡನೆ ಗೋರಿಯಲ್ಲಿಳಿದಾತ... ಮತ್ತೆ ತಟ್ಟನೆ ಎದ್ದು ಬಂದು 'ಭವಿಷ್ಯದಲ್ಲಿ ನನಗೆ ಭಾರಿ ನಂಬಿಕೆ ಬಂದು ಬಿಟ್ಟಿತು! ಬೆಂಗಳೂರಿಗೆ ಹೋಗಿ ಬರ್ತೀನಿ' ಎಂದು ಆಶಾವಾದಿಯಾಗಿ ಬೆಂಗಳೂರಿಗೆ ಹೊರಡುತ್ತಾನೆ. ಮಹಾನಗರಿ ಬೆಂಗಳೂರಿಗೆ ಹೋಗಿ ತಾನೊಬ್ಬ ಶ್ರೀಮಂತನಾಗಿ, ಅಧಿಕಾರಸ್ಥನಾಗಿ ತನ್ನ ವ್ಯಕ್ತಿತ್ವದ ಮಟ್ಟವನ್ನು ಏರಿಸಿಕೊಂಡು ಪಟೇಲನನ್ನು ಎದುರಿಸಬಹುದೆಂಬ ಕನಸಿನಿಂದ ಬೆಂಗಳೂರು ತಲುಪುತ್ತಾನೆ. ಇದು ನಾಟಕದ ಪೂರ್ವಾರ್ಧ.

ಉತ್ತರಾರ್ಧದಲ್ಲಿ ತುಕ್ರನು ನಗರ ಜೀವನ ಬೆಡಗನ್ನು ಆನಂದಿಸುವ ನಾಗರಿಕನಾಗಿ ಮಾರ್ಪಡುತ್ತಾನೆ. ನಗರ ಜೀವನ ಆತನ ಮುಗ್ಧತೆಯನ್ನು ನಾಶಪಡಿಸಿ, ಆತ ತನ್ನ ಜಾಣತನವನ್ನು ಮೋಸ-ವಂಚನೆ-ಕಪಟತನಕ್ಕೆ ಬಳಸಿಕೊಳ್ಳುವಷ್ಟು ತುಕ್ರನ ನಡವಳಿಕೆಯನ್ನು ಬದಲಾಯಿಸುತ್ತದೆ. ಬೆಂಗಳೂರಿನಿಂದ ಮತ್ತೆ ಊರಿಗೆ ಬಂದ ತುಕರಾಮ (ತುಕ್ರ), ತಾನು ಕಲೆಕ್ಟರ್ ಮನೆಯಲ್ಲಿ ಮೇಸ್ತ್ರಿ ಕೆಲಸಕ್ಕಿದ್ದದ್ದು, ಆ ಕಲೆಕ್ಟರನ ಶಿಸ್ತು, ಆತನ ಪತ್ನಿಯ ಧಾರಾಳತನ, ಆ ಮನೆಯ ವೈಭವ, ತಾನು ಆ ಕೆಲಸದ ಜತೆಗೆ ಅಪರಾಧಿಗಳನ್ನು ಗಲ್ಲಿಗೆ ಹಾಕುವ ಕೆಲಸದಲ್ಲಿ ನಿಯತ್ತು ತೋರಿಸಿದ್ದು... ಇತ್ಯಾದಿ ಕತೆಗಳ ಸರಮಾಲೆಯನ್ನೇ ಹೆಣೆದು ಊರಮಂದಿಗೆ ತೊಡಿಸುತ್ತಾನೆ. ವಸಾಹತುಶಾಹಿಯ ಸಂಪರ್ಕ, ಗಾಂಧಿ ಚಳುವಳಿಯ ಪರಿಚಯದಿಂದಾದರೂ ತನಗೆ 'ಮನಷ್ಯಪಟ್ಟ' ಸಿಗಬಹುದು ಎಂಬ ಕನಸಿನಿಂದ, ಆ ಅನುಭವಲೋಕಕ್ಕೂ ಹೊಕ್ಕುಬಂದೆ ಎಂದು ಊರವರಲ್ಲೆಲ್ಲ ಅಂದರೂ ತುಕ್ರನ ಕನಸು ನನಸಾಗುವುದಿಲ್ಲ.

ಅಷ್ಟರಲ್ಲಿ ತುಕ್ರನಿಗೆ ಊರ ಪಟೇಲರ ಕರೆ ಬರುತ್ತದೆ. ತುಕ್ರ ಬೆಂಗಳೂರಿನಲ್ಲಿ ಸಾಂತನೆಂಬ ಕಳ್ಳನೊಂದಿಗೆ ಸೇರಿ ಕಳ್ಳತನ ಮಾಡಿ, ಆ ಕಳ್ಳತನದ ಮಾಲನ್ನು ಸಾಂತನಿಗೂ ನೀಡದೆ ತಾನೊಬ್ಬನೇ ಪಡೆದು ಇಲ್ಲಿಗೆ ಓಡಿಬಂದ ವಿಚಾರ ಪಟೇಲನಿಗೆ ತಿಳಿಯುತ್ತದೆ. ಇದರ ವಿಚಾರಣೆಗಾಗಿ ಕಳ್ಳ ಸಾಂತನನ್ನು ಪಟೇಲ ತನ್ನ ಮನೆಯೊಳಗೇ ಬಂಧಿಸಿಟ್ಟು, ವಿಚಾರಣೆಗಾಗಿ ತುಕ್ರನನ್ನು ಕರೆಸಿದಾಗ - ಸಾಂತ ತುಕ್ರನನ್ನು ತನ್ನ ಸಹಚರನೆಂದು ಒಪ್ಪದೆ ಆತನನ್ನು ಕಷ್ಟದಿಂದ ಪಾರುಮಾಡುತ್ತಾನೆ.

ಅಂದೇ ಅವರಿಬ್ಬರೂ ಸೇರಿಕೊಂಡು ಗಾಂಧಿ ಚಳುವಳಿಯ ಹೆಸರಿನಲ್ಲಿ ಅದೇ ರಾತ್ರಿ ಪಟೇಲನ ಮನೆ ದೋಚಲು ನಿರ್ಧರಿಸುತ್ತಾನೆ.

ತುಕ್ರ ಆ ರಾತ್ರಿಯ ಕಳ್ಳತನದ ಕನಸಿನ ಜೊತೆಗೆ ಮತ್ತಷ್ಟು ಸುಂದರ ಕನಸುಗಳನ್ನು ಕಾಣಲು ಊರ ಹೊರಗಿನ ಮಠದಲ್ಲಿ ಬಂದು ಮಲಗಿದ್ದಾನೆ. ಸ್ವಾತಂತ್ರ್ಯ ಹೋರಾಟದ ಅಮಲಿನಲ್ಲಿದ್ದ ಆತ ತಾನು ಭಾರತಮಾತೆಯನ್ನು ರಕ್ಷಿಸಿದಂತೆ, ಪಟೇಲನನ್ನು ಶಿಕ್ಷಿಸಿದಂತೆ, ತಾರಾಮೇಡಂನ್ನು ಕಾಮಿಸಿದಂತೆ ಕನಸು ಕಾಣುತ್ತಿರುವಾಗ ಪಟೇಲನ ಸೂಚನೆಯ ಮೇರೆಗೆ ಪೋಲೀಸರು ತುಕ್ರನನ್ನು ಬಂಧಿಸಿ ಸಾಂತನ ಸುಳಿವಿನ ಬಗ್ಗೆ ಆತನನ್ನು ಹಿಂಸಿಸುತ್ತಾರೆ. ತುಕ್ರನನ್ನು 'ಸಾಹಸ'ಕ್ಕೆ ಸೇರಿಕೊಳ್ಳದೆಯೇ ಸಾಂತನ ಗುಂಪು ಮಾತ್ರ ಕಳ್ಳತನದ ಸಾಹಸ ಮಾಡಿರುವುದರಿಂದ ತುಕ್ರನಿಗೆ ಆತನ ಸುಳಿವು ತಿಳಿದಿಲ್ಲ- ಆತ ಪೋಲೀಸರಿಗೆ ಬಾಯಿ ಬಿಡುವುದಿಲ್ಲ, ಬಾಯಿ ಬಿಡದ ತುಕ್ರನನ್ನು ಗಲ್ಲಿಗೇರಿಸುತ್ತಾರೆ. ತುಕ್ರನೊಂದಿಗೆ ಆತನ ಹಳೆಯ-ಎಳೆಯ ಕನಸುಗಳೂ ಗಲ್ಲಿಗೇರುತ್ತವೆ.

ಚೀನಾ ದೇಶ ಲು-ಷುನ್‌ನ ಕತೆಯೊಂದರ ಸಾರವನ್ನು ಹೀರಿಕೊಂಡು ಸ್ವಾತಂತ್ಯಪೂರ್ವ ಭಾರತದ ಗ್ರಾಮೀಣ ಬದುಕಿನ ಚೌಕಟ್ಟಿನಲ್ಲಿಟ್ಟು ಬೆಂಗಳೂರು ಗ್ರಾಮಾಂತರ ಪ್ರದೇಶದ ಕನ್ನಡದಲ್ಲಿ ಈ ನಾಟಕವನ್ನು ಬರೆಯಲಾಗಿದೆ. ತುಕ್ರನನ್ನು ಇಡೀಯ ಸಮಾಜ ಬಹಳ ತುಚ್ಛವಾಗಿ ಕಾಣುತ್ತಿದ್ದರೂ ಆತನ ಮುಗ್ಧತನದೊಳಗಿನ ಜಾಣ ಮಾತು-ವ್ಯಂಗ್ಯ-ಲೇವಡಿಗಳು-ಶೋಷಿತ ಜನಾಂಗಗಳ ಧ್ವನಿಯೂ ಆಗಿರುವುದು ನಾಟಕದ ವೈಶಿಷ್ಟ್ಯ. ತುಕ್ರನಿಗೆ ನಿನ್ನ ಹೆಸರು ನಿನ್ನ ಹೆಸರು ಹೇಳಯ್ಯಾ ಅಂದರೆ 'ಅಯ್ಯೋ ಕೋಟಿ ಕೋಟಿ ಜನ ನನ್ನಂಥವರಿದ್ದಾರೆ ಸ್ವಾಮಿ. ಅವರಲ್ಲಿ ಯಾರೋ ಒಬ್ಬ ಅಥವಾ ಎಲ್ಲರೂ ಅಂತಾ ತಿಳಿಕೊಳ್ಳಿ' ಎಂದು ಆತ ಹೇಳುವುದು, ಮತ್ತೊಮ್ಮೆ ಆತ ತನ್ನ ಕಜ್ಜಿ ಕೆರೆದುಕೊಳ್ಳುತ್ತಿದ್ದಾಗ 'ನನಗೆ ಕಜ್ಜಿ ಹುರುಕು ಆಗಿದೆ. ನನಗೆ ಕಜ್ಜಿ ಆಗಿದ್ದರೆ ನಿಮ್ಮದೇನು ತಕರಾರು ಇಲ್ಲ ಅಲ್ಲವೆ? ಕೊನೇ ಪಕ್ಷ ಕೊಳೆತು ನಾರೋ ಹಕ್ಕಾದರೂ ನನಗಿದೆಯೇ' ಎಂದು ಪ್ರಶ್ನಿಸುವುದು ಸಮಾಜದ ಎಲ್ಲ ಶೋಷಿತ ಜನಾಂಗಗಳ ಪ್ರಶ್ನೆಯೇ ಆಗಿರುವುದು ವಿಶೇಷ. ಹಳ್ಳಿಗನೊಬ್ಬ ವಸಾಹತುಶಾಹಿಗೆ ತೋರುವ ಪ್ರತಿಭಟನೆಯ ಚಿತ್ರಣದೊಂದಿಗೆ, ಸ್ವಾತಂತ್ರ್ಯ ಪೂರ್ವದ ದೇಶೀಯ ಪಾಳೇಯಗಾರಿ ವ್ಯವಸ್ಥೆಯಲ್ಲಿದ್ದ ಜನಸಾಮಾನ್ಯರ ಶೋಚನೀಯ ಸ್ಥಿತಿ ಹಾಗೂ ಅವರ ಕನಸುಗಳು ನುಚ್ಚು ನೂರಾಗುವ ಪರಿಯ ಬಗ್ಗೆ ಈ ನಾಟಕ ಹಲವು ಸಂಗತಿಗಳನ್ನು ಬಿಚ್ಚಿಕೊಡುತ್ತದೆ.

## ಸಿರಿಸಂಪಿಗೆ (1991)

1991 ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿರುವ ಈ ಕೃತಿ ಜನಪದ ಕತೆಯೊಂದರ ಪ್ರೇರಣೆಯಿಂದ ರಚಿತವಾದುದು ಮತ್ತು ಯಕ್ಷಗಾನದ ಮೈಗಟ್ಟನ್ನು ಹೊಂದಿರುವ ನಾಟಕ. ಜನಪದ ಕತೆಯನ್ನು ಆಧರಿಸಿ ರೂಪುಗೊಂಡಿರುವ ಈ ನಾಟಕದಲ್ಲಿ ಉಭಯಲಿಂಗತನದ ನೆರಳು ಚಾಚಿದ್ದು ಮನೋವಿಜ್ಞಾನದ ಹಲವು ಸಿದ್ಧಾಂತಗಳನ್ನು ಇಲ್ಲಿನ ಕತೆಯೊಂದಿಗೆ ಸಮೀಕರಿಸಿ ಕತೆಯನ್ನು ಸಮರ್ಥಿಸಿಕೊಳ್ಳಬಹುದು.

ಶಿವಪುರದ ಅರಸು ನಾಗನಾಯಕ, ತನ್ನ ಅರಸಿ ಮಾಯಾವತಿ ಮತ್ತು ಒಂದು ವರುಷದ

ಮಗ ಶಿವನಾಗದೇವನನ್ನು ಅಗಲಿ ವಿಧಿವಶವಾಗುತ್ತಾನೆ. ವಿಧವೆ ಪತ್ನಿ ಮಾಯಾವತಿ ರಾಜ್ಯಭಾರವನ್ನು ಕೈಗೆತ್ತಿಕೊಂಡು ಮಗನನ್ನು ಸಕಲ ವಿದ್ಯಾಪಾರಂಗತನನ್ನಾಗಿ ಮಾಡುತ್ತಾಳೆ. ಒಮ್ಮೆ ಆಕೆಯ ಕುಲದೇವರು ಪ್ರತ್ಯಕ್ಷನಾಗಿ, 'ಮಗನ ಸ್ವರಭಂಗವಾದೊಡನೆ ತಡಮಾಡದೆ ಮದುವೆ ಮಾಡು. ನೀರಲ್ಲಿ ನೆರಳು ನೋಡಿಕೊಳ್ಳದ ಹಾಗೆ ಜಾಗ್ರತೆ ವಹಿಸು' ಎಂದು ಎಚ್ಚರಿಸಿ ಮಾಯವಾಗುತ್ತಾನೆ. ರಾಜಮಾತೆ ಮಾಯಾವತಿ ಕುಲದೇವರ ಎಚ್ಚರಿಕೆಯಂತೆಯೇ ಮಗನಿಗೆ ಸ್ವರಭಂಗವಾದೊಡನೆ ವನಪುರದ ಪುಷ್ಪರಾಜನ ಮಗಳು ಸಿರಿಸಂಪಿಗೆಯನ್ನು ಮದುವೆಯಾಗುವಂತೆ ಮಗನನ್ನು ಕೇಳಿಕೊಳ್ಳುತ್ತಾಳೆ. ಆದರೆ ರಾಜಕುಮಾರ ಒಪ್ಪುವುದಿಲ್ಲ ತಾಯಿ ಯಾವ ಕನ್ಯೆಯನ್ನು ಆರಿಸಿದರೂ ಅದರಲ್ಲಿ ಒಂದಿಲ್ಲೊಂದು ಕೊರತೆಯನ್ನು ಗುರುತಿಸಿ ಮದುವೆ ಬೇಡವೆಂದು ಹಠ ಹಿಡಿಯುವುದನ್ನು ಕಂಡು ರಾಜಮಾತೆ 'ಇನ್ನೊಂದು ವಾರದಲ್ಲಿ ನೀನು ಕೊರತೆಯಿಲ್ಲದ ಕನ್ಯೆ ಯಾರೆಂದು ಹೇಳಿದರೆ ಸರಿ-ಇಲ್ಲದಿದ್ದರೆ ಸಿರಿಸಂಪಿಗೆಯನ್ನು ಮದುವೆಯಾಗಬೇಕು ಎಂದು ಎಚ್ಚರಿಸುತ್ತಾಳೆ. ಅದಕ್ಕೊಪ್ಪಿದ ರಾಜಕುಮಾರ, ಒಂದು ರಾತ್ರಿ ಕೊರತೆಯಿಲ್ಲದ ಕನ್ಯೆಯ ಕನಸು ಕಾಣುತ್ತ ನಿದ್ದೆಯಲ್ಲಿದ್ದಾಗ ಆತನಿಗೆ ತಟ್ಟನೆ ಎಚ್ಚರವಾಗುತ್ತದೆ. ಮೂಲೆಯಲ್ಲಿದ್ದ ದೀಪ ಹಿಡಿದ ಹೆಣ್ಣಿನ ಪ್ರತಿಮೆಯು ಜೀವ ಪಡೆದು ಅಂಗೈಯಲ್ಲಿ ಬೆಳಕನ್ನಿಟ್ಟು ನರ್ತಿಸತೊಡಗುತ್ತದೆ. ರಾಜಕುಮಾರ ಅದನ್ನು ಹಿಡಿಯ ಹೋಗುತ್ತಲೇ ಆ ದೀಪದ ಸುಂದರಿ ಬೆಳಕಿನ ಆರತಿ ಹಿಡಿದು ಆತನ ಸುತ್ತಲೆ ಸುತ್ತುತ್ತ ಆತನ ಅಂಗಾಂಗಗಳ ಮೇಲೆ ತನ್ನ ದೃಷ್ಟಿಗಳ ಸುರಿಸುತ್ತ ಉಸಿರುಗಟ್ಟಿ ಒದ್ದಾಡುವಷ್ಟು ಗಟ್ಟಿಯ ಗಟ್ಟಿಯಾಗಿ ತಬ್ಬಿಕೊಂಡು ಆತನಲ್ಲಿ ಐಕ್ಯವಾಗುತ್ತಾಳೆ. ತಾನು ಬಯಸಿದ್ದ ಕೊರತೆಯಿರದ ಕಾಮಿನಿ ಅವಳೇ ಎಂದು ರಾಜಕುಮಾರ ಪುಳಕಗೊಳ್ಳುತ್ತಾನೆ. ರಾಜಕುಮಾರ ಹಿರಿಯರನ್ನು, ತಾಯಿಯನ್ನು ಕರೆಸಿ ತಾನು ಕರಾರಿನ ಮೇರೆಗೆ ಮದುವೆಗೆ ಒಪ್ಪಿರುವುದಾಗಿ ತಿಳಿಸುತ್ತಾನೆ. ಆತನ ಕರಾರು : ನನ್ನ ದೇಹವನ್ನು ಖಡ್ಗದಿಂದ ಸರಿಯರ್ಧವಾಗಿ ಸೀಳಬೇಕು. ಸೀಳಿಬಂದ ಎರಡು ಅರ್ಧಗಳನ್ನು ಎರಡು ಪ್ರತ್ಯೇಕ ಮಡಕೆಯಲ್ಲಿಟ್ಟು ಪುಷ್ಪರಾಶಿಯೊಳಗೆ ಹೂಳಬೇಕು. ಮುಂದಿನ ಹುಣ್ಣಿಮೆಯಂದು ಒಂದು ಮಡಕೆಯಿಂದ ಅಪ್ರತಿಮ ಸುಂದರನಾದ ನಾನು, ಮತ್ತೊಂದು ಮಡಕೆಯಿಂದ ದೀಪದ ಮೊಲ್ಲೆ ಎಂಬ ಅಪ್ರತಿಮ ಚೆಲುವೆ ದೀಪ ಹಿಡಿದು ಹೊರ ಬರುತ್ತಾಳೆ. ಅನಂತರ ನಮ್ಮಿಬ್ಬರಿಗೂ ಮದುವೆ ಮಾಡಿ. ಹೀಗಾದರೆ ಮದುವೆಯುಂಟು. ಇಲ್ಲದಿದ್ದರೆ ನಾನು ಸನ್ಯಾಸಿ - ಎಂದು ಹೇಳುತ್ತಾನೆ.

ರಾಜಕುಮಾರನ ಕರಾರು ಕೇಳಿ ನೆರೆದ ಹಿರಿಯರಿಗೆ - ತಾಯಿಗೆ ಅಚ್ಚರಿ, ದಿಗ್ಭ್ರಮೆಯಾದರೂ, ಬೇರೆ ದಾರಿ ಕಾಣದೆ ಕರಾರನ್ನು ಒಪ್ಪಿಕೊಳ್ಳುತ್ತಾರೆ. ಕರಾರಿನಂತೆ ಶಿವನಾಗದೇವನನ್ನು ಸೀಳಿ, ಎರಡು ಮಡಕೆಯಲ್ಲಿಟ್ಟು ಹೂಳಿ, ಮುಂದಿನ ಹುಣ್ಣಿಮೆಯೆಂದು ತೆರೆದಾಗ - ಒಂದು ಮಡಕೆಯಿಂದ ಶಿವನಾಗದೇವ ಹೊರಬಂದರೆ ಮತ್ತೊಂದು ಮಡಕೆಯಿಂದ ಹೆಡೆಹೊತ್ತಿರುವ ಕಾಳಿಂಗ ಸರ್ಪ ಹೊರಬರುತ್ತದೆ. ಕನಸಿನಲ್ಲಿ ತನ್ನೊಳಗೆ ಐಕ್ಯಳಾದ ದೀಪದ ಮೊಲ್ಲೆಯನ್ನು ಶಿವನಾಗದೇವ ವಾಸ್ತವವೆಂಬಂತೆ ಭ್ರಮಿಸಿ ಅವಳನ್ನು ಮದುವೆಯಾಗುವುದಕ್ಕಾಗಿ ತನ್ನನ್ನು ಎರಡಾಗಿ ಸೀಳಿಕೊಂಡು ತನ್ನೊಳಗೆ ಒಂದಾಗಿರುವ ಆಕೆಯನ್ನು ಸೃಷ್ಟಿಸಲು ರಾಜಕುಮಾರ ಪ್ರಯತ್ನಿಸುವುದು ಆತನಲ್ಲಿ ಉಭಯಲಿಂಗತನದ ಛಾಯೆ ಆವರಿಸಿರುವುದರಿಂದಲೆ. ಮಡಕೆಯೊಳಗಿಂದ ದೀಪದ ಮೊಲ್ಲೆ ಬರದಿದ್ದಾಗ ರಾಜಮಾತೆ ಮಾಯಾವತಿ ಮಗನ ಮದುವೆಯನ್ನು ಸಿರಿಸಂಪಿಗೆಯೊಂದಿಗೆ

ನೆರವೇರಿಸುತ್ತಾಳೆ. ಆದರೆ ಶಿವನಾಗದೇವನಿಗೆ ಈ ಮದುವೆಯಿಂದ ನೆಮ್ಮದಿಯಿಲ್ಲ - ಸಂತೋಷವಿಲ್ಲ. ಮದುವೆಯಾದ ಮೊದಲ ದಿನದಿಂದಲೇ ಯಾವಾಗೆಂದರೆ ಆವಾಗ ನಾಪತ್ತೆ ಆಗುತ್ತಾನೆ-ವಾಪಸಾಗುತ್ತಾನೆ. ಕಳೆದುಕೊಂಡಿದ್ದನ್ನು ಹುಡುಕುವವರ ಹಾಗೆ ಹೋಗುತ್ತಾನೆ. ಸಿಕ್ಕದವರ ಹಾಗೆ ನಿರಾಶೆಯಿಂದ ಮರಳುತ್ತಾನೆ. ಸಿರಿಸಂಪಿಗೆ ಸದಾ ದುಃಖಿಸುತ್ತಿರುತ್ತಾಳೆ. ದುಃಖಿತಳಾದ ತಾಯಿ ಮಾಯಾವತಿಗೂ ಮಗನ ಚಲನವಲನಗಳನ್ನು ಗಮನಿಸಲು ಆಸ್ಥಾನದ ಸೇವಕರನ್ನು ಗುಟ್ಟಾಗಿ ಕಳುಹಿಸುತ್ತಾಳೆ. ಸೇವಕನೊಬ್ಬ ರಾಜಕುಮಾರನನ್ನು ನೆರಳಿನಂತೆ ಹಿಂಬಾಲಿಸಿದಾಗ -

ರಾಜಕುಮಾರ ಅಡಗುತ್ತಾ... ಎಡವುತ್ತಾ... ಅಡವಿಯ ಬಳಿಯ ಸರೋವರದ ತಟಕ್ಕೆ ಬಂದು ನೀರಲ್ಲಿ ಇಣುಕಿ ಹಾಕಿ ತನ್ನ ಪ್ರತಿಬಿಂಬವನ್ನು ನೋಡಿಕೊಳ್ಳುತ್ತಾನೆ. ಆ ಪ್ರತಿಬಿಂಬವನ್ನು ನೋಡುತ್ತಿದ್ದಂತೆ - ಆತನಲ್ಲಿ ಆನಂದದ ಕಣ್ಣೀರು ಉಕ್ಕಿ ಬರುವುದು - ಆತ ಉನ್ಮಾದಗೊಳ್ಳುವುದು... ನೀರಲ್ಲಿ ಮೂಡಿದ ಆ ಪ್ರತಿಬಿಂಬವನ್ನು ಬೊಗಸೆಯಿಂದ ಎತ್ತಿ ಹಿಡಿದು ಇಡೀ ಕಾಡು ರೋದಿಸುವಂತೆ ಮೊಲ್ಲೆ ಮೊಲ್ಲೆ ಅಂತ ದನಿ ತೆಗೆದು ಆನಂದದಿಂದ ಅಳುವುದು... ಮತ್ತೆ ಶಾಂತನಾಗುವುದನ್ನು ಸೇವಕ ಗಮನಿಸುತ್ತಾನೆ. ಶಿವನಾಗದೇವನಲ್ಲಿ ನಾರ್ಸಿಸಸ್ ಮನೋಭಾವವೂ ಇದ್ದು ತನ್ನ ಪ್ರತಿಬಿಂಬವನ್ನು ತಾನೇ ಮೋಹಿಸುತ್ತ ಕನಸಿನಲ್ಲಿ ತನ್ನಲ್ಲಿ ಅಡಗಿದ್ದ ದೀಪದ ಮೊಲ್ಲೆಯನ್ನು ತನ್ನ ಪ್ರತಿಬಿಂಬದಲ್ಲಿ ಕಾಣುತ್ತ ಮೋಹಿಸುವುದು... ಮತ್ತು ತನ್ನೊಳಗೇ ಇರುವ ಹೆಣ್ಣೊಬ್ಬಳಿಂದಾಗಿ ಸಿರಿಸಂಪಿಗೆಯೊಡನೆ ಕೂಡಲಾರದ ಆತನ ಪರಿಸ್ಥಿತಿಯನ್ನು ಕಂಬಾರರು ಒಬ್ಬ ನಾಟಕಕಾರನಾಗಿ ಮತ್ತು ಒಬ್ಬ ಮನೋವಿಜ್ಞಾನಿಯಂತೆ ಸಮರ್ಥವಾಗಿ ಚಿತ್ರಿಸಿದ್ದಾರೆ.

ರಾಜಕುಮಾರನ ಕತೆ ಹೀಗಿರುವಾಗ ಅಲ್ಲಿ ಪಾತಾಳಲೋಕದಲ್ಲಿರುವ ಕಾಳಿಂಗನಿಗೆ ದಿನವೂ ಭೂಲೋಕದಲ್ಲಿರುವ ಹೆಣ್ಣೊಬ್ಬಳು ಕಾಡುವ, ಕರೆವ ಕನಸು. ಆತನಲ್ಲಿ ಆ ಹೆಣ್ಣಿನ ವಿಚಿತ್ರ ಬಯಕೆ ಹಬ್ಬಿದೆ. ಕಾಳಿಂಗ ತನ್ನ ಕನಸಿನ ಹೆಣ್ಣನ್ನು ಹುಡುಕುತ್ತ ಹೊರಡುವನು. ಅವಳು ಬೇರ್‍ಯಾರೂ ಅಲ್ಲ... ಅವಳು ಸಿರಿಸಂಪಿಗೆ! ಸಿರಿಸಂಪಿಗೆಯನ್ನು ಕಂಡೊಡನೆ ಕಾಳಿಂಗ ಪುಳಕಿತನಾಗುತ್ತಾನೆ. ಆಕೆಯನ್ನು ಸೇರದೆ ತನ್ನ ಜೀವನ ವ್ಯರ್ಥವೆಂದು ಆಕೆಯನ್ನು ಸೇರಲು ನಿರ್ಧರಿಸುತ್ತಾನೆ. ಇತ್ತ ಸಿರಿಸಂಪಿಗೆಯೂ ಅದೇ ಮನಸ್ಥಿತಿಯಲ್ಲಿದ್ದಾಳೆ. ಕಾಳಿಂಗ ಆಕೆಯ ಅಂತಃಪುರವನ್ನು ಪ್ರವೇಶಿಸುತ್ತಾನೆ. ಸಿರಿಸಂಪಿಗೆಯ ಅಂತರಂಗ ಕಾಳಿಂಗನಿಗಾಗಿ ಚಡಪಡಿಸುತ್ತಿದ್ದರೂ ಆಕೆಯ ನೈತಿಕತೆ ಆಕೆಯನ್ನು ಕೆಣಕುತ್ತದೆ. ತಾನು ಶೀಲವಂತ ಗರತಿಯೆಂದು ತನ್ನನ್ನು ಸಮರ್ಥಿಸಿಕೊಳ್ಳುತ್ತಾಳೆ. ಕಾಳಿಂಗನ ಅನೀತಿಯನ್ನು ನಿಂದಿಸುತ್ತಾಳೆ, ಹೆದರಿಸುತ್ತಾಳೆ. ಆದರೂ ಕಾಳಿಂಗ ಆಕೆಯನ್ನು ಸೇರಲು ಮುಂದುವರಿದಾಗ 'ತಾಯೀ' ಎಂದು ರಾಜಮಾತೆಯನ್ನು ಕರೆಯುತ್ತಾಳೆ. ರಾಜಮಾತೆ ಮಾಯಾವತಿ ಬಂದು ಅಂತಃಪುರ ಪ್ರವೇಶಿವಷ್ಟರಲ್ಲಿ ಕಾಳಿಂಗ, ಶಿವನಾಗದೇವನಾಗಿ ಪರಿವರ್ತನೆ ಹೊಂದುತ್ತಾನೆ. ಮಗ ಸೊಸೆಯಲ್ಲಿ ಸಂತಸದ ಕ್ಷಣ ಕಂಡು ರಾಜಮಾತೆ ಸಂತೃಪ್ತಳಾಗುತ್ತಾಳೆ. ಆದರೆ ಏಕಕಾಲದಲ್ಲಿ ರಾಜ (ಕಾಳಿಂಗ) ಸಿರಿಸಂಪಿಗೆಯೊಂದಿಗೆ ಸರಸವಾಡುವುದು ಮತ್ತು ಸರೋವರದಲ್ಲಿ (ಶಿವನಾಗದೇವ) ನೆರಳು ನೋಡುವುದು ಅರಮನೆಯ ಸೇವಕರಿಗೆ ಮಾತ್ರ ವಿಚಿತ್ರವಾಗಿ ತೋರುತ್ತದೆ.

ದಿನಕಳೆಯುತ್ತದೆ. ಅರಮನೆಯಲ್ಲಿ ಸಂಭ್ರಮದ ಸುದ್ದಿ. ಸಿರಿಸಂಪಿಗೆ ಬಸಿರಾಗಿದ್ದಾಳೆ. ಆದರೆ ಈ ಸುದ್ದಿ ಕೇಳಿ ರಾಜ ಶಿವನಾಗದೇವ ಕಸಿವಿಸಿಗೊಳ್ಳುತ್ತಾನೆ. ಆತನಿಗೆ ಕುತೂಹಲ ಸಂಶಯ ಬೆಳೆಯುತ್ತದೆ. ಅದರ ರಹಸ್ಯ ಕಂಡು ಹಿಡಿಯಲು ನಾಗಲಿಂಗ ದೇವಸ್ಥಾನದಲ್ಲಿ ಸಿರಿಸಂಪಿಗೆ 'ದಿವ್ಯ' ಪರೀಕ್ಷೆಗೆ ಒಳಗಾಗಬೇಕೆಂದು ವ್ಯವಸ್ಥೆ ಮಾಡುತ್ತಾನೆ. ಆತನ ತಾಯಿ ಅದನ್ನು ವಿರೋಧಿಸಿದರೂ ಶಿವನಾಗದೇವ ಒಪ್ಪುವುದಿಲ್ಲ. ಸಿರಿಸಂಪಿಗೆ ದಿವ್ಯಕ್ಕೆ ಒಳಗಾಗುತ್ತಾಳೆ. ಹಾವನ್ನು ಹಿಡಿದು ತನ್ನ ಮೈಮೇಲೆರಿಸಿಕೊಂಡು ದಿವ್ಯದಲ್ಲಿ ಗೆಲ್ಲುತ್ತಾಳೆ. ರಾಜಮಾತೆ 'ಪವಾಡ ಮೆರೆವ ದೇವತೆಯಾದೆ ಮಗಳೆ' ಎಂದು ಸಿರಿಸಂಪಿಗೆಯನ್ನು ಹರಸುತ್ತಾಳೆ. ರಾಜನಿಗೆ ಆ ದಿವ್ಯದಲ್ಲಿ ಏನೋ ಮೋಸವಿದೆ ಎಂದೆನಿಸುತ್ತದೆ. ನಿಜವನ್ನು ಪತ್ತೆ ಹಚ್ಚಲು ಆತ ಹಾತೊರೆದಿದ್ದಾನೆ. ಸಮಯ ಕಾಯುತ್ತಿದ್ದಂತೆ ಸಿರಿಸಂಪಿಗೆಗೆ ಮಗು ಜನಿಸಿದೆ.

ಸಿರಿಸಂಪಿಗೆ ಮಗುವನ್ನು ತೊಟ್ಟಿಲಲ್ಲಿಟ್ಟು ತೂಗುತ್ತಿದ್ದಾಗ ಕಾಳಿಂಗ ಮತ್ತೆ ಬರುತ್ತಾನೆ. ಕಾಳಿಂಗನ ಸಹವಾಸ ಸಿರಿಸಂಪಿಗೆಗೆ ಈಗ ಇಷ್ಟವಿಲ್ಲ. ಆತನನ್ನು ಅಲ್ಲಿಂದ ಹೊರಡುವಂತೆ ನಿಷ್ಠುರವಾಗಿ ಹೇಳುತ್ತಾಳೆ. ಕಾಳಿಂಗ ಆಕೆ ಆತನೊಂದಿಗೆ ಕಳೆದ ಕ್ಷಣಗಳನ್ನು ನೆನಪಿಸುತ್ತಾನೆ. ಆಕೆಯ ಗಂಡ ಶಿವನಾಗದೇವನ ಬಗ್ಗೆಯೂ ಹೇಳುತ್ತಾನೆ - 'ಆತನನ್ನು ಕಂಡರೆ ನನಗೆ ಸಿಟ್ಟು ಬರೋದೇ ಇಲ್ಲ.., ನನ್ನ ಕರುಳಿನ ಕೊನೆಯೊಂದು ಆತನಲ್ಲಿ ಮುಂದುವರಿದಿದೆ ಎಂದು ಅನಿಸುತ್ತದೆ. ಪೂರ್ವಜನ್ಮದಲ್ಲಿ ನಾವಿಬ್ಬರೂ ಅಣ್ಣ ತಮ್ಮ ಆಗಿದ್ದವೋ ಏನೋ...' ಎಂದು ಹೇಳಿಕೊಳ್ಳುತ್ತಾನೆ. ಅಷ್ಟರಲ್ಲಿ ಶಿವನಾಗದೇವ, ಅಂತಃಪುರದೊಳಗೆ ಪುರುಷನೊಬ್ಬನ ಧ್ವನಿಯನ್ನು ಕೇಳಿಸಿಕೊಂಡು ಬಾಗಿಲು ತೆಗೆವಂತೆ ಸಿರಿಸಂಪಿಗೆಯನ್ನು ಒತ್ತಾಯಿಸುತ್ತಾನೆ. ಕಾಳಿಂಗನನ್ನು ಬಚ್ಚಲ ಹರಿಯಿಂದ ಪಾರಾಗುವಂತೆ ಸೂಚಿಸಿ ಬಾಗಿಲು ತೆಗೆಯುತ್ತಾಳೆ. ಒಳಗೆ ಯಾರೂ ಇಲ್ಲ. ಆದರೆ ಕಾಳಿಂಗ ಬಚ್ಚಲ ಹರಿಯಿಂದ ಪಾರಾದುದನ್ನು ನೋಡಿದ ಸೇವಕರಲ್ಲಿ ರಾಜ ಸರ್ಪದ ಆಕಾರ ಲಕ್ಷಣಗಳ ಬಗ್ಗೆ ವಿಚಾರಿಸಿದಾಗ, ಆ ಸರ್ಪ ದಿವ್ಯದ ದಿನ ರಾಣಿಯ ಮೈಮೇಲೆ ಹರಿದಾಡಿದ ಸರ್ಪ ಎಂಬುದು ಸ್ಪಷ್ಟವಾಗುತ್ತದೆ. ರಾಜ ಶಿವನಾಗದೇವ ಆ ಸರ್ಪವನ್ನು ಕೊಲ್ಲಲು ಯುದ್ಧ ಹೂಡುತ್ತಾನೆ.

ಇತ್ತ ಸಿರಿಸಂಪಿಗೆಯನ್ನು ಒತ್ತಾಯಿಸಿ ಸತ್ಯವನ್ನು ಬಯಲಿಗೆಳೆಯುತ್ತಾನೆ. ಆಕೆ ತನ್ನ ಅನೀತಿಗೆ ಕಾರಣವೇನು ಅದಕ್ಕೆ ಹೊಣೆಯಾರು ಎಂಬುದನ್ನು ತಿಳಿಸುತ್ತಾಳೆ. 'ನನ್ನ ಅನೀತಿ, ನೀವು ದೇಹ ಮರೆತು ದೇವರು ಬೇಕೆಂದಾಗಲೇ ಶುರುವಾಯ್ತು ಪ್ರಭು. ನೀವು ಹಾಸಿಗೆಯಿಂದ ಸರಿದು ಹೋದಿರಿ... ಎಲ್ಲಿ ಹುಡುಕಿದರೂ ನೀವು ಸಿಕ್ಕಲಿಲ್ಲ. ಕೊನೆಗೆ ನೀವು ಸರೋವರದಲ್ಲಿ ಬೊಗಸೆ ನೀರು ಹಿಡಿದು ದೇವರ ದರ್ಶನ ಮಾಡುತ್ತಿದ್ದೀರೆಂದು ತಿಳಿಯಿತು. ನಾನೂ ಬೊಗಸೆಯಲ್ಲಿ ನೀರು ಹಿಡಿದೆ. ನನ್ನ ಬೊಗಸೆಯಲ್ಲಿಯೂ ಒಬ್ಬ ದೇವರಿದ್ದ. ಆದರೆ ಅವನು ನಿಮ್ಮ ಬೊಗಸೆಯಲ್ಲಿರೋ ದೇವರಾಗಿರಲಿಲ್ಲ.. ನಾನಾಗಲೇ ಅರ್ಧ ವಿಧವೆ... ನೀವು ಎದುರಿಗಿದ್ದಾಗ ದೇಹ. ಅವನೊಂದಿಗಿದ್ದಾಗ ಮನಸ್ಸು. ಹೀಗೆ ಸದಾ ಅರ್ಧ ವಿಧವೆಯಾಗಿರುವ ಸ್ಥಿತಿಯಿದೆಯಲ್ಲ, ಅದರಂಥಾ ಹಿಂಸೆ ಇನ್ನೊಂದಿಲ್ಲ' ಎಂದು ಸಿರಿಸಂಪಿಗೆ ತನ್ನ ಮನಸ್ಸನ್ನು ಬಿಚ್ಚಿಡುವ ಮೂಲಕ ಶಿವನಾಗದೇವನಿಗೆ ಆತನ ತಪ್ಪಿನ ಅರಿವನ್ನು ಮೂಡಿಸಲು ಪ್ರಯತ್ನಿಸುತ್ತಾಳೆ. ರಾಜ ಯುದ್ಧಭೂಮಿಯಲ್ಲಿ ಎದುರಾದ ಕಾಳಿಂಗನ ಅನೈತಿಕತೆಯನ್ನು ನಿಂದಿಸುತ್ತಾನೆ. ಆದರೆ ಕಾಳಿಂಗನಿಗೆ, ಶಿವನಾಗದೇವನ ಮೇಲೆ ಅಂತಃಕರಣ ಉಕ್ಕಿ ಬರುತ್ತದೆ. ಆ ಭಾವಕ್ಕೆ ಕಾಣವೇನೆಂದು ಕಾಳಿಂಗ

ಯೋಚಿಸಬೇಕೆನ್ನುವಷ್ಟರಲ್ಲಿ ಆತನನ್ನು ರಾಜ ಕೊಲ್ಲುತ್ತಾನೆ. ಆದರೆ ರಾಜ ಶಿವನಾಗದೇವನಲ್ಲಿ ಯುದ್ಧದ ಗೆಲುವು ಮೂಡುತ್ತಿಲ್ಲ. ಶಿವನಾಗದೇವನ ಹೊಕ್ಕಳು ತಣ್ಣಗಾಗ ತೊಡಗುತ್ತದೆ, ಬೆನ್ನುಹುರಿ ಸಡಿಲವಾಗುತ್ತದೆ. ತಾಯಿಗೆ ತಿಳಿಸಿದಾಗ ಆಕೆ ಗಾಬರಿಗೊಳ್ಳುತ್ತಾಳೆ. 'ತನ್ನನ್ನು ಸೀಳಿಕೊಂಡಾಗ ಜೀವಕಳೆದ ಇನ್ನೊಂದು ಭಾಗವೇ ಈ ಕಾಳಿಂಗ. ಸಿರಿಸಂಪಿಗೆ ನೀತಿಗೆಟ್ಟವಳಲ್ಲ ಕಾಳಿಂಗ ತನ್ನದೆ ಸೀಳು ಭಾಗವಲ್ಲದೆ, ಆತನೊಂದಿಗಿನ ಆಕೆಯ ಸಂಬಂಧ ತನ್ನೊಂದಿಗನ ಸಂಬಂಧದಂತೆಯೇ' ಎಂದು ತಾಯಿಗೆ ವಿವರಿಸುತ್ತಾನೆ. ಸಿರಿಸಂಪಿಗೆಗೂ, 'ಅಪಾರ್ಥದ ಕಿಚ್ಚಿನಲ್ಲಿ ಬೇಯುತ್ತಿದ್ದ ನಿನ್ನನ್ನು ಕೊನೆಗಾದರೂ ತಿಳಿದುಕೊಂಡೆ ಎನ್ನಿಸುತ್ತದೆ. ಕಾಳಿಂಗನಿಗೆ ನಮ್ಮ ರಾಜಕುಮಾರನಿಂದ ಸಂಸ್ಕಾರ ಮಾಡಿಸಬೇಕು. ನನಗೂ ಕೂಡಾ. ಇನ್ನೂ ಕೇಳು ನಮ್ಮ ಮಗ ಸೀಳಿಕೊಳ್ಳದ ಹಾಗೆ ನೋಡಿಕೋ' ಎಂದು ಹೇಳುತ್ತಾ ಶಿವನಾಗದೇವ ಪ್ರಾಣ ಬಿಡುತ್ತಾನೆ.

ಮನುಷ್ಯನ ಅಸ್ತಿತ್ವದ ಪ್ರಶ್ನೆಗಳನ್ನು ಎದುರಿಸುವ ಈ ನಾಟಕದ ಕೇಂದ್ರ ಬಿಂದು ರಾಜಕುಮಾರ ಸೀಳಿಕೊಂಡ ನಂತರ, ಆತನ ಅರ್ಧ ಸೀಳುಭಾಗ ಕಾಳಿಂಗನಾಗಿ ಕಾಮಪೂರಿತ ದೇಹದ ಪ್ರತಿಯಾದರೆ, ಇನ್ನರ್ಧ ಸೀಳು ಬಾಗ ಸ್ವಮೋಹ ಕೇಂದ್ರಿತ ಶಿವನಾಗದೇವನಾಗಿ ಮನಸ್ಸಿನ ಪ್ರತಿಮೆಯಾಗಿ ಉಳಿಯುತ್ತಾನೆ. ಸಿರಿಸಂಪಿಗೆಯ ಮನಸ್ಸು ಶಿವನಾಗದೇವನನ್ನು ಬೇಡುತ್ತಿದ್ದರೆ, ದೇಹ ಕಾಳಿಂಗನಿಗಾಗಿ ಪರಿತಪಿಸುತ್ತದೆ.

ಖ್ಯಾತ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು ಈ ಕೃತಿಯ ಬೆನ್ನುಡಿಯಲ್ಲಿ ಹೇಳಿರುವ ಮಾತು 'ಸಿರಿಸಂಪಿಗೆ ಅನನ್ಯವಾಗಿದೆ. ಮನುಷ್ಯ ಜೀವನದ ರಹಸ್ಯತಮವಾದ ಸತ್ಯವನ್ನು ತೆರೆದು ತೋರಿಸುವಲ್ಲಿ ಈ ನಾಟಕ ಯಶಸ್ವಿಯಾಗಿದೆ. ಈ ದೃಷ್ಟಿಯಿಂದ ಇದು ಕನ್ನಡದಲ್ಲಿಯೇ ಶ್ರೇಷ್ಠವಾದ ನಾಟಕವಾಗಿದೆ' ಎಂಬುದು ಸರಿಯಾದ ಗ್ರಹಿಕೆ. ಕನ್ನಡದ ಮತ್ತೊಬ್ಬ ಸೂಕ್ಷ್ಮ ಸಂವೇದಿ ವಿಮರ್ಶಕರಾದ ಕಿ.ರಂ. ನಾಗರಾಜ್ ಅವರೂ ಈ ಕೃತಿಯ ಮುನ್ನುಡಿಯಲ್ಲಿ 'ದೇಹ ಮನಸ್ಸು ಆತ್ಮಗಳ ಜಿಜ್ಞಾಸೆ ಎಂದಿನಿಂದಲೂ ಸಾಹಿತ್ಯದ ಮುಖ್ಯ ಪ್ರಶ್ನೆಯಾಗಿದೆ. ಸಿರಿಸಂಪಿಗೆ ನಾಟಕದ ವಿಶೇಷವೆಂದರೆ ಈ ಸಮಸ್ಯೆಯನ್ನು ಬೌದ್ಧಿಕ ಗ್ರಹಿಕೆಯ ಭಾಗವಾಗಿ ಮಾತ್ರ ನೋಡದೆ ನಾಟಕೀಯ ಸಂಘರ್ಷದ ಮೂಲಕ ವಿಕಾಸ ಶೀಲವಾಗುವುದು ಗಮನಿಸಬೇಕಾದ ಅಂಶ. ಬೌದ್ಧಿಕ ಚರ್ಚೆಯಲ್ಲಿಯೇ ಅಂತ್ಯವಾಗಬೇಕಾಗಿದ್ದ ಮೂಲ ಪ್ರಶ್ನೆಯೊಂದನ್ನು ವ್ಯಕ್ತಿಯ ಅಂತರ್ಯದ ವಿವಿಧ ಸ್ತರಗಳಿಗೆ ಬದ್ಧವಾಗಿಸಿ ಮನುಷ್ಯ ಲೋಕದಲ್ಲಿ ನಿರಂತರವಾಗಿ ಕಾಡುವ ಸಮಸ್ಯೆಯನ್ನಾಗಿ ಗ್ರಹಿಸಿರುವುದರಿಂದ ಕನ್ನಡ ನಾಟಕಗಳ ಸಂದರ್ಭದಲ್ಲಿ ಸಿರಿಸಂಪಿಗೆ ಅನನ್ಯವಾದ ಕೃತಿಯಾಗಿದೆ' ಎನ್ನುವ ಮೂಲಕ ಕಂಬಾರರ 'ಸಿರಿಸಂಪಿಗೆ'ಯ ಮಹತ್ವವನ್ನು ಕನ್ನಡ ಸಾಹಿತ್ಯಕ್ಕೆ ಮನದಟ್ಟು ಮಾಡಿಕೊಡುತ್ತಾರೆ.

## ಮಹಾಮಾಯಿ (1999)

ಮಾನವ ಸಹಜ ಪ್ರೀತಿ, ವಾತ್ಸಲ್ಯ ವಿಧಿನಿರ್ಣಯವನ್ನೂ ಮೀರಿಸಬಲ್ಲದು ಎಂಬ ಸಮರ್ಥನೆ ಈ ನಾಟಕದಲ್ಲಿ ಇದೆ. ಸಾವಿನ ದೇವತೆ ಶಟವಿತಾಯಿಯು ಸಾಕುಮಗ ಸಂಜೀವಶಿವನನ್ನು ಬಲು ಅಕ್ಕರೆಯಿಂದ ಬೆಳೆಸಿ ಅವನಿಗೆ ಅಪರೂಪದ ವೈದ್ಯವಿದ್ಯೆ ನೀಡಿದ್ದಾಳೆ. ಮಗನ ವೈದ್ಯ

ಯಶಸ್ವಿಯಾಗಿ, ಆತ ರೋಗಿಯ ನಾಡಿ ಪರೀಕ್ಷೆ ಮಾಡುತ್ತಿರುವಾಗಲೇ, ಚಿಕಿತ್ಸೆ ಫಲಕಾರಿಯೆ ಇಲ್ಲವೇ ಎಂಬುದನ್ನು ಸೂಚಿಸುವ ಪರಿಪಾಠ ಶೆಟವಿ ತಾಯಿಯದ್ದು.

ಸಂಜೀವ ಶಿವನಿಗೆ ಒಮ್ಮೆ ಅರಮನೆಯಿಂದ ಚಿಕಿತ್ಸೆಗಾಗಿ ಕರೆಬರುತ್ತದೆ. ರಾಜಕುಮಾರಿ ತೀವ್ರ ಅನಾರೋಗ್ಯದಿಂದ ಬಳಲುತ್ತಿರುತ್ತಾಳೆ. ನಿಯತಿಯಂತೆ ರಾಜಕುಮಾರಿಯ ಆಯುಷ್ಯ ತೀರುತ್ತ ಬಂದಿರುವುದು ಶೆಟವಿ ತಾಯಿಗೆ ತಿಳಿದಿರುವುದರಿಂದ ಆಕೆ ಮಗನನ್ನು ಅರಮನೆಗೆ ಹೋಗದಂತೆ ತಡೆಯುತ್ತಾಳೆ.

ಸೂಕ್ತ ಚಿಕಿತ್ಸೆ ಸಿಗದ ರಾಜಕುಮಾರಿ ರೋಗದ ವೇದನೆ ತಾಳಲಾರದೆ ಸಾಯುವುದಕ್ಕಾಗಿಯೇ ಸಾವಿನ ಮನೆಯಾದ ಮಾಯಿಬೆಟ್ಟದಲ್ಲಿನ ಗುಹೆಯನ್ನು ಹೊಗಬೇಕೆನ್ನುವಷ್ಟರಲ್ಲಿ ವೈದ್ಯ ಸಂಜೀವಶಿವ ಎದುರಾಗಿ ಆಕೆಯನ್ನು ಗುಹೆ ಪ್ರವೇಶಿಸದಂತೆ ತಡೆಯುತ್ತಾನೆ. ರೋಗದ ನೋವನ್ನು ತಾಳಲಾರದೆ ಗುಹೆ ಹೊಕ್ಕು ಸಾಯುವದಕ್ಕಾಗಿಯೇ ಬಂದಿರುವೆ ಎಂದು ಆಕೆ ತಿಳಿಸಿದೊಡನೆ ಆಕಸ್ಮಿಕವಾಗಿ ಆಕೆಯ ಕೈ ಹಿಡಿದು ನಾಡಿ ಪರೀಕ್ಷಿಸುತ್ತಾನೆ. ಅಷ್ಟರಲ್ಲಿ ಸಾವಿನ ದೇವತೆ ಶೆಟವಿ ತಾಯಿ ಮುದುಕಿ ರೂಪದಲ್ಲಿ ಪ್ರತ್ಯಕ್ಷಳಾಗಿ ವೈದ್ಯ ಮಾಡದಂತೆ ತಡೆಯುತ್ತಾಳೆ. ಆದರೂ ಸಂಜೀವಶಿವ ರಾಜಕುಮಾರಿಯನ್ನು ಪರೀಕ್ಷಿಸಿ ದೈವಿಕಶಕ್ತಿಯುಳ್ಳ ತನ್ನ ಮದ್ದಿನ ಬಳ್ಳಿಯನ್ನು ಆಕೆಯ ಕೊರಳಿಗೆ ಹಾಕುತ್ತಾನೆ. ಆ ಕ್ಷಣದಿಂದಲೆ ಅವರಿಬ್ಬರೊಳಗೆ ಪ್ರೇಮಾಂಕುರವಾಗುತ್ತದೆ. ರೋಗಿಯ ರೋಗ ಮಾಯವಾಗಿ ಲವಲವಿಕೆ ಮೂಡುತ್ತದೆ. ಶೆಟವಿತಾಯಿ ತನ್ನ ಮಾತು ಮೀರಿದ್ದಕ್ಕಾಗಿ ಮಗನ ಮೇಲೆ ಅತ್ಯಂತ ಉಗ್ರ ಕೋಪ ತಾಳುತ್ತಾಳೆ. 'ರೋಗಿ ಬದುಕುವುದು ತಾಯಿ ಮಾರ್ಗದರ್ಶನದಿಂದಲೋ ನಿನ್ನ ಮದ್ದಿನಿಂದಲೋ ಎಂಬುದನ್ನು ಒರೆಗೆ ಹಚ್ಚುವ ತವಕ ನಿನ್ನಲ್ಲಿರಲಿಲ್ಲವೆ? ತಾಯಿಯ ನೆಪದ ಮಾರ್ಗದರ್ಶನಕ್ಕಿಂತ ನಿನ್ನ ಮದ್ದೇ ಮೇಲೆಂಬ ಒಳಅಹಂಕಾರ ನಿನ್ನಲ್ಲಿರಲಿಲ್ಲವೆ?'' ಎಂದು ಕುಪಿತಳಾಗಿ ಶೆಟವಿ ತಾಯಿ ಪ್ರಶ್ನಿಸಿದಾಗ, ಮಗ 'ಎರಡೂ ತಲೆಗಳ ಗಂಡಭೇರುಂಡನಾಗಿದ್ದೇನೆ. ಎರಡೂ ಮುಖಗಳನ್ನು ಮ್ಯಾಲೆತ್ತಿ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನೋಡುತ್ತ ನಿನ್ನನ್ನು ಸಮಾಧಾನಪಡಿಸಲು ಇಲ್ಲವೆ ಗೆಲ್ಲಲು ಹೊಂಚು ಹಾಕುತ್ತಿದ್ದೇನೆ. ಒಂದು ಮುಖ ನಿನ್ನನ್ನು ತಾಯಿ ಅನ್ನುತ್ತದೆ. ಇನ್ನೊಂದು ಮುಖ ನಿನ್ನನ್ನು ವೈರಿ ಅನ್ನುತ್ತದೆ. ಒಂದನ್ನು ಕಡಿದು ಹಾಕಿ ಇನ್ನೊಂದನ್ನು ಇಟ್ಟುಕೊಳ್ಳಬೇಕೆಂಬುದು ನಿನ್ನಾಸೆ. ನನ್ನ ದುರ್ದೈವವೆಂದರೆ ಯಾವುದನ್ನೂ ಕಡಿದು ಹಾಕಿದರೂ ನಂಜೇರುತ್ತದೆ. ಏನು ಮಾಡಲಿ ಹೇಳುತಾಯಿ' ಎಂದು ತಾಯಿಯಲ್ಲಿ ತನ್ನ ಮನಸಿನ ತಾಕಲಾಟ - ದ್ವಂದ್ವವನ್ನು ಬಿಚ್ಚಿಡುತ್ತಾನೆ. ಒಂದು ಕಡೆ ಮಗ ಸಂಜೀವಶಿವ ತಾಯಿಯ ವಾತ್ಸಲ್ಯ ಪ್ರೀತಿಯನ್ನು ತೊರೆಯಲಾರ. ಮತ್ತೊಂದೆಡೆ ಒಬ್ಬ ವೈದ್ಯನಾಗಿ ಸ್ವಪ್ರಯತ್ನದಿಂದ ನೀಡಿದ ಚಿಕಿತ್ಸೆಗೆ ಸ್ಪಂದಿಸುತ್ತ, ಆರೋಗ್ಯ ಚಿಗುರಿಸಿಕೊಂಡ ರಾಜಕುಮಾರಿಯ ಆಯುಷ್ಯವನ್ನು ಕಿತ್ತುಕೊಳ್ಳಲಾರ. ರಾಜಕುಮಾರಿಯನ್ನು ಆರೈಕೆ ಮಾಡದೆ ಆಕೆಯಿಂದ ಮದ್ದಿನ ಬಳ್ಳಿ ಕಿತ್ತುಕೊಂಡರೆ, ತನ್ನತ್ತ ಪ್ರೀತಿಯ ಸಿಂಚನ ಹರಿಸಿದ ಜೀವ ಇಲ್ಲವಾಗುತ್ತದೆ. ಸದಾ ತಾಯಿಯ ಅಧಿಕಾರ ಪ್ರಭಾವಳಿಯೊಳಗಿದ್ದು, ಆಕೆಯ ಸೂಚನೆ ಸಾಮರ್ಥ್ಯ ಶಕ್ತಿಯಿಂದಲೇ ವೈದ್ಯ ನಡೆಸುತ್ತಿದ್ದರೆ ತನ್ನ ಮದ್ದಿಗೆ ತನ್ನ ಸಾಮರ್ಥ್ಯಕ್ಕೆ ಮಾನವ ಪ್ರಯತ್ನಕ್ಕೆ ಬೆಲೆಯೇ ಇಲ್ಲವೇ...? ತಾಯಿಯ ಅಧಿಕಾರದಿಂದ ಬಿಡುಗಡೆಯನ್ನು ಪಡೆಯುವುದೇ ಮೇಲೆಂದು ಸಂಜೀವ ಶಿವ ನಿರ್ಧರಿಸಿದರೂ ತಾಯಿಯಿಲ್ಲದೆ ತನ್ನ ವೈದ್ಯದ ಶಕ್ತಿ ಇಳಿಮುಖವಾಗುತ್ತದೆ ಎಂಬ ದುಃಖದಿಂದ,

ತನ್ನ ಮಾನಸಿಕ ಕ್ಷೋಭೆಯನ್ನು ತಾಯಿಯೆದುರು ಬಿಚ್ಚಿಡುತ್ತಾನೆ. ಆದರೆ ಶೆಟವಿ ಮಾತೃ ಅಂತಃಕರಣವುಳ್ಳವಳಾದರೂ ಇದೀಗ ತನ್ನ ನಿಯತಿ ಮೀರುವ, ದೈವ ಸಂಕಲ್ಪವನ್ನು ಸಾಮರ್ಥ್ಯವನ್ನು ಪ್ರಶ್ನಿಸುತ್ತಿರುವ ತನ್ನ ಅಕ್ಕರೆಯ ಮಗನ ಮೇಲಿರುವ ಪ್ರೀತಿ ವಾತ್ಸಲ್ಯವನ್ನು ಬದಿಗೊತ್ತಿ ತನ್ನ ನಿಯತಿಯನ್ನು ಕಾರ್ಯಗತಗೊಳಿಸಲು ಮುಂದಾಗುತ್ತಾಳೆ. 'ದೈವ ಸಂಕಲ್ಪಕ್ಕೆ ಸವಾಲು ಹಾಕಿರುವೆ, ನಾಡಿದ್ದು ಅಮಾವಾಸ್ಯೆ ಅಸ್ತಮಾನ ಆಗೋದರೊಳಗೆ ರಾಜಕುಮಾರಿಯ ಕತ್ತಿನಲ್ಲಿ ಕಟ್ಟಿರುವ ಮದ್ದಿನ ಬಳ್ಳಿಯನ್ನು ಕಿತ್ತುತಾ' ಎಂದಾಗ ಮಗ, ರಾಜಕುಮಾರಿಯ ಆಯುಷ್ಯವನ್ನು ಕಸಿದುಕೊಳ್ಳಲು ಇಚ್ಚಿಸದೆ ತಾಯಿ ಮಾತನ್ನು ನಿರಾಕರಿಸುತ್ತಾನೆ. ಸಿಟ್ಟುಗೊಂಡ ಶೆಟವಿ ತಾಯಿ, 'ರಾಜಕುಮಾರಿ ಏಕಕಾಲಕ್ಕೆ ಇಬ್ಬರನ್ನು ಮದುವೆಯಾಗುತ್ತಾಳೆ. ಒಂದು ನಿನ್ನನ್ನು ಇನ್ನೊಂದು ಸಾವನ್ನು' ಎಂದು ಹೇಳುತ್ತಾಳೆ. ತಾಯಿಗೆ ಹೆದರಿ ಸಂಜೀವಶಿವ ರಾಜಕುಮಾರಿಯ ಕೊರಳೊಳಗಿನ ಮದ್ದಿನ ಬಳ್ಳಿಯನ್ನು ತೆಗೆದುಕೊಳ್ಳಲು ಯತ್ನಿಸಿದಾಗ ಆಕೆ ಅದಕ್ಕೆ ಅವಕಾಶ ನೀಡುವುದಿಲ್ಲ. ಆಕೆಯ ಕೊರಳಿಗೆ ಯಾವುದೇ ಹಾರ ಹಾಕಲಿ, ದಾರ ಕಟ್ಟಲಿ ಅದೇ ಮದುವೆ, ಅಂದಿನಿಂದಲೇ ಆಯುಷ್ಯವೃದ್ಧಿಯೆಂದು ಜ್ಯೋತಿಷಿಗಳ ಭವಿಷ್ಯವಾಣಿಯಿದೆ. ರಾಜಕುಮಾರಿಯ ತೀರ್ಮಾನದಂತೆ ಸಂಜೀವ ಶಿವ ಆಕೆಯನ್ನು ತನ್ನ ಸಂಗಾತಿಯಾಗಿ ಸ್ವೀಕರಿಸುತ್ತಾನೆ.

ಆದರೆ ತಾಯಿ ಸಿಟ್ಟಿಗೆ, ಅವಕೃಪೆಗೆ ಗುರಿಯಾದ ಸಂಜೀವಶಿವನ ವೈದ್ಯಶಕ್ತಿ ಕುಸಿಯತೊಡಗುತ್ತದೆ. ನಾಳೆಯ ಅಸ್ತಮಾನದೊಳಗೆ ರಾಜಕುಮಾರಿಯ ಕೊರಳೊಳಗಿನ ಮದ್ದಿನ ಬಳ್ಳಿ ನನ್ನ ಕೈ ಸೇರಬೇಕು ಎಂದು ತಾಯಿಯ ಅಪ್ಪಣೆಯನ್ನು ಪಾಲಿಸದೆ, ಆಕೆಯ ನಿಯತಿಯನ್ನು ಸುಳ್ಳಾಗಿಸಬೇಕೆಂದು ಆತ ರಾಜಕುಮಾರಿಯೊಂದಿಗೆ ಊರು ಬಿಟ್ಟು ಹೊರಡುವನು. ಆದರೆ ಶೆಟವಿಯ ಶಕ್ತಿಯಿಂದ ದಾರಿತಪ್ಪಿ ಅವರಿಬ್ಬರೂ ಸಾವಿನ ಗುಹೆಯಿರುವ ಮಾಯಿಬೆಟ್ಟದ ಸುತ್ತಲೇ ಅಲೆದಲೆದು ಸಾವಿನ ಗುಹೆಯನ್ನು ಪ್ರವೇಶಿಸುತ್ತಾರೆ. ಗುಹೆಯೊಳಗೆ ಬಂದೊಡನೆ ಸಂಜೀವಶಿವನನ್ನು ಸ್ವಾಗತಿಸುವವಳು ಶೆಟವಿ ತಾಯಿಯ ಆಪ್ತ ಸೇವಕಿ ಗಿರಿಮಲ್ಲಿಗೆ. ಆಕೆಯನ್ನು ಕಂಡೊಡನೆ ಸಂಜೀವಶಿವನಿಗೆ ಮೋಸದಾಟದ ಅರಿವಾಗುತ್ತದೆ. ತಟ್ಟನೆ ಅಷ್ಟರಲ್ಲಿ ರಾಜಕುಮಾರಿ ಕಣ್ಮರೆಯಾಗಿರುತ್ತಾಳೆ. ಆಕೆಯನ್ನು ಕಾಣೆಯಾಗಿರಿಸಿದ್ದು ಶೆಟವಿತಾಯಿಯ ಸೇವಕಿಯರು. ಆಕೆಯ ಕೊರಳಿಂದ ಮದ್ದಿನ ಬಳ್ಳಿಯನ್ನು ಆಕೆಯಿಂದಲೇ ಮೋಸದಿಂದ ಕಳಚಿಸುತ್ತಾರೆ. ರಾಜಕುಮಾರಿಯ ದೇಹದ ಚೈತನ್ಯ ಕುಂದತೊಡಗುತ್ತಿದ್ದಂತೆ ಆಕೆಯನ್ನು ಸಂಜೀವ ಶಿವನ ಬಳಿ ಕರೆತರುತ್ತಾರೆ. ತಾಯಿಯ ಮೋಸಮಾಟಕ್ಕೆ ಮಗ ಸಿಟ್ಟುಗೊಂಡಿರುವಾಗ ಗುಹೆಯೊಳಗಿನ ಸಿಂಹಾಸನದಲ್ಲಿ ಗಿಡುಗ ಪಕ್ಷಿಯ ರೂಪದಲ್ಲಿ ಶೆಟವಿ ಪ್ರತ್ಯಕ್ಷಳಾಗುತ್ತಾಳೆ. ತಾಯಿ-ಮಗನಿಗೆ ವಾದ ಬೆಳೆಯುತ್ತದೆ. ಶೆಟವಿತಾಯಿ ಮಗನತ್ತ ಸಹಜವಾಗಿ ಪ್ರೀತಿಯ ಮಾತುಗಳನ್ನು ಹರಿಸುತ್ತಾಳೆ. ನನ್ನ ನಿಯತಿಯನ್ನು ಮೀರಿ ನಿನಗೆ ಅಮರತ್ವವನ್ನು ನೀಡಬಲ್ಲೆ ಎಂದಾಗ ಮಗ 'ಅಮರನಾಗಿ ನಿನ್ನಿಂದ ದೂರವಾಗುವುದಕ್ಕಿಂತ ನಿನ್ನ ಮಗನಾಗಿ ಮನುಷ್ಯನಾಗಿರೋದೆ ನನ್ನ ಸೌಭಾಗ್ಯ ತಾಯಿ' ಎಂದನ್ನುತ್ತಾನೆ. ತಾಯಿ ಹೃದಯ, ಮಗನ ಮಾತಿನಿಂದ ಮಮತೆ ತುಂಬಿ ಅರಳುತ್ತದೆ. ರಾಜಕುಮಾರಿಯಿಂದ ಮದ್ದಿನ ಬಳ್ಳಿ ಕಳಚಿ, ಆಕೆಯ ಆಯುಷ್ಯ ಕಸಿದುಕೊಂಡ ಬಗ್ಗೆ ಮಗನಿಗೆ ಅಸಾಧ್ಯ ಕೋಪವಿರಬಹುದೆಂದು ಭಾವಿಸಿದ್ದ ಶೆಟವಿಯ ತಾಯಿಗೆ ಮಗನ ಮಾತು ಕೇಳಿ ಮಮತೆ ತುಂಬಿ ಬರುತ್ತದೆ. ಮಗನ ಮಾತಿಗೆ ಸಂಪ್ರೀತಳಾಗಿ 'ಕಂದಾ ಮದುವೆಯ ಕಾಣಿಕೆಯಾಗಿ ನಿನಗೆ ಇಮ್ಮಡಿ ಆಯುಷ್ಯ ಕೊಟ್ಟಿದ್ದೇನೆ, ತಾಳಿಕಟ್ಟು' ಎನ್ನುತ್ತಾಳೆ. ಆತ ರಾಜಕುಮಾರಿಗೆ ತಾಳಿ ಕಟ್ಟಿದೊಡನೆ

ಆಕೆ ಕುಸಿದು ಬೀಳುತ್ತಾಳೆ. ಸಂಜೀವಶಿವ ತಟ್ಟನೆ ಅಲ್ಲೇ ಪ್ರಕಾಶಮಾನವಾಗಿ ಉರಿಯುತ್ತಿದ್ದ ತನ್ನ ಆಯುಷ್ಯ ಜ್ಯೋತಿಯ ಹಣತೆಗೆ ಸುರಿಯುತ್ತಾನೆ. ರಾಜಕುಮಾರಿಯ ಆಯುಷ್ಯ ಜ್ಯೋತಿ ಬೆಳಗತೊಡಗುತ್ತದೆ. ಶೆಟವಿಯ ತಾಯಿ ತನ್ನ ನಿಯತಿ ಮೀರಿದ್ದಕ್ಕಾಗಿ ಅವರಿಬ್ಬರನ್ನು ಆ ಲೋಕದಿಂದ ತೊಲಗುವಂತೆ ಆಜ್ಞಾಪಿಸುತ್ತಾಳಲ್ಲದೆ, ಮಗನ ವೈದ್ಯವೃತ್ತಿಯಲ್ಲಿ ತನ್ನ ವರ ಪರಿಣಾಮಹೀನವಾಗಲಿ ಎಂದು ಶಪಿಸುತ್ತಾಳೆ. ಮಹಾಮಾಯಿ ಶೆಟವಿಯಲ್ಲಿರುವ ಮಾತೃಪ್ರೀತಿಯ ಸೆಲೆಯ ಜತೆಗೆ ಕರ್ತವ್ಯದಲ್ಲಿನ ಆಕೆಯ ನಿಷ್ಠತೆಯು ನಾಟಕವಿಡಿ ಹರಡಿಕೊಂಡಿದೆ. ಸಾವಿನ ನಿಯತಿ-ವಾಸ್ತವತೆ ಮತ್ತು ವಾತ್ಸಲ್ಯದ ಘರ್ಷಣೆಯಲ್ಲಿ ಪುತ್ರ ವಾತ್ಸಲ್ಯದ ಸೆಳೆತವೇ ಮೇಲಾಗುವಂತೆ, ಪ್ರೀತಿಯಿಂದಲೆ ಸಂಜೀವಶಿವ ತಾಯಿಯನ್ನು ಮಣಿಸುವುದು ಮತ್ತು ಆಕೆಯಿಂದ ತನಗೆ ಇಮ್ಮಡಿ ಆಯುಷ್ಯವನ್ನು ಪಡೆದು ತನ್ನ ಕನಸುಗಳನ್ನು ಗೆಲ್ಲುವ ಕ್ಷಣಗಳನ್ನೂ ಅಷ್ಟೇ ಪರಿಣಾಮಕಾರಿಯಾಗಿ ಕಂಬಾರರು ಚಿತ್ರಿಸಿದ್ದಾರೆ. ತನ್ನಲ್ಲಿ ಹುಟ್ಟಿಕೊಂಡ ಮಮತೆಯೇ ತನಗೆ ಸೋಲುಣಿಸುವುದು ಮತ್ತು ತನ್ನಿಂದಲೇ ನಿಯತಿಯನ್ನು ಕಾರ್ಯಗೊಳಿಸಲಾಗದಕ್ಕಾಗಿ ಶೆಟವಿ ತಾಯಿ ವ್ಯಗ್ರಳಾಗಿ, ನಿಷ್ಠುರಳಾಗಿ ಮಗನನ್ನು ತ್ಯಜಿಸುವ ಕ್ಷಣವೂ ಅಷ್ಟೇ ಪರಿಣಾಮಕಾರಿಯಾಗಿ ನಾಟಕದಲ್ಲಿ ಮೂಡಿಬಂದಿದೆ.

ಸಾಮಾನ್ಯವಾಗ ಕಂಬಾರರ ಇತರ ನಾಟಕಗಳಲ್ಲಿರುವಂತೆ ಇಲ್ಲಿ ಹಾಡುಗಳಿಲ್ಲ. ಯಕ್ಷಗಾನದ ಭಾಷೆಗೆ ಹತ್ತಿರದಲ್ಲಿರುವ ಇಲ್ಲಿನ ಸಂಭಾಷಣೆಗಳೂ ಅವರ ಇತರ ನಾಟಕಗಳಿಗಿಂತ ಭಿನ್ನ. ಈ ನಾಟಕದ ಮತ್ತು ನಾಟಕಕಾರರ ವಿಶಿಷ್ಟತೆಯನಜ್ಞ ವಿಮರ್ಶಕ ಜಿ.ಎಸ್. ಆಮೂರ ಅವರು ಹೀಗೆ ಗುರುತಿಸಿದ್ದಾರೆ. The Mother supreme is a result of an integration of three independent discourses-drama, narration and poetry. It embodies a dialogic structure and a dramatic conflict, employs narrative and descriptive devices and exploits the suggestive potential of poetic language which operates simulataneously on multiple levels. it is the creation of a rare artist who combines in himself all the three role dramatist, poet and novelist-effectively. The tone and movement of the play are marked by a similar diversity.

## ಪುಷ್ಪರಾಣಿ (1990)

ಇದು ಮಕ್ಕಳ ನಾಟಕ. ಪರಿಸರ ಸಂರಕ್ಷಣೆಯ ವಿವೇಕವನ್ನು ಮಕ್ಕಳ ಮನಸ್ಸಲ್ಲಿ ಬಿತ್ತಲು ಸೂತ್ರಧಾರ, ಮೇಳದ ಬಳಕೆಯಿಂದ ಈ ನಾಟಕವನ್ನು ಹೆಣೆಯಲಾಗಿದೆ.

ಶಿವಾಪುರ ಪಟ್ಟಣದ ದೊರೆ ಸೋಮರಾಯ. ಅವನು ಪ್ರಕೃತಿ ಪ್ರೇಮಿ. ಆದ್ದರಿಂದಲೇ ಆತ ತನ್ನ ರಾಜ್ಯದಲ್ಲೊಂದು ಉಪವನವನ್ನು ನಿರ್ಮಿಸಿ ಅಲ್ಲಿ ಅಪರೂಪದ ಬಗೆಬಗೆಯ ಮರಗಿಡಗಳನ್ನು ಬೆಳೆಸಿದ್ದಾನೆ. ಆ ಉಪವನದಲ್ಲಿ ಮರಗಿಡಗಳೊಂದಿಗೆ ಪ್ರಾಣಿಪಕ್ಷಿ ಸಂಕುಲವೂ ಬೆಳೆದಿದೆ. ಆ ಉಪವನಕೊಬ್ಬ ವನಪಾಲಕನಿದ್ದಾನೆ. ಒಂದು ದಿನ ದೊರೆಯ ವೈರಿ ಪಡೆ ಆ ಉಪವನವನ್ನು ಮುತ್ತಿ ಮರಗಿಡಗಳನ್ನು ಕಡಿಯತೊಡಗಿರುವ ಸುದ್ದಿ ವನಪಾಲಕನಿಂದ ರಾಜನಲ್ಲಿಗೆ ತಲುಪುತ್ತದೆ. ರಾಜ ಸೈನ್ಯ ಸಮೇತ ತೆರಳಿ ಮರಗಳನ್ನು ರಕ್ಷಿಸುತ್ತಾನೆ.

ಆ ಸಂದರ್ಭದಲ್ಲಿ ವನಪಾಲಕನ ರಾಜನಿಗೆ ಒಂದು ವಿಶಿಷ್ಟವಾದ ಎಳೆಯ ಮರದ ಪರಿಚಯವಾಗುತ್ತದೆ. ಅದು ವನದೇವತೆಯ ಮಗಳು ಪುಷ್ಪರಾಣಿ, ಈಗ ನನ್ನ ಸಾಕುಮಗಳು-ಎಂದು ವನಪಾಲಕ ಮರವಾಗಿ ನಿಂತಿರುವ ಸಾಕು ಮಗಳನ್ನು ರಾಜನಿಗೆ ಪರಿಚಯಿಸುತ್ತಾನೆ. ಹಾಗೆಯ ಆ ಮರಕ್ಕೆ ಪುಟ್ಟ ಕಲ್ಲೆಸೆದು ಹುಡುಗಿಯನ್ನಾಗಿ ಮಾಡುತ್ತಾನೆ. ರಾಜನಿಗೆ ಅಚ್ಚರಿ. ಆತ ಆಕೆಯನ್ನು ಮರ ಮತ್ತು ಮಗಳನ್ನಾಗಿ ಮಾಡಬಲ್ಲ ನಾಲ್ಕು ಪುಟ್ಟ ಕಲ್ಲುಗಳ ವಿವರವನ್ನೂ ಹೇಳುತ್ತಾನೆ. ಅವಳೇ ನಾಲ್ಕು ಚಿಕ್ಕ ಕಲ್ಲುಗಳನ್ನು ಕೊಡುತ್ತಾಳೆ. ಒಂದೊಂದನ್ನೆ ಅವಳ ಮೇಲೆ ಎಸೆಯುತ್ತಾ ಹೋದರೆ ಒಂದರಿಂದ ಮರವಾಗುತ್ತಾಳೆ. ಇನ್ನೊಂದನ್ನೆಸದರೆ ಹೂ ಬಿಡುತ್ತಾಳೆ. ಮೂರನೆಯದರಿಂದ ಹೂ ಉದುರಿಸುತ್ತಾಳೆ. ನಾಲ್ಕನೆಯ ಕಲ್ಲು ಎಸೆದರೆ ಪುನಃ ಹುಡುಗಿಯಾಗುತ್ತಾಳೆ - ಎಂದು ವನಪಾಲಕ ಹೇಳಿದಾಗ, ರಾಜನದನ್ನು ನಂಬದೆ ಆ ಪವಾಡವನ್ನು ಕಣ್ಣಾರೆ ನೋಡಲು ಇಚ್ಚಿಸುತ್ತಾನೆ. ಕಲ್ಲುಗಳ ಪ್ರಯೋಗ ನಡೆದು, ರಾಜ ಸುಂದರಿ ಪುಷ್ಪರಾಣಿಯನ್ನು ಗಾಂಧರ್ವ ವಿಧಿಯಿಂದ ಮದುವೆಯಾಗಿ ಅರಮನೆಗೆ ಕರೆತರುತ್ತಾನೆ.

ಅರಮನೆಯಲ್ಲಿ ಮಹಾರಾಣಿಗೆ ಪುಷ್ಪರಾಣಿಯ ಮೇಲೆ ಮತ್ಸರ. ಕಾಡಲ್ಲಿ ಬೆಳೆದ ಹುಡುಗಿಗೆ ಅರಮನೆಯ ಶಿಷ್ಟಾಚಾರ ತಿಳಿದಿಲ್ಲ. ಜತೆಗೆ ಅಪಾರವಾದ ಮುಗ್ಧತೆ. ಮಹಾರಾಣಿ ದಾಸಿಯರೆಲ್ಲ ಪುಷ್ಪರಾಣಿಯನ್ನು ಪೆದ್ದೆಂದು ಅಪಹಾಸ್ಯ ಮಾಡಿ ನಗುತ್ತಾರೆ. ಮತ್ಸರ ತಾಳಲಾರದ ಮಹಾರಾಣಿ ತನ್ನ ತಂದೆಗೆ ಪತ್ರ ಕಳುಹಿಸಿ ಗಂಡನ ರಾಜ್ಯದ ಮೇಲೆ ದಂಡೆತ್ತಿ ಬರುವಂತೆ ಸೂಚಿಸುತ್ತಾಳೆ. ಪುಷ್ಪರಾಣಿ, ಮಹಾರಾಣಿಯು 'ಗಿಳಿ-ಗಿಡುಗರ' ಹಿಂಸೆಯ ಆಟಕ್ಕಾಗಿ ಅರಮನೆಯಲ್ಲಿ ಸಾಕಿರುವ ಪಂಜರದ ಗಿಳಿಯನ್ನು ಉಪವನಕ್ಕೆ ಹಾರಿಸಿಬಿಡುವಷ್ಟರಲ್ಲಿ, ರಾಜ ಸೋಮರಾಯನ ರಾಜ್ಯಕ್ಕೆ ಹೆಣ್ಣುಕೊಟ್ಟ ಮಾವನೇ ದಂಡೆತ್ತಿ ಬರುತ್ತಾನೆ. ರಾಜ ಯುದ್ಧಕ್ಕೆ ತೆರಳುವಾಗ ಗರ್ಭಿಣಿಯಾಗಿರುವ ಪುಷ್ಪರಾಣಿಯ ಯೋಗಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಮಹಾರಾಣಿಗೆ ವಹಿಸುತ್ತಾನೆ. ಅತ್ತ ರಾಜ ಹೊರಟೊಡನೆ ಇತ್ತ ಮಹಾರಾಣಿ ಮೋಸದ ಮಾತುಗಳಿಂದ ಪುಷ್ಪರಾಣಿಯನ್ನು 'ಮರವಾಗುವ ಪವಾಡ'ಕ್ಕೆ ಒಪ್ಪಿಸಿ ಆಕೆಯನ್ನು ಮರವನ್ನಾಗಿ ಮಾರ್ಪಡಿಸುತ್ತಾಳೆ. ಆದರೆ ಮತ್ತೆ ಹುಡುಗಿಯನ್ನಾಗಿ ಮಾರ್ಪಡಿಸದೆ, ಆ ಮರವನ್ನು ಕಡಿಯಲು ಮರಕಟುಕರನ್ನು ಕರೆಸುತ್ತಾಳೆ. ಆದರೆ ಆ ಮರಕಟುಕರು ಮರ ಕಡಿಯದಂತೆ ಸಾವಿರಾರು ಹಕ್ಕಿ ಪ್ರಾಣಿಗಳು ತಡೆಯೊಡ್ಡುತ್ತವೆ, ಮರಕಟುಕರ ಮೇಲೆರಗಿ ಪ್ರತಿಭಟಿಸುತ್ತವೆ. ಮರಕಟುಕರು ಪಲಾಯನ ಮಾಡುವಷ್ಟರಲ್ಲಿ ಗಿಳಿಮರಿಯೊಂದು ಪುಷ್ಪರಾಣಿಗೆ ಗಂಡು ಮಗುವಾಗಿರುವ ಸಿಹಿ ಸುದ್ದಿಯನ್ನು ತರುತ್ತದೆ. ಮಕ್ಕಳಿಲ್ಲದ ಮಹಾರಾಣಿಗೆ ಈ ವಿಷಯ ತಿಳಿದು ಸಂತೋಷವಾಗುತ್ತದೆ. ಆದರೆ ಆಕೆಗೆ ದುಃಖವೂ ಏರಿ ಬರುತ್ತದೆ. ಮರವಾಗಿರುವ ತನ್ನ ತಂಗಿ ಪುಷ್ಪರಾಣಿಯನ್ನು ಮತ್ತೆ ಮನುಷ್ಯಳನ್ನಾಗಿ ಮಡುವ ಕಲ್ಲನ್ನು ಎಸೆದು ಬಿಟ್ಟೆನಲ್ಲ - ಎಂಬ ಕೊರಗು ಆಕೆಯಲ್ಲಿದೆ.

ಯುದ್ಧ ಗೆದ್ದು ಬಂದ ಮಹಾರಾಜ, ಪುಷ್ಪರಾಣಿ ಮರವಾಗಿರುವ ಸುದ್ದಿ ತಿಳಿದು ತೀರಾ ದುಃಖಿತನಾಗುತ್ತಾನೆ. ರಾಜನ ದುಃಖ ತಿಳಿದ ಉಪವನದ ವನಪಾಲಕ, ಗಿಳಿಯೊಂದು ಮಹಾರಾಣಿ ಅಂದು ಬೇರೆಡೆ ಎಸೆದ ನಾಲ್ಕನೇ ಕಲ್ಲನ್ನು ಕಚ್ಚಿಕೊಂಡು ಒಡಾಡುವ ಸುದ್ದಿಯನ್ನು ಹೇಳಿ ಆ ಕಲ್ಲನ್ನು ಗಿಳಿಯಿಂದ ಮರಳಿ ಕೊಡುತ್ತಾನೆ.

ರಾಜ ಮಹಾರಾಣಿಯನ್ನು ಶಿಕ್ಷಿಸಲು ಕಲ್ಲಿನ ಸಮೇತ ಅರಮನೆಗೆ ತೆರಳುತ್ತಾನೆ. ಅಲ್ಲಿ ಮಹಾರಾಣಿ ಪಶ್ಚಾತ್ತಾಪದಿಂದ ಬೆಂದಿದ್ದಾಳೆ. ರಾಜನ ಕ್ಷಮೆ ಕೋರಿ ತನಗೆ ಶಿಕ್ಷೆ ವಿಧಿಸಬೇಕೆಂದು ಕೋರುತ್ತಾಳೆ. ಮಹಾರಾಜ, ನಾಲ್ಕನೇ ಕಲ್ಲನ್ನು ಮಹಾರಾಣಿಗೆ ನೀಡಿ ಪುಷ್ಪರಾಣಿ ಮತ್ತು ಮಗುವನ್ನು ಮತ್ತೆ ದೊರಕಿಸಿಕೊಳ್ಳುತ್ತಾನೆ. ಎಲ್ಲರೂ ಸುಖವಾಗಿರುತ್ತಾರೆ.

ಕಾಡಿನ ಸೌಂದರ್ಯ ಮತ್ತು ಮುಗ್ಧತೆಗಳಿಗೆ ಸಂಕೇತವಾಗಿರುವ ಪುಷ್ಪರಾಣಿಯನ್ನು ರಾಜ ಅರಮನೆಗೆ ಕರೆತರುವ ಮೂಲಕ ಕಾಡು-ನಾಡುಗಳಿಗೆ ಪರಸ್ಪರ ಸಂಬಂಧವನ್ನು ನಿರೂಪಿಸಿ, ಪರಿಸರ ರಕ್ಷಣೆಯ ಬಗ್ಗೆಯೂ ಅರಿವು ಮೂಡಿಸಲಾಗಿದೆ. ಪರಿಸರ ನಾಶದ ಬಗ್ಗೆ ಮಕ್ಕಳಲ್ಲಿ ಎಚ್ಚರ ಹುಟ್ಟಿಸುವಲ್ಲೂ ಕಂಬಾರರು ಈ ನಾಟಕದ ಮೂಲಕ ಯಶಸ್ವಿಯಾಗಿದ್ದಾರೆ.

ನಾಟಕದೊಳಗಿರುವ ಮಂತ್ರ-ತಂತ್ರಗಳು ಮಕ್ಕಳನ್ನು ವಿಶೇಷವಾಗಿ ಆಕರ್ಷಿಸಬಲ್ಲವಲ್ಲದೆ, ಕಾಡಿನಲ್ಲಿನ ಪ್ರಾಣಿ, ಪಕ್ಷಿ, ಗಿಡ, ಮರಗಳನ್ನು ನಾಟಕಕ್ಕೆ ಎಳೆದು ತಂದಿರುವುದರಿಂದ ರಂಗಪ್ರಯೋಗದ ವೇಳೆ ಮಕ್ಕಳ ಸಂತೋಷವನ್ನು ನೋರ್ಮಡಿಗೊಳಿಸಬಲ್ಲ ಸಾಮರ್ಥ್ಯ ಈ ನಾಟಕಕ್ಕಿದೆ.

## ಆಲಿಬಾಬ ಮತ್ತು ನಲವತ್ತು ಕಳ್ಳರು (1980)

ಕಂಬಾರರು 1980ರಲ್ಲಿ ಬರೆದಿರುವ ಮತ್ತೊಂದು ಮಕ್ಕಳ ನಾಟಕ 'ಆಲಿಬಾಬ ಮತ್ತು ನಲವತ್ತು ಕಳ್ಳರು' ಮಕ್ಕಳ ಜಗತ್ತಿಗೆ ಅವರು ಕೊಟ್ಟಿರುವ ಇನ್ನೊಂದು ಮಹತ್ವದ ಕಾಣಿಕೆ. ಪರದೇಶದ ಜನಪ್ರಿಯ ಜನಪದ ಕತೆಯನ್ನು ಇಲ್ಲಿನ ದೇಸೀಯ ಚೌಕಟ್ಟಿನಲ್ಲಿರಿಸಿ ಈ ನಾಟಕ ಬರೆಯಲಾಗಿದೆ. ನಾಟಕದಲ್ಲಿನ ಸಾಕಷ್ಟು ಹಾಸ್ಯದ ಸಿಂಚನ ಮಕ್ಕಳನ್ನು ಮುದುಗೊಳಿಸುತ್ತದೆ. ಬಯಲಾಟದ ಸೂತ್ರಧಾರ, ಗಣೇಶ, ಮೇಳಗಳು, ಮೇಳದ ಹಾಡುಗಳ, ಕುಣಿತಗಳು, ಸಾಕಷ್ಟು ಕಳ್ಳ-ಸುಳ್ಳರ ಪಾತ್ರಗಳು ಮಕ್ಕಳ ಚೈತನ್ಯಕ್ಕೆ ಪೂರಕವಾಗಿದೆ.

## ಇತರ ಏಕಾಂಕ ನಾಟಕಗಳು ಇವು :

1. **ಹಳವಂಡಗಳು** : ಇದು ತುರ್ತುಪರಿಸ್ಥಿತಿಯ ದುರಂತವನ್ನು ಸಾಂಕೇತಿಕವಾಗಿ ಚಿತ್ರಿಸುವ ನಾಟಕ
2. **ಅಸ್ತೋವ್ಯಸ್ತ** : ಈ ಹಾಸ್ಯ ನಾಟಕ ಇಂದಿನ ರಾಜಕಾರಣಿಗಳ ಮತ್ತು ಹಿಂದಿನ ರಾಜಕಾರಣಿಗಳ ಮೂರ್ಖತನವನ್ನು ಪ್ರತಿಬಿಂಬಿಸುತ್ತದೆ.
3. **ಅಪರಿಚಿತರು** : ಈ ಪುರುಷ ಪ್ರಧಾನ ಸಮಾಜದಲ್ಲಿ, ಆಧುನಿಕ ಶಿಕ್ಷಣ ನಮ್ಮ ಸಾಮಾಜಿಕ ಸ್ಥಿತಿಯನ್ನು ಬದಲಿಸಿದರೂ ಪರಂಪರಾಗತ ನಡವಳಿಕೆ ಸಂಪ್ರದಾಯ ಆಲೋಚನೆಗಳನ್ನು ಬದಲಿಸಿಲ್ಲ ಎಂಬ ಅಂಶವನ್ನು ಈ ನಾಟಕ ತಿಳಿಸುತ್ತದೆ.

4. ಅಂಗಿ ಮ್ಯಾಲಂಗಿ : ಆಧುನೀಕತೆಗೆ ಮಾರುಹೋದ ಮನುಷ್ಯನ ವ್ಯಕ್ತಿತ್ವ ಯಾವ ದಾರಿ ಹಿಡಿಯುತ್ತದೆ ಎಂಬುದನ್ನು ಈ ನಾಟಕ ಹೇಳುತ್ತದೆ.

5. ಕಿಟ್ಟಿಯ ಕತೆ : (ಕೃತಿ ಲಭ್ಯವಾಗಿಲ್ಲ)

ಹುಟ್ಟು ನೆಲದಲ್ಲಿ ಜಾನಪದದ ಸಮೃದ್ಧತೆಯನ್ನು ಉಂಡ ಕಂಬಾರರು, ಆ ಜಾನಪದಕ್ಕೆ ಅತ್ಯಂತ ಆಧುನಿಕವಾದುದನ್ನು ಕೂಡಾ ಸಮರ್ಥವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯ ಇದೆ ಎಂಬ ಅನುಭವ ಸತ್ಯವನ್ನು ಕಂಡುಕೊಂಡು ಆಧುನಿಕ ರಂಗಭೂಮಿಯೊಳಗೆ ಜಾನಪದ ಜಗತ್ತನ್ನು ಎಳೆದು ತಂದರು. ನಮ್ಮ ನಾಟಕಗಳ ಮೂಲಕ ಅತ್ಯಂತ ವಿಶಿಷ್ಟವಾದ ರೂಪಕ ಪ್ರತಿಮಾಲೋಕವೊಂದನ್ನು ಸೃಷ್ಟಿಸಿದ ಕಂಬಾರರ ಬಗ್ಗೆ ಖ್ಯಾತ ಸಾಹಿತಿ ಯು.ಆರ್. ಅನಂತಮೂರ್ತಿ ಅವರು 'ಕಂಬಾರ ಬರೆಯುವಂತಹ ನಾಟಕಾಗಲಿ, ಪದ್ಯವಾಗಲಿ ಖಂಡಿತ ಪಾಶ್ಚಾತ್ಯರಲ್ಲೂ ಇಲ್ಲ' ಎಂದು ಹೇಳುತ್ತಾರೆ.

ಕಂಬಾರರ ನಾಟಕಗಳ ಸಮೃದ್ಧ ಮೈಗಟ್ಟನ್ನು ಅಂತರಂಗವನ್ನು ಮೆಚ್ಚಿಕೊಂಡಿರುವ ನಾಡಿನ ಖ್ಯಾತ ರಂಗಕರ್ಮಿ ಬಿ.ವಿ. ಕಾರಂತರು '... ಕನ್ನಡದಲ್ಲೇ ಅಲ್ಲ ಇಡೀ ದೇಶದಲ್ಲಿ ಕಂಬಾರರಷ್ಟು ತೀವ್ರವಾಗಿ ನೆಲದ ವಾಸನೆ ತುಂಬಿಕೊಂಡು ಜತೆಯಲ್ಲಿ ನವ್ಯದ ಆಧುನಿಕತೆಗಳನ್ನು ಮೈಗೂಡಿಕೊಂಡಿರುವ ಸೃಜನಶೀಲ ನಾಟಕಕಾರ ಸಿಗುವುದು ದುರ್ಲಭ. ನನ್ನ ಅಭಿಪ್ರಾಯದಲ್ಲಿ ದೇಶದ ಇಂದಿನ ಎಲ್ಲಾ ನಾಟಕಕಾರರ ನಡುವೆ ಕಂಬಾರರು ಅದ್ವಿತೀಯರು. ಅವರ ಜಾಗದಲ್ಲಿ ಇನ್ನೊಬ್ಬರನ್ನು ಯೋಚಿಸುವುದು ನನಗಂತೂ ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

ಕನ್ನಡದ ಮತ್ತೊಬ್ಬ ಪ್ರತಿಭಾನ್ವಿತ ನಾಟಕಕಾರ ಗಿರೀಶ್ ಕಾರ್ನಾಡ್ ಅವರು ಕಂಬಾರರ ನಾಟಕಗಳ ಬಗ್ಗೆ ಹೀಗೆನ್ನುತ್ತಾರೆ 'ಕಂಬಾರರ ನಾಟಕಗಳಿಗೆ ಸಮರ್ಥ ಭಾಷೆಯ ಜೊತೆಗೆ ಧ್ವನಿಪೂರ್ಣವಾದ ಕ್ರಿಯೆಯ ಬೆನ್ನೆಲುಬು ಇರುತ್ತದೆ. ಅವರ ನಾಟಕಗಳನ್ನು ಓದುವಾಗ ಕೂಡಾ ಅವುಗಳ ಆಂತರಿಕ ಕ್ರಿಯೆ ತಾನಾಗಿಯೇ ಕಣ್ಣಿಗೆ ಕಟ್ಟುತ್ತದೆ' (ಮೇಲಿನ ಮೂರು ಅಭಿಪ್ರಾಯಗಳು ನಾಯೀಕತೆಯ ಬೆನ್ನುಡಿಯಲ್ಲಿ)

ಕಂಬಾರರ ನಾಟಕಗಳನ್ನು ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿಟ್ಟು ತೂಗಿ ನೋಡಿದ ವಿಮರ್ಶಕ ಜಿ.ಎಸ್. ಆಮೂರ ಅವರು 'ಕಂಬಾರರ ಅಖಂಡ ಪ್ರಜ್ಞೆ ಅಥವಾ ಅಖಂಡ ಪ್ರತಿಭೆ ಏನಿದೆ ಅದು Fragmented imagination ಅಲ್ಲ ಅದೊಂದು ಅಖಂಡ ಇಮ್ಯಾಜಿನೇಷನ್, ಪ್ರತಿಭೆಯ ಬೀಸಿನಲ್ಲಿ ಅವರನ್ನು ಮೀರುವವರು ಅನೇಕರಿದ್ದಾರೆ. ಅಂದ್ರೆ ನಾಟಕದಲ್ಲಾಗಲಿ, ಕಾದಂಬರಿಯಲ್ಲಾಗಲಿ ಬೇರೆ ಬೇರೆ ಸಾಹಿತ್ಯದ ಪ್ರಕಾರಗಳಲ್ಲಾಗಲಿ ಅವರಿಗಿಂತ ಹೆಚ್ಚಿನ ಪ್ರತಿಭೆಯವರನ್ನು ನಾವು ನೋಡಬಹುದು. ಆದರೆ ಅವರಲ್ಲಿರುವ ಅಖಂಡ ಪ್ರತಿಭೆ ಏನಿದೆ ಅದು ಅವರಿಗೇನೇ ವಿಶಿಷ್ಟವಾದದ್ದು (ಕಂಬಾರರ ನಾಟಕಗಳು, ಜಿ.ಎಸ್. ಆಮೂರರ ಅಧ್ಯಕ್ಷೀಯ ಭಾಷಣ, ಪು. 20) ಎಂದು ಅಂದಿದ್ದಾರೆ.

ನಮ್ಮ ಬಹುಮುಖಿ ಪರಂಪರೆಯ ಅರಿವು ಮತ್ತು ಆಧುನಿಕ ಪ್ರಜ್ಞೆಯ ಜತೆಗೆ, ದೇಸೀಯ ಜಾನಪದದ ಕಥನ-ಕಾವ್ಯ ಮಾರ್ಗದಲ್ಲಿ ಸಾಗಿಬಂದ ಕಂಬಾರರು, ತಮ್ಮ ನಾಟಕಗಳಲ್ಲಿ ದೇಸೀಯತೆಯನ್ನು ಹೆಚ್ಚು ಸಂಭ್ರಮ ಸಮೃದ್ಧತೆಯಿಂದ ಪ್ರಕಟಗೊಳಿಸುವ ಮೂಲಕ ಆಧುನಿಕ ಕನ್ನಡ ರಂಗಭೂಮಿಗೆ ಹೊಸ ಆಯಾಮವನ್ನು ನೀಡಿದ ವಿಶಿಷ್ಟ ನಾಟಕಕಾರರು.

## ಕಂಬಾರರ ಕಾವ್ಯಗಳು

ಕಂಬಾರರು ನವೋದಯ ಘಟ್ಟದಲ್ಲೇ ಕಾವ್ಯರಚನೆಗೆ ತೊಡಗಿದರಾದರೂ ಅವರು ಸಂವೇದನೆಯಲ್ಲಿ ಮಾತ್ರ ನವ್ಯರು. ತಮ್ಮ ಹುಟ್ಟು ನೆಲದ ಬದುಕಿನಿಂದ ಸ್ಫೂರ್ತಿ ಪಡೆದ ಕಂಬಾರರು, ಆಧುನಿಕ ಕಾವ್ಯದ ಒತ್ತಡಗಳ ಜತೆ ಜಾನಪದ ಪರಂಪರೆಯ ಕೆಲವು ಅಂಶಗಳನ್ನು ಬಳಸಿಕೊಂಡು ಸಂಭ್ರಮ-ಸಮೃದ್ಧತೆ ಮುಖ್ಯ ಭಾವನಾಸ್ಥಿತಿಯಾಗುಳ್ಳ ಹಲವು ಕಥನ ಕಾವ್ಯಗಳನ್ನು ಸೃಷ್ಟಿಸಿದರು. ಕಂಬಾರರು ಸಮಕಾಲೀನ ಕಾವ್ಯ ಪರಂಪರೆಗೆ ಭಿನ್ನವಾದ ವಿಶಿಷ್ಟ ಕಾವ್ಯಗಳನ್ನು ನೀಡಿರುವುದನ್ನು ವಿಮರ್ಶಕ ಟಿ.ಪಿ. ಅಶೋಕ ಅವರು ಹೀಗೆ ಗುರುತಿಸಿದ್ದಾರೆ. 'ಆಧುನಿಕ ಕನ್ನಡ ಕಾವ್ಯ ಸಂದರ್ಭದಲ್ಲಿ ಚಂದ್ರಶೇಖರ ಕಂಬಾರರದ್ದು ಒಂದು ವಿಶಿಷ್ಟ ದನಿ. ಬೇಂದ್ರೆ ಸಂಪ್ರದಾಯದ ಆದರೆ, ಅವರಿಗಿಂತ ಭಿನ್ನರಾದ ಕವಿ ಕಂಬಾರರು. ಜನಪದ ಕವಿಗಳ ಹಾಗೆ ಕಂಡರೂ ಅವರಿಗಿಂತ ಭಿನ್ನರಾದ ಕವಿ ಇವರದು. ಇವರ ಕಾವ್ಯ ಕನ್ನಡ ಸಾಹಿತ್ಯವನ್ನು ಗಟ್ಟಿಯಾಗಿ ಆವರಿಸಿಕೊಂಡಿದ್ದ ಸಂದರ್ಭದಲ್ಲಿ ಕಂಬಾರರು ಕಾವ್ಯರಚನೆಗೆ ತೊಡಗಿದರು. ಆದರೆ ನವ್ಯ ಕವಿಗಳಲ್ಲಿ ಪ್ರಮುಖರಾದ ಅಡಿಗ, ಶರ್ಮಾ, ರಾಮಾನುಜನ್ ಪ್ರಭಾವಕ್ಕೆ ಬೀಳಲಿಲ್ಲ. ಹೀಗೆ ಕನ್ನಡ ಕಾವ್ಯ ಪರಂಪರೆಯಲ್ಲೇ ಇದ್ದು ತಮ್ಮ ಅನನ್ಯತೆಯನ್ನು ಯಾವತ್ತೂ ಉಳಿಸಿಕೊಂಡಿರುವ ಕವಿ ಕಂಬಾರರು' (ಕಂಬಾರರು ಕಾವ್ಯ ಕೆಲವು ಅಧ್ಯಯನಗಳು ಸಂ : ಟಿ.ಪಿ. ಅಶೋಕ, 1994, ಪು. 115).

## 'ಮುಗುಳು' (ಪ್ರಥಮ ಸಂಕಲನ)

ಪ್ರಥಮ ಸಂಕಲನ 'ಮುಗಳು' 1958ರಲ್ಲಿ ಪ್ರಕಟವಾಯಿತು. ವಿದ್ಯಾರ್ಥಿ ಜೀವನದ ಅವಧಿಯಲ್ಲಿ(ಸ್ನಾತಕ ಶಿಕ್ಷಣದ ಅವಧಿ) ಬರೆದ ಕವನಗಳು ಈ ಸಂಕಲನದಲ್ಲಿವೆ. ನವೋದಯದ ಅಂಚಿನಲ್ಲಿ ಬರೆದ ಇಲ್ಲಿನ ಕವನಗಳಲ್ಲಿ ದೇಶಪ್ರೇಮ, ಪ್ರಕೃತಿ ಸಂಭ್ರಮ, ಪ್ರೀತಿ-ಮಾನವತೆ, ಆಧ್ಯಾತ್ಮ - ವೈಚಾರಿಕತೆ, ಅವೈಜ್ಞಾನಿಕ ನಂಬಿಕೆ - ಮೌಢ್ಯಗಳು, ಪುರೋಹಿತಷಾಹಿ ಕ್ರೌರ್ಯ, ವಿಜ್ಞಾನದ ಮಹತ್ತ್ವ ಇವೆಲ್ಲವೂ ಪ್ರತಿಫಲನಗೊಂಡಿವೆ. ಇಲ್ಲಿನ ಕವನಗಳಲ್ಲಿ ಜಾನಪದದ ಗಂಧಗಾಳಿ ಬೆರೆತಿಲ್ಲದಿರುವುದು ಒಂದು ವಿಶೇಷ. ವಿದ್ಯಾರ್ಥಿ ಬದುಕಲ್ಲೇ ಕಂಬಾರರು ತಮ್ಮ ಬರಹದ ದಾರಿಗೆ ಕುವೆಂಪು ಅವರನ್ನು ಆದರ್ಶವನ್ನಾಗಿ ಸ್ವೀಕರಿಸಿದ್ದರಿಂದ ಈ ಸಂಕಲನದಲ್ಲಿನ ಹಲವು ಕವನಗಳಲ್ಲಿ 'ಕುವೆಂಪು ನಂಬಿಕೆ - ಶೈಲಿ'ಯ ಛಾಯೆಯಿದೆ. ಯಾವುದೇ ಕವಿಯ ಪ್ರಥಮ ಕೃತಿಯಲ್ಲಿ ನಿರೀಕ್ಷಿಸಬಹುದಾದ ಗೊಂದಲ - ಅಪಕ್ವತೆ ಈ ಕೃತಿಯಲ್ಲಿ ಇಲ್ಲದಿರುವುದು ಮುಂದೆ ಕಂಬಾರರು ಕನ್ನಡ ಕಾವ್ಯಲೋಕದ ಪ್ರಖರ ಪ್ರತಿಭೆಯ ಕವಿಯಾಗುತ್ತಾರೆ ಎಂಬ ಮುನ್ಸೂಚನೆಯನ್ನು ಈ ಸಂಕಲನ ನೀಡುತ್ತದೆ.

## ಹೇಳತೇನ ಕೇಳ (1964)

'ಮುಗುಳು' ಸಂಕಲನ ಪ್ರಕಟವಾದ ಸಂದರ್ಭದಲ್ಲೇ, ಕಂಬಾರರಿಗೆ ಕವಿ ಅಡಿಗರ ಪರಿಚಯವಾಯಿತು. ಆ ಪರಿಚಯ ಸಾಹಿತ್ಯ ಚರ್ಚೆಗಳ ಮೂಲಕ ಬಲಿಯತೊಡಗುತ್ತಿದ್ದಂತೆ ಕಂಬಾರರು ನವೋದಯದ ಗಾಢ ಪ್ರಭಾವದಿಂದ ಕಳಚಿಕೊಂಡು, ಅಡಿಗರು ಹಿಡಿದಿದ್ದ ನವ್ಯದ

ದಾರಿಯುತ್ತ ಹೊರಳುವ ಚಿಂತನೆಗೆ ತೊಡಗಿದರು. ಆದರೂ ಕಂಬಾರರು ಸಂಪೂರ್ಣವಾಗಿ ನವ್ಯದತ್ತ ಹೊರಳದೆ, ತನ್ನ ಹುಟ್ಟು ನೆಲದ ಪರಂಪರೆಯಿಂದ ಬಂದಂತಹ ಭಾಷೆ ಮತ್ತು ಜಾನಪದವನ್ನು ಬಳಸಿಕೊಂಡು ನವ್ಯರು ನಿರಾಕರಿಸಿದ್ದ ಗೇಯತೆ, ಜನಪದ ಛಂದಸ್ಸಿಗೆ ಹತ್ತಿರವಾದ ಅಂಶೀಲಯ ಪ್ರಧಾನವಾಗುಳ್ಳ ವಿಶಿಷ್ಟ ಕಾವ್ಯಶೈಲಿಯನ್ನು ಹುಡುಕಿಕೊಂಡರು. ಆದರ ಪ್ರಯತ್ನವಾಗಿ, ದೇಸೀ ಸತ್ವವನ್ನು ಬಳಸಿಕೊಂಡು ಬರೆದ ಕವನ ಸಂಕಲನ 'ಹೇಳತೇನ ಕೇಳ' 1964ರಲ್ಲಿ ಪ್ರಕಟಗೊಂಡಿತು. ಒಟ್ಟು 12 ಕವನಗಳಿರುವ ಈ ಕವನ ಸಂಕಲನದಲ್ಲಿರುವ ದೀರ್ಘ ಕವನ 'ಹೇಳತೇನ ಕೇಳ' ಜನಪದ ಭಾಷೆಯಲ್ಲಿ ಲಾವಣಿಗಳ ಶೈಲಿಯಲ್ಲಿ ಬರೆದ ಇಪ್ಪತ್ತೊಂದು ನುಡಿಗಳ ಆಧುನಿಕ ಲಾವಣಿ. ಲಾವಣಿಯ ಲಯಗಾರಿಕೆ ಮತ್ತು ಅದಕ್ಕೇ ವಿಶಿಷ್ಟವಾದ ನುಡಿಗಟ್ಟುಗಳನ್ನು ಬಳಸಿಕೊಂಡು ಜನಪದ ಲಾವಣಿಯಲ್ಲಿ ಸಾಧ್ಯವಾಗದ ಕಾವ್ಯಾತ್ಮಕ ಅಂಶಗಳು, ಉಪಮೆ, ಪ್ರತಿಮೆ, ರೂಪಕಗಳನ್ನು ಬಳಸಿ ಕಟ್ಟಿರುವ ಈ 'ನವ್ಯಲಾವಣಿ'ಯ ಸಮೃದ್ಧ ಕಾವ್ಯಾತ್ಮಕತೆ ಕಂಬಾರರಿಗೆ ಕನ್ನಡ ಕಾವ್ಯಪರಂಪರೆಯಲ್ಲಿ ವಿಶಿಷ್ಟ ಸ್ಥಾನ ದೊರಕಿಸಿಕೊಟ್ಟಿತು.

**'ಹೇಳತೇನ ಕೇಳ' ಕಥನ ಕಾವ್ಯದ ಕಥೆ ಹೀಗಿದೆ :** ಶಿವಾಪುರದ ಗೌಡ ಭರತೇಶ, ಗೌಡ್ತಿ ಲಕ್ಷ್ಮೀದೇವಿ, ಮಗ ರಾಮಗೊಂಡ. ಊರವರು ಸಂತೃಪ್ತಿ ನೆಮ್ಮದಿ, ಸೌಹಾರ್ದತೆಯಿಂದ ಬಾಳಿಕೊಂಡಿರುವಾಗ, ಏಳು ಪಟ್ಟೆಯ ಹುಲಿಯೊಂದು ಬಂದು ದನ ಕರುಗಳನ್ನು ಕೊಂದು ತಿಂದು ಹಾವಳಿ ಎಬ್ಬಿಸುತ್ತದೆ. ಊರ ಬೇಡರಿಗೂ ಮಣಿಯದ ಹುಲಿಯನ್ನು ಬೇಟೆಯಾಡಲು ಸ್ವತಃ ಗೌಡನೇ ಬೇಟೆಗೆ ಹೊರಡುತ್ತಾನೆ. ಅಪಶಕುನದ ಕನಸು ಕಂಡ ಗೌಡ್ತಿ ಬೇಟೆಗೆ ಹೊರಡಬಾರದೆಂದು ಗೌಡನನ್ನು ಅಂಗಲಾಚುತ್ತಾಳೆ. ಕನಸಿನ ಬಗ್ಗೆ ಭ್ರಮೆ ಬೇಡವೆಂದು ಗೌಡ್ತಿ ಮಾತನ್ನು ಮೀರಿ ಬಂದ ಗೌಡನನ್ನು ಹುಲಿರೂಪದ ಮಾಯಾವಿ ರಾಕ್ಷಸ ಕೊಂದು ಬಿಟ್ಟು ತಾನು ಗೌಡನ ವೇಷವನ್ನು ಧರಿಸಿ ಗೌಡನ ಹೆಣವನ್ನು ಹೊತ್ತು ತಂದು ಊರ ಹೊರಗಿನ ಬಾವಿಗೆಸೆದು ಗೌಡ್ತಿಯನ್ನು ಕೂಡುತ್ತಾನೆ. ಊರ ಮಂದಿ ಯಾರೂ ಹೊರಗಿನ ಬಾವಿಗೆ ಇಣುಕಿ ಹಾಕಬಾರದೆಂದೂ ರಾಕ್ಷಸ ಗೌಡ ಡಂಗುರವನ್ನೂ ಹೊಡಸುತ್ತಾನೆ. ಗೌಡ್ತಿ ಬಸಿರಾಗುತ್ತಾಳೆ. ಆಕೆಗೆ ಹುಲಿಯ ಹಾಲನ್ನು ಕುಡಿಯುವ ಬಯಕೆಯುಂಟಾಗುತ್ತದೆ. ಹದಿವಯಸ್ಸಿನ ಮಗ ರಾಮಗೊಂಡನನ್ನು ಕರೆದು ಹುಲಿಯ ಹಾಲಿನ ಬಯಕೆಯನ್ನು ತೋಡಿಕೊಳ್ಳುತ್ತಾಳೆ. ಮಗ ರಾಮಗೊಂಡ ತಾಯಿಯ ಬಯಕೆ ನೆರವೇರಿಸಲೆಂದು ಕುಡುಗೋಲು ಹಿಡಿದು ಕಾಡಿಗೆ ಹೋಗುತ್ತಾನೆ. ಹುಲಿಯ ಹಾಲನ್ನು ಹಿಂಡಿ ಆತ ಹಿಂದಿರುಗುವಷ್ಟರಲ್ಲಿ ಹಾಲು ಕೊಟ್ಟ ಮಾಯಾವಿ ಹುಲಿಯೇ ಆತನ ಮೇಲೆ ಆಕ್ರಮಣ ಮಾಡಿ ಕೊಲ್ಲಲೆತ್ನಿಸಿದಾಗ ರಾಮಗೊಂಡ ಅದನ್ನು ಎದುರಿಸಿ ಹಿಮ್ಮೆಟ್ಟಿಸುತ್ತಾನೆ. ಆತ ಹುಲಿಯ ಹಾಲನ್ನು ಹಿಡಿದು ಬರುವಾಗ ದಾರಿಯಲ್ಲಿದ್ದ ಬಾವಿಗೆ ಇಣುಕಿದಾಗ ತಂದೆ ಭರತೇಶಗೌಡನ ಭೂತ ಪ್ರತ್ಯಕ್ಷವಾಗಿ ನಡೆದ ಘಟನೆಯನ್ನೆಲ್ಲ ತಿಳಿಸುತ್ತದೆ. ರಾಮಗೊಂಡನಿಗೆ ಯಾವುದು ಸತ್ಯ ಯಾವುದು ಮಿಥ್ಯ ಎಂದು ತಿಳಿಯದೆ, ಆತ ಸತ್ಯಕ್ಕಾಗಿ ಹಂಬಲಿಸುವಷ್ಟರಲ್ಲಿ ಗೌಡ್ತಿ ಮಗುವಿಗೆ ಜನ್ಮನೀಡುತ್ತಾಳೆ.

ಈ ಕಥನ ಕವನವು-ಆಧುನಿಕತೆ ಮತ್ತು ನವನಾಗರೀಕತೆಯ ಆಗಮನವು, ಹಳ್ಳಿಯ ಜೀವಂತಿಕೆಯನ್ನು ಕೊಂದು ಮುಗ್ಧ ಗ್ರಾಮೀಣ ಜನಜೀವನದ ಶಾಂತಿ ನೆಮ್ಮದಿಯನ್ನು ಹೇಗೆ ಹಿಸುಕಬಲ್ಲದು ಎಂಬುದನ್ನು ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಈ ಕವನದ ವಿಶಿಷ್ಟತೆ ಬಗ್ಗೆ ಕವಿ

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಹೀಗೆ ಹೇಳಿದ್ದಾರೆ. "ಗ್ರಾಮ ಭಾಷೆಯ ಮೇಲಿನ ಅಸಾಧಾರಣ ಪ್ರಭುತ್ವ, ವಸ್ತು ನಿರ್ವಹಣೆಯಲ್ಲಿನ ದೃಶ್ಯವಂತಿಕೆ, ಲಾವಣಿ ಕಾವ್ಯ ಶಿಲ್ಪದ ಪ್ರಜ್ಞಾಪೂರ್ಣ ಬಳಕೆ, ಕಥಾನಕಕ್ಷೆಯ ಮೂಲಕ ಮತ್ತೆ ಮತ್ತೆ ಸೂಚಿತವಾಗುವ ಅನ್ಯಾರ್ಥ ಪ್ರತಿಪತ್ತಿ ಇವೆಲ್ಲ ಒಟ್ಟುಗೂಡಿದ ಇಷ್ಟು ಸಮರ್ಥವಾದ ಇನ್ನೊಂದು ನೀಳ್ಗವನ ಹೊಸಗನ್ನಡ ಕಾವ್ಯದಲ್ಲಿ ಇಲ್ಲಿಯವರೆಗೆ ಬರಲಿಲ್ಲವೆನ್ನುವುದು ಈ ಕವನದ ಅನನ್ಯತೆಗೆ ಗುರುತಾಗಿದೆ" (ಕಂಬಾರರ ಕಾವ್ಯ, ಪ್ರತಿಮಾತ್ಮಕ ಕವನವಾಗಿ ಹೇಳತೇನ ಕೇಳ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಪುಟ. 23)

ಈ ಕವನ ಸಂಕಲನದಲ್ಲಿರುವ ಇತರ ಹನ್ನೊಂದು ಕವನಗಳು ವಸ್ತು-ಭಾಷೆ ಉಪಮೆ-ರೂಪಕ-ಕಾವ್ಯಾತ್ಮಕತೆಯಲ್ಲಿ ವೈವಿಧ್ಯಮಯವಾಗಿದ್ದು, ನವೋದಯ ಮತ್ತು ನವ್ಯಗಳೆರಡಕ್ಕೂ ಸಲ್ಲುವಂತಹ ಈ ಕವನಗಳು ಇಲ್ಲಿವೆ.

## ತಕರಾರಿನವರು (1971)

ನವ್ಯದ ಶೈಲಿಯ ಜತೆಗೆ ಕಂಬಾರರ ಸ್ವಂತಿಕೆಯುಳ್ಳ ಹಲವು ಕವಿತೆಗಳು ಈ ಕವನ ಸಂಕಲನದಲ್ಲಿವೆ. ಈ ಸಂಕಲನದ ಮಹತ್ವದ ಕವನಗಳೆಂದರೆ 'ನಮ್ಮಜ್ಜ', 'ಮಾವೊತ್ಸೆತುಂಗನಿಗೆ' ಮತ್ತು 'ಗಂಗಾಬಾಯಿ'. 'ನಮ್ಮಜ್ಜ' ಕವನದಲ್ಲಿ ಕವಿ ಅಜ್ಜನನ್ನು ವಟವೃಕ್ಷದೊಂದಿಗೆ ಸಮೀಕರಿಸಿ, ಹಸಿರು ಕೈಕೊಟ್ಟ ವಟವೃಕ್ಷ ಎನ್ನುವ ಮೂಲಕ ಅಂತಸತ್ವವನ್ನು ಕಳೆದುಕೊಂಡ ಅಜ್ಜನನ್ನು ಈಗ ನಿಸತ್ವವಾಗಿರುವ ಪರಂಪರೆಗೆ ಹೋಲಿಸಿದ್ದಾರೆ. ಆಧುನಿಕತೆಯ ಮಧ್ಯೆ ಅಪ್ರಸ್ತುತವಾಗಿರುವ 'ಪರಂಪರೆ' ಅಜ್ಜನಾಗಿ ಈ ಪೀಳಿಗೆಯನ್ನು ಕಾಡುತ್ತಿದ್ದು ಆತನನ್ನು ಎಷ್ಟು ಮೂಲೆಗುಂಪು ಮಾಡಿದರೂ ಆತ ತಾನು ಸುತ್ತಲಿಡೀ ಹರಡಿಸಿರುವ ಬಿಳಬೇರುಗಳ ಮೂಲಕ ತನ್ನ ಅಸ್ತಿತ್ವವನ್ನು ಕಾಪಾಡಲು ಪ್ರಯತ್ನಿಸುತ್ತಿರುವುದನ್ನು ಮುದಿ ವಟವೃಕ್ಷದ ಮೂಲಕ ಕಂಬಾರರು ಅರ್ಥವತ್ತಾಗಿ ಚಿತ್ರಿಸಿದ್ದಾರೆ. ಈ ಕವನ ಸಂಕಲನಕ್ಕೆ ಮುನ್ನುಡಿ ಬರೆದ ಬಿ.ಟಿ. ದೇಸಾಯಿ ಅವರು 'ಬದುಕು ಎಲ್ಲಾ ತೀರಿದರೂ (ಹಸಿರು ಕೈಕೊಟ್ಟರೂ) ಇನ್ನೂ ಜೀವಿಸುವ ಆಶೆಯಿಂದ ಬರಿಯ ಭೂತವಾಗಿ ಕೂತ ಅಜ್ಜನ ಚಿತ್ರದಷ್ಟೇ ಇನ್ನೂ ಬೆಳೆಯುತ್ತಿರುವ ಜೀವಗಳನ್ನು ಊರುಗೋಲಾಗಿ ಮಾಡಿಕೊಂಡು ಹಿಂಸಿಸುತ್ತಿರುವ ಚಿತ್ರ ಅರ್ಥವತ್ತಾಗಿದೆ. ಅಜ್ಜ ಒಂದರ್ಥದಲ್ಲಿ ಜೀವನವನ್ನು ಪೋಷಿಸುವ, ಇನ್ನೊಂದರ್ಥದಲ್ಲಿ ಅದನ್ನು ಮುಕ್ಕುವ ಭೂತವಾಗಿದ್ದಾನೆ' ಎಂದಿದ್ದಾರೆ.

'ಗಂಗಾಮಾಯಿ' ಕವಿತೆಯಲ್ಲಿ ಊರಿನ ಕೆರೆ ಗಂಗಾಮಾಯಿ ಎಲ್ಲರಿಗೂ ತಲೆತಲಾಂತರದಿಂದ ಉಪಯೋಗಕ್ಕಿದ್ದರೂ, ಅದಕ್ಕೊದಗಿದ ದುಸ್ಥಿತಿ - ಹರಿಯಲು ದಾರಿಯಿಲ್ಲದೆ ಅಲ್ಲಲ್ಲೆ ಕೊಳಕಾಗಿ ಮಡುಗಟ್ಟಿ ನಿಂತಿರುವ ಅದರ ಕೊಳೆತ ನೀರು-ನಮ್ಮ ಪರಂಪರೆ, ಸಂಸ್ಕೃತಿಯ ದುರಂತ ಸ್ಥಿತಿಯನ್ನು ಚಿತ್ರಿಸುತ್ತದೆ.

'ಮಾವೋತ್ಸೆತುಂಗನಿಗೆ' ಎಂಬ ಕವನದಲ್ಲಿ ಚೀನದ ಅಧ್ಯಕ್ಷ ಮಾವೊತ್ಸೆತುಂಗನನ್ನು ದುಷ್ಟ ವಿಶ್ವಾಸದ್ರೋಹ ಎಂಬಂತೆ ಚಿತ್ರಿಸಿ, ಭಾರತದ ಮೇಲಿನ ಚೀನದ ಅನಿರೀಕ್ಷಿತ ಆಕ್ರಮಣವನ್ನು ಅಸಹಾಯಕ ಸ್ಥಿತಿಯಲ್ಲಿದ್ದ ಗರತಿಯೊಬ್ಬಳ ಮೇಲಿನ ಆಕ್ರಮಣವೆಂಬಂತೆ ಕಂಬಾರರು ಚಿತ್ರಿಸಿದ್ದಾರೆ. ಗರತಿ ಭಾರತಾಂಬೆಯನು ಕೆಣಕಿದರೆ ಪರಿಸ್ಥಿತಿ ನೆಟ್ಟಗಾಗದು ಎಂದು ಮಾವೊತ್ಸೆತುಂಗನಿಗೆ ಕವಿ ಎಚ್ಚರಿಸುತ್ತಾರೆ.

## ಸಾವಿರದ ನೆರಳು (1979)

ಇಲ್ಲಿರುವ ಹಲವು ಕವನಗಳು ನವ್ಯದ ಗುಂಗಿನಲ್ಲಿದ್ದಾಗ ಬರೆದವು. ಆದರೂ ಕಂಬಾರರು ಅಪ್ಪಟ ನವ್ಯವನ್ನೇ ಅನುಕರಿಸದೆ, ತಮ್ಮ ವಿಶಿಷ್ಟ ಪ್ರಯೋಗಗಳನ್ನು ನಡೆಸಿ ಕಟ್ಟಿರುವ ಕವನಗಳೂ ಇಲ್ಲಿವೆ. ಉದಾಹರಣೆಗೆ 'ಕಲಗಾರಣ್ಣನ ಲಾವಣಿ'. ಹಾಡು ವಚನ ಕ್ರಮದಲ್ಲಿರುವ ಈ ಕವನಕ್ಕೆ ಗೇಯಗುಣವಿದೆ. ಮಾವೋತ್ಸೆತುಂಗನನ್ನು ನೆನಪಿಸುವಂತಹ ಮತ್ತು ಚೀನದ ಸಮೃದ್ಧಿಗೆ ಕಾರಣವಾಗುವ ಆತನ ಬುದ್ಧಿವಂತಿಕೆ ಅದ್ಭುತ ಸಾಧನೆಗಳನ್ನು ವರ್ಣಿಸುವ ಎರಡು ಕವನಗಳು 'ಹಳದಿ ಆಶೀರ್ವಾದ' ಮತ್ತು 'ಮರೆತೇನಂದರ ಹೆಂಗಾ' ಎಂಬುದು ಈ ಸಂಕಲನದಲ್ಲಿನ ಮುಖ್ಯ ಕವನಗಳು.

ಈ ಸಂಕಲನದ ಮತ್ತೊಂದು ಮಹತ್ವದ ಕಥನಕವನ 'ಕುದರಿಸಿದ್ಧ'. ಕುದರಿಸಿದ್ಧನೆಂಬವ ತೀರಾ ಒರಟು ಮನುಷ್ಯ ಆತನನ್ನು ಊರವರು ಮೆಚ್ಚದಿದ್ದರೂ ರಾಜಕುಮಾರಿ ಮೆಚ್ಚಿ ಆತನ ಸಂಗ ಮಾಡಿ ಸುಖದಸಾರ ಪಡೆದು ಆತನನ್ನು ತ್ಯಜಿಸುತ್ತಾಳೆ. ನಿರಾಶೆಯಿಂದ ಕಂಗೆಟ್ಟ ಸಿದ್ಧ ಕಾಡು ಸೇರಿದಾಗ, ಕಾವಿ ಧರಿಸಿದ ಬಾವಾನೊಬ್ಬ ಪ್ರತ್ಯಕ್ಷನಾಗಿ, ತನ್ನಲ್ಲಿದ್ದ ಹೆಣ್ಣು ಕುದುರೆಯನ್ನು ಮೂರು ತಿಂಗಳವರೆಗೆ ಜೋಪಾನವಾಗಿಟ್ಟುಕೊಳ್ಳಬೇಕೆಂದು ಹೇಳುವನು. ಆ ಕುದುರೆ ಏರಿ ಊರಿಗೆ ಬಂದ ಕುದರಿಸಿದ್ಧನ ಕುದುರೆಯ ಸಾಮರ್ಥ್ಯ, ಅಂದ ಚಂದವನ್ನು ಮೋಹಗೊಂಡ ರಾಜ ಕುದುರೆಯನ್ನು ತನಗಾಗಿ ಕೇಳುತ್ತಾನೆ. ಕುದುರೆಯೊಂದಿಗೆ ಗಾಢ ಸ್ನೇಹ ಬೆಳೆಸಿಕೊಂಡಿದ್ದ ಸಿದ್ಧ ಅದನ್ನು ಕೊಡಲೊಪ್ಪುವುದಿಲ್ಲ. ಮೂರು ತಿಂಗಳ ಅವಧಿ ಮುಗಿದೊಡನೆ ಬಾವಾ ಪ್ರತ್ಯಕ್ಷನಾಗಿ ತನ್ನ ಕುದುರೆಯನ್ನು ಹಿಂದಕ್ಕೆ ಕೇಳಿದಾಗ, ಅದನ್ನು ಬಿಟ್ಟಿರಲಾರದ ಸಿದ್ಧ ಅದು ಕಳೆದು ಹೋಯಿತು ಎಂದು ಸುಳ್ಳು ಹೇಳುತ್ತಾನೆ. ಕುದುರೆ ನಿಜಕ್ಕೂ ಮಾಯವಾಗುತ್ತದೆ. ಸಿದ್ಧ ಅದನ್ನು ಹುಡುಕಿ ಹುಡುಕಿ ಬೇಸತ್ತಾಗ, ಅದು ಕೊನೆಗೆ ಒಂದು ಸಂತೆಯಲ್ಲಿ ಸಿಗುತ್ತದೆ. ಸೇರುಗಟ್ಟಲೆ ಬಂಗಾರ ಸುರಿದು ಅದನ್ನು ಕೊಳ್ಳುತ್ತಾನೆ. ಆದರೆ ಆ ಕುದುರೆ ಮೊದಲಿನಂತಿರದೆ ತೀರಾ ಸಪ್ಪಗಾಗಿತ್ತು. ಕುದುರೆಸಿದ್ಧನಿಗೆ ಅದರ ಒಡನಾಟ ಹಿಡಿಸುವುದಿಲ್ಲ. ನಿರಾಶನಾಗಿ ಆತ ಮತ್ತೆ ಕಾಡು ಸೇರುತ್ತಾನೆ.

ಈ ಸಂಕಲನದಲ್ಲಿರುವ 'ಶಬ್ದದ ಲಜ್ಜೆಯ ನೋಡಾ' ಹೊಸ ಮಾದರಿಯ ಕಥನಕವನ. ಗದ್ಯ-ಪದ್ಯಗಳ ಮೂಲಕ ಕಥನವನ್ನು ನಿರೂಪಿಸುವ ಈ ಕಥನ ಕವನದ ಮೂಲಕ ಕಂಬಾರರು ಹೊಸ ಶೈಲಿಯ ಕಾವ್ಯ ಸೃಷ್ಟಿಗೆ ಕೈ ಹಾಕಿದ್ದಾರೆ.

## ಬೆಳ್ಳಿ ಮೀನು (1989)

ಈ ಕವನ ಸಂಕಲನದಲ್ಲಿ ಹಲವು ಮಹತ್ತ್ವದ ನವ್ಯ ಕವಿತೆಗಳಿದ್ದು, ಅವುಗಳೊಂದಿಗೆ ವಿಶಿಷ್ಟವಾದ 'ಮಂದಾರ ಮರ' ಮತ್ತು 'ನವಿಲೇ ನವಿಲೇ' ಕಥನ ಕವನಗಳು ಗಮನ ಸೆಳೆಯುತ್ತವೆ. 'ನಿನ್ನ ಕಣ್ಣು', 'ದಿಲ್ಲಿಯೆಂಬ ಕ್ಯಾಬರೆ', 'ಇಟ್ಟಿಗೆಯ ಪಟ್ಟಣ', 'ರಂಗಭೂಮಿ ಮತ್ತು ನಾನು', 'ಆಮರ ಈ ಮರ', 'ಕರಿಹೈದ', 'ನಾ ಗರತಿ', 'ಕೂದಲ ಬಲೆ', 'ನಾಡು-ಕಾಡು', 'ಅಂಬಿಗರಣ್ಣನ ಲಾವಣಿ' ಮುಂತಾದ ಕವನಗಳು ಅರ್ಥವತ್ತಾಗಿವೆ.

'ಅಂಬಿಗರಣ್ಣನ ಲಾವಣಿ'ಯಲ್ಲಿ ಅಂಬಿಗರ ಹುಡುಗನಿಗೆ ಬೆಳ್ಳಿ ಮೀನಾಗಿ ತೇಲುವ ಚಂದ್ರನನ್ನು ಬಲೆ ಬಿಸಿ ಹಿಡಿಯುವ ತವಕ, 'ನಾಡು-ಕಾಡು' ಕವನದಲ್ಲಿ ನದಿ ದಂಡೆಯ ಮೇಲೆ ಹುಳ ಅಂಟಿಸಿದ ಗಾಳ ಹಿಡಿದು ಕುಳಿತ ನರಬಾಲಕನಿಗೂ ಬೆಳ್ಳಿಮೀನಾಗಿ ಈಜುವ ಚಂದ್ರನನ್ನು ಹಿಡಿವ ಕನಸು, 'ಕೂದಲ ಬಲೆ' ಕವನದಲ್ಲಿ ಗೋರಿಯಿಂದೆದ್ದು ಬಂದ ಹೆಣವೊಂದು ಕೂದಲುಂಡೆಯೊಂದನ್ನು ಕೊಟ್ಟು ಇದರಿಂದ ಬಲೆ ಮಾಡಿ ಬೆಳ್ಳಿಮೀನಾಗಿ ನೀರಲ್ಲೀಜುವ ಚಂದ್ರನನ್ನು ಹಿಡಿ ಎಂದು ನೀಡುವ ಆದೇಶ - ಇವೆಲ್ಲವನ್ನು ಗಮನಿಸಿದರೆ ಈ ಬೆಳ್ಳಿಮೀನು ಕಂಬಾರರ ಯಾವುದೇ ಒಂದು ಕವನದಲ್ಲಿರದೆ, ಕವನ ಸಂಕಲನದಲ್ಲಿಡೀ ಹಲವು ರೀತಿಯಲ್ಲಿ ಈಜಾಡಿರುವುದು ಅವರ ಕಾವ್ಯಶಕ್ತಿಗೊಂದು ನಿದರ್ಶನ. ಇಲ್ಲಿನ ಮತ್ತೊಂದು ಮಹತ್ವದ ಕವನ 'ನವಿಲೇ ನವಿಲೇ' ಬರಗಾಲಕ್ಕೆ ಈಡಾದ ಶಿವಾಪುರಕ್ಕೆ ಮಳೆಯನ್ನು ಸುರಿಸುವ ನವಿಲಿನ ಸುತ್ತ ಹೆಣೆದಿರುವ ಕತೆ ಹೊಸ ರೀತಿಯದ್ದು.

ಶಿವಾಪುರದ ಒಡೆಯ ಶಿವನಾಯ್ಕ. ಆತನ ಹೆಂಡತಿ ಮಾದೇವಿ. ಮಳೆಯಿಲ್ಲದೆ ಊರೆಲ್ಲ ಕಂಗಾಲಾಗಿರುವಾಗ ಮಳೆ ಬಂದರೆ ಸಾವಳಗಿ ಮಠದ ತನಕ ಒದ್ದೆಯಲ್ಲಿ ಹೋಗಿ ಕೈಮುಗಿದು ಬರುವೆನೆಂದು ಮಾದೇವಿ ಕೈ ಮುಗಿಯುತ್ತಾಳೆ. ಒಮ್ಮೆ ಸಿಹಿನೀರ ತರುವುದಕ್ಕೆ ಮಾದೇವಿ ದೂರದ ಕಾಡಿನ ಕೆರೆಗೆ ಹೊರಟಾಗ ಅಲ್ಲಿ ನವಿಲೊಂದು ಆಕೆಯನ್ನು ಆಕರ್ಷಿಸುತ್ತದೆ. ನಿಧಾನಕ್ಕೆ ಮಾದೇವಿ ನವಿಲು ಮಧ್ಯೆ ಪ್ರಣಯ ಬೆಳೆಯುತ್ತದೆ. ಮಳೆಗಾಗಿ ಪ್ರಾರ್ಥಿಸುತ್ತಿದ್ದ ಮಾದೇವಿಯ ಆಸೆಯಂತೆ ಮಳೆ ಸುರಿಯ ತೊಡಗುತ್ತದೆ. ಪ್ರತಿದಿನ ಬರಿಗೊಡದಿಂದ ಹಿಂದಿರುಗಿ ಬರುತ್ತಿದ್ದ ಮಾದೇವಿ ಅಂದು ಮಿಂದು ಒದ್ದೆಯಾಗಿ ಹೊಸ ಉಲ್ಲಾಸದಿಂದ ಬಂದಿರುವುದನ್ನು ಕಂಡು ಶಿವಾನಾಯ್ಕನನ್ನು ಸಂಶಯ ಕಾಡುತ್ತದೆ. ಮಡದಿ ಒದ್ದೆಯಲ್ಲಿ ಹರಕೆ ಸಲ್ಲಿಸಲು ಸಾವಳಗಿ ಮಠಕ್ಕೆ ನಡೆದಾಗ ಅವನು ಕಾಡನವಿಲನ್ನು ಕೊಂದು ಅದರ ರೆಕ್ಕೆ ತುರಾಯಿಗಳಿಂದ ಸೀರೆ ತಯಾರಿಸುತ್ತಾನೆ. ಮಠದಿಂದ ಮರಳಿಬಂದ ಮಡದಿಗೆ 'ಒದ್ದೆ ತೆಗೆಯೆ ಮಾದೇವಿ, ಹೊದ್ದಿರುವ ಒದ್ದೆಯ ತೆಗೆದು ಹೊಸ ಸೀರೆಯ ಉಡುಬಾರೆ ತಂದಿರುವೆ ನೇಯ್ಸಿ' ಎಂದು ಸೀರೆ ನೀಡಿದೊಡನೆ ಆಕೆ ದುಃಖಿತಳಾಗಿ ಕಾಡಿನ ಕಡೆ ನಡೆಯುತ್ತಾಳೆ. 'ಬೆಳ್ಳಿಮೀನು' ಸಂಕಲನಕ್ಕೆ ಮುನ್ನುಡಿ ಬರೆದ ವಿಮರ್ಶಕ ಡಿ.ಆರ್. ನಾಗರಾಜ್ ಅವರು 'ನಿಧ ನಿಧಾನಕ್ಕೆ ಆ ಇಡೀ ಕವಿತೆಯೇ ಕಾಡೆದ್ದು ಕುಣಿದಂತೆ ಕಂಡಿತು' ಎಂದು ಬರೆದಿದ್ದಾರೆ. ಇಲ್ಲಿ ನವಿಲು ಲೈಂಗಿಕ ಪ್ರತಿಮೆಯಾಗಿ ಇಡೀ ಕಥನ ಕವನದ ಕೇಂದ್ರಬಿಂದುವಾಗಿದೆ.

## ಅಕ್ಕಕ್ಕು ಹಾಡುಗಳೇ (1993)

ಗೇಯ ಪ್ರಧಾನವಾದ ಹೃದ್ಯವಾದ ಕವಿತೆಗಳು ಈ ಸಂಕಲನದಲ್ಲಿವೆ. ಇದರಲ್ಲಿನ 'ಅಕ್ಕಕ್ಕು ಹಾಡುಗಳೇ', 'ಕಾಡು ಕಾಡೆಂದರೆ', 'ಸೂರ್ಯನೆಂಬ ಮರ', 'ಚಂದಿರನ ಬೇಟೆಗೆ ಹೋದಾ', 'ಹೊಸ ಬಾಳಿಗೆ ಹೊರಟ ಮಗಳಿಗೆ' ಮುಂತಾದವು ಸಾರ್ಥಕ ಕವನಗಳು. ಈ ಸಂಕಲನದ ಬಗ್ಗೆ ವಿಮರ್ಶಕ ಟಿ.ಪಿ. ಅಶೋಕ ಹೀಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ - '... ಪ್ರಕೃತಿ ಮತ್ತು ಮನುಷ್ಯ ಪ್ರಕೃತಿಗಳ ನಿಗೂಢತೆ ಕವಿಯನ್ನು ಇಲ್ಲಿ ತೀವ್ರವಾಗಿ ಕಾಡಿದೆ. ಹಾಗಾಗಿ ಒಂದು ಬಗೆಯ ವಿಸ್ಮಯ, ಬೆರಗು ಈ ಸಂಕಲನದ ಸ್ಥಾಯೀ ಭಾವವೆನ್ನಬಹುದು. ಆಚೆಯ ಸೀಮೆಯನ್ನು ಕಾಣುವ

ತವಕ, ಅಪರಿಚಿತ ಲೋಕಗಳಲ್ಲಿ ಸಂಚರಿಸುವ ಬಯಕೆ, ವ್ಯಕ್ತವನ್ನು ಕೊಂಚ ಸರಿಸಿ ಅವ್ಯಕ್ತವನ್ನು ಮುಟ್ಟುವ ತುಡಿತ ಕಾಡುತ್ತದೆ...' (ಸಿರಸಂಪಿಗೆ ಕಂಬಾರ 60, ಅಕ್ಕಕ್ಕು ಹಾಡುಗಳೇ, ಟಿ.ಪಿ. ಅಶೋಕ, ಪು. 37) ಗೇಯ ಗುಣಗಳಿರುವ ಇಲ್ಲಿನ ಹಲವು ಕವನಗಳು ಅರ್ಥಪೂರ್ಣವಾಗಿದ್ದು ಮುದ ನೀಡುವ ರಚನೆಗಳಾಗಿವೆ.

## ಚಕೋರಿ ಮಹಾಕಾವ್ಯ (1996)

ಮಹಾಕಾವ್ಯ ಪರಂಪರೆಗೆ ಅಪರೂಪದ ಪ್ರತಿಭಾಶಕ್ತಿಯುಳ್ಳ ಕೃತಿ 'ಚಕೋರಿ'. ಈ ಕೃತಿ ಜನಪದ, ವಚನ ಪರಂಪರೆ ಮತ್ತು ಶಿಷ್ಟ ಮಹಾಕಾವ್ಯಗಳ ಕೆಲವೊಂದು ಗುಣಗಳನ್ನು ಅಡಗಿಸಿಕೊಂಡಿದ್ದರೂ, ಅವುಗಳ ಸಾಂಪ್ರದಾಯಿಕ ಶೈಲಿಗಿಂತ ಭಿನ್ನವಾದ ವಿಶಿಷ್ಟ ಮಾದರಿಯ ನಿರೂಪಣಾ ಕ್ರಮ ಈ 'ಚಕೋರಿ' ಇಲ್ಲಿದೆ.

'ಚಕೋರಿ'ಯಲ್ಲಿನ ಭಾಷಾ ಸೌಂದರ್ಯದ ಬಗ್ಗೆ ಕೃತಿಗೆ ಮುನ್ನುಡಿ ಬರೆದ ಎಚ್.ಎಸ್. ಶಿವಪ್ರಕಾಶ್ ಅವರು ಹೇಳುವುದು 'ಚಕೋರಿ'ಯ ಭಾಷೆ ಮತ್ತು ಭಾಷಾಸಂಪತ್ತು ಬೇರೆಯದೇ ರೀತಿಯದು. ಇದು ಅಕ್ಕಮಾದೇವಿ ಭಾವೋತ್ಕಟತೆ, ಅಲ್ಲಮನ ನಿಗೂಢತೆಯ ರುಚಿ, ಜನಪದ ಗೀತೆಗಳ ಸೊಗಸು ಮತ್ತು ಶ್ರೇಷ್ಠತಮ ತ್ರಿಪದಿಗಳ ಅರ್ಥಗರ್ಭಿತ ಸರಳತೆ - ಇವೆಲ್ಲವನ್ನೂ ಬಳಸಿಕೊಂಡಿರುವ ಹೊಸ ಪಾಕವಾಗಿದೆ. ಚಕೋರಿಯ ಬಹುಕುಳವಾದ ಭಾಷೆ ತೆರೆದಿಡುವ ಅನುಭವ ಲೋಕ ನನ್ನ ಪ್ರಕಾರ ಇಲ್ಲಿಯವರೆಗೆ ಕನ್ನಡನುಡಿ ಕಂಡಿರುವ ಎಲ್ಲ ವಿಸ್ಮಯಗಳಿಗಿಂತ ಭಿನ್ನವಾದ ಇನ್ನೊಂದು ವಿಸ್ಮಯ. ಕಠಿಣವಾದುದನ್ನು ಕಠಿಣವಾಗಿರುವಂತೆ ಬರೆಯುವುದು ಅನಿವಾರ್ಯವಲ್ಲ ಎಂಬ ಪಾಠವನ್ನು ಇಂದಿನ ಕವಿಗಳಿಗೆ ತಿಳಿಸಿದ್ದಾರೆ. 'ಚಕೋರಿ'ಯಲ್ಲಿ ಭಾಷೆಯು ಎಲ್ಲಿ ಹೇಗೆ ಬೇಕೋ ಹಾಗೆ ಹರಿಯುವ, ಹೆಪ್ಪುಗಟ್ಟುವ, ತಿರುಗುವ, ಏರುವ, ಇಳಿಯುವ, ಹುದುಗುವ, ಚಿಮ್ಮುವ ಶಕ್ತಿಯನ್ನು ಪಡೆದುಕೊಂಡಿದೆ. ಭಾಷೆಯ ಸಹಜತೆಯನ್ನು ಈ ದೀರ್ಘ ಕಾವ್ಯದಲ್ಲಿ ಒಂದು ಕಡೆಯೂ ಎಡವಲು ಬಿಟ್ಟಿಲ್ಲ ಎನ್ನುವುದು ಚಕೋರಿಯ ಸಾಧನೆಗಳಲ್ಲೊಂದು".

**'ಚಕೋರಿ ಕಾವ್ಯ' ಕಥೆ :** ಶಿವದೇವರ ಹಣೆಯ ಬೆವರ ಹನಿ ಭೂಲೋಕಕ್ಕೆ ಬಿದ್ದಾಗ ಅಲ್ಲೊಬ್ಬ ನರಮಾನವ ಹುಟ್ಟಿಕೊಂಡ. ಶಿವದೇವರು ಆತನಿಗೆ, ಅಧೋಲೋಕದಲ್ಲಿರುವ ಮಾಯಗಾರ್ತಿಯನ್ನು ವರಿಸುವಂತೆ ಅಪ್ಪಣೆ ಮಾಡಿದರು. ಆತ ಅಧೋಲೋಕಕ್ಕಿಳಿದು ಆಕೆಯನ್ನು ಕರೆದುಕೊಂಡು ಮೇಲೆ ಬರುವಾಗ ಸರ್ಪಸೈತಾನನು ಆತನ ಎಡಗಾಲು ಹಿಡಿದು ಜಗ್ಗಲಾರಂಭಿಸುತ್ತಾನೆ. ಆತನ ಬಲಭಾಗವನ್ನು ಮಾಯಗಾರ್ತಿ ಮೇಲೆ ಎಳೆಯ ತೊಡಗುವಳು. ನರಮಾನವ ಸೀಳಿ ಎರಡಾಗುತ್ತಾನೆ. ಸೂರ್ಯನ ಬೆಳಕಿನಿಂದ ಬಲಭಾಗ ಪೂರ್ಣಗೊಂಡು ಆತ ಅಣ್ಣನಾಗುತ್ತಾನೆ. ಚಂದ್ರನ ಬೆಳಕಿನಿಂದ ಎಡಭಾಗ ಪೂರ್ಣಗೊಂಡು ಆತ ತಮ್ಮನಾಗುತ್ತಾನೆ. ಶಿವದೇವರು ಅವರಿಬ್ಬರಿಗೂ ಆಶೀರ್ವದಿಸುತ್ತಾರೆ. ಇಬ್ಬರೂ ಕೂಡಿ ಶಿವಾಪುರವೆಂಬ ಹಟ್ಟಿ ಕಟ್ಟುತ್ತಾರೆ. ಗೊಲ್ಲ ಕುಲ ಉದಯಿಸುತ್ತದೆ. ತಮ್ಮನದು ಚಂದ್ರನ ಬೆಡಗು, ಅಣ್ಣನದು ಸೂರ್ಯನ ಬೆಡಗು. ಯಕ್ಷಿಯ ವರದಿಂದ ಸೂರ್ಯನ ಬೆಡಗಿನ ದಂಪತಿಗಳಿಗೆ 'ಚಿನ್ನಮುತ್ತ' ಮತ್ತು ಚಂದ್ರನ ಬೆಡಗಿನ ದಂಪತಿಗಳಿಗೆ 'ಚಂದ್ರಮುತ್ತ' ಎಂಬ ಮಕ್ಕಳು ಹುಟ್ಟುತ್ತಾರೆ.

ಒಂದು ದಿನ ದನಮೇಯಿಸಲು ಹೋದ ಚಂದ್ರಮುತ್ತನಿಗೆ, ಆತನ ಗೆಳೆಯರು ಸೇರಿ ಅಲ್ಲೇ ಬಿದ್ದಿದ್ದ ಹೆಣ್ಣು ಶಿಲಾಮೂರ್ತಿಗೆ ಮದುವೆ ಮಾಡುತ್ತಾರೆ. ಆಗ ಮಾಯದ ಗಾಳಿ ಬೀಸುತ್ತದೆ. ಹಾಗೇ ಸುಖದ ಅಮಲಲ್ಲಿ ಪ್ರಜ್ಞೆ ತಪ್ಪಿ ಮಲಗಿದ್ದ ಚಂದ್ರಮುತ್ತನನ್ನು ಗೆಳೆಯರು ಎಚ್ಚರಿಸಿ ತಂದರಾದರೂ, ಅಂದಿನಿಂದ ಆತ ಅಂತರ್ಮುಖಿಯಾಗುತ್ತಾನೆ. ಒಮ್ಮೊಮ್ಮೆ ಕೊಳಲನೂದುತ ಬಂಡೆಯ ಮೇಲೆ ಮೈಮರೆತು ಕುಳಿತುಕೊಳ್ಳುವವನನ್ನು ತಾಯಿ ಉಪಚರಿಸಿ ಕರೆತರುತ್ತಿದ್ದರು.

ಚಂದ್ರಮುತ್ತನನ್ನು ಮದುವೆಯಾಗಿದ್ದ ಹೆಣ್ಣು ಶಿಲಾಮೂರ್ತಿ ದೇವತೆಯ ರೂಪದಲ್ಲಿ ಮತ್ತು ಒಡೆಯ ಹೆಗಡೆಯ ಕನಸಲ್ಲಿ ಕಾಣಿಸಿಕೊಂಡು ತನ್ನನ್ನು ಇಂತಹ ಸ್ಥಳದಲ್ಲಿ ಮನ್ನಣೆ ಮಾಡಿ ಪ್ರತಿಷ್ಠಾಪಿಸಬೇಕೆಂದು ಅಪ್ಪಣೆ ಮಾಡುತ್ತದೆ. ಹಾಗೆಯೇ ಆ ಯಕ್ಷಿಯನ್ನು ತಂದು ಗುಡಿಕಟ್ಟಿ ಪ್ರತಿಷ್ಠಾಪಿಸಿ ಜಾತ್ರೆ ಮಾಡಿದಾಗ ಬೇರೆ ಯಾರೂ ನೀಡಿದ ಬಾಗಿನವನ್ನು ಸ್ವೀಕರಿಸದೆ ಚಂದ್ರಮುತ್ತ ನೀಡುವ ಬಾಗಿನವನ್ನು ಮಾತ್ರ ಸ್ವೀಕರಿಸುತ್ತಾಳೆ. ಅಂದಿನಿಂದ ಚಂದ್ರಮುತ್ತನಿಗೆ ಆ ಯಕ್ಷಿಯ ದಿನನಿತ್ಯದ ಪೂಜೆಯ ಜವಾಬ್ದಾರಿಯನ್ನು ನೀಡಲಾಗುತ್ತದೆ.

ಒಮ್ಮೆ ಚಂದ್ರಮುತ್ತ ಯಕ್ಷಿಗೆ ಮಲ್ಲಿಗೆ ಮೊಗ್ಗಿನ ಸರವನ್ನೂ ತೊಡಿಸಿದಾಗ ಮೊಗ್ಗು ಅರಳಿ ಹೂವಾಗುತ್ತ ಆತನ ಕೊಳಲಿನ ನಾದಕ್ಕೆ ಯಕ್ಷಿ ಶಿಲಾಬಂಧನ ಬಿಡಿಸಿಕೊಂಡು ಬಂದು ನಾದಲಯಕ್ಕೆ ತಕ್ಕಂತೆ ನರ್ತಿಸಲಾರಂಭಿಸುತ್ತಾಳೆ. ಯಕ್ಷಿ ಒಮ್ಮೆ ಮುದುಕಿ ಜೋಗ್ತಿಯ ರೂಪದಲ್ಲಿ ಒಂದು ಜೀವಿಗಳೆಲ್ಲ ಭಾವಪರವಶವಾಗುವಂತೆ ಕೊಳಲನೂದುವಳು. ಚಂದ್ರಮುತ್ತನೂ ಆಕೆಯ ಕೊಳಗಾನಕ್ಕೆ ಮರುಳಾಗಿ ತನ್ಮಯನಾಗಿದ್ದಾಗ ಆತನ ಕೊಳಲನ್ನು ಕಿತ್ತುಕೊಂಡು ಮಾಯವಾಗುವಳು.

ಚಂದ್ರಮುತ್ತನಿಗೆ ಆ ಮುದಿ ಜೋಗ್ತಿಯಿಂದ ಕೊಳಲು ಕಲಿಯುವ ಆಸೆ. ಆಕೆಯನ್ನು ಹುಡುಕುತ್ತ ಹೋಗಿ ಪಾತಾಳದ ಕೊಳದಲ್ಲಿ ಬೀಳುವನು. ಅಲ್ಲಿದ್ದ ಶಿವಾಲಯದಲ್ಲಿ ಮಹಾನುಭಾವನೊಬ್ಬ ಹಾಡುತ್ತಿದ್ದ. ಆತನಿಗೆ ಚಂದ್ರಮುತ್ತ ಶಿಷ್ಯನಾಗಿ ಆತನಿಂದ ನೂರಾರು ರಾಗಗಳನ್ನು ಕಲಿಯುತ್ತಾನೆ. ಆದರೆ ಅಪರೂಪದ ತಿಂಗಳ ರಾಗ ಮುದಿಜೋಗ್ತಿಗೆ ಮಾತ್ರ ಗೊತ್ತು; ಆಕೆಯಿಂದಲೇ ಕಲಿಯಬೇಕೆಂದು ಆ ಮಹಾನುಭವ ಸೂಚಿಸುತ್ತಾನೆ. ಚಂದ್ರಮುತ್ತ ಮುದಿಜೋಗ್ತಿಯನ್ನು ಆಲದ ಮರದ ತುದಿಯಲ್ಲಿರುವ ಆಕೆಯ ಅರಮನೆಯಲ್ಲಿ ಪತ್ತೆ ಹಚ್ಚಿ ತನಗೆ ರಾಗ ಕಲಿಸಬೇಕೆಂದು ಕೇಳುತ್ತಾನೆ. ಆಕೆ ತಿರಸ್ಕರಿಸಿದಾಗ ಚಂದ್ರಮುತ್ತ ಆಕೆಯನ್ನು ಹಿಡಿದೆಳೆಯುತ್ತಾನೆ. ಆತನ ಎಳೆತಕ್ಕೆ ಮುದಿಜೋಗ್ತಿಯ ಹರಕು ಸೀರೆ, ಮುದಿ ಚರ್ಮಗಳು ಕಿತ್ತು ಬಂದು, ಯಕ್ಷಿ 'ಚಕೋರಿ' ಎಂಬ ಹೆಸರಿನಲ್ಲಿ ಪ್ರತ್ಯಕ್ಷಳಾಗುತ್ತಾಳೆ. ಅವರಿಬ್ಬರು ಪ್ರಣಯೋನ್ಮಾದದಿಂದ ಒಂದಾಗುತ್ತಾರೆ. ಪ್ರಣಯ ಸುಖದೊಂದಿಗೆ ರಾಗಗಳನ್ನೂ ಕಲಿಸುತ್ತಾಳೆ. ಹಾಗೆಯೇ ತಾನು ತಿಂಗಳ ಬೆಳಕುಂಡು ಬದುಕುವ ಚಕೋರಪಕ್ಷಿ, ತಿಂಗಳ ರಾಗದ ಅಭಿಮಾನಿ ದೇವತೆ ; ತಿಂಗಳುರಾಗ ಕಾರಣವಾಗಿ ಯಕ್ಷಿಯ ರೂಪ ಕರಗಿ ಪಕ್ಷಿಯಾಗುವುದು ನನ್ನ ಧರ್ಮ-ಎಂದು ತನ್ನ ನಿಜಸ್ವರೂಪವನ್ನು ತಿಳಿಸುತ್ತಾಳೆ.

ಮಗನ ದಾರಿ ಕಾಯ್ದು ವ್ಯಥೆಪಡುತ್ತಿದ್ದ ಚಂದ್ರಮುತ್ತನ ತಾಯಿ ಇದಕ್ಕೆಲ್ಲ ಗುಡಿಯೊಳಗಿನ ಯಕ್ಷಿಯೇ ಕಾರಣವೆಂದು ಸಿಟ್ಟಾಗಿ ಅತ್ತ ಯಕ್ಷಿಯಮೂರ್ತಿಗೆ ಮೆಣಸಿನ ನೀರು ಸೆಗಣಿ ಗಂಜಳ

ಲೇಪಿಸುತ್ತಾಳೆ. ಇತ್ತ ಚಕೋರಿಗೆ ಮೆಣಸಿನ ನೀರಿನಿಂದಾಗಿ ಮೈತುಂಬ ಉರಿ ಬಂದಂತಾಗಿ ಚಂದ್ರಮುತ್ತನನ್ನು ಇಲ್ಲಿನ ಸತ್ಯವನ್ನು ಯಾರಿಗೂ ಹೇಳಬಾರದೆಂದು ಎಚ್ಚರಿಸಿ ಶಿವಾಪುರಕ್ಕೆ ಮರಳಿ ಕಳುಹಿಸುತ್ತಾಳೆ. ಮರಳಿ ಬಂದ ಮಗನನ್ನು ತಾಯಿ ಯಕ್ಷಿಗೆ ಗುಡ್ಡನನ್ನಾಗಿ ಮಾಡಿ ಹರಕೆ ತೀರಿಸಿಕೊಳ್ಳುತ್ತಾಳೆ. ಚಂದ್ರಮುತ್ತನೂ ಮೂರ್ಛೆ ತಪ್ಪುತ್ತಾನೆ.

ಶಿವಾಪುರಕ್ಕೆ ಬರಗಾಲದ ಕೇಡು ಬಂದಾಗ ಚಂದ್ರಮುತ್ತ ಮಳೆರಾಗ ನುಡಿಸಿ ಮಳೆ ಬರಿಸುತ್ತಾನೆ. ಚಕೋರಿಗೂ ಚಂದ್ರಮುತ್ತನಿಗೂ ರಹಸ್ಯದ ಸಂಬಂಧ ಮುಂದುವರಿಯುತ್ತದೆ. ಈ ಒಂದು ಹುಣ್ಣಿಮೆಯ ರಾತ್ರಿ ಚಂದ್ರಮುತ್ತನು ಯಕ್ಷಿಯ ಗುಡಿಮುಂದೆ ಕುಳಿತು ತನ್ಮಯತೆಯಿಂದ ಕೊಳಲನಾದ ಹರಿಸುತ್ತಿರುತ್ತಾನೆ. ಆ ನಾದದ ಮಹಾಪೂರಕ್ಕೆ ಯಕ್ಷಿ ಚಕೋರಿ ಬಿಳಿಯ ಮೋಡದ ಹಾಗೆ ಬಿಳಿಯ ಪಕ್ಷಿಯಾಗಿ ತೇಲುತ್ತಿದ್ದಾಳೆ. ಇದ್ದಕ್ಕಿದ್ದಂತೆ ಕೊಳಲು ಕಿರಿಚಿ ಅಪಸ್ವರವುಂಟಾಗುತ್ತದೆ. ಹಾರುವ ಯಕ್ಷಿಯ ರೆಕ್ಕೆ ಮುರಿದು ಕತ್ತಿನ ಕಳಸ ಮುರಿದಾಗ ಯಕ್ಷಿಯು ಮೂಲ ಸ್ವರೂಪ ಮಾಡಿ ಕೆಳಗೆ ಬೀಳುತ್ತಾಳೆ.

ಮೂರ್ಛಾಗತನಾಗಿ ಬಿದ್ದಿದ್ದ ಚಂದ್ರಮುತ್ತನನ್ನು ಎತ್ತಿ ತಂದು ಮನೆಯಲ್ಲಿ ಮಲಗಿಸಿ ಒಂಬತ್ತು ದಿನಗಳಾದರೂ ಆತನಿಗೆ ಬಾಯಿ ಬರುತ್ತಿಲ್ಲ. ಶೂನ್ಯ ಹೃದಯನಾಗಿ ಬಿದ್ದಿದ್ದಾನೆ. ದಿನಾ ಗಂಟಲ ಹುಣ್ಣು ಬೆಳೆಯುತ್ತಿದೆ. ಕತ್ತು ಕೆಂಪಗಿದೆ. ಇದಕ್ಕೇನು ಕಾರಣ ಯಾರು ಕಾರಣ ಎಂದು ಯಾರಿಗೂ ತಿಳಿಯುತ್ತಿಲ್ಲ. ಒಂದು ರಾತ್ರಿ ಚಂದ್ರಮುತ್ತನ ತಾಯಿಯ ಕನಸಿನಲ್ಲಿ ಆಕೆ ಮಲಗಿದ್ದ ಮಂಚದ ಕಾಲಿನ ಗೊಂಬೆಗಳೆರಡೂ ಬಂದು ಮಾತನಾಡುತ್ತ ಯಕ್ಷೀಗುಡಿಯ ಎಡಗಡೆಯ ನೇರಳೆ ಮರದಡಿ ಬಿದ್ದಿರುವ ಗೇಣುದ್ದದ ಗೊಂಬೆಯ ಕತ್ತಿನಲ್ಲಿರುವ ಕರಿಕೂದಲು ಪೋಣಿಸಿದ ಸೂಜಿಯನ್ನು ಕಿತ್ತೆಸೆದರೆ ಚಂದ್ರಮುತ್ತನ ಗಾಯ ಮಾಯುತ್ತದೆ ಎಂದು ಹೇಳುತ್ತವೆ. ತಾಯಿ ಮರುದಿನ ಗೇಣುದ್ದದ ಗೊಂಬೆಯನ್ನು ಹುಡುಕಿತಂದು ಗೊಂಬೆಯ ಕತ್ತಿನಲ್ಲಿ ಪೋಣಿಸಿದ ಕರಿಕೂದಲನ್ನು ಕಿತ್ತೆಸೆಯುತ್ತಾಳೆ. ಚಂದ್ರಮುತ್ತ ಗುಣಮುಖನಾಗುತ್ತಾನೆ.

ಆತನಿಗೆ ಯಕ್ಷಿಯ ವಿರಹ ಹೆಚ್ಚುತ್ತಿದ್ದಂತೆ ಆಕೆಯನ್ನು ಹುಡುಕುತ್ತ ಅಲೆದಾಡುವಾಗ ಕಾಡಿನಲ್ಲಿ ಎಚ್ಚರತಪ್ಪಿ ಬಿದ್ದ ಯಕ್ಷಿ ಸಿಗುತ್ತಾಳೆ. ಆಕೆಯನ್ನು ಎತ್ತಿತಂದು ಯಕ್ಷಿಗುಡಿಯಲ್ಲಿ ಮಲಗಿಸಿ ಆತ ತಿಂಗಳರಾಗ ನುಡಿಸತೊಡಗುತ್ತಾನೆ. ಯಕ್ಷಿಚಕೋರಿಗೆ ನಿಧಾನವಾಗಿ ದೈವತ್ವ ಬಂದು ಆಕೆ ಪಕ್ಷಿಯಾಗಿ ಹಾರತೊಡಗುತ್ತಾಳೆ. ಆ ತಿಂಗಳರಾಗ ಹಾಡಬೇಕಾದುದು ಹುಣ್ಣಿಮೆಯ ರಾತ್ರಿಗೆ. ಆದರೆ ಈಗ ನುಡಿಸುತ್ತಿರುವುದು ಶಿವರಾತ್ರಿಯ ಅಮಾವಸ್ಯೆಗೆ. ಆದರೂ ಯಕ್ಷಿಗೆ ಇನ್ನಷ್ಟು ಚೈತನ್ಯ ಬರಲೆಂದು ಚಂದ್ರಮುತ್ತ ಕೊಳಲನ್ನು ಮತ್ತಷ್ಟು ತನ್ಮಯತೆಯಿಂದ ನುಡಿಸುತ್ತಿರುವಾಗ ಚಂದ್ರಮುತ್ತ ಶಿಲೆಯಾಗತೊಡಗುತ್ತಾನೆ. ಚೈತನ್ಯ ತುಂಬಿ ಹಾರಾಡುತ್ತಿದ್ದ ಚಕೋರಿಗೆ ಇದು ಗೋಚರವಾಗಿ ಆಕೆ ಚಂದ್ರಮುತ್ತನನ್ನು ಉಳಿಸಲೆಂದು ಕೆಳಗಿಳಿದು ಬಂದು ಶಿವನಲ್ಲಿ ಮತ್ತು ಉಳಿದ ದೈವಗಳಲ್ಲಿ ಬೇಡಿಕೊಂಡರೂ ಆಕೆಯ ಬೇಡಿಕೆ ಈಡೇರುವುದಿಲ್ಲ. ಚಂದ್ರಮುತ್ತ ಸಂಪೂರ್ಣ ಶಿಲೆಯಾದೊಡನೆ, ಚಕೋರಿ ಪಕ್ಷಿಯಾಗಿ ಹಾರಿಹೋಗುತ್ತಾಳೆ.

ಚಕೋರಿ ಕಾವ್ಯದ ಬಗ್ಗೆ ಕನ್ನಡದ ವಿಮರ್ಶಕ ಮಲ್ಲೇಪುರಂ ಜಿ. ವೆಂಕಟೇಶ್ ಹೀಗನ್ನುತ್ತಾರೆ :

"ಚಕೋರಿ ಕಾವ್ಯವೂ ಹಲವು ಸ್ತರದ ರಚನಾ ಎಳೆಗಳನ್ನು ಪಡೆದುಕೊಂಡಿದೆ. ಮುಖ್ಯವಾಗಿ

ಸೃಷ್ಟಿ ರಹಸ್ಯದ ಮುಂಖಾಂತರವಾಗಿಯೇ ಕೃತಿ ಮೊದಲಾಗುತ್ತದೆ. ಈ ಸೃಷ್ಟಿ ರಹಸ್ಯವೂ ಕೇವಲ ಬೆಡಗಾಗಿ ನಿಲ್ಲುವುದಿಲ್ಲ. ಅದು ನಮ್ಮ ಅನುಭವಗಳ ಕಣ್ಣಲ್ಲೇ ಆಕೃತಿಯನ್ನು ಪಡೆಯುತ್ತದೆ. ಈ ಕಾವ್ಯವು ಮುಗ್ಧತೆ, ಸ್ವಾಪ್ನಿಕತೆ, ನಾದ ಮತ್ತು ಅನುಭವದ ದುರಂತಗಳನ್ನು ಹಲವು ನೆಲೆಗಳಲ್ಲಿ ಹಲವು ಕ್ರಮಗಳಲ್ಲಿ ಕಟ್ಟಿಕೊಡುತ್ತವೆ" (ಸಿರಿ ಸಂಪಿಗೆ ಕಂಬಾರ 60, ಚಕೋರಿ-ಅನುಭಾವಿಕ ನೆಲೆಗಳ ವಿನ್ಯಾಸ, ಮಲ್ಲೇಪುರಂ ಜಿ. ವೆಂಕಟೇಶ್, ಪು. 65).

## ಕಂಬಾರರ ಕಾದಂಬರಿಗಳು

ಕಂಬಾರರ ನಾಟಕಗಳಲ್ಲೂ ಕಥನವಿರುತ್ತದೆ. ಅವರ ಕಾವ್ಯದಲ್ಲೂ ಕಥನವಿರುತ್ತದೆಯಾದರೂ ಕಂಬಾರರು ಕಾದಂಬರಿ ಪ್ರಕಾರದಲ್ಲೇ ನಾಲ್ಕು ಕಾದಂಬರಿಗಳನ್ನು ರಚಿಸಿದ್ದಾರೆ.

## ಅಣ್ಣತಂಗಿ (1956)

ವಿದ್ಯಾರ್ಥಿ ಜೀವನದಲ್ಲಿ ಹದಿಹರೆಯದ ಹುಮ್ಮಸ್ಸಿನಲ್ಲಿ ಬರೆದ ಈ ಕಾದಂಬರಿ - ಕೌಟುಂಬಿಕ ಕತೆಯುಳ್ಳದ್ದು.

## ಕರಿಮಾಯಿ (1975)

ಹಳ್ಳಿ ಶಿವಾಪುರಕ್ಕೆ ಆಧುನಿಕೆಯೊಂದಿಗೆ ಹೊಸಮೌಲ್ಯಗಳು ಪ್ರವೇಶಿಸಿ, ಹಳ್ಳಿಯ ಹಳೆಯ ನಂಬಿಕೆ, ಸಂಪ್ರದಾಯಗಳ ಬೇರನ್ನು ಅಲುಗಾಡಿಸುವುದರೊಂದಿಗೆ ಜನರ ಸಮುದಾಯ ಪ್ರಜ್ಞೆಯನ್ನು ಆಘಾತಗೊಳಿಸಿ, ಅಲ್ಲಿ ಉಂಟು ಮಾಡಿದ ತಲ್ಲಣ ಸಂಘರ್ಷ ಗೊಂದಲಗಳ ಚಿತ್ರಣ ಈ ಕಾದಂಬರಿಯಲ್ಲಿದೆ. ಪರಂಪರೆಯ ಮೌಲ್ಯಗಳನ್ನು ಆರಾಧಿಸುತ್ತಿದ್ದ ಶಿವಾಪುರದ ಸಮುದಾಯ ಆಧುನಿಕತೆಗೆ ಸ್ಪಂದಿಸಿದ ರೀತಿ ಮತ್ತು ಆಧುನೀಕತೆಯ ವಿಕೃತಿಗೆ ನಲುಗಿದ ಪರಿಯನ್ನು ಕಾದಂಬರಿ ಬಿಚ್ಚಿಡುತ್ತಲೇ ಬ್ರಿಟಿಷ್ ಆಡಳಿತದ ಕ್ರೌರ್ಯವನ್ನೂ ಸೂಕ್ಷ್ಮವಾಗಿ ಧ್ವನಿಸುತ್ತದೆ.

ಶಿವಾಪುರದ ಚರಿತೆಯ ಜತೆಗೆ ಊರ ಆರಾಧ್ಯ ದೇವತೆ ಕರಿಮಾಯಿಯ ಚರಿತ್ರೆಯನ್ನೂ ಪೋಣಿಸುತ್ತ ಆರಂಭವಾಗುವ ಕಾದಂಬರಿ ಊರಗೌಡ ಮತ್ತು ಕುಲಕರ್ಣಿಯ ಹಿರಿತನದಲ್ಲಿ ಊರಲ್ಲಿ ನೆಲೆಸಿದ್ದ ಶಾಂತಿ ಸಮೃದ್ಧಿಯ ಬಗ್ಗೆ ಹೇಳುತ್ತಾ, ಆ ಊರಲ್ಲೊಂದು ಗ್ರಾಮಪಂಚಾಯತಿ ಮಾಡಿಕೊಳ್ಳಬೇಕೆಂದು ಸರ್ಕಾರದಿಂದ ಕಾಗದ ಬಂದ ನಂತರದಿಂದ ಆಗುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಹಿಡಿದಿಡುತ್ತಾ ಮುಂದುವರಿಯುತ್ತದೆ.

ಊರಗೌಡನ ವಯಸ್ಸು ಅರವತ್ತೈದು ದಾಟಿದೆ. ಬಾಸಿಂಗದ ಮದುವೆ ನಾಲ್ಕಾದರೂ, ಮೊದಲಿನ ಮೂವರು ಹೆರಿಗೆಯಲ್ಲೇ ಸತ್ತು ನಾಲ್ಕನೆಯವಳು ಸಾಯುವ ಮುನ್ನ ಗೌಡನಿಗೆ ಬ್ಯಾಡರ ಶಿವಿಯಲ್ಲಿ ಹುಟ್ಟಿದ ಶಿವಲಿಂಗನನ್ನು ದತ್ತಕ ಪಡೆದು ಗೌಡನ ಉಸ್ತುವಾರಿಗೆ ಬಿಟ್ಟು ಸಾಯುತ್ತಾಳೆ. ಊರಗೌಡ ತನ್ನ ಶಿವಿಯನ್ನು ತೋಟದ ಗುಡಿಸಲಿಟ್ಟು ಉರ ಉಸಾಬರಿಕೆ ನೋಡುತ್ತಿರುವಾಗ ಸರಕಾರದಿಂದ ಬಂದ 'ಗ್ರಾಮಪಂಚಾಯತಿ ಮಾಡಬೇಕೆಂಬ' ಪತ್ರ ಆತನನ್ನು ತುಸು ಕಂಗೆಡಿಸುತ್ತದೆ.

ಸರಕಾರದ ಕಾಗದ ಬಂದೊಡನೆ, ಗೌಡ ಊರಿನ ಇತರ ಹಿರಿಯ ಎಚ್ಚರಿಕೆ ಮಾತನ್ನು ಕಿವಿಗೆ ಹಚ್ಚಿಕೊಳ್ಳದೆ, ಬೆಳಗಾವಿಯಿಂದ ವಕೀಲಿ ಕಲಿತ, ಇಂಗ್ರೇಜಿ ಭಾಷೆಬಲ್ಲ ಊರ ತರುಣ ಗುಡಸೀಕರನಿಗೆ ಆ ಗ್ರಾಮ ಪಂಚಾಯಿತಿಯ ಜವಾಬ್ದಾರಿಯನ್ನು ವಹಿಸಿಕೊಡುತ್ತಾನೆ. ಗುಡಸೀಕರ ಸರಪಂಚನಾಗುತ್ತಾನೆ. ದೇಶ ಸೇವೆಯ ಆದರ್ಶದ ಬೆಂಕಿಯನ್ನು ಉಡಿಯಲ್ಲಿ, ಅಧಿಕಾರದ ಅಮಲನ್ನು ತಲೆಯಲ್ಲಿ ಕಟ್ಟಿಕೊಂಡ ಬಿಸಿರಕ್ತದ ಗುಡಸೀಕರನಿಗೆ ಶಿವಾಪುರವನ್ನು ಬೆಳಗಾವಿಯನ್ನಾಗಿ ಮಾಡುವ ಹುಮ್ಮಸ್ಸು. ಆದರೆ ಹಳೆಯ ಮೌಲ್ಯ. ಹಳೆಯ ವ್ಯವಸ್ಥೆಗೇ ಒಗ್ಗಿ ಹೋಗಿರುವ ಶಿವಾಪುರದ ಮಂದಿಗೆ, ಹಳೆವ್ಯವಸ್ಥೆಯ ಪ್ರತಿನಿಧಿಯಾದ ಗೌಡನ ಆಡಳಿತ, ಆಲೋಚನೆಗಳೇ ಇಷ್ಟವಾಗಿ ಗುಡಸೀಕರನ ಹೊಸ ಚಿಂತನೆ ಯೋಚನೆ ಸುಧಾರಣೆಗಳು ಹಿಡಿಸುವುದಿಲ್ಲ. ಈ ಕಾರಣದಿಂದ ಊರಲ್ಲಿ ಎರಡು ಬಣಗಳು ಹುಟ್ಟಿಕೊಳ್ಳುತ್ತವೆ. ಊರಿಗೆ ಗ್ರಾಮಪಂಚಾಯತಿ ಬಂದ ನಂತರವೂ ಊರಗೌಡ ಇಡೀಯ ಊರಿಗೆ ಹಿರಿಸ್ಥಾನದಲ್ಲಿದ್ದು ಪರಂಪರಾಗತವಾಗಿ ಬಂದಿರುವ ನ್ಯಾಯ ಗೌರವ ವಿಶ್ವಾಸ ಪ್ರೀತಿಯನ್ನು ಪೋಷಿಸಿಕೊಂಡು ಬರುತ್ತಿರುವುದು, ಊರವರು ಆತನನ್ನು ಹಿಂದಿನಷ್ಟೇ ಪ್ರೀತಿ ವಿಶ್ವಾಸ ಭಯ ಭಕ್ತಿಗಳಿಂದ ನಡೆಸಿಕೊಳ್ಳುತ್ತಿರುವುದು, ಆದರೆ ಸರಪಂಚನಾದ ತನ್ನನ್ನು ಮತ್ತು ಸರಕಾರದ ಕಾಯಿದೆ ಕಾನೂನನ್ನು ಉಡಾಫೆ ಮಾಡುವುದು ಗುಡಸೀಕರನಿಗೆ ಅಸಹನೀಯವಾಗುತ್ತದೆ. ಹಳ್ಳಿಯಲ್ಲಿನ ಊಳಿಗಮಾನ್ಯ ವ್ಯವಸ್ಥೆಯನ್ನು ತೊಡೆಯಲು ಗ್ರಾಮಪಂಚಾಯತಿ ಬಂದಿರುವಾಗ ಜನ ಅದನ್ನು ಸ್ವೀಕರಿಸದೆ ಅದೇ ಕ್ಷುದ್ರ ವ್ಯವಸ್ಥೆಗೆ ಜೋತು ಬೀಳುತ್ತಿರುವುದು ತರುಣ ಗುಡಸೀಕರನನ್ನು ಮತ್ತಷ್ಟು ರೇಗಿಸುತ್ತದೆ. ಇಂತಹ ಸಂದರ್ಭದಲ್ಲಿ ನಿಂಗು ಎಂಬವ ತನ್ನ ಹೆಂಡತಿ ಮತ್ತು ತಂದೆಯ ಅನೈತಿಕ ಸಂಬಂಧದ ಕಾರಣಕ್ಕಾಗಿ ಅವರಿಬ್ಬರನ್ನು ಕೊಲೆ ಮಾಡುತ್ತಾನೆ. ನಿಂಗುವಿನ ಪರಿಸ್ಥಿತಿ ಮನಸ್ಥಿತಿ ಅರಿತ ಊರಗೌಡನಿಗೆ, ಶರಣಾಗತನಾಗಿರುವ ಆತನನ್ನು ಪರಂಪರಾಗತ ನ್ಯಾಯಪದ್ಧತಿ ಮೂಲಕ ಶಿಕ್ಷಿಸಿ, ರಕ್ಷಿಬೇಕೆನ್ನುವ ಹಠ. ಆದರೆ ವಸಾಹತುಶಾಹಿ ಸರಕಾರದ ಕಾಯಿದೆ ಕಾನೂನುಗಳನ್ನು ಗೌರವಿಸುವ ಗುಡಸೀಕರನಿಗೆ ಆತನನ್ನು ಪೊಲೀಸು, ಕೋರ್ಟು, ಕಾನೂನುಗಳಿಗೆ ಒಪ್ಪಿಸುವ ಛಲ. ಕೊನೆಗೂ ನಿಂಗುವನ್ನು ಗೌಡ ರಕ್ಷಿಸುತ್ತಾನೆ. ಗುಡಸೀಕರ ಅವಮಾನಿತನಾಗುತ್ತಾನೆ.

ಈ ಕಾರಣಕ್ಕೆ ಆರಂಭವಾದ ಗೌಡ ಗುಡಸೀಕರರ ಬಲಾಬಲ ಪರೀಕ್ಷೆ ಅನೇಕ ಕಹಿ ಪ್ರಸಂಗ ಸನ್ನಿವೇಶಗಳನ್ನು ಸೃಷ್ಟಿಸುತ್ತದೆ. ಬೆಳಗಾವಿಗೆ ಬಂದ ಆಧುನಿಕ ಬದುಕನ್ನು ಹಳ್ಳಿ ಶಿವಾಪುರಕ್ಕೆ ಪರಿಚಯಿಸುವ ಮೊದಲ ಪ್ರಯತ್ನವಾಗಿ, ಫೋಜದಾರ, ಜೀಪು, ಪೋಲೀಸರ ಜತೆಗೆ ವಿದೇಶಿ, ಬ್ರಾಂಡಿ, ಸಿಗರೇಟು, ರೇಡಿಯೋ, ಲೈಟ್ - ಲೌಡ್ ಸ್ಪೀಕರ್‌ಗಳು ಊರಿಗೆ ಕಾಲಿಟ್ಟವು. ಹೋಳಿ ಹುಣ್ಣಿಮೆಯ ದಿನ ಸಾಂಪ್ರದಾಯಿಕವಾದ ಕೃಷ್ಣಪಾರಿಜಾತದ ಬದಲಿಗೆ ಸೀತಾಪಹರಣ ನಾಟಕದ ಏರ್ಪಾಡಾಯಿತು. ಥೇಟರ್ ಹಾಕಿ ಲೈಟ್ ಲೌಡ್ ಸ್ಪೀಕರ್ ಜತೆಗೆ ಸುಂದರಿ ಚಿಮಣಾಳನ್ನು ಕರೆಸಿ ನಾಟಕವಾಡಿದ್ದಾಯಿತು. ನಾಟಕಕ್ಕೆ ಬಂದ ಚಿಮಣಾ ಗುಡಸೀಕರನ ಸುಖದ ಸೊತ್ತಾಗಿ ಅಲ್ಲೇ ತಳವೂರುತ್ತಾಳೆ. ಆಕೆಯೊಡನೆ ಬೆಳಗಾವಿಯಿಂದ ಬಂದ ಬಸವರಾಜನೆಂಬ ನಯವಂಚಕನ ದುಷ್ಟಜಾಲಕ್ಕೆ ಇಡೀಯ ಊರೇ ಬಲಿಯಾಗುತ್ತದೆ. ಬಸವರಾಜ ಗುಡಸೀಕರನ ಸ್ನೇಹ ವಿಶ್ವಾಸವನ್ನು ಗಳಿಸಿಕೊಳ್ಳುವಲ್ಲಿ ಸಫಲನಾಗುತ್ತಾನೆ. ಆ ಸ್ನೇಹದ ಜತೆಗೆ ಗುಡಸೀಕರನ ತಂಗಿ, ಗಿರಿಜೆಯ ಸ್ನೇಹವನ್ನು ಸಂಪಾದಿಸಿಕೊಳ್ಳುತ್ತಾನೆ. ಸುಂದರಿ ಚಿಮಣಾ ಗುಡಸೀಕರನ ಸಂಬಂಧದ ಫಲವಾಗಿ

ಬಸಿರಾಗುತ್ತಾಳೆ. ಆದರೆ ಗೌಡನ ಮೇಲಿನ ದ್ವೇಷ ಸಾಧನೆಗಾಗಿ, ಗುಡಸೀಕರ ಬಸವರಾಜನ ಜತೆ ಸೇರಿ ಮೋಸದ ಬಲೆ ಹೆಣೆದು ಗೌಡನನ್ನು ಅದರೊಳಗೆ ಸಿಲುಕಿಸಿ ಬಸರಿನ ಹೊಣೆಯನ್ನು ಗೌಡನ ಮೇಲೆ ಹೊರಿಸುತ್ತಾನೆ. ಊರವರಿಗೆ ಸತ್ಯವೇನೆಂದು ತಿಳಿದಿದ್ದರೂ, ಸರಕಾರದ ಕಾಯಿದೆಯಂತೆ ಗೌಡ ಅಪರಾಧಿ ಸ್ಥಾನಕ್ಕೆ ಏರಬೇಕಾಗುತ್ತದೆ.

ಈ ಸಂದರ್ಭದಲ್ಲಿ ಇಡೀಯ ಊರು ಗೌಡನ ಪರ ಒಗ್ಗಟ್ಟಾಗಿನಿಂತು ಚಿಮಣಾಳಿಗೆ ಬಹಿಷ್ಕಾರ ಹಾಕುವ ಮೂಲಕ ಗುಡಸೀಕರನ ಮದಕ್ಕೆ ಕಡಿವಾಣ ಹಾಕುತ್ತದೆ. ಊರವರ ಒತ್ತಾಯದಂತೆ ಗ್ರಾಮಪಂಚಾಯತಿಗೆ ಚುನಾವಣೆ ಪ್ರಕ್ರಿಯೆ ಆರಂಭವಾಗುತ್ತದೆ. ಈ ಚುನಾವಣೆ ಊರಿನ ಸಾಮಾಜಿಕ ಜೀವನವನ್ನು ಅಲ್ಲೋಲಕಲ್ಲೋಲ ಮಾಡುತ್ತದೆ. ಗೌಡನ ಮಗ ಶಿವಲಿಂಗ ರಾತ್ರೋರಾತ್ರಿ ಊರು ಬಿಡುತ್ತಾನೆ. ಕಾರಣ ತಿಳಿಯದೆ ಗೌಡ ಕಂಗಾಲಾಗುತ್ತಾನೆ. ಕರಿಮಾಯಿಯ ವಾರ್ಷಿಕ ಉತ್ಸವದ ಏರ್ಪಾಡಾಗಿದೆ. ಉತ್ಸವದ ರಾತ್ರಿ ಬಸವರಾಜ ಮತ್ತು ಚಿಮಣಾ ಪೂರ್ವ ತಯಾರಿ ನಡೆಸಿಕೊಂಡು ಗುಡಿಯೊಳಗಿನ ಜೇನುಹುಟ್ಟಿಗೆ ಕೋಲೆಸೆದು ಹಾಹಾಕಾರವೆಬ್ಬಿಸುತ್ತಾಳೆ. ಎಲ್ಲೆಲ್ಲೂ ಹಾಹಾಕಾರ ಎದ್ದಿರುವುದನ್ನು ಕಂಡು ಗುಡಸೀಕರ ದೇವಿಗೆ ತೊಡಿಸಿರುವ ಎಲ್ಲಾ ಆಭರಣಗಳನ್ನು ಸುರಕ್ಷತೆಯ ಕಾರಣಕ್ಕೆ ಕಳಚಿ ತೆಗೆದು ತನ್ನ ಮನೆಯ ತಿಜೋರಿಯಲ್ಲಿ ತಂದಿಡುತ್ತಾನೆ. ಆ ರಾತ್ರಿಯೆ ಬಸವರಾಜ ಆ ಆಭರಣಗಳನ್ನು ದೋಚಿಕೊಂಡು ಗುಡಸೀಕರನ ತಂಗಿ ಗಿರಿಜೆಯ ಜೊತೆಗೆ ಪರಾರಿಯಾಗುತ್ತಾನೆ. ಚಿಮಣಾಳಿಗೆ ಹುಚ್ಚು ಹಿಡಿಯುತ್ತದೆ, ಆಕೆ ಹೆಣ್ಣು ಮಗು ಹೆಡೆಯುತ್ತಾಳೆ. ಗೌಡನ ನಾಪತ್ತೆಯಾದ ಮಗ ಶಿವಲಿಂಗಪ್ಪನನ್ನು ನೆನೆ ನೆನೆದು ತಾಯಿ ಬೇಡರ ಶಿವಿ ಪ್ರಾಣ ಬಿಡುತ್ತಾಳೆ.

ಗ್ರಾಮೀಣ ಭಾರತ ನಗರೀಕರಣದ ಮಾಯೆಗೆ ಒಳಗಾಗುವ ಆರಂಭದ ಸಂದರ್ಭ ಈ ಕಾದಂಬರಿಯಲ್ಲಿದೆ. ಹಳ್ಳಿಗರಲ್ಲಿದ್ದ ನಗರಗಳ ಆದರ್ಶದ ಭ್ರಮೆ ಕರಗಿ ಅಧಿಕಾರಶಾಹಿಯ ದರ್ಪ ಅಹಂಕಾರಗಳಿಗಿಂತ ಪರಂಪರಾಗತವಾಗಿ ನಡೆದುಬಂದಿರುವ ಜಮೀನ್ದಾರಿ ಆಳ್ವಿಕೆಯೇ ಮೇಲು ಎಂಬ ಸ್ಥಿತಿ ಈ ಕಾದಂಬರಿಯಲ್ಲಿ ನಿರ್ಮಾಣವಾಗಿದೆ.

ಇದು ಒಂದು ಪ್ರಾದೇಶಿಕ ಕಾದಂಬರಿಯಾದರೂ, ಸ್ವಾತಂತ್ರ್ಯಪೂರ್ವದ ಭಾರತದ ಎಲ್ಲ ಹಳ್ಳಿಗಳಿಗೆ ಅನ್ವಯಿಸುವಂತೆ ಬರೆದ ಕಾದಂಬರಿಯಂತಿದೆ. ತೀರಾ ವಿಶಿಷ್ಟವಾದ ನಿರೂಪಣಾ ಶೈಲಿ ವ್ಯಾಖ್ಯಾನ ವಿವರಣೆ ವಿಮರ್ಶೆ ವಿಡಂಬನೆಗಳಿಗೆ ವ್ಯಂಗ್ಯ ಮತ್ತು ತಿಳಿಹಾಸ್ಯದ ಹೆಣಿಗೆಯಿರುವುದರಿಂದ ಕಾದಂಬರಿ ಆಸಕ್ತಿ ಪೂರ್ಣವಾಗಿ ಓದಿಸುತ್ತದೆ. ಆದರೆ ಈ ಕಾದಂಬರಿ ಕಂಬಾರರಿಗೆ 'ಪ್ರತಿಗಾಮಿ' ಎಂಬ ಹಣೆಪಟ್ಟಿ ಕಟ್ಟಿಸಿತು. ಹಳೆಯ ಮೌಲ್ಯಗಳೇ ಅತೀ ಶ್ರೇಷ್ಠವಾದವು ಮಾನವೀಯವಾದವು. ಪರಂಪರಾಗತ ಜಮೀನ್ದಾರಿ ವ್ಯವಸ್ಥೆ ಎಲ್ಲೂ ಶಿಥಿಲಗೊಳ್ಳದೆ, ಆ ವ್ಯವಸ್ಥೆ ಮತ್ತು ಮೌಲ್ಯಗಳನ್ನು ಆಧರಿಸಿದ ಗ್ರಾಮಸಮುದಾಯವೇ ಅಸ್ತಿತ್ವದಲ್ಲಿರಬೇಕು ಎಂಬುದು ಈ ಕಾದಂಬರಿಯ ಧ್ವನಿಯಾದ್ದರಿಂದ ಕಂಬಾರರು ಪ್ರಗತಿಗಾಮಿಯಲ್ಲ ಪ್ರತಿಗಾಮಿ ಎಂಬ ಸಣ್ಣ ಆರೋಪವನ್ನು ಹೊರಬೇಕಾಯಿತು.

## ಸಿಂಗಾರವ್ವ ಮತ್ತು ಅರಮನೆ (1982)

ಊಳಿಗಮಾನ್ಯ ವ್ಯವಸ್ಥೆಯೊಳಗಿನ ಅಮಾನುಷತೆ, ಸ್ವಾರ್ಥ, ಕ್ರೌರ್ಯ, ಅಹಂಕಾರ, ಕುಟಿಲತೆ, ಕುತಂತ್ರ, ಸಂಘರ್ಷ ಸಮಸ್ಯೆಗಳೇ ಆ ವ್ಯವಸ್ಥೆಯನ್ನು ಬುಡಮೇಲು ಮಾಡಿ ನಾಶಗೊಳಿಸುವ ಚಿತ್ರಣ ಈ ಕಾದಂಬರಿಯಲ್ಲಿದೆ.

ಸಿಂಗಾರವ್ವ ನಂದಗಾವಿಯ ಗೌಡನ ಒಬ್ಬಳೇ ಮಗಳು. ಹೂವಿನಂತೆ ಮೃದುವಾಗಿರುವ ಆಕೆ ಚೆಲುವೆ ಸೂಕ್ಷ್ಮಪ್ರಜ್ಞೆ. ಕಟ್ಟೆ ಹರುಕನಾದ ದುರಾಸೆಯ ವ್ಯಕ್ತಿತ್ವವುಳ್ಳ ಗೌಡ ಆಸ್ತಿಯ ಆಸೆಗಾಗಿ ಕ್ಷಯ ರೋಗದಿಂದ ಹೆಣವಾಗಿ ಮಲಗಿದ್ದ ಸೋದರಳಿಯನಿಗೆ ಮಗಳನ್ನು ಮದುವೆ ಮಾಡುತ್ತಾನೆ. ಮಗಳು ವಿಧವೆಯಾದೊಡನೆ ಎರಡನೇ ಮದುವೆಯನ್ನು ಶಿವಪುರದ ರೋಗಿಷ್ಟ ಅಪ್ಪಾ ಸಾಹೇಬ ದೇಸಾಯಿಯೊಡನೆ ನಡೆಸುತ್ತಾನೆ. ಸಿಂಗಾರವ್ವ ತನ್ನ ಕುಡುಕ ಷಂಡ ಗಂಡನಿಂದ ದಾಂಪತ್ಯ ಸುಖ ಪಡೆಯದೆ ಊರಲ್ಲಿ ಬಂಜೆ ಎಂಬ ಪಟ್ಟ ಕಟ್ಟಿ ಕೊಳ್ಳುತ್ತಾಳೆ. ಕಟ್ಟಿಕೊಂಡ ಹೆಂಡತಿಯ ಬೇನೆ ಬೇಸರದ ಬಗ್ಗೆ ಗ್ಯಾನವಿಲ್ಲದ ಗಂಡನ ಬಗ್ಗೆ ಸಿಂಗಾರವ್ವ ಸಿಟ್ಟು ನೋವಿನಿಂದ ಕುದಿಯುತ್ತಾಳೆ. ತನ್ನ ಒಳ ಮನಸ್ಸನ್ನು ತವರೂರಿನಿಂದ ತನ್ನೊಂದಿಗೆ ದಾಸಿಯಾಗಿ ಬಂದಿರುವ ಶೀನಿಂಗವ್ವನ ಎದುರು ಬಿಚ್ಚಿಡುತ್ತಾಳೆ.

ಮಕ್ಕಳಾಗುವ ಆಸೆಯಿಂದ, ವಿಷಯಲಂಪಟನೆಂಬ ಕೀರ್ತಿ ಹೊತ್ತಿರುವ ಹುಚ್ಚಯ್ಯನೆಂಬ ಜಂಗಮನನ್ನು ಅನಿವಾರ್ಯವಾಗಿ ಅರಮನೆಯ ಯಾರೊಬ್ಬರಿಗೂ ತಿಳಿಯದಂತೆ ಕರೆಸಿ ಗುಪ್ತವಾಗಿ ಮಕ್ಕಳಾಗುವ ಪೂಜೆ ಮಾಡಿಸುವಾಗ ದೇಸಾಯಿಯ ಆಗಮನವಾಗುತ್ತದೆ. ದೇಸಾಯಿಯಿಂದ ಸಾಯಬೇಕಾದ ಹುಚ್ಚಯ್ಯನನ್ನು ದೊರೆಸಾನಿ ಸಿಂಗಾರವ್ವ ಮತ್ತು ಶೀನಿಂಗವ್ವ ಗಾದಿಯಲ್ಲಿ ಸುತ್ತಿಡುತ್ತಾರೆ. ಕೋಪೋದ್ರಿಕ್ತ ದೇಸಾಯಿಗೆ ಅನುಮಾನ, ಆತ ತಪಾಸಣೆ ಮುಗಿಸಿ ಹೊರಡುವಷ್ಟರಲ್ಲಿ ಜಂಗಮ ಹುಚ್ಚಯ್ಯ ಪ್ರಾಣ ಬಿಟ್ಟಿರುತ್ತಾನೆ. ದೇಸಾಯಿಯು ಕಣ್ಮರೆಯಾಗುತ್ತಲೇ ಹೆಣದ ವಿಲೇವಾರಿಗಾಗಿ ಸಿಂಗಾರವ್ವ ದಾಸಿ ಶೀನಿಂಗವ್ವಳನ್ನು ಹೊಲಗೇರಿಗೆ ಆಳುಗಳನ್ನು ಕರೆತರಲು ಅಟ್ಟುವಳು. ಶೀನಿಂಗವ್ವ ಹೊಲಗೇರಿಯಿಂದ ಮರ್ದ್ಯಾ ಎಂಬ ಆಳುವನ್ನು ಕರೆ ತರುವಳು. ಸರಿ ರಾತ್ರಿಗೆ ಬಂದ ಆಳು ಮರ್ದ್ಯಾನನ್ನು ಸಿಂಗಾರವ್ವ ನಿಧಾನಕ್ಕೆ ಗುರುತಿಸುತ್ತಾಳೆ. ಮರ್ದ್ಯಾ ಸಿಂಗಾರವ್ವನ ತವರು ಮನೆಯ ಒಕ್ಕಲಾಳು. ಆತನ ತಾಯಿಯೊಂದಿಗೆ ಸಿಂಗಾರವ್ವನ ಅಪ್ಪ ಪಂಡರೀಗೌಡನಿಗೆ ಅನೈತಿಕ ಸಂಬಂಧವಿರುತ್ತದೆ. ಅವರಿಬ್ಬರೂ ಗುಟ್ಟಾಗಿ ಕೂಡಿರುವ ಹೊತ್ತಲ್ಲಿ ಮರ್ದ್ಯಾ ಹಲ್ಲೆ ನಡೆಸಿ ತಾಯಿಯ ಕೊಲೆಮಾಡುತ್ತಾನೆ, ಗೌಡ ಪಾರಾಗುತ್ತಾನೆ. ಹಾಗೆ ತಲೆಮರೆಸಿಕೊಂಡಿದ್ದ ಮರ್ದ್ಯಾನನ್ನು ಸಿಂಗಾರವ್ವ ನೋಡಿದ್ದು ಇದೇ ಮೊದಲು. ಮರ್ದ್ಯಾನಿಗೆ ಮೊದಲಿನಿಂದಲೂ ಸಿಂಗಾರವ್ವಳ ಮೇಲೆ ಮನಸ್ಸಿದೆ. ಸಿಂಗಾರವ್ವಳನ್ನು ಹೆಣಕ್ಕೆ ಮದುವೆ ಮಾಡಿಸುವ ಮುನ್ನವೇ ಮರ್ದ್ಯಾ ಸಿಂಗಾರವ್ವಳ ಜತೆ ಪ್ರಣಯಕ್ಕೆ ಪ್ರಯತ್ನ ನಡೆಸಿದ್ದಿದೆ. ಇದೀಗ ಸಿಂಗಾರವ್ವಳನ್ನು ಕಂಡ ಮರ್ದ್ಯಾ ತನ್ನೊಂದಿಗೆ ಮಲಗಿದರೆ ಮಾತ್ರವೇ ಹುಚ್ಚಯ್ಯನ ಹೆಣ ಸಾಗಿಸುವುದಾಗಿ ಕರಾರು ಹಾಕುತ್ತಾನೆ. ಸಿಂಗಾರವ ಒಪ್ಪದಾಗ ತಾನೇ ಬಲಾತ್ಕಾರ ಮಾಡಿ ಅವಳನ್ನು ಕೂಡುತ್ತಾನೆ. ಹುಚ್ಚಯ್ಯನ ಹೆಣವನ್ನು ಊರ ಕುಮುದವ್ವನ ಗುಡಿಯಲ್ಲಿ ಕೂಡಿಸುತ್ತಾನೆ.

ಸಿಂಗಾರವ್ವ ಆ ನಂತರದಿಂದ ಆಗಾಗೆ ಮರ್‍ಯಾನ ಬಲಾತ್ಕಾರಕ್ಕೆ ಒಳಗಾಗುತ್ತಾಳೆ. ಆತನನ್ನು ಊಟಕ್ಕೆ ವಿಷಹಾಕಿ, ಕೊಲ್ಲಲು ನಿರ್ಧರಿಸಿ, ನಂತರ ಆ ಪ್ರಯತ್ನವನ್ನು ಕೈ ಬಿಡುತ್ತಾಳೆ. ಅರಮನೆಯಲ್ಲಿ ದೇಸಾಯಿಯ ತಾಯಿ ಹಿರಿಯ ದೊರೆಸಾನಿ ಸಾಯುತ್ತಾಳೆ. ತಾಯಿಯ ಕರ್ಮಕ್ರಿಯೆಗೂ ದೇಸಾಯಿಯಲ್ಲಿ ಹಣವಿಲ್ಲ. ಪರಮಶೆಟ್ಟಿಯಿಂದ ಎಂದಿನಂತೆ ಸಾಲ ಪಡೆಯುತ್ತಾನೆ. ಆಗಲೇ ಹೆಚ್ಚಾಗಿದ್ದ ಮನೆಸಾಲ ಮತ್ತಷ್ಟು ಹೆಚ್ಚುತ್ತದೆ. ದೇಸಾಯಿಯ ಆಸ್ತಿ ಮೇಲೆ ಸಿಂಗಾರವ್ವನ ತಂದೆಗೂ ಕಣ್ಣು, ಸಾಲಕೊಟ್ಟ ಪರಮಶೆಟ್ಟಿಗೂ ಕಣ್ಣು ; ಅಂತೂ ದೇಸಾಯಿಯ ಆಸ್ತಿ ಕರಗುತ್ತಲೇ ಇದೆ. ದೇಸಾಯಿಯನ್ನು ಸರಿದಾರಿಗೆ ತರಲು ಸಿಂಗಾರವ್ವ ಪ್ರಯತ್ನಿಸುತ್ತಾಳೆ. ಆದರೆ ಆತ ಚಿಮಣಾಳನ್ನು ನೋಡಿ ಉದ್ರೇಕಗೊಳ್ಳುವ ತನ್ನ ಚಟಗಳನ್ನು ಬಿಡಲಾರ. ಸಿಂಗಾರವ್ವಳಿಗೆ ಸಿಟ್ಟೇರುತ್ತದೆ. ಗಂಡನ ಮೇಲಿನ ಸಿಟ್ಟಿನಿಂದ, ಸೇಡಿನಿಂದ ಆಳು ಮರ್‍ಯಾನೊಂದಿಗೆ ತಾನೇ ಕೂಡುತ್ತಾಳೆ. ಸಿಂಗಾರವ್ವ ಬಸಿರಾಗುತ್ತಾಳೆ. ದೇಸಾಯಿಗೆ ಈ ಬಸಿರಿನ ಗುಟ್ಟು ತಿಳಿಯುತ್ತದೆ. ಇದು ಮರ್‍ಯಾನಿಂದ ಬಂದ ಬಸಿರು. ತನ್ನ ಸಾವಿಗೆ ತನ್ನ ವ್ಯಭಿಚಾರಿ ಹೆಂಡತಿಯೇ ಕಾರಣವೆಂದು ಪತ್ರ ಬರೆದಿಟ್ಟು ದೇಸಾಯಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ತನ್ನ ಅಪರಾಧವನ್ನು ಒಪ್ಪಿಕೊಂಡು ಜೈಲಿಗೆ ಹೋದ ಸಿಂಗಾರವ್ವ ಅಲ್ಲಿ ಮಗನನ್ನು ಹಡೆದು ಪ್ರಾಣ ಬಿಡುತ್ತಾಳೆ. ಆಕೆಯ ಸಾವಿನ ಮೂರೇ ದಿನಕ್ಕೆ ಮರ್‍ಯಾನೂ ತಾನೇ ಹಾವಿನಿಂದ ಕಚ್ಚಿಸಿಕೊಂಡು ಸಾಯುತ್ತಾನೆ.

ಸಿಂಗಾರವ್ವಳ ದಾಸಿ ಶೀನಿಂಗವ್ವ ಮತ್ತು ಕಾದಂಬರಿಕಾರ ಇಬ್ಬರೂ ಸೇರಿ ಕತೆಯನ್ನು ನಿರೂಪಿಸುವುದು ಇಲ್ಲಿನ ವಿಶೇಷ. ಪುರುಷ ಜಗತ್ತಿನ ಕ್ರೌರ್ಯದ ಜತೆಗೆ ಅತೃಪ್ತ ಹೆಣ್ಣೊಬ್ಬಳ ಒಳತೋಟಿ ಮತ್ತು ಊಳಿಗಮಾನ್ಯ ವ್ಯವಸ್ಥೆಯ ಮೂಲಬಿಂದುವಾದ ಅರಮನೆಯೊಳಗಿರುವ ಹಲವು ಮುಖಗಳು ಮತ್ತು ಸ್ಥಿತಿಯನ್ನು ಕಂಬಾರರು ಈ ಕಾದಂಬರಿಯಲ್ಲಿ ಬಿಚ್ಚಿಟ್ಟಿದ್ದಾರೆ.

ಈ ಕಾದಂಬರಿಯ ಇಂಗ್ಲಿಷ್ ಅನುವಾದ ಕೃತಿಗೆ ಮುನ್ನುಡಿ ಬರೆದ ಮಲೆಯಾಳಂನ ಖ್ಯಾತ ಕಾದಂಬರಿಕಾರ ಎಂ.ಟಿ. ವಾಸುದೇವನ್ ನಾಯರ್ ಅವರು :

"... This novel scales higher dimensions because Kambar here delves deep into an Indian tragedy of all times : Men and women trying to revolt and running continuously to escape from the suffocating trap of tradition, finally to only reach the very vortex of it unknowingly. A commo‹ı place story, if put in a nutshell, that has happened in many rural settings, many times. But what makes this a major literary work is the simple and vibrant narrative technique of Kambar. He has created formless form that resembles folklore or a fable.

## ಜೀಕೆ ಮಾಸ್ತರರ ಪ್ರಣಯ ಪ್ರಸಂಗ (1986)

ಈ ಪುಟ್ಟ ಕಾದಂಬರಿಯ ಕಥಾನಾಯಕ ಗುಂಜಾಳ ಕರಿಬಸಯ್ಯ ಮಾಸ್ತರರು ಅಂದರೆ ಜೀಕೆ

ಮಾಸ್ತರರು. ಆ ಊರಲ್ಲಿ ಆದರಣೀಯರು. ಮುನ್ಸಿಪಲ್ ಹೈಸ್ಕೂಲಲ್ಲಿ ಶಿಕ್ಷಕರಾಗಿದ್ದು ಆ ಊರಿಗೆ ಕಾಲೇಜು ಬರಲು ಕಾರಣರಾದವರು. ಗಾಂಧೀಜಿಯವರ ತತ್ವಗಳನ್ನೆಲ್ಲ ತಮ್ಮ ಬದುಕಿನಲ್ಲಿ ಅನುಸರಿಸುವ ಇವರಿಗೆ ಅಸ್ಪೃಶ್ಯತಾ ನಿವಾರಣೆಯಲ್ಲಿ ಮಾತ್ರ ಒಲವಿಲ್ಲ. ಈಗ ಆ ಊರಿನ ಕಾಲೇಜು ಪ್ರಿನ್ಸಿಪಾಲರಾಗಿ ಇರುವ ಜೀಕೆ ಮಾಸ್ತರರು ತಮ್ಮ ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಸಮಯಪ್ರಜ್ಞೆ, ಶುದ್ಧ ಚಾರಿತ್ರ್ಯ, ಮಾನವೀಯ ಅಂತಃಕರಣದಿಂದಾಗಿ ಕಾಲೇಜಲ್ಲಿ ಮಾತ್ರವಲ್ಲ ಇಡೀಯ ತಾಲೂಕಲ್ಲೇ ಗೌರವಾನ್ವಿತರು.

ಇಂತಹ ಸಜ್ಜನ ಸದ್ಗುಣ ಸಂಪನ್ನ ವ್ಯಕ್ತಿ ನಿವೃತ್ತಿಯ ಅಂಚಿನಲ್ಲಿರುವಾಗ ತನ್ನ ವಿದ್ಯಾರ್ಥಿನಿಯೊಬ್ಬಳ ಕಪಟ ಪ್ರೇಮದ ಸುಳಿಯಲ್ಲಿ ಸಿಲುಕುತ್ತಾರೆ. ಆಧುನಿಕತೆಯನ್ನು ಅನುಮಾನಿಸುತ್ತ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯನ್ನು ನೆಚ್ಚಿಕೊಂಡ ಜೀಕೆ ಮಾಸ್ತರರು, ಹರಿವ ಮನಸ್ಸಿಗೆ ಕಡಿವಾಣ ಹಾಕಲಾರದೆ ಆ ವಯಸ್ಸಲ್ಲೂ ಪ್ರೀತಿಗಾಗಿ ಹಾತೊರೆದಾಗ ವಿದ್ಯಾರ್ಥಿನಿಯೊಬ್ಬಳು ಪ್ರೇಮದ ಸೋಗುಹಾಕಿ ಹಲವು ರೀತಿಯಲ್ಲಿ ಪ್ರಿನ್ಸಿಪಾಲರ ದೌರ್ಬಲ್ಯದ ದುರ್ಲಾಭ ಪಡೆಯುತ್ತಾಳೆ. ಜೀಕೆ ಮಾಸ್ತರರಿಗೆ ಒಂದು ಸನ್ನಿವೇಶದಲ್ಲಿ ಆ ಪ್ರೇಮದಾಟದೊಳಗಿನ ಮೋಸದ ಸಂಚಿನ ಅರಿವಾಗುತ್ತದೆ. ಆಕೆ ಬೇರೆಯವನನ್ನು ಪ್ರೀತಿಸುತ್ತಾಳೆ ಎಂದು ತಿಳಿದ ಮಾಸ್ತರು ತೀವ್ರ ಆಘಾತಕ್ಕೊಳಗಾಗಿ ಊರುಬಿಡಲು ನಿರ್ಧರಿಸುತ್ತಾರೆ. ರೈಲ್ವೆ ಸ್ಟೇಷನ್‌ನಲ್ಲಿ ಚಳಿಯಲ್ಲಿ ನಡುಗುತ್ತಿದ್ದ ಒಬ್ಬನಿಗೆ ತನ್ನ ಘನತೆಯ ಕೋಟನ್ನು ಕಳಚಿ ಹೊದಿಸಿ ರೈಲು ಹತ್ತುತ್ತಾರೆ. ಕೋಟು ಧರಿಸಿದ ವ್ಯಕ್ತಿ ರೈಲಿಗೆ ಸಿಕ್ಕಿ ಸಾಯುತ್ತಾನೆ. ಕೋಟಿನ ಗುರುತಿನಿಂದ ಮಾಸ್ತರರೇ ಸತ್ತರೆಂದು ಇಡೀಯ ತಾಲೂಕು ಅವರ ಸಾವಿಗಾಗಿ ಶೋಕಿಸುತ್ತದೆ. ಆಘಾತದಿಂದ ನಿಧಾನವಾಗಿ ಚೇತರಿಸಿಕೊಂಡ ಜೀಕೆ ಮಾಸ್ತರರು ಒಮ್ಮೆ ಹುಬ್ಬಳ್ಳಿ ಪೇಟೆಗೆ ಬಂದಾಗ ತನ್ನೊಡನೆ ಪ್ರೇಮದಾಟವಾಡಿದ್ದ ವಿದ್ಯಾರ್ಥಿನಿ ಮತ್ತು ಆಕೆಯ ಪ್ರಿಯಕರನನ್ನು ಆಕಸ್ಮಿಕವಾಗಿ ಭೇಟಿ ಮಾಡುತ್ತಾರೆ. ನೌಕರಿಯಿಲ್ಲದೆ, ಮದುವೆಯಾಗದೆ ಹೆಣಗಾಡುತ್ತಿದ್ದ ಆ ಜೋಡಿಯನ್ನು ಪ್ರೀತಿಯಿಂದ ಮಾತನಾಡಿ ತನ್ನಲ್ಲಿದ್ದ ಹಣವನ್ನು ನೀಡಿ, ತಮ್ಮ ಮನೆಯನ್ನೂ ಅವರ ಹೆಸರಿಗೆ ಬರೆದು ಮತ್ತೆ ಕಣ್ಮರೆಯಾಗುತ್ತಾರೆ.

ಮೇರು ವ್ಯಕ್ತಿತ್ವದ ಜೀಕೆ ಮಾಸ್ತರರು ಹಿರಿಯರಾಗಿ, ಜವಾಬ್ದಾರಿಯ ಸ್ಥಾನದಲ್ಲಿದ್ದೂ ಹೆಣ್ಣಿನ ಪ್ರೇಮಕ್ಕಾಗಿ ತಮ್ಮ ಮನಸ್ಸಿನ ಕಡಿವಾಣದ ಹತೋಟಿಯನ್ನು ಕಳೆದುಕೊಳ್ಳುವ ಪರಿ, ನಂತರದ ಬೆಳವಣಿಗೆಗಳಲ್ಲಿ ಅವರ ಮನದೊಳಗೆ ನಡೆಯುವ ಮುಖ್ಯ ಅಸಂಖ್ಯ ವ್ಯಾಪಾರಗಳನ್ನು ಮಾಸ್ತರರ ಸ್ವಭಾವದ ಮೂಲಗುಣಗಳಾದ ಪ್ರೀತಿ ಅಂತಃಕರಣ, ಕ್ಷಮೆ, ಉದಾರತೆಗಳು ಮತ್ತೆ ತೇಲಿ ಬರುವುದನ್ನು ಕಂಬಾರರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

## ಜಾನಪದ – ಸಂಶೋಧನೆ – ಸಂಪಾದನಾ ಕೃತಿಗಳು

ಸೃಜನಶೀಲ ವ್ಯಕ್ತಿ ಕಂಬಾರರು, ತಾವು ಪ್ರೀತಿಸುವ ಜಾನಪದ ಜಗತ್ತಿಗೆ ಮತ್ತು ಕನ್ನಡ ಸಾಹಿತ್ಯಲೋಕಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸಿ ಹಲವು ಕೃತಿಗಳನ್ನು ರಚಿಸಿದ್ದಾರೆ ಮತ್ತು ಸಂಪಾದಿಸಿದ್ದಾರೆ. ಅವು ಈ ಕೆಳಗಿನವು.

## ಉತ್ತರ ಕರ್ನಾಟಕದ ಜಾನಪದ ರಂಗಭೂಮಿ (1965)

ಉತ್ತರ ಕರ್ನಾಟಕದ ಜಾನಪದ ರಂಗಪ್ರಕಾರಗಳ ಹುಟ್ಟು ಬೆಳವಣಿಗೆಯ ಬಗ್ಗೆ ಮಾಹಿತಿಯನ್ನು ನೀಡಬಲ್ಲ ಈ ಸಂಶೋಧನಾ ಪ್ರಬಂಧ ಕಂಬಾರರ ಆಳವಾದ ಅಧ್ಯಯನ, ಕ್ಷೇತ್ರಕಾರ್ಯ, ವಿದ್ವತ್ ಚಿಂತನೆ, ಆಲೋಚನೆಗಳಿಂದ ರೂಪುಗೊಂಡಿರುವಂತದ್ದು. ಉತ್ತರ ಕರ್ನಾಟಕದ ಬಯಲಾಟಗಳಾದ ದಾಸರಾಟ, ಸಣ್ಣಾಟ, ಪಾರಿಜಾತ, ದೊಡ್ಡಾಟ, ಗೊಂಬೆಯಾಟಗಳ ವೈಶಿಷ್ಟ್ಯಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದ್ದು ಯಕ್ಷಗಾನಕ್ಕೂ ದೊಡ್ಡಾಟಕ್ಕೂ ಇರುವ ಸಾಮ್ಯ, ಭಿನ್ನತೆಯನ್ನು ಸೂಕ್ಷ್ಮವಾಗಿ ಅವಲೋಕನ ಮಾಡಲಾಗಿದೆ. ಉತ್ತರ ಕರ್ನಾಟಕದ ಜಾನಪದ ರಂಗಭೂಮಿಗೆ ಸಂಬಂಧಿಸಿದಂತೆ ಕಂಬಾರರ ಮಹತ್ವದ ಆಲೋಚನೆ ಅಭಿಪ್ರಾಯಗಳು ಈ ಸಂಶೋಧನಾತ್ಮಕ ಕೃತಿಯಲ್ಲಿದೆ.

## ಸಂಗ್ಯಾಬಾಳ್ಯ (1966)

ಉತ್ತರ ಕರ್ನಾಟಕದ ಜಾನಪದ ರಂಗಭೂಮಿಯ ಮೇಲೆ ಅತ್ಯಂತ ಲೋಕಪ್ರಿಯತೆಯನ್ನು ಪಡೆದ ಬಯಲಾಟ 'ಸಂಗ್ಯಾಬಾಳ್ಯ'. ಸುಮಾರು 100-120 ವರ್ಷಗ ಹಿಂದೆ ಬೈಲಹೊಂಗಲದ ಬಳಿಯ ಊರು ಬೈಲವಾಡದ ಪ್ರಮುಖ ಮನೆತನ ಲಗಳೇರ ಮನೆಯಲ್ಲಿ ನಡೆದ ಸೊಸೆಯ ಹಾದರ ಮತ್ತು ಆ ಹಾದರಕ್ಕೆ ಶಿಕ್ಷೆಯಾಗಿ ಕೊಲೆ ನಡೆದಾಗ ಆ ದುರಂತ ಘಟನೆಯು ಆ ಊರಿನ ರಕ್ತರಂಜಿತ ಇತಿಹಾಸವೆಂಬಂತೆ ಜಾನಪದ ಗೀತ ನಾಟಕದ ರೂಪದಲ್ಲಿ ಹುಟ್ಟಿಬಂದಿತು.

ಒಂದು ಶತಮಾನಕ್ಕೂ ಮೀರಿದ ಪ್ರಯೋಗ ಪರಂಪರೆ ಹೊಂದಿರುವ ಈ ಬಯಲಾಟದ (ಗೀತ ರೂಪಕದ) ಮುಖ್ಯಪ್ರತಿಗಳಾದ ಗೋಕಾಕ, ಬೈಲಹೊಂಗಲ, ಸವದತ್ತಿ, ಅವರಾದಿ, ಶಿವಪುರ, ಬೆಳಗಾಂವಿ, ಹೂಲಿಕಟ್ಟಿ ಪ್ರತಿಗಳನ್ನು ಆಧರಿಸಿ, ಕಂಬಾರರು ಕೀರ್ತಿನಾಥ ಕುರ್ತಕೋಟಿಯವರ ಜತೆ ಸೇರಿ ಈ ಆವೃತ್ತಿಯನ್ನು ಸಂಪಾದಿಸಿದ್ದಾರೆ.

ಸಂಗ್ಯಾ ಊರ ಶ್ರೀಮಂತರ ಮಗ, ಧಾರಾಳಿ. ಬಾಳ್ಯ ಆತನ ಜೀವದ ಗೆಳೆಯ ತೀರಾ ಬಡವ. ಈರ್ಯಾ ಊರಿನ ಲಗಳೇರ ಕುಟುಂಬದ ಗಣ್ಯ ನಾಗರೀಕ. ಇರಪಕ್ಷಿ, ಬಸವಂತ ಈರ್ಯಾನ ಇಬ್ಬರು ತಮ್ಮಂದಿರು. ಈರ್ಯಾ ಇದಕ್ಕಿದ್ದಂತೆ ವ್ಯಾಪಾರ ನಿಮಿತ್ತ ದೂರದೂರು ಬಳ್ಳಾರಿಗೆ ಹೊರಡುವಾಗ, ಮನೆದೇವರಾದ ಮರಡಿಯ ಬಸವಣ್ಣನಿಗೆ ಮುಂದಿನ ಜಾತ್ರೆಯಂದು ಪೂಜೆ ಸಲ್ಲಿಸಲು ಗಂಗಿಗೆ ಹೇಳಿ, ಆಕೆಯೊಡನೆ ಮೇಲುಮನೆ ಪರಮ್ಮನೂ ಜತೆಯಾಗಿ ಹೋಗುವ ವ್ಯವಸ್ಥೆ ಮಾಡುತ್ತಾನೆ. ಜಾತ್ರೆಯ ದಿನ ಪರಮ್ಮಳ ಜತೆ ಗುಡಿಗೆ ಬಂದ ಗಂಗಿಯನ್ನು ಸಂಗ್ಯಾ ನೋಡುತ್ತಾನೆ. ಆಕೆಗೆ ಮೋಹಿತನಾಗುತ್ತಾನೆ. ಆಕೆಯಲ್ಲಿ ಪ್ರಣಯವನ್ನು ಯಾಚಿಸುತ್ತಾನೆ. ಗಂಗಿ ಒಪ್ಪದೆ ಆತನಿಗೆ ಬುದ್ಧಿವಾದ ಹೇಳುತ್ತಾಳೆ. ಆದರೆ ಎಂದೂ ಕಚ್ಚೆಹರುಕನಲ್ಲದ ಸಂಗ್ಯಾನಿಗೆ ಗಂಗಿಯ ಹುಚ್ಚು ವಿಪರೀತವಾಗುತ್ತದೆ. ಗಂಗಿಯನ್ನು ಒಪ್ಪಿಸುವಂತೆ ಗೆಳೆಯ ಬಾಳ್ಯಾನಲ್ಲಿ ದೈನ್ಯಾವಸ್ಥೆಯಿಂದ ಬೇಡಿಕೊಳ್ಳುತ್ತಾನೆ. ಬಾಳ್ಯಾ ಮನಸ್ಸಿನಲ್ಲದ ಮನಸ್ಸಿನಿಂದ ಗೆಳೆಯನ ಉಪಕಾರವನ್ನು ಸ್ಮರಿಸಿಕೊಂಡು ಆ ಕೆಲಸಕ್ಕೆ ಒಪ್ಪುತ್ತಾನೆ. ಸಂಗ್ಯಾನಿಂದ, ಗಂಗಿಯ ಮನೆಗುರುತು ಪಡೆದು, ಆಕೆಯನ್ನು ಗುಟ್ಟಾಗಿ ಭೇಟಿಮಾಡಿ ಸಂಗ್ಯಾನ ಮನೋಗತವನ್ನು ತಿಳಿಸುತ್ತಾನೆ. ಗಂಗಿ ಆಗಲೂ ಒಪ್ಪದೆ ಬಾಳ್ಯಾನ ಕಿವಿಹಿಂಡಿ ಅವಮಾನಿಸಿ ಕಳುಹಿಸುತ್ತಾಳೆ.

ಬಾಳ್ಯಾ ತನಗಾದ ಅಪಮಾನವನ್ನು ಸಂಗ್ಯಾನಿಗೆ ಹೇಳಿದಾಗ ಆತ ಆ ಅಪಮಾನವು ತನ್ನದೆಂದೇ ಬಗೆಯುತ್ತಾನೆ. ನೇರ ಗಂಗಿಯ ಮನೆ ಕಡೆ ತೆರಳುತ್ತಾನೆ. ಆಗ ಆಕಸ್ಮಿಕವಾಗಿ ಬಯಲಿಗೆ ಬಂದ ಗಂಗಿಯೆದುರು ಸಂಗ್ಯಾ ಮತ್ತೆ ತನ್ನ ಮೋಹವನ್ನು ತೋಡಿಕೊಳ್ಳುತ್ತಾನೆ. ಆಗಲೂ ಗಂಗಿ ಒಪ್ಪುವುದಿಲ್ಲ. ಆದರೆ ಸಂಗ್ಯಾ ಆಕೆಯನ್ನು ಪಡೆದೇತೀರುತ್ತೇನೆಂದು ಆಕೆಯೆದುರು ಶಪಥ ಹಾಕುತ್ತಾನೆ. ಸಂಗ್ಯಾ ಗಂಗಿಯನ್ನು ಒಪ್ಪಿಸಲು ಮೇಲುಮನೆ ಪರಮ್ಮಳಿಗೆ ಸರಿಗೆ, ಬಳೆ, ಸೀರೆಯ ಆಮಿಷ ತೋರಿಸುತ್ತಾನೆ. ಪರಮ್ಮ ಕೆಲಸ ಮಾಡಿಕೊಡಲು ಒಪ್ಪುತ್ತಾಳೆ. ಗಂಡನ ಅಗಲಿಕೆಯಿಂದ ಉಂಟಾದ ಶೂನ್ಯ ಮತ್ತು ಪರಮ್ಮಳ ಕುಟಿಲತೆ - ಮೋಸಕ್ಕೆ ಗಂಗಿ ನಿಧಾನಕ್ಕೆ ಸಂಗ್ಯಾನ ವಶವಾಗುತ್ತಾಳೆ. ವ್ಯಾಪಾರದಿಂದ ಹಿಂದಿರುಗಿ ಬರುವಾಗ ಗಂಡನಿಗೆ, ಗಂಗಿಯ ದ್ರೋಹದ ಬಗ್ಗೆ ಜನರು ಆಡಿಕೊಳ್ಳುವುದು ಕಿವಿಗೆ ಬೀಳುತ್ತದೆ. ಮನೆಗೆ ಬಂದಾಗ ಗಂಗಿ ಸಂಗ್ಯಾರ ಹಾದರದ ವಿಷಯ ಸ್ಪಷ್ಟವಾಗುತ್ತದೆ. ಗಂಗಿಯನ್ನು ಈರ್ಯಾ ತಮ್ಮಂದಿರ ಮೂಲಕ ಮನೆಯಿಂದ ಹೊರದಬ್ಬುತ್ತಾನೆ. ಆಕೆ ತವರಿಗೆ ಹೋಗುತ್ತಾಳೆ. ಇತ್ತ ಈರ್ಯಾ ಸಂಗ್ಯಾನ ಕೊಲೆಮಾಡಲು ನಿರ್ಧರಿಸುತ್ತಾನೆ. ಅದಕ್ಕಾಗಿ ಬಾಳ್ಯಾನನ್ನು ಕರೆದು ಸಂಗ್ಯಾನನ್ನು ಹಿಡಿದುಕೊಡಲು ಬಲವಂತ ಪಡಿಸುತ್ತಾನೆ. ಒಪ್ಪದಿದ್ದಲ್ಲಿ ಕೊಲ್ಲುತ್ತೇನೆಂದು ಬೆದರಿಸುತ್ತಾನೆ. ಬಾಳ್ಯಾ ಒಪ್ಪಿ ಅವರನ್ನು ಬುಧವಾರ ಬೈಲವಾಡದ ಕೇದಗೆ ಮೆಳೆಗೆ ಕೊಡಲಿ ಕುಡುಗೋಲು ಸಮೇತ ಬರಹೇಳಿದ್ದು ಗಂಗಿಗೆ ತಿಳಿಯುತ್ತದೆ. ಆಕೆ ಸಂಗ್ಯಾನಿಗೆ ಬುಧವಾರ ಬೈಲುವಾಡದ ಕಡೆ ಬರಬಾರದೆಂದು ಒಬ್ಬ ಮಾಸ್ತರನ ಕೈಯಿಂದ ಪತ್ರ ಬರೆಸಿ ಒಬ್ಬ ಹಳಬನ ಕೈಯಲ್ಲಿ ಕಳುಹಿಸುತ್ತಾಳೆ. ಆ ಪತ್ರ ಸಂಗ್ಯಾನ ಕೈಸೇರುವ ಬದಲು ಬಾಳ್ಯಾನ ಕೈ ಸೇರುತ್ತದೆ. ಪತ್ರ ಓದಿ ಬಾಳ್ಯಾ ಆ ಕಾಗದವನ್ನು ಹರಿದು ಹಾಕುತ್ತಾನೆ. ಬದಲಿಗೆ ತಾನೇ ಸಂಗ್ಯನಿಗೊಂದು ಪತ್ರ ಬರೆದು ಬುಧವಾರದ ನಾಗರಪಂಚಮಿಗೆ ಕೊಬ್ಬರಿ, ಸೀರೆ ಕುಪ್ಪಸಗಳನ್ನು ತೆಗೆದುಕೊಂಡು ಬಾಳ್ಯಾನೊಡನೆ ಕಾಣಲು ಬರಬೇಕೆಂದು ಗಂಗಿ ಬರೆದಂತೆ ಪತ್ರ ಬರೆದು ಸಂಗ್ಯಾನಿಗೆ ನೀಡುತ್ತಾನೆ. ಸಂಗ್ಯಾನಿಗೆ ಬೈಲವಾಡಕ್ಕೆ ಹೋಗಲು ಮನಸ್ಸಿಲ್ಲ. ಆದರೆ ಬಾಳ್ಯನೇ ಗಂಗೆಯ ನೆನಪಿನಿಂದ ಆತನನ್ನು ಪ್ರಚೋದಿಸಿ ಬೈಲವಾಡಕೆ ಕರೆದೊಯ್ಯುತ್ತಾನೆ. ಜೀವದ ಗೆಳೆಯ ಬಾಳ್ಯಾನೇ ಸಂಗ್ಯಾನನ್ನು ಸಾವಿನ ಬಾವಿಗೆ ದೂಡುತ್ತಾನೆ. ಸಂಗ್ಯಾ ಕೊಲೆಯಾಗುತ್ತಾನೆ. ಇಂಗ್ರೇಜಿ ಸರಕಾರದೆದುರು, ಹಾದರ ಮಾಡಿದ ಸಂಗ್ಯಾನ್ನು ತಾನು ಕೊಲೆಮಾಡಿದ್ದೇನೆಂದು ಈರ್ಯಾ ಒಪ್ಪಿಕೊಳ್ಳುತ್ತಾನೆ. ಕಾನೂನಿಗೆ ತಲೆ ಕೊಡುತ್ತಾನೆ.

ಉತ್ತರ ಕರ್ನಾಟಕದ ಜನಪದ ಭಾಷೆಯ ಬೆಡಗಿನಲ್ಲಿರುವ ಈ ಗೀತ ನಾಟಕದ ಹಾಡುಗಳನ್ನು ಇಪ್ಪತ್ತೈದು ದೃಶ್ಯಗಳಲ್ಲಿ ವಿಂಗಡಿಸಲಾಗಿದ್ದು, ಪ್ರತೀ ದೃಶ್ಯದ ಆರಂಭದಲ್ಲಿ ಸೂಚನಾತ್ಮಕ ಟಿಪ್ಪಣಿಯನ್ನು ನೀಡಿರುವುದರಿಂದ ಹಾಡಿನ ಚೆಲುವಿಕೆಯನ್ನು ಚೆನ್ನಾಗಿ ಗ್ರಹಿಸಬಹುದು.

## ಬಣ್ಣಿಸಿ ಹಾಡವ್ವ ನನ ಬಳಗ (1968)

ಇದು 268 ತ್ರಿಪದಿಗಳ ಸಂಗ್ರಹ. ಬೆಳಗಾವಿಯ ಸುತ್ತಮುತ್ತಲ ಊರುಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಸಂಪಾದಿಸಲಾದ ಈ ತ್ರಿಪದಿಗಳು ಗ್ರಾಮೀಣ ಮಹಿಳೆಯರ ಅದ್ಭುತ ಕಾವ್ಯ ಪ್ರತಿಭೆಯನ್ನು ಪ್ರತಿಫಲಿಸುವುದಷ್ಟೇ ಅಲ್ಲ, ಹಳೆ ತಲೆಮಾರುಗಳ ಕೌಟುಂಬಿಕ ಬದುಕು, ಅದರೊಳಗಿನ ಪ್ರೀತಿ ಸಾಮರಸ್ಯ ಸಂಬಂಧಗಳ ಮೇಲೂ ಬೆಳಕು ಚೆಲ್ಲುವಂಥದ್ದು.

## ಬಯಲಾಟ (1973)

ಕರ್ನಾಟಕದ ಜನಪದ ಬಯಲಾಟಗಳ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡುವ ಈ ಕೃತಿ ಅಧ್ಯಯನ ಯೋಗ್ಯವಾದುದು.

## ಮಾತಾಡು ಲಿಂಗವೇ (1973)

ಇದು ಜನಪದ ಬಿಡಿ ಹಾಡುಗಳ ಸಂಗ್ರಹ. ಹಲವು ಬಿಡಿ ತ್ರಿಪದಿಗಳಿರುವ ಈ ಸಂಗ್ರಹದಲ್ಲಿ ತ್ರಿಪದಿಯೇತರ, ದೇವರಿಗೆ ಸಂಬಂಧಿಸಿದ ಹಾಡುಗಳೂ ಸೇರಿಕೊಂಡಿವೆ. ಮಾತಾಡುಲಿಂಗವೇ ಎಂಬ ಗೀತೆ ಲಿಂಗಯ್ಯನೊಂದಿಗೆ ಭಕ್ತ ಸಂಭಾಷಿಸುವ ನಿವೇದಿಸಿಕೊಳ್ಳುವ ಒಂದು ಭಕ್ತಿಗೀತೆ.

## ನಮ್ಮ ಜಾನಪದ (1980)

ಇದು ಜಾನಪದವನ್ನು ಕುರಿತಾದ ಹಲವು ವೈಶಿಷ್ಟಪೂರ್ಣ ಲೇಖನಗಳ ಸಂಗ್ರಹ. ಇದರಲ್ಲಿರುವ ಲೇಖನಗಳಲ್ಲಿ - ಜನಪದ ಸಾಹಿತ್ಯ, ಜೀವನ ; 'ಭರತೇಶ ವೈಭವ'ದಲ್ಲಿ ಜಾನಪದ ಅಂಶಗಳು ; ಬಯಲಾಟಗಳಲ್ಲಿ ಸಂಗೀತ ; ಆಧುನಿಕ ನಾಟಕಕಾರ ಮತ್ತು ಪರಂಪರೆ ; ಜನಪದ ರಂಗಭೂಮಿ ಬಹುಮುಖ್ಯವಾದವು.

## ಬಂದೀರೆ ನನ್ನ ಜಡೆವೊಳಗೆ (1981)

ಜಿ.ಆರ್. ತಿಪ್ಪೇಸ್ವಾಮಿ ಅವರೊಂದಿಗೆ ಸಂಪಾದಿಸಿರುವ ಈ ಸಂಕಲನದಲ್ಲಿ ಬೆಂಗಳೂರು, ತುಮಕೂರು, ಮಂಡ್ಯಜಿಲ್ಲೆಗಳಲ್ಲಿ ಪ್ರಚಲಿತವಿರುವ ಹಾಡಗತೆಗಳಿವೆ. ಇದರಲ್ಲಿರುವ ನಂದಿ ದೊರೆ, ರಾಚಪ್ಪಾಜಿ, ಮಾದೇಶ್ವರ, ಚುಂಚನಗಿರಿ ಅಯ್ಯ ಮೊದಲಾದ ಹಾಡಗತೆಗಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹಿಮೆ-ಹಿರಿಮೆಯನ್ನು ವಿವರಿಸುತ್ತವೆ.

## ಕನ್ನಡ ಜಾನಪದ ವಿಶ್ವಕೋಶ (1985)

ಕನ್ನಡ ಸಾಹಿತ್ಯ ಪರಿಷತ್ತಿನ ಮಹತ್ವದ ಪ್ರಕಟಣೆಯಾದ 'ಕನ್ನಡ ಜಾನಪದ ವಿಶ್ವಕೋಶ'ದ ಎರಡು ಬೃಹತ್ ಸಂಪುಟಗಳನ್ನು ಕಂಬಾರರು ಸಂಪಾದಿಸಿದ್ದಾರೆ. ಕನ್ನಡ ಜಾನಪದದ ಹಾಡು ಆಚರಣೆ, ಕುಣಿತ, ನಂಬಿಕೆ, ಆಚರಣೆ, ವಿಧಿ, ಸಂಪ್ರದಾಯ, ಹಬ್ಬ, ಉತ್ಸವ, ಗ್ರಾಮದೇವತೆ, ಒಗಟು, ಕತೆ, ಗಾದೆ, ಪ್ರಾಣಿ-ಪಕ್ಷಿ-ಮರ-ಮಳೆ-ನಕ್ಷತ್ರ-ಜಾತ್ರೆ-ಆಹಾರ ಮುಂತಾದವುಗಳ ಬಗ್ಗೆ ಈ ಕೋಶದಲ್ಲಿ ಅಧ್ಯಯನ ಪೂರ್ಣ ಲೇಖನಗಳಿವೆ. ಕರ್ನಾಟಕದ ಜಾನಪದ ಅಧ್ಯಯನ ಚರಿತ್ರೆಯಲ್ಲಿ ಈ ವಿಶ್ವಕೋಶಕ್ಕೆ ಮಹತ್ವದ ಸ್ಥಾನವಿದೆ.

## ಲಕ್ಷಾಪತಿ ರಾಜನ ಕತೆ (1986)

ಇದೊಂದು ಕಿನ್ನರಿ ಜೋಗಿ ಕತೆ. ಈ ಜನಪದ ಕತೆಯನ್ನು ಕಂಬಾರರು, ಜಾನಪದ ವಿದ್ವಾಂಸ

ಮುದೇನೂರು ಸಂಗಣ್ಣನವರ ಜತೆಗೂಡಿ ವೃತ್ತಿ ಕಥನಕಾರರಾಗಿರುವ ಕಿನ್ನರಿ ಜೋಗಿಗಳಿಂದ ಇದನ್ನು ಸಂಪಾದಿಸಿದ್ದಾರೆ. ಕಂಬಾರರ ಇನ್ನೆರಡು ಜಾನಪದ ಕೃತಿಗಳೆಂದರೆ

**ಬೇಡರ ಹುಡುಗ ಮತ್ತು ಗಿಳಿ** (1989) ಮತ್ತು **ಕಾಸಿಗೊಂದು ಸೇರು** (1989) (ಕೃತಿ ಲಭ್ಯವಿಲ್ಲ)

## ಕನ್ನಡ ನಾಟಕ ಸಂಪುಟ (1982)

ಕಂಬಾರರು ಕರ್ನಾಟಕ ನಾಟಕ ಅಕಾಡೆಮಿಗಾಗಿ ಕನ್ನಡದ ಮಹತ್ವದ ನಾಟಕಗಳನ್ನು ಆಯ್ದು ಕನ್ನಡ ನಾಟಕ ಸಂಪುಟದಲ್ಲಿನೇಯ್ದು ಸಂಪಾದಿಸಿಕೊಟ್ಟರು. ಈ ಸಂಕಲನದಲ್ಲಿ ಕನ್ನಡದ ಮಹತ್ವದ ನಾಟಕಕಾರರ ಕಲಾತ್ಮಕ ಸಾಧನೆಗಳೆಂದು ಗುರುತಿಸಿರುವ ಕೆಲವು ನಾಟಕಗಳಿದ್ದರೆ, ಇನ್ನು ಕೆಲವು ಆಯಾ ರೂಪದಲ್ಲಿ ವಿಶಿಷ್ಟವಾದವುಗಳು ಮತ್ತು ಆಯಾ ಕಾಲದಲ್ಲಿ ಬಹುಮುಖ್ಯವಾದವುಗಳು ಸಂಕಲಿತಗೊಂಡಿವೆ. ಇಲ್ಲಿರುವ ನಾಟಕಗಳೆಲ್ಲವು ನಮ್ಮ ರಂಗಭೂಮಿಯ ಬೆಳವಣಿಗೆ ದೃಷ್ಟಿಯಿಂದ ಶ್ರೇಷ್ಠ ಕೃತಿಗಳಾಗಿದ್ದು ಇವುಗಳನ್ನು ಒಂದು ಕಡೆ ಕಲೆ ಹಾಕಿದಾಗ ಇವು ನಮ್ಮ ರಂಗಭೂಮಿಯ ವೈಶಿಷ್ಟ್ಯ ಹಾಗೂ ವೈವಿಧ್ಯತೆಯ ಅರಿವು ಮಾಡಿಕೊಡುವುದರಲ್ಲಿ ಸಫಲವಾಗುತ್ತವೆ. An anthology of Modern Indian plays for National School of Drama (2000)

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಗಾಗಿ ಆಧುನಿಕ ಭಾರತೀಯ ನಾಟಕಗಳಲ್ಲಿ ಶ್ರೇಷ್ಠವಾದುದನ್ನು ಸಂಪಾದಿಸಿ ಸಂಕಲಿಸಿದ ಸಂಕಲನವಿದು.

## ನೆಲದ ಮರೆಯ ನಿದಾನ (1993)

ಕಂಬಾರರು ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾದ ಮೇಲೆ ಅವರಿಗೆ ವಿಶ್ವವಿದ್ಯಾಲಯದ ಸ್ವರೂಪ, ಉದ್ದೇಶ, ಸಂರಚನೆಗಳ ಬಗೆಗಿನ ಹಲವು ಪ್ರಶ್ನೆಗಳನ್ನು ಮುಖಾಮುಖಿಯಾಗಿ ಎದುರಿಸಿ ಸ್ಪಷ್ಟಪಡಿಸುವ ಅನಿವಾರ್ಯತೆ ಉಂಟಾದಾಗ, ಕನ್ನಡ ವಿಶ್ವವಿದ್ಯಾಲಯವನ್ನು ಹೇಗೆ ಕಟ್ಟಬೇಕೆಂಬ ತಮ್ಮ ಕನಸನ್ನು ವಿವರಿಸಲು ಮತ್ತು ಹಂಚಿಕೊಳ್ಳಲು ಹುಟ್ಟಿದ ಕೃತಿ ಈ 'ನೆಲದ ಮರೆಯ ನಿದಾನ'.

## ಬೃಹದ್ದೇಶೀಯ ಚಿಂತನ (2001)

ಅತ್ಯಂತ ಪ್ರಖರ ಸೃಜನಶೀಲ ಶಕ್ತಿಯುಳ್ಳ ಕಂಬಾರರು ಇದುವರೆಗೆ 21 ನಾಟಕಗಳು, 9 ಕವನ ಸಂಕಲನಗಳು, 1 ಮಹಾಕಾವ್ಯ, 4 ಕಾದಂಬರಿಗಳು, 10 ಜಾನಪದಕ್ಕೆ ಸಂಬಂಧಿಸಿದ ಸಂಶೋಧನೆ - ಸಂಪಾದನಾ ಕೃತಿಗಳು, 2 ಸಾಹಿತ್ಯ-ಸಂಸ್ಕೃತಿಗೆ ಸಂಬಂಧಿಸಿದ ಕೃತಿಗಳು ಹಾಗೂ ಮಹತ್ವದ 2 ನಾಟಕ (ಕನ್ನಡದ ಮತ್ತು ಭಾರತೀಯ ನಾಟಕಗಳ) ಸಂಪುಟಗಳನ್ನು ಸಂಪಾದಿಸಿದ್ದಾರೆ.

ಕಂಬಾರರು ಏಳು ನಾಟಕ ಕೃತಿಗಳು, ಒಂದು ಕಾದಂಬರಿ ಮತ್ತು ಒಂದು ಕಾವ್ಯ ಇಂಗ್ಲಿಷ್‌ಗೆ ಅನುವಾದಗೊಂಡಿವೆ.

ಹುಲಿಯ ನೆರಳು (The shadow of the Tiger), ತುಕ್ರನ ಕನಸು (Tukra's dream), ಸಾಂಬಶಿವ ಪ್ರಹಸನ (The farce of Sambashiva), ಆಲಿಬಾಬ ಮತ್ತು ನಲವತ್ತು ಕಳ್ಳರು (Alibaba), ಸಿರಿಸಂಪಿಗೆ (Siri Sampige), ಜೋಕುಮಾರಸ್ವಾಮಿ (Jokumaraswamy) ಮತ್ತು ಮಹಾಮಾಯಿ (The mother supreme) ಇವು ಅನುವಾದಿತ ನಾಟಕಗಳು.

ಕಾದಂಬರಿ 'ಸಿಂಗಾರವ್ವ ಮತ್ತು ಅರಮನೆ' (Singaravva and the Palace) ಮತ್ತು 'ಚಕೋರಿ' (Chakori) ಮಹಾಕಾವ್ಯ ಇಂಗ್ಲೀಷ್‌ಗೆ ಅನುವಾದಗೊಂಡ ಇತರ ಕೃತಿಗಳು. ಕಂಬಾರರ ಕವನ ಸಂಕಲನ ಆಯ್ದ ಹಲವು ಕವನಗಳು ಇಂಗ್ಲೀಷ್‌ಗೆ ಅನುವಾದಗೊಂಡು ಪ್ರಕಟಣೆಯ ದಾರಿಯಲ್ಲಿವೆ. 'ಹರಕೆಯ ಕುರಿ', 'ಜೋಕುಮಾರಸ್ವಾಮಿ' ಮತ್ತು 'ಸಿರಿಸಂಪಿಗೆ' ನಾಟಕ ಕೃತಿಗಳು ಮತ್ತು ಕಾದಂಬರಿಗಳು 'ಸಿಂಗಾರವ್ವ ಮತ್ತು ಅರಮನೆ' ಹಿಂದಿಗೂ ಅನುವಾದಗೊಂಡಿವೆ.

ಕಂಬಾರರ 5 ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ತಕರಾರಿನವರು, ಜೋಕುಮಾರಸ್ವಾಮಿ, ಜೈ ಸಿದನಾಯಕ, ಸಿಂಗಾರವ್ವ ಮತ್ತು ಅರಮನೆ, ಬೇಡರ ಹುಡುಗ ಮತ್ತು ಗಿಳಿ) ಲಭಿಸಿದೆ. ಇವರ ಪ್ರಸಿದ್ಧ ನಾಟಕ 'ಜೋಕುಮಾರಸ್ವಾಮಿ' 1975ರಲ್ಲಿ ಆ ವರ್ಷದ ಭಾರತದ ಅತ್ಯುತ್ತಮ ನಾಟಕವೆಂದು ನಾಟ್ಯಸಂಘದ 'ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ'ಯನ್ನು ಪಡೆಯಿತು. ಇವರ ಮತ್ತೊಂದು ನಾಟಕ 'ಜೈ ಸಿದ ನಾಯಕ' 1975ರಲ್ಲಿ ಆ ವರ್ಷದ ಅತ್ಯುತ್ತಮ ನಾಟಕವೆಂದು ಪರಿಗಣಿಸಲ್ಪಟ್ಟು 'ವರ್ಧಮಾನ' ಪ್ರಶಸ್ತಿಯನ್ನು ಪಡೆಯಿತು. 1982ರಲ್ಲಿ ಇವರ 'ಸಾವಿರದ ನೆರಳು' ಕವನ ಸಂಕಲನ ಕೇರಳದ 'ಆಶಾನ್' ಪ್ರಶಸ್ತಿಯನ್ನು ಪಡೆಯಿತು. 1991ರಲ್ಲಿ ಇವರ ನಾಟಕಕೃತಿ 'ಸಿರಿಸಂಪಿಗೆ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಕನ್ನಡದ ಪ್ರಮುಖ ರಂಗಚಿಂತಕರಾದ ಕಂಬಾರರು, ಇಂಟರ್‌ನ್ಯಾಷನಲ್ ಥಿಯೇಟರ್ ಇನ್ಸಿಟಿಟ್ಯೂಟ್, ಬರ್ಲಿನ್ (ಜಿ.ಡಿ.ಆರ್.) ಮಾಸ್ಕೊ (ಯು.ಎಸ್.ಎಸ್.ಆರ್.), JADE, ಜಪಾನಿನ ಅಕ್ಕಿತಾ-1992 ಮತ್ತು ಭಾರತದ ಅನೇಕ ವಿಶ್ವವಿದ್ಯಾಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ 'ಭಾರತೀಯ ಜಾನಪದ ಮತ್ತು ರಂಗಭೂಮಿ' ಕುರಿತು ಪ್ರಬಂಧಗಳನ್ನು ಮಂಡಿಸಿದ್ದಾರೆ. 1989ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ನೀಡಿ ಇವರನ್ನು ಗೌರವಿಸಲಾಯಿತು.

1993ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ರಾಜ್ಯಮಟ್ಟದ ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಕಂಬಾರರು ವಹಿಸಿದ್ದರು. ಇವರ ನಾಟಕಗಳ ಕುರಿತು ಹಲವು ವಿಚಾರ ಸಂಕಿರಣಗಳು ಏರ್ಪಟ್ಟಿವೆ. ಅವುಗಳಲ್ಲಿ ಮುಖ್ಯವಾದದ್ದು - 1995ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು, ಬಸವನಗುಡಿ ನ್ಯಾಷನಲ್ ಕಾಲೇಜು ಕನ್ನಡ ಸಂಘ ಮತ್ತು ಬೆಂಗಳೂರಿನ ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಸಹಕಾರದಿಂದ ಏರ್ಪಡಿಸಿದ್ದ ವಿಚಾರ ಸಂಕಿರಣ. 1995ರಲ್ಲಿ

ಕನ್ನಡ ಸಾಹಿತ್ಯ ಪರಿಷತ್ತು ತನ್ನ ವಜ್ರಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಕಂಬಾರರ ಅಪೂರ್ವ ಸೃಜನಶೀಲತೆಗಾಗಿ ಅವರನ್ನು ಸನ್ಮಾನಿಸಿ ಗೌರವಿಸಿತು. ಆಂಧ್ರಪ್ರದೇಶದ ಸರಕಾರವೂ ಕಂಬಾರರನ್ನು 'ಅತ್ಯುತ್ತಮ ಕವಿ' ಎಂದು ಪ್ರಶಸ್ತಿ ನೀಡಿ ಸನ್ಮಾನಿಸಿತು. ಕನ್ನಡದ ಬಹುಮುಖಿ ಸೃಜನಶೀಲ ಶಕ್ತಿ-ವ್ಯಕ್ತಿ ಎಂದು ಗುರುತಿಸಿ 1997ರಲ್ಲಿ ಕನ್ನಡದ 'ಮಾಸ್ತಿ ಪ್ರಶಸ್ತಿ'ಯನ್ನು ಇವರಿಗೆ ನೀಡಲಾಯಿತು. 1997ರಲ್ಲಿ ದೆಹಲಿಯಲ್ಲಿ ನಡೆಸಿದ ರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಕಂಬಾರರು ವಹಿಸಿದ್ದರು. ಕಂಬಾರರ ಸೃಜನಶೀಲತೆ ಮತ್ತು ಬಹುಮುಖಿ ವ್ಯಕ್ತಿತ್ವವನ್ನು ಪರಿಗಣಿಸಿ ಭಾರತ ಸರ್ಕಾರವು ಅವರಿಗೆ 2001ರಲ್ಲಿ 'ಪದ್ಮಶ್ರೀ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು. ಕಾವ್ಯಲೋಕದ ಪ್ರತಿಷ್ಠಿತ 'ಕಬೀರ್ ಸಮ್ಮಾನ್' ಪ್ರಶಸ್ತಿಯನ್ನೂ ಅವರು 2002ರಲ್ಲಿ ಪಡೆದರು. ಇವೆಲ್ಲವೂ ಕಂಬಾರರ ಸೃಜನಶೀಲತೆಯ ಶಕ್ತಿ ಸಾಮರ್ಥ್ಯಕ್ಕೆ ಸಂದ ಗೌರವ.

ಕಂಬಾರರ ಬರಹಲೋಕ ವಿಸ್ತಾರವಾದದು. ಅವರ ಸಂಸ್ಕೃತಿ ಗ್ರಹಿಕೆಯ ಸಂವೇದನೆ ಮತ್ತು ಅಭಿವ್ಯಕ್ತಿ ವಿಧಾನ ನವ್ಯಕ್ಕಿಂತ ಭಿನ್ನವಾದುದು. ಅವರ ಬರಹದೊಳಗಿನ ಚಿಂತನೆಗಳು ದೇಸೀಯ ಚಿಂತನೆಗಳೇ ಆಗಿದ್ದು ದೇಸಿಯ ಸಂಸ್ಕೃತಿ ಸಂದರ್ಭದಲ್ಲಿ ಅನ್ಯರಾಗುವ ಕಂಬಾರರು ತಮ್ಮ ಬರವಣಿಗೆ ಬಗ್ಗೆ ಹೀಗೆ ಹೇಳುತ್ತಾರೆ.

'ನಾನು ನನ್ನ ಸುತ್ತ ನೋಡುತ್ತೇನೆ. ನನ್ನ ಒಳಗೆ ನೋಡುತ್ತೇನೆ.' ಎರಡೂ ಒಂದೇ ಪ್ರಕ್ರಿಯೆಯ ಎರಡು ಭಾಗಗಳು. ನಾನು ಯಾವುದನ್ನು ಕಾಣುವುದೂ ಸಮೃದ್ಧಿಯ ಅತಿಶಯದ ರೂಪದಲ್ಲಿ. ಹುಚ್ಚೆಬ್ಬಿಸುವ ಹರ್ಷ. ಕರಾಳ ಕ್ರೌರ್ಯ, ಆಳನೋವು, ಗಾಢ ಬೆಳವಣಿಗೆ, ಕಟ್ಟು ಕಿತ್ತ ಕಾಮ, ಏಕಾಕಿತನ, ಐತಿಹ್ಯಾತ್ಮಕ ರಚನೆಗಳ ಐತಿಹ್ಯಾತ್ಮಕ ಪಾತ್ರಗಳ ಅದ್ಭುತ ಹೋರಾಟಗಳು ಇವೆಲ್ಲವನ್ನೂ ನಾನು ಸಂಭ್ರಮದಿಂದ ಆಚರಿಸುತ್ತೇನೆ. ನನ್ನ ಮಟ್ಟಿಗೆ ಸಂಭ್ರಮಾಚರಣೆಯು ಅನುಭವದ ಪ್ರಾಥಮಿಕ ಗ್ರಹಣಾ ವಿಧಾನ. ಯಾಕೆಂದರೆ ಸಂಭ್ರಮಾಚರಣೆಯಲ್ಲಿ ಏಕಕಾಲಕ್ಕೆ ವೈಯಕ್ತಿಕವೂ ಸಮುದಾಯಕವೂ ಆದ ಸಂಗೀತ ಗುಣವಿದೆ. ಅದರ ಲಯ ಮತ್ತೆ ಏಕಕಾಲಕ್ಕೆ ಆದಿಮವಾದದ್ದು ಮತ್ತು ಸಮಕಾಲೀನವಾದದ್ದು, ವ್ಯಷ್ಟಿ ಸಮಷ್ಟಿಗಳ ಬೆಸುಗೆಯಾದದ್ದು. ಸಂಭ್ರಮಾಚರಣೆಗಳ ಮೂಲಕ ನಾನು ಮಿಥ್‌ಮೇಕರ್‌ನ ಕಾರ್ಯ ನಿರ್ವಹಿಸುತ್ತಿದ್ದೇನೆಂದು ನನ್ನ ನಂಬಿಕೆ.

'...ನಾನು ನನ್ನ ವರ್ತಮಾನಕ್ಕೆ ಹೇಗೆ ಸ್ಪಂದಿಸುತ್ತೇನೆ, ಸುಲಭವಾದದ್ದನ್ನು ಅಪ್ರಾಮಾಣಿಕವಾದದ್ದೆಲ್ಲವನ್ನೂ ತಿರಸ್ಕರಿಸುವ ನವ್ಯವಾದದಂಥ ಚಳುವಳಿಗಳ ಪರಿಚಯ ನನಗುಂಟು. ಸಮಕಾಲೀನ ಕನ್ನಡ ಸಾಹಿತ್ಯದ ಅನೇಕ ಅತ್ಯುತ್ತಮ ಲೇಖಕರ ಮೇಲೆ ನವ್ಯವಾದ ಮಾಡಿದ ಗಾಢ ಪ್ರಭಾವದ ಪರಿಚಯವೂ ನನಗುಂಟು. ಹಾಗೆ ನೋಡಿದರೆ ನನ್ನದೇ ಬರವಣಿಗೆಯ ಒಂದು ಪುಟ್ಟ ಭಾಗವೂ ಈ ಪ್ರಭಾವವನ್ನು ಪ್ರತಿಫಲಿಸುತ್ತದೆ. ಇಂದು ಮಾತ್ರ ಅದೆಲ್ಲದರಿಂದ ಕೊಂಚ ದೂರ ನಿಂತು ನೋಡಿದಾಗ, ಪಶ್ಚಿಮದಿಂದ ನಮಗೆ ಬಂದಂತಹ ನವ್ಯವಾದದ ಸಂರಚನೆಗಳು ನಾನು ನನ್ನ ಪರಿಸರದೊಂದಿಗೆ ಸಂಬಂಧಕಟ್ಟಿಕೊಳ್ಳುವ ಕ್ರಿಯೆಗೆ ಆವಶ್ಯಕವಾದಂತಹ ಸಾಧನಗಳಲ್ಲವೇನೋ ಎಂದೆನಿಸುತ್ತದೆ.

...ಬರಹಗಾರನೊಬ್ಬನಿಗೆ ಯಾವತ್ತೂ ಅವನ ಕಾಲದ ಪ್ರಜ್ಞೆ ಮತ್ತು ಆತನ ದೇಶದ ಪ್ರಜ್ಞೆ ಇರುತ್ತದೆ. ಇರಬೇಕಾಗುತ್ತದೆ. ನನ್ನ ದೇಶಪ್ರಜ್ಞೆಯ ಗಾಢತೆಗೆ, ನನ್ನ ಸಾಮಾಜಿಕ ಹಿನ್ನೆಲೆಯೂ

ಕಾರಣವಾಗಿದೆ. ನಾನು ಮೇಲುಜಾತಿಗೆ ಅರ್ಥಾತ್ ಸಂಸ್ಕೃತ ಪ್ರಭಾವದ ಜಾತಿಗೆ ಸೇರಿದವನಲ್ಲ, ಆದ ಕಾರಣ ಮೇಲು ಜಾತಿಯ ಪರಂಪರೆಯ ಮುಖ್ಯ ಮೂಲಾಂಶಗಳಾದ ಕಾಲ-ಕಾಲಾತೀತತೆ, ರೂಪ-ಸತ್ವ, ಜನ್ಮ-ಮೋಕ್ಷ ಇತ್ಯಾದಿ ವೈದೃಶ್ಯಗಳಿಂದ ನಾನು ದೂರ. ಕೆಳಜಾತಿಯೊಂದಿಗೆ ಸೇರಿದ ಅನಾನುಕೂಲವೆ ನನಗೆ ಒಂದು ರೀತಿಯಲ್ಲಿ ವರವಾಗಿ ಪರಿಣಮಿಸಿದೆ. ಅನಕ್ಷರಸ್ಥರಾದ, ಶೋಷಿತರಾದ ನನ್ನ ಜನ ಜೀವಸಮೃದ್ಧ ಹಾಡುಗಳ ಮೂಲಕ ತಮ್ಮ ಅನುಭವವನ್ನು ಉಳಿಸಿಕೊಂಡರು ಬೆಳೆಸಿಕೊಂಡರು. ಅವರಿಗೆ ಇಂದ್ರಿಯಾತ್ಮಕ ನೆನಪೇ ಜ್ಞಾನಸರ್ವಸ್ವವಾಗಿತ್ತು. ಹಾಗಾಗಿ ನನಗೆ ಅವರ ಮಗನಿಗೆ ಸಾಕ್ಷರತೆ ಮತ್ತು ಬರವಣಿಗೆ ಸಾಧ್ಯವಾದಾಗ ಅದು ಅಸಾಮಾನ್ಯ ಸಂತೋಷದ ವಿಷಯವಾಯಿತು' (ಸಿರಿಸಂಪಿಗೆ ಕಂಬಾರ 60, ಸಂ:ಎಚ್.ಎಸ್. ಶಿವಪ್ರಕಾಶ್, ಪು. 172-173).

ರಂಗ ಸಂಪನ್ನ ಕಂಬಾರರ ಸೃಜನಶೀಲತೆಯ ಬಗ್ಗೆ ವಂಗದೇಶದ ಖ್ಯಾತ ರಂಗಕರ್ಮಿ ರುದ್ರಪ್ರಸಾದ ಸೇನ್‌ಗುಪ್ತ ಅವರ ಪ್ರಶಂಸೆ ಹೀಗಿದೆ : 'Our friend Chandrashekhar Kambar is just not a playwright, he is much more than that : he is a Jiwan Shilpa' (ಸಿರಿಸಂಪಿಗೆ ಕಂಬಾರ 60, ರುದ್ರಪ್ರಸಾದ್ ಸೇನ್‌ಗುಪ್ತ ಅವರ ಪತ್ರ, ಪು. 174)

ಕನ್ನಡ ಬರಹ ಲೋಕದಲ್ಲಿ ಕಂಬಾರರ ಮಹತ್ವ ಇರುವುದೆಲ್ಲಿ ಮತ್ತು ಹೇಗೆ ಎಂಬುದರ ಬಗ್ಗೆ ಕನ್ನಡದ ಸೃಜನಶೀಲ ಬರಹಗಾರ ವಿಕ್ರಮ ವಿಸಾಜಿ ಕಂಡದ್ದು ಹೀಗೆ : 'ಕಂಬಾರ ಮಹತ್ವ ಇರುವುದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾಣದ ಜೀವನಾನುಭವಗಳನ್ನು ಕಟ್ಟಿಕೊಟ್ಟದ್ದರಲ್ಲಿ, ರಂಗಭೂಮಿ ಮತ್ತು ನಾಟಕ ರಚನೆಯ ಏಕತಾನತೆಯನ್ನು ಮುರಿದಿದ್ದರಲ್ಲಿ, ಸ್ವಂತಿಕೆ ಮತ್ತು ಸ್ವೋಪಜ್ಞತೆಗಳನ್ನು ಶ್ರದ್ಧೆಯಿಂದ ಹುಡುಕಲು ಯತ್ನಿಸಿದ್ದರಲ್ಲಿ' ಪಾಶ್ಚಾತ್ಯ ತಂತ್ರ, ಚಿಂತನೆಗಳಿಗೆ ಮಾರು ಹೋಗಿದ್ದವರ ನಡುವೆ ಕನ್ನಡದ ಅನುಭವ ಲೋಕದಿಂದ ನಾಟಕಗಳನ್ನು ಕಟ್ಟಿದ್ದು ಈ ನೆಲದ ವ್ಯಕ್ತಿತ್ವಗಳಾಗಿ ಅವರ ಪಾತ್ರಗಳು ಯಶಸ್ಸು ಪಡೆದದ್ದು ಸಾಮಾನ್ಯ ಸಂಗತಿಯಲ್ಲ. ವೈಯಕ್ತಿಕ ತಲ್ಲಣಗಳಲ್ಲಿ ಇತರರು ಮುಳುಗಿ ಹೋದಾಗ, ಅಂಚಿಗೆ ತಳ್ಳಲ್ಪಟ್ಟ ಸಮುದಾಯದ ಆತಂಕಗಳಿಗೆ ಕಂಬಾರರು ದನಿ ನೀಡಿದರು. ಕಂಬಾರರ ಇಂಥ ಏಕಲವ್ಯ ಪ್ರಯತ್ನಗಳನ್ನು ತಳ್ಳಿಹಾಕುವಂತಿಲ್ಲ..?

## ರಂಗಮಂಚವನ್ನೇರಿದ ಕಂಬಾರರು ಮತ್ತು ಅವರ ಕೃತಿಗಳು

ಸಮಕಾಲೀನ ಭಾರತೀಯ ನಾಟಕಕಾರರಲ್ಲಿ ಪ್ರಮುಖರಾದ ಕಂಬಾರರ ನಾಟಕಗಳೆಂದರೆ ; ಸಂಗೀತ, ಕುಣಿತ, ಸಂಭ್ರಮ, ಹಾಡು, ಕತೆ, ಹಾಸ್ಯ, ನಟನೆ ನಿರೂಪಣೆ ಸಂಭಾಷಣೆ ಹೀಗೆ ಎಲ್ಲವೂ ಮೇಳೈಸಿರುವ ಒಂದು ಪರಿಪೂರ್ಣವಾದ ರಂಗಭೂಮಿ. ಇವರ ನಾಟಕಗಳಲ್ಲಿ ಮತ್ತು ಪ್ರಯೋಗಗಳಲ್ಲಿ ಆಧುನಿಕ ಪ್ರಜ್ಞೆಯೊಂದಿಗೆ ಜಾನಪದ ಪ್ರಜ್ಞೆಯೂ ಮೈಗೂಡಿಕೊಂಡಿರುವುದರಿಂದ ಅವು ಕನ್ನಡ ರಂಗಭೂಮಿಗೆ ಹೊಸ ಹೊಳಹು, ಹೊಸ ಆಲೋಚನೆ, ಹೊಸ ಆಯಾಮಗಳನ್ನು ನೀಡುವಲ್ಲಿ ಸಮರ್ಥವೆನಿಸಿತು.

ಎಂಬತ್ತರ ದಶಕದ ಆರಂಭದಲ್ಲಿ ಆಧುನಿಕ ಜನಪದ ನಾಟಕಗಳು ರಚನೆಯಾದದ್ದೇ ಕನ್ನಡ

ರಂಗಭೂಮಿಗೆ ವಿಶೇಷವಾದ ಜೀವಕಳೆ ತುಂಬತೊಡಗಿತ್ತು. ಈ ಸಂದರ್ಭದಲ್ಲಿ ಪ್ರಯೋಗಗೊಂಡ ಕಂಬಾರರ ನಾಟಕ 'ಜೋಕುಮಾರಸ್ವಾಮಿ' ಕನ್ನಡ ರಂಗಭೂಮಿಗೆ ಹೊಸ ಚಾಲನೆ, ಚೈತ್ಯ ನೀಡಿದ ನಾಟಕವೆಂಬ ಹೆಗ್ಗಳಿಕೆಯನ್ನು ಬಾಚಿಕೊಂಡಿತು. 1972ರಲ್ಲಿ ಕನ್ನಡದ ಪ್ರಮುಖ ಬರಹಗಾರ ಪಿ. ಲಂಕೇಶ್ ಅವರು ಏರ್ಪಡಿಸಿದ್ದ ನಾಟಕೋತ್ಸವದಲ್ಲಿ ಖ್ಯಾತ ರಂಗಕರ್ಮಿ ಬಿ.ವಿ. ಕಾರಂತರ ನಿರ್ದೇಶನದಲ್ಲಿ ಕಂಬಾರರ 'ಜೋಕುಮಾರಸ್ವಾಮಿ' ನಾಟಕ ಬಯಲು ರಂಗಮಂಚವನ್ನೇರಿತು. ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿ ಮತ್ತು ಜಾನಪದ ರಂಗಭೂಮಿ ಒಂದಿಲ್ಲೊಂದು ಕೊರತೆಯಿಂದ ಸೊರಗಿದ್ದ ಆ ಕಾಲದಲ್ಲಿ ಕಂಬಾರರು ಆ ಎಲ್ಲ ಕೊರತೆಗಳನ್ನು ತುಂಬುವಂತಹ 'ಜೋಕುಮಾರಸ್ವಾಮಿ'ಯನ್ನು ಕನ್ನಡ ರಂಗಭೂಮಿಗೆ ಎಳೆದು ತಂದಾಗ ಜಡ್ಡುಗಟ್ಟಿದ್ದ ಕನ್ನಡ ರಂಗಭೂಮಿ ಕಾಯಕಲ್ಪಗೊಂಡು ಕೊನರಿತು. ಬಯಲು ರಂಗಮಂದಿರದಲ್ಲಿ ಪ್ರಯೋಗಿಸಲ್ಪಟ್ಟ ಆ ನಾಟಕ ಕನ್ನಡ ರಂಗಭೂಮಿಯಲ್ಲೇ ಒಂದು ಪ್ರಮುಖ ಘಟ್ಟವೆಂದು ಗುರುತಿಸಲ್ಪಟ್ಟಿತು. ಹಾಗೆಯೇ ಆಧುನಿಕ ರಂಗಪ್ರಜ್ಞೆಯನ್ನು ಮೈಗೂಡಿಸಿಕೊಂಡ ಕಂಬಾರರು ಕನ್ನಡ ರಂಗಮಂಟಪವನ್ನು ಪ್ರವೇಶಿಸಲು ಈ ಸಂದರ್ಭವು ನಾಂದಿಯಾಯಿತು.

ಅಂದಿನ ಆ ನಾಟಕ ಪ್ರದರ್ಶನವನ್ನು ಕಂಡಿರುವ ವಿಮರ್ಶಕ ಕುರ್ತಕೋಟಿಯವರು ಹೇಳುವುದು ಹೀಗೆ 'ಜೋಕುಮಾರಸ್ವಾಮಿ'ಯ ಅಂದಿನ ಪ್ರದರ್ಶನದ ಪ್ರಭಾವ ಅಭೂತಪೂರ್ವವಾಗಿತ್ತು, ಕಳೆದುಕೊಂಡಿದ್ದ ರಂಗಭೂಮಿಯನ್ನು ಜೀವಂತವಾಗಿ ತಿರುಗಿ ಪಡೆದುದನ್ನು ಅಂದಿನ ಪ್ರೇಕ್ಷಕರು ಅನುಭವಿಸಿದ್ದರು. ಅದನ್ನು ಜಾನಪದ ರಂಗಭೂಮಿ ಎಂದು ಗುರುತಿಸಲಾಯಿತು. ಆದರೆ ಈ ಜಾನಪದ ರಂಗಭೂಮಿ ಬೆಂಗಳೂರಿನಂಥ ಅತ್ಯಂತ ಆಧುನಿಕ ನಗರದ ಪ್ರೇಕ್ಷಕರನ್ನು ಹೇಗೆ ಆಕರ್ಷಿಸಿತು? ಇದು ಇಂದಿಗೂ ವಿಚಾರ ಮಾಡಬೇಕಾದ ವಿಷಯ'.

ಕನ್ನಡದ ಪ್ರಮುಖ ರಂಗಕರ್ಮಿ ಎಸ್. ಮಾಲತಿ ಅವರು ಈ 'ಜೋಕುಮಾರಸ್ವಾಮಿ' ನಾಟಕ ಪ್ರಯೋಗವನ್ನು ಕನ್ನಡ ರಂಗಭೂಮಿಯಲ್ಲಿ ಒಂದು ಪ್ರಮುಖ ಘಟ್ಟವೆಂದು ಗುರುತಿಸುತ್ತಾ ಅದರ ಅನನ್ಯತೆಯನ್ನು ಹೀಗೆ ಒಪ್ಪಿಕೊಳ್ಳುತ್ತಾರೆ : 'ಘಟನೆಯಿಂದ ಘಟನೆಗೆ ನಾಟಕದ ಕ್ರಿಯೆಯನ್ನು ದೃಶ್ಯದಿಂದ ದೃಶ್ಯಕ್ಕೆ ತೆಗೆದುಕೊಂಡು ಹೋಗುವ ರೀತಿ ಒಪ್ಪವಾಗಿದೆ. ಕನ್ನಡ ರಂಗಭೂಮಿಯಲ್ಲಿ ಅಸಂಗತ ನಾಟಕಗಳ ಬೌದ್ಧಿಕ ಕಸರತ್ತಿಗೆ ಮನಸೋತಿದ್ದ ಹಾಗೂ ಬೇಸತ್ತಿದ್ದ ರಂಗಕರ್ಮಿಗಳಿಗೆ ಈ ನಾಟಕ ಹೊಸಹಾದಿಯನ್ನು ತೋರಿಸಿದೆ ಎಂಬುದು ಸಣ್ಣ ವಿಚಾರವಲ್ಲ'. (ಸಿರಿಸಂಪಿಗೆ ಕಂಬಾರ 60 : ಜೋಕುಮಾರಸ್ವಾಮಿ - ಕೆಲವು ಮಾತುಗಳು : ಎಸ್. ಮಾಲತಿ, ಪು. 122)

ಈ ನಾಟಕದ ರಂಗಪ್ರಯೋಗದ ಬಗ್ಗೆ ಕನ್ನಡ ರಂಗಭೂಮಿಯ ಮತ್ತೊಬ್ಬ ಪ್ರತಿಭಾನ್ವಿತ ರಂಗಚಿಂತಕ ಪ್ರಸನ್ನ ಅವರು ಹೇಳುವುದು ''ಕಂಬಾರರ ಕಾವ್ಯಗಳಲ್ಲಿ, 'ಸಿಂಗಾರವ್ವ' ಕಾದಂಬರಿಯಲ್ಲಿನ ಅವರ ಪ್ರಪಂಚ ನನಗೆ ಇಷ್ಟ ಆದರೆ ಅವರ ನಾಟಕಗಳು ಎಲ್ಲವೂ ನನಗೆ ಇಷ್ಟ ಆಗೋದಿಲ್ಲ, ಎಲ್ಲೋ ಹೊರಗೆ ನಿಂತಂಗೆ ಅನ್ನಿಸುತ್ತದೆ. 'ಜೋಕುಮಾರಸ್ವಾಮಿ' ಬಹಳ ಚೆಂದದ ನಾಟಕ. ಆದರೂ ನನಗೆ ಅಷ್ಟು ಇಷ್ಟ ಆಗುವುದಿಲ್ಲ. (ಪ್ರಸನ್ನ : ಹೇಮಾಪಟ್ಟಣಶೆಟ್ಟಿ ನಾಟಕ ಅಕಾಡೆಮಿ : 2000, ಪು. 23)

ಪ್ರತಿಮಾ ರಂಗ, ತಂಡದಿಂದ ಪ್ರಯೋಗಿಸಲ್ಪಟ್ಟ ಈ ನಾಟಕದ ಪ್ರಯೋಗವು ಬೆಂಗಳೂರಿನ

ರವೀಂದ್ರ ಕಲಾಕ್ಷೇತ್ರದಲ್ಲಿ (11ಮೇ 1972) ನಡೆದಾಗ ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರಂಗವು ಹುಚ್ಚೆದ್ದು ಕುಣಿಯಿತು. ಕಂಬಾರರು ಈ ನಾಟಕದಲ್ಲಿ ಸೂತ್ರಧಾರರಾಗಿ ಪಾತ್ರ ವಹಿಸಿದರಲ್ಲದೆ, ನಾಟಕಕ್ಕೆ ಸಂಗೀತವನ್ನೂ ನೀಡಿದ್ದರು. ಈ ನಾಟಕ ಮತ್ತೆ 1974ರಲ್ಲಿ 'ಬೆನಕ ತಂಡದಿಂದ' ಯಶಸ್ವಿಯಾಗಿ ಪ್ರಯೋಗಿಸಲ್ಪಟ್ಟಿತು. 1989ರಲ್ಲಿ ಹಗ್ಗೋಡಿನ 'ನೀನಾಸಂ'ಗಾಗಿ ನಾಟಕಕಾರ ಕಂಬಾರರಿಂದಲೇ ಈ ನಾಟಕ ನಿರ್ದೇಶಿಸಲ್ಪಟ್ಟು ಪ್ರದರ್ಶನಗೊಂಡಿತು. ಕಂಬಾರರು ರಂಗ ನಿರ್ದೇಶಕ ಪಟ್ಟಕ್ಕೇರಿದ್ದು ಈ ಸಂದರ್ಭದಲ್ಲೆ.

ಈ ನಾಟಕವು ಹಿಂದಿ ಭಾಷೆಗೆ ಅನುವಾದಗೊಂಡು 1970ರ ಜೂನ್ 20ರಂದು ಯುನಿಟ್ ಮತ್ತು ಆವಿಷ್ಕಾರ್ ತಂಡದಿಂದ ಮುಂಬೈನ ಪೃಥ್ವಿ ಥಿಯೇಟರ್‌ನಲ್ಲಿ ಪ್ರಯೋಗಿಸಲ್ಪಟ್ಟಿತು. ಇದೇ ತಂಡವು ರಾಜೆಂದರ್‌ನಾಥ್ ಅವರ ನಿರ್ದೇಶನದಲ್ಲಿ ಈ ನಾಟಕವನ್ನು ನವದೆಹಲಿಯ 'ಶ್ರೀ ರಾಮ್ ಸೆಂಟರ್ ಫಾರ್ ಆರ್ಟ್ ಆ್ಯಂಡ್ ಕಲ್ಚರ್'ನಲ್ಲಿ ಮಾರ್ಚ್ 1980ರಲ್ಲಿ ಯಶಸ್ವಿಯಾಗಿ ಪ್ರಯೋಗಿಸಿ ಕಂಬಾರರ ಹೆಸರನ್ನು ಭಾರತೀಯ ರಂಗಭೂಮಿಯಲ್ಲಿ ಭದ್ರವಾಗಿ ಊರಿಬಿಟ್ಟಿತು.

ಈ 'ಜೋಕುಮಾರಸ್ವಾಮಿ' ನಾಟಕವು ಪಂಜಾಬಿ, ತಮಿಳು, ಗುಜರಾತಿ ಭಾಷೆಗೆ ಅನುವಾದಗೊಂಡಿದ್ದು ಕಲ್ಕತ್ತ, ಚಂಡೀಗಢ, ಮದ್ರಾಸ್ ಮತ್ತು ಅಹಮದಾಬಾದ್‌ಗಳಲ್ಲಿ ಇದು ರಂಗಮಂಟಪವನ್ನೇರಿದೆ. 'ಜೋಕುಮಾರಸ್ವಾಮಿಯ ಯಶಸ್ವೀ ರಂಗಪ್ರವೇಶವು ಕಂಬಾರರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟನಂತರ ಅವರ ಇತರ ಕೃತಿಗಳು ಒಂದೊಂದಾಗಿಯೇ ರಂಗಮಂಟಪವನ್ನು ಏರತೊಡಗಿದವು.

**ನಾಟಕ 'ಸಾಂಬಶಿವ ಪ್ರಹಸನ',** ಸೆಪ್ಟೆಂಬರ್, 1985ರಲ್ಲಿ ಹೆಗ್ಗೋಡಿನ ನಿನಾಸಂನಲ್ಲಿ ಪ್ರದರ್ಶನಗೊಂಡು 1985-86ರ 'ನಿನಾಸಂ ತಿರುಗಾಟ'ದಲ್ಲಿ ಪ್ರಯೋಗಿಸಲ್ಪಟ್ಟಿತು. ಇದರ ನಿರ್ದೇಶಕ ಕೆ.ವಿ. ಅಕ್ಷರ ಅವರು, ಸಂಗೀತ ಚಂದ್ರಶೇಖರ ಕಂಬಾರ ಅವರದ್ದು. ಈ ನಾಟಕವು ಮತ್ತೆ 1990ರ ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿ ನಾಟ್ಯ ಸಂಘಕ್ಕಾಗಿ ನಿರ್ದೇಶಕ ಇಕ್ಬಾಲ್ ಅಹಮ್ಮದ್ ಅವರಿಂದ ನಿರ್ದೇಶಿಸಲ್ಪಟ್ಟು ಬೆಂಗಳೂರಿನಲ್ಲಿ ಪ್ರದರ್ಶಿತವಾಯಿತು.

ಈ ನಾಟಕವನ್ನು ನಿರ್ದೇಶಿಸಿದ ಖ್ಯಾತ ರಂಗನಿರ್ದೇಶಕ ಕೆ.ವಿ. ಅಕ್ಷರ ಅವರು ಈ ನಾಟಕದ ಗುಣಾವಲೋಕನವನ್ನು ಮಾಡುವುದು ಹೀಗೆ :

'... Intersting aspect of this play is that it is a comedy. This is Kambar's first pure comedy. It is also a new experiment in this form. Pure comedy is rare in Kannada theatre. But 'Samba Shiva' tries to explore this form by going back to our roots. Like Jokumarswamy, Sambashiv too tells the story of the over throw of a lecherous king. This gives it a liveliness and playful quality, an attitude towards the folk and the traditional which is quite new.

These new perspectives in Samba Shiva became crucial to my production of the play. The play does not imitate any particular

folk form. It does not borrow any traditional rhythm, dance, music, language or costume. The folk qualities here are integral to the structure of the play. Iam indebted to this play for bringing about a new attitude towards 'folkism'.

ಕಂಬಾರರ ಅತೀ ಇಷ್ಟದ ನಾಟಕ 'ಸಿರಿಸಂಪಿಗೆ' ರಂಗಮಂಟಪ ಪ್ರವೇಶಿಸಿದ್ದು 1986ರ ಆಗಸ್ಟ್ ತಿಂಗಳಲ್ಲಿ, ಕನ್ನಡ ರಂಗಭೂಮಿಯ ಖ್ಯಾತ ರಂಗನಿರ್ದೇಶಕ ಮತ್ತು ರಂಗಚಿಂತಕರಾದ ಕೆ.ವಿ. ಸುಬ್ಬಣ್ಣ ಅವರು ನೀನಾಸಂಗಾಗಿ ನಿರ್ದೇಶಿಸಿದ್ದ ಈ ನಾಟಕವು ಹೆಗ್ಗೋಡಿನಲ್ಲಿ ಅತ್ಯಂತ ಯಶಸ್ವಿಯಾಗಿ ಪ್ರಯೋಗಿಸಲ್ಪಟ್ಟಿತು. ಇದೇ ತಂಡವು ಈ ನಾಟಕವನ್ನು ದೆಹಲಿಯ 'ಶ್ರೀರಾಮ್ ಸೆಂಟರ್ ಫಾರ್ ಆರ್ಟ್ ಅ್ಯಂಡ್ ಕಲ್ಚರ್'ನಲ್ಲಿ ಫೋರ್ಡ್ ಫೌಂಡೇಶನ್ ವರ್ಕ್‌ಶಾಪ್‌ಗಾಗಿ ಮತ್ತೆ ಪ್ರಯೋಗಿಸಿತು. ಈ ನಾಟಕದ ಯಶಸ್ವಿ ಪ್ರಯೋಗಗಳು ಕಂಬಾರರಿಗೆ ರಂಗಭೂಮಿಯಲ್ಲಿ ಮತ್ತಷ್ಟು ಹೆಸರನ್ನು ತಂದುಕೊಟ್ಟಿತು. ಈ ನಾಟಕವು ಮತ್ತೆ ಪ್ರತ್ಯೇಕ ಸಂದರ್ಭಗಳಲ್ಲಿ ಕನ್ನಡದ ಖ್ಯಾತ ರಂಗಕರ್ಮಿಗಳಾದ ಬಿ. ಜಯಶ್ರೀ ಮತ್ತು ಎಸ್. ಮಾಲತಿ ಅವರಿಂದ ಪ್ರತ್ಯೇಕವಾಗಿ ನಿರ್ದೇಶಿಸಲ್ಪಟ್ಟು ಪ್ರದರ್ಶಿತಗೊಂಡಿತು.

'ಸಿರಿಸಂಪಿಗೆ' ನಾಟಕವೂ ಹಿಂದಿಗೆ ಅನುವಾದಗೊಂಡು ಬಿ. ಜಯಶ್ರೀ ಅವರ ನಿರ್ದೇಶನದಲ್ಲಿ 1990ರ ಮೇನಲ್ಲಿ ಗೋವಾದ 'ಗೋವಾ ಕಲಾ ಅಕಾಡೆಮಿ ಥಿಯೇಟರ್ ಆರ್ಟ್ಸ್ ಫ್ಯಾಕಲ್ಟಿ' ಅವರಿಂದ ಪ್ರಯೋಗಗೊಂಡಿತು.

ಕಂಬಾರರ ಮತ್ತೊಂದು ಮಹತ್ವದ ನಾಟಕ 'ಹುಲಿಯ ನೆರಳು' ಇದನ್ನು ರಂಗನಿರ್ದೇಶಕ ಪ್ರಸನ್ನ ಅವರು 1982ರಲ್ಲಿ ಬೆಂಗಳೂರಿನ ಜನಪದ ರೆಪರ್ಟರಿಗಾಗಿ ನಿರ್ದೇಶಿಸಿದರು. ಇದಕ್ಕೆ ಸಂಗೀತ ನೀಡಿದವರು ಕಂಬಾರರು. ಈ ನಾಟಕವು ಮತ್ತೆ ದೆಹಲಿಯಲ್ಲೂ ಪ್ರದರ್ಶನಗೊಂಡಿತು. ಈ ನಾಟಕ ಪ್ರಯೋಗದ ಬಗ್ಗೆ ಪ್ರಸನ್ನ ಅವರ ಅನಿಸಿಕೆ ಹೀಗಿದೆ : ನಾನು 'ಹುಲಿಯ ನೆರಳು' ನಾಟಕ ಮಾಡಿಸಿದಾಗ ಆ ನಾಟಕ ನನಗೆ ವಿಶೇಷವಾದ ದರ್ಶನ ನೀಡಿತು. ಅದರಲ್ಲಿ ಕಂಬಾರರ ಜೊತೆಗೆ ಅವರ ಪ್ರಪಂಚವನ್ನು ಪ್ರವೇಶಿಸಲಿಕ್ಕೆ ನನಗೆ ಸಾಧ್ಯವಾಯಿತು.

ಕಂಬಾರರ 'ಚೆಪ್ಪತಕ್ಕಡಿ ಭೋಳೇಶಂಕರ' ನಾಟಕವು ಖ್ಯಾತ ನಾಟಕ ನಿರ್ದೇಶಕ ಸಿ.ಆರ್. ಜಂಬೆ ಅವರ ನಿರ್ದೇಶನದಲ್ಲಿ 1991ರಲ್ಲಿ 'ನಿನಾಸಂ' ತಂಡದಿಂದ ಪ್ರದರ್ಶಿಸಲ್ಪಟ್ಟಿತು. ಇದೇ ತಂಡ ಮದ್ರಾಸಿನಲ್ಲೂ ಈ ನಾಟಕದ ರಂಗಪ್ರಯೋಗವನ್ನು ನಡೆಸಿತು.

ಕಂಬಾರರ 'ತುಕ್ರನ ಕನಸು' ನಾಟಕವನ್ನು ರಂಗನಿರ್ದೇಶಕ ಕೆ.ವಿ. ಅಕ್ಷರ ಅವರು ನಿನಾಸಂ ತಂಡಕ್ಕಾಗಿ ನಿರ್ದೇಶಿಸಿ 1991ರ ಅಕ್ಟೋಬರ್ ತಿಂಗಳಲ್ಲಿ ಪ್ರಥಮ ರಂಗಪ್ರಯೋಗ ನಡೆಸಿದರು. ನಿನಾಸಂ ತಿರುಗಾಟದಲ್ಲಿ ಇದು ರಾಜ್ಯವಿಡೀ ಪ್ರದರ್ಶನಗೊಂಡಿತು.

ಕಂಬಾರರ ಮಕ್ಕಳ ನಾಟಕಕೃತಿ 'ಅಲಿಬಾಬ ಮತ್ತು ನಲವತ್ತು ಕಳ್ಳರು' ಇದನ್ನು ರಂಗನಿರ್ದೇಶಕಿ ಪ್ರೇಮಾಕಾರಂತರು 'ಬೆನಕ ಮಕ್ಕಳ ತಂಡಕ್ಕಾಗಿ' ನಿರ್ದೇಶಿಸಿ ಮೇ 1980ರಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ರಂಗಪ್ರಯೋಗ ನಡೆಸಿದರು. ಈ ಪ್ರಯೋಗಕ್ಕೆ ಸಂಗೀತ ನೀಡಿದವರು. ಬಿ.ವಿ. ಕಾರಂತರು.

ಕಂಬಾರರ **'ಹರಕೆಯ ಕುರಿ'** ನಾಟಕ ಕೃತಿಯನ್ನು ಪ್ರಥಮ ಬಾರಿಗೆ ರಂಗಸಂಪದಕ್ಕಾಗಿ ಖ್ಯಾತ ರಂಗ ನಿರ್ದೇಶಕ ಆರ್. ನಾಗೇಶ್ ಅವರು ನಿರ್ದೇಶಿಸಿದರು.

ಕಂಬಾರರ ಕಾದಂಬರಿ 'ಕರಿಮಾಯಿ'ಯನ್ನು ರಂಗ ನಿರ್ದೇಶಕಿ ಬಿ. ಜಯಶ್ರೀ ಅವರು ನಾಟಕ ರೂಪಕ್ಕೆ ಅಳವಡಿಸಿ ಅದನ್ನು ಯಶಸ್ವಿಯಾಗಿ ಪ್ರಯೋಗಿಸಿದರು.

ಕಂಬಾರರು ಮುದೇನೂರು ಸಂಗಣ್ಣ ಅವರೊಂದಿಗೆ ಸಂಪಾದಿಸಿದ 'ಲಕ್ಷಾಧಿಪತಿ ರಾಜನ ಕತೆ'ಯಲ್ಲಿನ ನಾಟ್ಯ ಸಂಪತ್ತನ್ನು ಗಮನಿಸಿ ರಂಗನಿರ್ದೇಶಕಿ ಬಿ. ಜಯಶ್ರೀ ಅವರು ಈ ಜನಪದ ಕತೆಯನ್ನು ಆಧರಿಸಿ ಇದೇ ಹೆಸರಿನ ನಾಟಕವೊಂದನ್ನು ಯಶಸ್ವಿಯಾಗಿ ನಿರ್ದೇಶಿಸಿ ಪ್ರಯೋಗಿಸಿದ್ದಾರೆ. ಈ ನಾಟಕವು ಕನ್ನಡ ಹವ್ಯಾಸಿ ರಂಗಭೂಮಿಗೆ ಲವಲವಿಕೆಯ ಪ್ರಯೋಗವಾಗಿ ಅವತರಿಸಿತು.

ಕಂಬಾರರ 'ಸಂಗ್ಯಾಬಾಳ್ಯಾ ಅನ್ನಬೇಕೋ ನಾಡೊಳಗ' ರಂಗಪ್ರತಿಯು ಸ್ವತಃ ಕಂಬಾರರ ನಿರ್ದೇಶನದಲ್ಲಿ 'ಪ್ರತಿಮಾರಂಗ' ತಂಡದವರಿಂದ 1974ರಲ್ಲಿ ಬೆಂಗಳೂರಿನಲ್ಲಿ ಪ್ರದರ್ಶಿಸಲ್ಪಟ್ಟಿತು. ಈ ಪ್ರದರ್ಶನದ ನಂತರ ಈ ಕೃತಿಯು ರಾಜ್ಯದ ಹಲವು ಕಡೆ ರಂಗಪ್ರಯೋಗಕ್ಕೆ ಒಳಪಟ್ಟಿತು.

ಜಾನಪದ ರಂಗಭೂಮಿಯನ್ನು ವಿಶೇಷವಾಗಿ ಅಭ್ಯಸಿಸಿದ್ದ ಕಂಬಾರರು ತಮ್ಮ ಕೃತಿಗಳನ್ನು ಆಧುನಿಕ ರಂಗಭೂಮಿಗೇರಿಸತೊಡಗಿದ ನಂತರ ಅವರು ಹವ್ಯಾಸಿ ರಂಗಭೂಮಿಯ ಒಳಹೊರಗನ್ನು ಅತ್ಯಂತ ಕಾಳಜಿಯಿಂದ ಅಭ್ಯಸಿಸಿ ಅರ್ಥೈಸಿಕೊಂಡರು. ಹವ್ಯಾಸಿ ರಂಗಭೂಮಿಗೆ ಚೈತನ್ಯತಂದ ಕಂಬಾರರಿಗೆ ಅವರೊಳಗಿನ ರಂಗ ಕಲ್ಪನೆ, ರಂಗಪ್ರೀತಿಯನ್ನು ಸಾಬೀತುಪಡಿಸುವ ಅವಕಾಶ ಒದಗ ಬಂದದ್ದು 1983ರಲ್ಲಿ ಅವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದಾಗ. ಆಗ ಸಂಪೂರ್ಣವಾಗಿ ಅಧೋಗತಿಗಿಳಿದು ದಯನೀಯ ಸ್ಥಿತಿಯಲ್ಲಿದ್ದ ವೃತ್ತಿರಂಗಭೂಮಿಗೆ ಕಾಯಕಲ್ಪ ಕೊಡಬೇಕೆಂದು ನಿರ್ಧರಿಸಿದ್ದ ಕಂಬಾರರು, ವೃತ್ತಿರಂಗಭೂಮಿಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಅವರು ಒಂದು ಸಮೀಕ್ಷಾ ಸಮಿತಿಯನ್ನು ನೇಮಕ ಮಾಡಿದರು. ರಂಗಚಿಂತಕ ಬಿ.ವಿ. ವೈಕುಂಠರಾಜು ಅವರು ಆ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಸಮಿತಿ ಸಾಕಷ್ಟು ತಲಸ್ಪರ್ಶಿ ಅಧ್ಯಯನ ನಡೆಸಿ ವೃತ್ತಿರಂಗಭೂಮಿಯ ಸಮಸ್ಯೆಗಳನ್ನು ದಾಖಲು ಮಾಡಿಕೊಂಡಿತು.

1984-86ರಲ್ಲಿ ಕಂಬಾರರಿಗೆ ಸಾಂಪ್ರದಾಯಿಕ ಜಾನಪದ ಪ್ರಕಾರಗಳು ಮತ್ತು ಆಧುನಿಕ ರಂಗಭೂಮಿ ಇವೆರಡರ ನಡುವಿನ ಪಾರಸ್ಪರಿಕ ಅಧ್ಯಯನಕ್ಕೆ ಫೋರ್ಡ್ ಫೌಂಡೇಶನ್ ಫೆಲೋಶಿಪ್ ದೊರೆಯಿತು. ಈ ಸಂದರ್ಭದ ಸದುಪಯೋಗ ಪಡೆದುಕೊಂಡ ಕಂಬಾರರು ಈ ಅವಧಿಯಲ್ಲಿ 'ಸಿರಿಸಂಪಿಗೆ' ನಾಟಕವನ್ನು ಬರೆದರು.

ಕಂಬಾರರು ಕನ್ನಡ ರಂಗಭೂಮಿಯ ಅಭಿವೃದ್ಧಿಗೆ ಶ್ರಮಿಸಿದ್ದಕ್ಕಾಗಿ ಅವರ 1983ರಲ್ಲಿ 'ಕೇಂದ್ರ ಸಂಗೀತ ನಾಟಕ ಅಕಾಡೆಮಿ'ಯನ್ನು ಹಾಗೂ 1987ರಲ್ಲಿ 'ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು. ಭಾರತೀಯ ಹಾಗೂ ಕನ್ನಡ ರಂಗಭೂಮಿಗೆ ಇವರ ಮಹತ್ತರ ಕೊಡುಗೆಯನ್ನು ಪರಿಗಣಿಸಿ 1987ರಲ್ಲಿ ರಾಷ್ಟ್ರಮಟ್ಟದ ಶ್ರೇಷ್ಠ ಪ್ರಶಸ್ತಿಯಾದ

'ನಂದಿಕಾರ್' ಪ್ರಶಸ್ತಿಯನ್ನು ಹಾಗೂ 1990ರಲ್ಲಿ ರಾಜ್ಯದ 'ಕೆ.ವಿ. ಶಂಕರೇಗೌಡ ಪ್ರಶಸ್ತಿ'ಯನ್ನು ನೀಡಲಾಯಿತು. ಜಾನಪದ ಸಾಹಿತ್ಯ ಮತ್ತು ರಂಗಭೂಮಿಗೆ ಕಂಬಾರರ ಕೊಡುಗೆಯನ್ನು ಗಮನಿಸಿ 1993ರ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ'ಯನ್ನು ನೀಡಿ ಸನ್ಮಾನಿಸಲಾಯಿತು. ಕಂಬಾರರು ನಾಟಕ ರಂಗಭೂಮಿಯಲ್ಲಿ ಮಾತ್ರವೇ ತನ್ನ ಅದ್ಭುತ ಪ್ರತಿಭೆಯನ್ನು ಹೊರಗೆಡಹಿದ್ದಲ್ಲ, ಅವರು ಚಿತ್ರರಂಗಭೂಮಿಗೂ ತನ್ನ ಪ್ರತಿಭೆಯನ್ನು ಹರಿಯಬಿಟ್ಟರು.

ಚಿತ್ರರಂಗಭೂಮಿಯಲ್ಲಿ ಮಿಂಚಿದ ಕೃತಿ ಮತ್ತು ಕೃತಿಕಾರರು

ಕಂಬಾರರ ನಾಟಕ 'ಋಷ್ಯಶೃಂಗ', 'ಕಾಡಕುದುರೆ', 'ನಾಯೀಕಥೆ', 'ಹರಕೆ ಕುರಿ' ಮತ್ತು ಕಾದಂಬರಿ 'ಕರಿಮಾಯಿ' ಮತ್ತು 'ಸಿಂಗಾರವ್ವ ಮತ್ತು ಅರಮನೆ' ಚಲನಚಿತ್ರಗಳಾಗಿವೆ. ಕಾದಂಬರಿ 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ಟೆಲಿಫಿಲಂ ಆಗಿ ಪ್ರಸಾರಗೊಂಡಿದೆ. ಈ ಎಲ್ಲ ಚಲನಚಿತ್ರಗಳು ಕಂಬಾರರಿಗೆ ಸಾಕಷ್ಟು ಖ್ಯಾತಿಯನ್ನು ತಂದುಕೊಟ್ಟವು. ಇಲ್ಲಿನ ಕೆಲವು ಚಲನಚಿತ್ರಗಳಿಗೆ ಸ್ವತಃ ಕಂಬಾರರೇ ಸಂಗೀತ ನಿರ್ದೇಶನ ನೀಡಿ, ಸಂಭಾಷಣೆ, ಚಿತ್ರಕಥೆಯನ್ನು ಬರೆದಿದ್ದಾರೆ. 'ಸಂಗೀತ' (ನಾಯೀಕಥೆ) ಚಲನಚಿತ್ರಕ್ಕೆ ನಿರ್ದೇಶಕರಾಗಿಯೂ ದುಡಿದಿದ್ದಾರೆ.

'ಕಾಡುಕುದುರೆ' ಚಲನಚಿತ್ರ 1978ರಲ್ಲಿ ಭಾರತೀಯ ಪನೋರಮವನ್ನು ಪ್ರವೇಶಿಸಿತು. ಈ ಚಿತ್ರವು ಉತ್ತಮ ಹಿನ್ನೆಲೆ ಗಾಯನಕ್ಕಾಗಿ ರಾಷ್ಟ್ರಪ್ರಶಸ್ತಿಯನ್ನು ಪಡೆಯಿತು. 1981ರಲ್ಲಿ ಕಂಬಾರರ ನಿರ್ದೇಶನದಡಿ ನಿರ್ಮಿತವಾದ 'ಸಂಗೀತ' ಚಲನಚಿತ್ರ 'ತೃತೀಯ ಅತ್ಯುತ್ತಮ ಚಲನಚಿತ್ರ'ವೆಂದು ಪ್ರಶಸ್ತಿಯನ್ನು ಪಡೆಯಿತು. ಈ ಚಿತ್ರದ ಕಥೆ, ಸಂಭಾಷಣೆ, ನಿರ್ದೇಶನ, ಸಂಗೀತ ನಿರ್ದೇಶನಕ್ಕಾಗಿ ಕಂಬಾರರು ಇತರ ರಾಜ್ಯ ಪ್ರಶಸ್ತಿಯನ್ನು ಪಡೆದರು. ಇವರ 'ಹರಕೆಯ ಕುರಿ' ಚಲನಚಿತ್ರವೂ ರಾಷ್ಟ್ರಪ್ರಶಸ್ತಿಯನ್ನು ಪಡೆಯಿತು.

ಕಂಬಾರರು 10 ಸಾಕ್ಷ್ಯಚಿತ್ರಗಳನ್ನು ತಯಾರಿಸಿ ಅವುಗಳಿಗೆ ಸಂಗೀತ ಸಂಯೋಜನೆಯನ್ನು ತಾವೇ ಮಾಡಿದ್ದಾರೆ. ತಾನು ನಟನೆಯಲ್ಲೂ ಹಿಂದೆ ಬಿದ್ದಿಲ್ಲ ಎಂದು ಸಾಬೀತು ಪಡಿಸುವುದಕ್ಕಾಗಿ ಕಂಬಾರರು 'ಮಾಡಿಮಡಿದವರು' ಮತ್ತು 'ವಂಶವೃಕ್ಷ' ಸಿನಿಮಾದಲ್ಲಿ ಸಣ್ಣ ಪಾತ್ರವಹಿಸಿ ನಟನೆಯಲ್ಲೂ ಸೈ ಎನಿಸಿಕೊಂಡರು.

ರಂಗಭೂಮಿ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಕಂಬಾರರ ಮಹತ್ತರ ಸಾಧನೆ ಮತ್ತು ಕೊಡುಗೆಯನ್ನು ಪರಿಗಣಿಸಿದ ಕರ್ನಾಟಕ ಸರಕಾರ 1988ರಲ್ಲಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿದರೆ, ಭಾರತ ಸರಕಾರ 2001ರಲ್ಲಿ ಪ್ರತಿಷ್ಠಿತ 'ಪದ್ಮಶ್ರೀ'ಯನ್ನು ನೀಡಿ ಗೌರವಿಸಿತು.

ಕಂಬಾರರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ರಂಗದಲ್ಲಿನ ಸೃಜನಶೀಲತೆ, ಚಿಂತನೆ-ಸಾಧನೆಗಳನ್ನು ಗಮನಿಸಿದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅವರಿಗೆ ಹಲವು ಪ್ರತಿಷ್ಠಿತ ಸ್ಥಾನಮಾನಗಳನ್ನು ನೀಡಿವೆ.

## ಪ್ರತಿಷ್ಠಿತ ಸ್ಥಾನಮಾನಗಳು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರು (1980-83)

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರು (1983-86)

ಮೈಸೂರಿನ ಕರ್ನಾಟಕ ನಾಟಕ ರೆಪರ್ಟರಿ 'ರಂಗಾಯಣ'ದ ಸದಸ್ಯರು (1987-1991)

ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರು (1988-1999, 1998- )

ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಸದಸ್ಯರು (1993-1996, 1998- )

ರಾಷ್ಟ್ರೀಯ ನಾಟಕ ಶಾಲೆಯ (ಎನ್.ಎಸ್.ಡಿ.) ಅಧ್ಯಕ್ಷರು (1996-2000)

## ಕಂಬಾರರ ಅಂತರಂಗ

ನಾನು ಕಂಬಾರರನ್ನು ಸಂದರ್ಶನಕ್ಕಾಗಿ ಸಂದರ್ಶಿಸಿಲ್ಲ. ಸುಮ್ಮನೆ ಅವರೆದುರು ಕೂತು ನಡೆಸಿದ ಮಾತುಕತೆ ನಡುವೆ ಸುಳಿದ ಹಲವು ವಿಚಾರ ಅನಿಸಿಕೆ ಅಭಿಪ್ರಾಯಗಳನ್ನು ಆಯ್ಕೆ ಮಾಡಿ ಕೆಲಸವನ್ನು ಹಾಗೆಯೇ ದಾಖಲಿಸಿಕೊಂಡು ಮತ್ತೆ ಕೆಲವನ್ನು ಪ್ರಶ್ನೋತ್ತರ ರೂಪದಲ್ಲಿ ದಾಖಲಿಸಿದ್ದೇನೆ.

ಕಂಬಾರರನ್ನು ಕನ್ನಡದ ಪ್ರಮುಖ ನಾಟಕಕಾರರನ್ನಾಗಿ ರೂಪುಗೊಳ್ಳುವಂತೆ ಮಾಡಿದ ನಾಟಕವೆಂದರೆ 'ಸಂಗ್ಯಾಬಾಳ್ಯಾ'. ಅವರ ಮಾತಿನಲ್ಲೆ ಹೇಳುವುದಾದರೆ "ಎಲ್ಲ ನಾಟಕಕಾರರೂ ತಂತಮ್ಮ ನಾಟಕವನ್ನು ಹುಡುಕುತ್ತಿರುವಂತೆ ನಾನು ಮೊದಲು ಕಂಡು ಗುರುತಿಸಿದ ನಾಟಕ 'ಸಂಗ್ಯಾಬಾಳ್ಯಾ' ಪ್ರದರ್ಶನದಲ್ಲಿತ್ತು. ಅದನ್ನು ಆಡಿದ್ದ ಜನಪದ ನಟರು ಪಾಶ್ಚಾತ್ಯ ರಂಗಭೂಮಿಯನ್ನು ಕಾಣುವುದು ಹೋಗಲಿ, ಅದರ ಬಗ್ಗೆ ಕೇಳಿ ಕೂಡಾ ಗೊತ್ತಿರಲಿಲ್ಲ. ಅವರ ಪಾಲಿಗೆ ಅದೊಂದು ಸಣ್ಣಾಟ ಅಷ್ಟೆ. ನಾನು ಈ ನಾಟಕವನ್ನು ಮೊದಲ ಸಲ ನೋಡಿದಾಗ ಏನು ಅರ್ಥ ಹೊಳೆಯಿತೆಂದು ಸ್ಪಷ್ಟವಾಗಿ ಹೇಳಲಾರೆ. ನನ್ನನ್ನು ಆಕರ್ಷಿಸಿದ್ದು ಗಂಗಿಯ ಪಾತ್ರವಹಿಸಿದ್ದ ಚಿಮಣಾಳ ಅಭಿನಯ. ನಾಟಕದ ತುಂಬ ಹಾಸುಹೊಕ್ಕಾಗಿರುವ ಹಾಡುಗಳ ಆಕರ್ಷಕವಾದ ಲಯಗಾರಿಕೆ ಮಾತ್ರ. ಅದಕ್ಕಿಂತ ಹೆಚ್ಚಾಗಿ ಆಡಿದಷ್ಟೂ ಹಿಗ್ಗುತ್ತಿದ್ದ ನಾಟಕದ ಅರ್ಥಪೂರ್ಣತೆ ಇಂದಿಗೂ ಸೋಜಿಗವಾಗಿ ಕಾಣುತ್ತದೆ. ನನಗೆ ನಾಟಕ ಸಿಕ್ಕಿದ್ದು ಇಲ್ಲಿಯೇ ಎಂದು ಧೈರ್ಯವಾಗಿ ಹೇಳಬಲ್ಲೆ. ಸಂಗ್ಯಾಬಾಳ್ಯಾದ ವಸ್ತು ಮೂಲಭೂತವಾಗಿದ್ದು ಅದರ ಅನುಭವ ಸಾರ್ವಕಾಲಿಕವಾಗಿದೆ. ಅದರ ಹಾಡುಗಳು ಅದರಲ್ಲಿನ ಸಂಭಾಷಣೆಗಿಂತ ಹೆಚ್ಚು ಭಾವವಾಹಕವಾಗಿರುವುದು ಹಾಗೂ ಹಾಡುಗಳೇ ನಾಟಕವನ್ನು ನಡೆಸುವುದು, ಸಂಭಾಷಣೆಗಳು ಕೂಡಾ ನಟರ ಸ್ವಯಂಸ್ಫೂರ್ತಿಯ ಫಲವಾಗಿ ಬಂದದ್ದು".

"ಸಂಗ್ಯಾಬಾಳ್ಯಾದಂತಹ ಜನಪದ ನಾಟಕಗಳಿಗೆ ರಂಗಭೂಮಿ ಕೇವಲ ಮಾಧ್ಯಮವಲ್ಲ. ಅದು ಭಾಷೆಯಂತೆ ಮಾಧ್ಯಮವೇನೋ ಹೌದು ; ಆದರೆ ಅದಕ್ಕಿಂತ ಹೆಚ್ಚಾಗಿ ಅದು ತನ್ನೆಲ್ಲ ಶಕ್ತಿಯನ್ನು ನಾಟಕಕ್ಕೆ ಧಾರೆಯೆರೆಯಬಲ್ಲದು. ಸುಶಿಕ್ಷಿತ ರಂಗಭೂಮಿ ಇನ್ನೂ ಆ ಮಟ್ಟಕ್ಕೆ ಏರಿಲ್ಲ. ಸುಶಿಕ್ಷಿತ

ರಂಗಭೂಮಿ ನಾಟಕಕ್ಕೆ ಒಂದು ಮಾಧ್ಯಮ ಮಾತ್ರ. ನಾಟಕವನ್ನು ಓದಿ ಏನು ಅನುಭವವಾಗುತ್ತದೋ ಅದೇ ಅನುಭವ ರಂಗಭೂಮಿಯಲ್ಲಿ ಆಗುತ್ತಿದ್ದರೆ ಅದೆಂಥ ರಂಗಭೂಮಿ? ಸುಶಿಕ್ಷಿತ ಪ್ರೇಕ್ಷಕರು ನಾಟಕ ಓದಿಕೊಂಡು ಬಂದು ಅದೇ ಅನುಭವವನ್ನು ರಂಗಭೂಮಿಯಲ್ಲಿ ನಿರೀಕ್ಷಿಸುವುದು ತಪ್ಪು. ನಾಟಕವನ್ನು ಓದಿಕೊಳ್ಳುವುದೇ ಒಂದು ವಿಪರ್ಯಾಸ. ಅದನ್ನು ರಂಗದ ಮೇಲೆ ನೋಡಿಯೇ ಅನುಭವಿಸಬೇಕು. ದೃಶ್ಯದ ಅನುಭವದಲ್ಲಿ ಓದಿನ ಅನುಭವ ಮುಳುಗಿ ಹೋಗಬೇಕು. 'ಸಂಗ್ಯಾಬಾಳ್ಯಾ' ಮುದ್ರಿತವಾಗಿ ಪ್ರಕಟವಾಗುವ ಮೊದಲು ನಾವೆಲ್ಲ ಅದನ್ನು ರಂಗದ ಮೇಲೆ ಅನುಭವಿಸಿದ್ದರಿಂದಲೇ 'ನನ್ನ ನಾಟಕ'ದ ಮಾದರಿ ನನಗೆ ಸಿಕ್ಕಿತು''.

★ ಕನ್ನಡಕ್ಕೊಂದು ರಂಗಭೂಮಿಯ ಪರಂಪರೆ ಇಲ್ಲ ಎಂಬ ಆಪಾದನೆ ಇದೆ. ಈ ನಿಟ್ಟಿನಲ್ಲಿ ಹೊಸ ರಂಗಭೂಮಿಯ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಹೊಸಗನ್ನಡ ಸಾಹಿತ್ಯದಲ್ಲಿ ವಿಪುಲವಾಗಿ ಬೆಳೆದು ಬಂದಿರುವ ಕನ್ನಡ ನಾಟಕ ಒಂದು ವಿರೋಧಾಭಾಸವೆನಿಸಿದೆ. ಕಾರಣವೆಂದರೆ ಕನ್ನಡಕ್ಕೊಂದು ರಂಗಭೂಮಿಯ ಪರಂಪರೆ ಇಲ್ಲದ್ದು. ಬಂಗಾಲ ಮತ್ತು ಮಹಾರಾಷ್ಟ್ರಗಳಲ್ಲಿಯ ರಂಗಭೂಮಿ ನಮಗಿಂತ ಹೆಚ್ಚು ಸಮೃದ್ಧವಾದುದು. ಅಲ್ಲಿನ ರಂಗಭೂಮಿಗಳಂತೆ ನಮ್ಮದು ಜನನಿರ್ಮಿತ ರಂಗಭೂಮಿ ಅಲ್ಲವಲ್ಲ. ಜನನಿರ್ಮಿತವಾದ ರಂಗಭೂಮಿ ತನ್ನ ನಾಟಕಗಳನ್ನು ತಾನೇ ಪಡೆಯುತ್ತದೆ. ಕರ್ನಾಟಕದಲ್ಲಿನ ಜನಪದ ರಂಗಭೂಮಿ ಒಂದು ದೈವಿಕ ಶ್ರದ್ಧೆಯ ತಳಹದಿಯ ಮೇಲೆ ನಿಂತದ್ದು. ಅಂಥ ನಾಟಕ ಜಾನಪದರಿಗೆ ಒಂದು ಧಾರ್ಮಿಕ ಕ್ರಿಯಾವಿಧಿ. ಆದರೆ ನಮ್ಮಲ್ಲಿನ ಸಾಹಿತ್ಯಿಕ ನಾಟಕ ಹಾಗೂ ಹೊಸ ರಂಗಭೂಮಿಯ ವಿಷಯದ ಬಗ್ಗೆ ಮಾತನಾಡುವುದಾದರೆ ಸಾಹಿತ್ಯಿಕ ನಾಟಕಕ್ಕಿಂತ ರಂಗಭೂಮಿಯೇ ಮುಖ್ಯ ಎನ್ನುವುದನ್ನು ಮರೆಯಬಾರದು. ಅದನ್ನು ನಿರ್ಮಿಸಿಕೊಳ್ಳುವುದರಲ್ಲಿ ನಾವೆಲ್ಲ ತತ್ಪರರಾಗಬೇಕು. ನಾಟಕ ಇದೆ ಎಂದು ರಂಗಭೂಮಿಯನ್ನು ಕಟ್ಟಬಾರದು. ರಂಗಭೂಮಿ ಇದೆ ಎಂದು ನಾಟಕ ಹುಟ್ಟಬೇಕು.

★ ನಾಟಕ ಮತ್ತು ರಾಜಕಾರಣ ಇವುಗಳ ನಡುವಣ ಸಂಬಂಧದ ಬಗ್ಗೆ ತಮ್ಮ ಅಭಿಪ್ರಾಯ?

ನಾಟಕ ರಂಗಭೂಮಿ ಇಂದಿನ ರಾಜಕೀಯದಿಂದ ದೂರ ಉಳಿಯುವಂತಿಲ್ಲ. ನವೋದಯ ಸಾಹಿತ್ಯದ ಕನಸಿನಲ್ಲೆ ನಮ್ಮ ರಾಜಕೀಯ ಹೊಣೆಗಾರಿಕೆಯ ಅರಿವೂ ಪ್ರಾರಂಭವಾಯಿತು. ನಮ್ಮ ರಾಜಕೀಯ ವಿದ್ಯಮಾನಗಳಿಗೆ ನಮ್ಮ ಸಾಹಿತ್ಯ ಸ್ಪಂದಿಸುತ್ತಲೇ ಇದೆ. ಸ್ವಾತಂತ್ರ್ಯೋತ್ತರ ಯುಗದಲ್ಲಿಯ ನಮ್ಮ ಮಹತ್ವದ ಕಾದಂಬರಿ ಮತ್ತು ನಾಟಕಗಳು ತಮ್ಮ ರಾಜಕೀಯ ಪ್ರತಿಕ್ರಿಯೆಯನ್ನು ತೋರಿವೆ. ಶ್ರೀರಂಗ, ಕೈಲಾಸಂ, ಸಂಸ, ಕಾರ್ನಾಡ್, ಲಂಕೇಶ್, ಶಿವಪ್ರಕಾಶ್ ಮುಂತಾದವರ ನಾಟಕಗಳು ರಾಜಕೀಯ ಪ್ರತಿಕ್ರಿಯೆಗಳಿಂದ ತುಂಬಿಕೊಂಡಿವೆ. ನವ್ಯಕಾವ್ಯದ ಕಾಲದಲ್ಲಂತೂ ನಮ್ಮ ಕಾವ್ಯ ರಾಜಕೀಯವಾಗಿಬಿಟ್ಟಿತು. ಆದರೆ ನಾಟಕ ತನ್ನ ಸ್ವರೂಪವನ್ನು ಬಿಟ್ಟು ಕೊಡದೆ ರಾಜಕೀಯಕ್ಕೆ ಪ್ರತಿಕ್ರಿಯೆಯನ್ನು ನೀಡಿದೆ. ನಮ್ಮ ನಾಡಿನ ರಾಜಕೀಯ ಕಾಳಜಿಗಳಲ್ಲಿ ನಮ್ಮ ನಾಟಕ ಅರ್ಥಪೂರ್ಣವಾಗಿ ಪಾಲ್ಗೊಳ್ಳುತ್ತಿದೆ. ನಮ್ಮ ರಾಜಕೀಯ ವಿದ್ಯಮಾನಗಳಲ್ಲಿನ ದುಷ್ಟತನವನ್ನು ಕಪಟ, ವಂಚನೆ, ಮೋಸಗಳನ್ನು ಸಾಹಿತ್ಯ ಬಯಲಿಗೆಳೆಯುತ್ತದೆ. ರಾಜಕಾರಣ

ಇಂದು ನಮ್ಮ ನಾಟಕ ಕಾದಂಬರಿಗಳಲ್ಲಿಯ ಒಂದು ಅಸಲು ಪಾತ್ರವಾಗಿ ಪರಿಣಮಿಸಿದ್ದಾನೆ. ಆದರೆ ನಾಟಕದ ಒಳಗೇ ಹುಟ್ಟಿರುವ ಈ ರಾಜಕೀಯ ಹವ್ಯಾಸ ಎಷ್ಟರ ಮಟ್ಟಿಗೆ ರಂಗಭೂಮಿಗೆ ಒಳಿತನ್ನು ತರಬಲ್ಲದು ಎನ್ನುವ ಅರಿವೂ ನಾಟಕಕ್ಕೆ ಬರಬೇಕಾಗಿದೆ.

★ 'ನಾಟಕ ರಂಗಭೂಮಿ ಮತ್ತು ಚಲನಚಿತ್ರ ರಂಗಭೂಮಿಯಲ್ಲಿ ನಿಮ್ಮ ಆಯ್ಕೆ ಇಷ್ಟ ಯಾವುದು? ಯಾಕೆ?'

ಚಲನಚಿತ್ರ ಒಂದು ಉತ್ಪಾದಕ ಕಲೆ. ಇಲ್ಲಿ ಕಲೆ 1/3 ಇದ್ದರೆ, 2/3 ಮೆಷಿನ್‌ನ ಚಾಲಾಕಿತನ. ಇಲ್ಲಿ ನಮ್ಮ ವ್ಯವಹಾರ ನಡೆಯುವುದಿಲ್ಲ. ಎಲ್ಲವೂ ಮೆಷಿನ್‌ನ ಮೇಲುಗೈ. ಚಲನಚಿತ್ರದಲ್ಲಿ ನಾವು ಕಾಣುವುದು ಸತ್ಯ ಅಲ್ಲ. ಅದು ಮಾಯೆ... ಅದು ಸುಳ್ಳು ಹೇಳುತ್ತದೆ... ಭ್ರಮಾಲೋಕಕ್ಕೆ ಸೃಷ್ಟಿಸುತ್ತದೆ... ಅದರ ಆಚೆಗೆ ಬ್ರಹ್ಮಸತ್ಯ ಇರುತ್ತದೆ..., ಚಲನಚಿತ್ರದಲ್ಲಿ ಕ್ಯಾಮೆರಕ್ಕೆ emotions ಇಲ್ಲ. ಆದರೆ ಅದು ಮನುಷ್ಯನಿಗಿಂತಲೂ ಪ್ರಮಾಣವಾದುದು ; ಹಾಗೂ ಸತ್ಯ ಹೇಳುವಂಥದ್ದು. ಆದರೆ ಚಲನಚಿತ್ರ ಮಾತ್ರ ಒಂದು ಪ್ರಮಾಣವಲ್ಲ. ಶಬ್ದವೇ ಈಗಿರುವ ಎಲ್ಲ ಪ್ರಮಾಣಕ್ಕಿಂತ ಶ್ರೇಷ್ಠವಾದುದು. ಆದರೂ ಚಲನಚಿತ್ರ ನನಗೆ ಇಷ್ಟವಿಲ್ಲ. ನಾಟಕವು ಅಭಿನಯ ಕಲೆಯಾಗಿದ್ದು ಪ್ರತಿಪ್ರದರ್ಶನದಲ್ಲೂ ಹೊಸತನ, ಜೀವಂತಿಕೆ ಲಕ್ಷಣಗಳಿದ್ದು, ನಮ್ಮ ಕಣ್ಣೆದುರೇ ಅದು ನಡೆಯುವುದರಿಂದ ಅದು ಎಂದೂ ಸುಳ್ಳು ಹೇಳುವುದಿಲ್ಲ - ಭ್ರಮೆ ಹುಟ್ಟಿಸುವುದಿಲ್ಲ. ನಾಟಕವಾಗಲಿ ಕಾವ್ಯವಾಗಲಿ ಅದು ತನ್ನ ಮೇಲೂ ಬೆಳಕು ಚೆಲ್ಲುತ್ತದೆ - ತಾನು ತೋರಿಸುವ ವಸ್ತುವಿನ ಮೇಲೂ ಬೆಳಕು ಚೆಲ್ಲುತ್ತದೆ. ನಾಟಕದ ಮುಂದೆ ಚಲನಚಿತ್ರ ಏನೇನೂ ಅಲ್ಲ. ನನಗೆ ನಾಟಕರಂಗವೇ ತುಂಬ ಇಷ್ಟ.

"ಕನ್ನಡಿಗರೆಲ್ಲರ ಕನಸಿನ ಕೂಸಾದ ಕನ್ನಡ ವಿಶ್ವವಿದ್ಯಾಲಯವನ್ನು ನೀವು ಕಟ್ಟುವಾಗ ನಿಮ್ಮ ಹಂಬಲ, ಕನಸು ಏನಿತ್ತು? ಹೇಗಿತ್ತು?"

ನೋಡಿ... ಕನ್ನಡ ವಿಶ್ವವಿದ್ಯಾಲಯವು ನನ್ನ ಮೆಚ್ಚಿನ ಕಾವ್ಯ 'ಹೇಳತೇನ ಕೇಳ'ದ ಎರಡನೇ ಭಾಗವೆಂದು ನಾನು ಪರಿಗಣಿಸಿದ್ದೇನೆ. ನಮ್ಮ ನಾಡು ವಸಾಹತುಶಾಹಿಗಳ ಹಿಡಿತದಲ್ಲಿದ್ದು ಇಡೀ ಜನಾಂಗವೇ ವಿಸ್ಮೃತಿಗೆ ಒಳಗಾದ ಸಂದರ್ಭದಲ್ಲಿ ನಾನು 'ಹೇಳತೇನ ಕೇಳ'ದಂತಹ ಕಾವ್ಯವನ್ನು ಕಟ್ಟಿದೆ. ವಚನ ಚಳುವಳಿ ನಡೆದ ಈ ಕನ್ನಡದ ಮಣ್ಣಲ್ಲಿ ನಮ್ಮ ಕನ್ನಡ ಭಾಷೆಯೇ ದಯನೀಯವಾಗಿ ಮಣ್ಣುಗೂಡುತ್ತಿರುವಾಗ ಕನ್ನಡ ಭಾಷಿಕರೆಲ್ಲರೂ ಒಂದು ರೀತಿಯ ವಿಸ್ಮೃತಿಗೆ ಒಳಗಾಗಿದ್ದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟುವ ಹೊಣೆಗಾರಿಕೆಯನ್ನು ನನಗೆ ವಹಿಸಲಾಯಿತು. ಅವುಚಿದ್ದ ವಿಸ್ಮೃತಿಯನ್ನು ತೊಡೆದುಹಾಕಿ ಕನ್ನಡ ಭಾಷೆಯನ್ನು ಮತ್ತು ಕನ್ನಡ ಜ್ಞಾನವನ್ನು ಗುಣಾತ್ಮಕವಾಗಿ ಉಳಿಸಿ-ಬೆಳೆಸಿ-ಪಸರಿಸುವ ಕಾರ್ಯದ ಮೂಲಕ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟಬೇಕೆಂಬ ಕನಸು ನನ್ನಲ್ಲಿತ್ತು.

ಅಂದು ಕಲ್ಯಾಣದಲ್ಲಿ ವಚನ ಚಳುವಳಿಯನ್ನು ಹುಟ್ಟುಹಾಕಿದ ನಮ್ಮ ವಚನಕಾರರ intensity ಮತ್ತು creativity ನಮ್ಮ ನಾಡಿನ ಮೂಲೆ ಮೂಲೆಯ ಚಿಂತಕರನ್ನು, great intellectualsಗಳನ್ನು ಆ ವಚನಕಾರರ ಬಳಿಗೆ ಎಳೆದು ತಂದಿತಲ್ವೆ! ಬೇರೆ ಎಲ್ಲೂ ಸಿಗಲಾರದ ತಿಳುವಳಿಕೆ, ಗ್ರಹಿಕೆ, ಕನ್ನಡದ ಮಣ್ಣಲ್ಲಿ ಕನ್ನಡದ ಭಾಷೆಯಲ್ಲಿ ತಮ್ಮ ಅನುಭವದಲ್ಲಿ ಸಿಗುತ್ತದೆ

ಎಂಬ ಸತ್ಯದ ಅರಿವು ಹಾಗೆ ಬಂದವರಿಗಾದೊಡನೆ ಅವರೂ ಆ ವಚನ ಕ್ರಾಂತಿಯಲ್ಲಿ ಸೇರಿ, ತಮ್ಮ ತಮ್ಮ ಅನುಭವದ ಬೆಳಕಲ್ಲಿ ಕನ್ನಡ ಭಾಷೆಯಲ್ಲೆ ಇನ್ನಷ್ಟು ವಚನ ಸಾಹಿತ್ಯವನ್ನು ಸೃಷ್ಟಿಸಿದರು.

ಅದೇ ರೀತಿಯಲ್ಲಿ ಈ ಕನ್ನಡ ವಿಶ್ವವಿದ್ಯಾಲಯವು ನಮ್ಮ ಕನ್ನಡ ಭಾಷೆಯನ್ನು ಸೃಜನಶೀಲವಾಗಿ, ಅದರ ಸಾಮರ್ಥ್ಯಕ್ಕೆ ತಕ್ಕಂತೆ ದುಡಿಸಿಕೊಂಡು ಕನ್ನಡದಲ್ಲಿ ಬೇರೆ ಎಲ್ಲೂ ಸಿಗಲಾರದ ತಿಳುವಳಿಕೆ ಗ್ರಹಿಕೆ ಈ ವಿಶ್ವವಿದ್ಯಾಲಯದಲ್ಲಿದೆ ಎಂಬ ನಂಬಿಕೆಯನ್ನು ಬರೀ ಕನ್ನಡಿಗರಿಗೆ ಮಾತ್ರವಲ್ಲ, ಇಡೀಯ ಪ್ರಪಂಚಕ್ಕೆ ಬರುವಂತಹ ಸಾಧನೆಯನ್ನು ತೋರಬೇಕು. ಅದರ ಜತೆಗೆ ಪ್ರಪಂಚದ ಸಮಸ್ತ ಜ್ಞಾನವು ಕನ್ನಡದ ಮುಖಾಂತರ ಇಲ್ಲಿ ದೊರೆಯುವಂತಾಗಬೇಕು. ಹಾಗೆಯೇ ಈ ವಿಶ್ವವಿದ್ಯಾಲಯವು ಇತರ ವಿಶ್ವವಿದ್ಯಾಲಯಗಳಂತೆ ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ ಅದು ನಮ್ಮ ಕಾಲಕ್ಕೆ ಅಗತ್ಯವಾದ ವಿದ್ಯೆಯನ್ನು ಸೃಷ್ಟಿಸುವ ಸಂಸ್ಥೆಯಾಗಬೇಕೆಂಬ ಹಂಬಲ-ಕನಸು ನನ್ನದಾಗಿತ್ತು.

★ ಕನ್ನಡ ವಿಶ್ವವಿದ್ಯಾಲಯದಲ್ಲೊಂದು ಆಧುನಿಕ ಅನುಭವ ಮಂಟಪ ಕಟ್ಟಬೇಕೆಂಬ ನಿಮ್ಮ ಕನಸಿತ್ತಲ್ಲ..., ಆ ಕನಸಿನ ಹಿಂದೆ ಇದ್ದ ನಿಮ್ಮ ಕಲ್ಪನೆ ಯಾವುದು?

ಅರ್ರೀ... ನಮ್ಮ ವಚನ ಚಳುವಳಿ ಈ ಕನ್ನಡದ ಮಣ್ಣಲ್ಲಿ ಮಾತ್ರವೇ ನಡೆಯಲು ಯಾಕೆ ಸಾಧ್ಯವಾಯಿತು. ಅದೂ ಸಂಸ್ಕೃತದ ಪ್ರಭಾವ ಇದ್ದ ಕಾಲದಲ್ಲೇ! ಅನ್ಯರ ಬಾವಿಯ ಸಿಹಿನೀರಿಗಿಂತ ನಮ್ಮ ಮನೆ ಭಾವಿಯ ಉಪ್ಪುನೀರೇ ಲೇಸು ಕಂಡಯ್ಯ - ಎಂದು ಬಸವಣ್ಣ ಯಾಕೆ ಹೇಳಿದ ಹೇಳಿ...? ಸಂಸ್ಕೃತ ಭಾಷೆ ಅನ್ಯಭಾಷೆ ಕನ್ನಡಭಾಷೆ ನಮ್ಮದು. 'ನಮ್ಮದಿದು ಭಾಷೆ' ಎಂಬ ಹೆಮ್ಮೆಯಿಂದಲೇ ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಎಲ್ಲರೂ ಅನುಭವ ಮಂಟಪದಲ್ಲಿ ಕಲೆತು ಅನುಭವದ ಬೆಳಕಲ್ಲಿ ನಮ್ಮೊಳಗನ್ನು ನಾವು ನೋಡಬೇಕು. ಯೋಚನೆ ಮಾಡಬೇಕು. ಪರಸ್ಪರ ಚರ್ಚಿಸಬೇಕು. ಅಲ್ಲಿ ಉಂಟಾದ ಹೊಸ ಅರಿವನ್ನು-ಅನುಭವವನ್ನು ಕಂಡುಕೊಂಡ ಸತ್ಯವನ್ನು ಅಪ್ಪಟ ಕನ್ನಡದಲ್ಲಿ ನಾಡಿಗೆ ತಿಳಿಸಬೇಕು ಎಂಬುದು ಬಸವಾದಿ ಪ್ರಮಥರ ಒಕ್ಕೊರಲಿನ ತೀರ್ಮಾನವಾಗಿತ್ತು. ಹಾಗೆ ಅವರೆಲ್ಲರೂ ಅನುಭವ ಮಂಟಪದಲ್ಲಿ ಪರಸ್ಪರ ಹಂಚಿಕೊಂಡ, ಕಂಡುಕೊಂಡ ಸತ್ಯವೇ ವಚನಸಾಹಿತ್ಯವಾಯಿತು. ಹನ್ನೆರಡನೇ ಶತಮಾನದಲ್ಲೆ ಈ ವಚನ ಭಾಷಾ ಚಳುವಳಿ ಕರ್ನಾಟಕದಲ್ಲಿ ಮಾತ್ರವೇ ಸಾಧ್ಯವಾದಾಗ ನಮ್ಮ ಕನ್ನಡ ವಿಶ್ವವಿದ್ಯಾಲಯದಲ್ಲೂ ಅಂತಹದ್ದೇ 'ಅನುಭವ ಮಂಟಪ'ವೊಂದನ್ನು ಕಟ್ಟಬೇಕೆಂಬ ಹಂಬಲ ನನ್ನೊಳಗೆ ಮೊಳೆತಿದ್ದು ಸಹಜವೆ.

ಅದಕ್ಕೂ ಹೆಚ್ಚಾಗಿ... ಅಲ್ಲಮಪ್ರಭು, ಅಕ್ಕಮಹಾದೇವಿ, ಬಸವಣ್ಣ, ಜೇಡರದಾಸಿಮಯ್ಯ ಇಂಥವರ ಕನ್ನಡದ ಕೆಲಸವನ್ನು ಓದಿದರೆ ಕನ್ನಡದಂಥ ಸಮರ್ಥವಾದ ಭಾಷೆಯೊಂದನ್ನು ಕಳಕೊಳ್ಳಬೇಕೆಂದು ಅನಿಸ್ತದೇನ್ರೀ...? ನಾವು ಗ್ರಹಿಸಲಾರದ್ದನು... ಗ್ರಹಿಸಿ ಹೇಳಲಾರದ್ದನ್ನು ಅಲ್ಲಮಪ್ರಭು ಅಂದೇ ಹೇಳಿದ್ದಾನೆ. ನಾವೆಲ್ಲರೂ ವಚನಸಾಹಿತ್ಯವನ್ನು ಮತ್ತೆ ಓದಬೇಕಾಗಿದೆ. ಭಾಷೆಯ ಮೂಲಕ, ಚಿಂತನೆಯ-ನಡವಳಿಕೆಯ ವ್ಯವಹಾರದ sophisticationನನ್ನು ನಮ್ಮ ವಚನಕಾರರೇ ಕಲಿಸಿದರು. ಇಂಗ್ಲೀಷ್ ಭಾಷೆಯಿಂದ ನಮಗೆ ಏನು ಸಿಗುತ್ತದೆಯೋ ಅಥವಾ ಏನೋ ಸಿಗುತ್ತದೆ ಎಂದು ನಾವು ಭಾವಿಸಿದ್ದೇವೆಯೋ ಅಂತಹದ್ದು ಇನ್ನಿತರ ಭಾಷೆಗಳಿಗೆ

ಕನ್ನಡದಿಂದ ಸಿಗಬೇಕು ಮತ್ತು ಆ ಭಾಷೆಯಿಂದ ಕನ್ನಡ ಭಾಷೆಗೂ ಸಿಗಬೇಕು ಆ ಕೆಲಸ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯಬೇಕಾದರೆ ನಮ್ಮ ಕನ್ನಡ ವಿಶ್ವವಿದ್ಯಾಲಯದಲ್ಲೂ 'ಅನುಭವಮಂಟಪ'ವೊಂದನ್ನು ಕಟ್ಟಬೇಕು. ಈ ಕನಸು ಆಗ ನನ್ನದಾಗಿತ್ತು. ಈ ಕನಸಿನ ಮೂಲಕವೇ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟಿ ಬೆಳೆಸುವುದಕ್ಕಾಗಿ ನಾಡಿನ ಮೂಲೆ ಮೂಲೆಗಳಿಂದ ಬಂದಿರುವ ಹಲವು ತಾತ್ತ್ವಿಕ ನಿಲುವುಗಳಿಂದ ವಿದ್ವಾಂಸರು - ಸಂಶೋಧಕರನ್ನು ಒಗ್ಗೂಡಿಸಿ 'ಚಾವಡಿ' ಎಂಬ ಅಂಗಣದಲ್ಲಿ 'ದಿನಮಾತು' ಎಂಬ ಸಂವಾದ ಕಾರ್ಯಕ್ರಮವನ್ನು ಆಗ ದಿನನಿತ್ಯ ಹಮ್ಮಿಕೊಳ್ಳಲಾಗುತ್ತಿತ್ತು. ಅದುವೇ ಕನ್ನಡ ವಿಶ್ವವಿದ್ಯಾಲಯದ 'ಅನುಭವ ಮಂಟಪ'. ಈ ಮಂಟಪದಲ್ಲಿ ದಿನನಿತ್ಯ ಹೊಸ ಮನಸ್ಸುಗಳು ಹೊಸ ಅನುಭವ ಹೊಸ ಅರಿವಿನ ಜತೆ ಪರಸ್ಪರ ಸಂವಾದ ನಡೆಸಿ ತಾವು ಕಂಡುಕೊಂಡ ಹೊಸ ಶೋಧನೆಗಳ ಮೂಲಕ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟಬೇಕೆಂಬುದೇ ನನ್ನ ಹಂಬಲವಾಗಿತ್ತು.

★ ಜಾಗತೀಕರಣದ ಮಾಯೆ ಮುಸುಕಿರುವ ಈ ಸಂದರ್ಭದಲ್ಲಿ ನಮ್ಮ ಕನ್ನಡಭಾಷೆಯ ಉಳಿವಿನ ಬಗ್ಗೆ ನಿಮಗೆ ಏನನಿಸುತ್ತೆ? ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ನೀವು ಏನು ನಿರೀಕ್ಷಿಸುತ್ತೀರಿ?

ಜಾಗತೀಕರಣದ ಮೋಹದಲ್ಲಿ ಕಾಗದದ ಮುದ್ರಣ ಬರವಣಿಗೆ ನಿಂತುಹೋಗಿ ಕಾಗದ ರಹಿತ ಸಮಾಜ ಬರುವ ಕಾಲ ಸನ್ನಿಹಿತವಾಗಿದೆ. ಅಥವಾ ಬಂದೇ ಬಿಟ್ಟಿದೆ. ಪರಿಸರ ಸಂರಕ್ಷಣೆಯ ಕಾಳಜಿಯಿಡಿ ನಿಂತು ಮಾತನಾಡುವುದಾದರೆ ಕಾಗದಕ್ಕೆ ಮತ್ತು ಕಾಗದ ಮುದ್ರಣಕ್ಕೆ ಪರ್ಯಾಯವಾದುದು ಕಂಪ್ಯೂಟರ್ ಮಾತ್ರ. ಅಂತಹ ಸ್ಥಿತಿ ನಿರ್ಮಾಣವಾದರೆ ಅನೇಕ ಭಾಷೆಗಳು ಬದುಕುಳಿಯುವ ಅವಕಾಶ ಇಲ್ಲವೇ ಇಲ್ಲ. ಬದುಕುಳಿದರೂ ಒಂದೆರಡು ಭಾಷೆಗಳು ಇಂಗ್ಲಿಷ್‌ಮಯವಾಗಿ ಬದುಕುಳಿಯಬಹುದು. ಕನ್ನಡದ ಕತೆಯೂ ಇಷ್ಟೇ.

ಜಾಗತೀಕರಣಕ್ಕೆ ನಾವು ಒಪ್ಪಿಕೊಂಡ ಮೇಲೆ - ಈ ಕನ್ನಡ ಭಾಷೆ ದೇಶದಲ್ಲಿ ಉಳಿಯುವ ಮಾತು ಬಿಡಿ-ಕರ್ನಾಟಕದಲ್ಲಿ ಅದರ ಕತೆ ಏನು ಎಂಬ ಬಗ್ಗೆ ಚಿಂತಿಸಬೇಕಾಗಿದೆ. ಕನ್ನಡ ಭಾಷೆ ಇಂತಹ ಸನ್ನಿವೇಶದಲ್ಲಿ ಉಳಿಯಬೇಕೆಂದ್ರೆ quantityಯಲ್ಲಿ ಮಾತ್ರ ಉಳಿಯತಕ್ಕದಲ್ಲ - qualityಯಲ್ಲಿ ಉಳಿಯತಕ್ಕದ್ದು. Qualityಯಲ್ಲಿ ಹೇಗೆ ಅಂದ್ರೆ ಒಂದು ಕಾಲದಲ್ಲಿ ಕನ್ನಡ ವಚನ ಸಾಹಿತ್ಯ ಇತ್ತಲ್ಲ ಹಾಗೆ - ಅಂಥ quality ನೋಡಿ... ನಮಗೆ ತಿಳಿಯಲಾರದ್ದು ಆ ಭಾಷೆಗೆ ತಿಳಿಯುತ್ತೆ. ನಮಗೆ ಸಿಗಲಾರದ್ದು ಆ ಭಾಷೆಗೆ ಸಿಗುತ್ತೆ. ಒಟ್ಟಿನಲ್ಲಿ ಭಾಷೆಯ ಅಧ್ಯಯನವೆಂದರೆ ಮನುಷ್ಯನ ಅಧ್ಯಯನವೇ ಹೌದು, ಅಲ್ವಾ...?

ನಮ್ಮ ಭಾಷೆ ಕೇವಲ ಮಾಧ್ಯಮವಾದರೆ ಅದನ್ನು ಅಭ್ಯಾಸ ಮಾಡಲು ವ್ಯಾಕರಣದ ಬಲವಿದ್ದರೆ ಸಾಕು. ಆದರೆ ಭಾಷೆ ಮಾಧ್ಯಮವಷ್ಟೇ ಅಲ್ಲ, ಅದು ನಮ್ಮ ಜೀವನ ವಿಧಾನದ ಪ್ರತಿಬಿಂಬ, ಮೌಲ್ಯವ್ಯವಸ್ಥೆಗೆ ಒಂದು ಪ್ರಮಾಣ. ಕನ್ನಡ ಕಾವ್ಯಭಾಷೆಯಾಗಿರುವಂತೆ ಶಾಸ್ತ್ರ ಭಾಷೆಯೂ ಆಗಬೇಕಾಗಿದೆ. ಕನ್ನಡ ಭಾಷೆಯ ಅಧ್ಯಯನಕ್ಕಾಗಿ ಅದರ ಉಳಿವಿಗಾಗಿ, ಸಂರಕ್ಷಣೆಗಾಗಿ ನಮ್ಮ ಕನ್ನಡ ವಿಶ್ವವಿದ್ಯಾಲಯ ಇನ್ನೂ ಕೆಲವು ಹೊಸ ಯೋಜನೆಗಳನ್ನು ಹಾಕ್ಕೋಬೇಕಾಗಿದೆ. ಆ ಕಾರಣಕ್ಕಾಗಿಯೇ ಕನ್ನಡ ವಿಶ್ವವಿದ್ಯಾಲಯದಲ್ಲಿ ಒಂದು ರೀತಿಯ dialogue ಅಗತ್ಯವಾಗಿ

ಇರಬೇಕಾಗಿದೆ. ಅದು ನಿರಂತರವಾಗಿ ಕನ್ನಡ ಭಾಷಾಪ್ರೇಮಿಗಳ, ಕನ್ನಡ ಭಾಷಾತಜ್ಞರ ಸಲಹೆ-ಸೂಚನೆಗಳನ್ನು ಸ್ವೀಕರಿಸಬೇಕಾಗಿದೆ. ಅದು ಕನ್ನಡಿಗರೆಲ್ಲರ ವಿಶ್ವವಿದ್ಯಾಲಯದ ಕನಸು-ಸಲಹೆ-ಜವಾಬ್ದಾರಿಗಳಿಂದ ಬೆಳೆಯಬೇಕಾದ ಸಂಸ್ಥೆ. ಕನ್ನಡದ ಅಗತ್ಯಕ್ಕೆ ತಕ್ಕಂತೆ ಆ ವಿಶ್ವವಿದ್ಯಾಲಯದ ಸ್ವರೂಪ ಹೊಸ ಹೊಸ ಸ್ವರೂಪ ಆಯಾಮಗಳನ್ನು ಪಡೆಯಬೇಕು. ಅದರ ಬೆಳವಣಿಗೆ ಎಲ್ಲೂ ಕುಬ್ಜವಾಗಬಾರದು. ಕನ್ನಡ ವಿಶ್ವವಿದ್ಯಾಲಯದ functionsಗಳನ್ನು define ಮಾಡಿದ್ದೇ ನಾವಾದ್ದರಿಂದ ನಮ್ಮ ಕಣ್ಣೆದುರಿಗೆ ಕನ್ನಡ ಭಾಷೆ ನಿಸ್ತೇಜವಾಗದೆ ವಿಶ್ವವಿದ್ಯಾಲಯದ ಜತೆ ಜತೆಗೇ ಅದು ಅತ್ಯಂತ ಬಲಿಷ್ಠವಾಗಿ ಬಲಿಯಬೇಕು-ಬೆಳೆಯಬೇಕು-ಉಳಿಯಬೇಕು ಎಂಬ ಆಸೆ ನಿರೀಕ್ಷೆ ನನಗಿದೆ. ಹಾಗೆಯೇ ನಮ್ಮ ಕನ್ನಡ ಭಾಷೆ ಅಧಿಕಾರಯುತವಾಗಿ ಬೆಳೆಯಬೇಕೇ ವಿನಾ ದಯನೀಯವಾಗಿ ಅಲ್ಲ. ಅದು ಗುಣಾತ್ಮಕವಾಗಿ ಬೆಳೆಯಬೇಕು ಅಲ್ಲಮನ ವಚನದಂತೆ.

ಈ ಹಂಬಲದಿಂದ ನಾನು ಕನ್ನಡ ನಾಡಿನ ಮೂಲೆ ಮೂಲೆಗಳಿಂದ ಪ್ರತಿಭಾವಂತ ವಿದ್ವಾಂಸರನ್ನು ಆರಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕರೆತಂದಿದ್ದು 'ನೀವು ಕಲಿಸಿರಿ' ಎಂದಲ್ಲ, ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಿ ಪ್ರಪಂಚದ ತಿಳುವಳಿಕೆಯನ್ನು ಸಮೃದ್ಧವಾದ ಕನ್ನಡ ಭಾಷೆಯ ಬೆಳಕಿನಲ್ಲಿಟ್ಟು ಶೋಧಿಸಿ ಕನ್ನಡಿಗರಿಗೆ ನೀಡಲಿ ಎಂದು. ನಿಧಾನವಾದರೂ ಆ ಕೆಲಸ ಈಗ ಅಲ್ಲಿ ನಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಈ ವಿಶಿಷ್ಟ ಕೆಲಸಕ್ಕಾಗಿಯೇ, ಅಂದಿನ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರು ಸಚಿವ ಸಂಪುಟ ಸಭೆಯಲ್ಲಿ ಅಂದು ಹೇಳಿದ್ದು 'ಇದು ಸಾಮಾನ್ಯ ವಿಶ್ವವಿದ್ಯಾಲಯವಲ್ಲ, ಇದು ವಿಶ್ವವಿದ್ಯಾಲಯಗಳ ವಿಶ್ವವಿದ್ಯಾಲಯ' ಎಂದು. ನಮ್ಮಲ್ಲಿ ಕಲಿಸುವುದಕ್ಕೆ ಬೇಕಾದಷ್ಟು ವಿಶ್ವವಿದ್ಯಾಲಯಗಳಿವೆ. ಕನ್ನಡ ಭಾಷೆ, ಸಂಸ್ಕೃತಿ ಉಳಿಸಲು ಬೆಳೆಸಲು ಬೇರೆ ವಿಶ್ವವಿದ್ಯಾಲಯಗಳಿಲ್ಲ. ಆ ಕೆಲಸಕ್ಕಾಗಿಯೇ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಗುವಾಗ ಇದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಮತ್ತು ಒಂದು ದೃಷ್ಟಿಯಿಂದ ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯೆಂದು ಕನ್ನಡಿಗರಿಗೆ ಸ್ಪಷ್ಟಗೊಳಿಸಿಯೇ ಅಲ್ಲಿ ಕನ್ನಡದ ಕೆಲಸ ಆರಂಭಗೊಳಿಸಲಾಗಿತ್ತು. ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ ಮತ್ತು ಜಾನಪದ ಅಧ್ಯಯನಗಳಿಗೂ ಭಾಷೆಯ ಅಧ್ಯಯನಕ್ಕೂ ನಿಕಟವಾದ ಸಂಬಂಧವಿದೆ. ಕನ್ನಡ ಭಾಷೆಯೆಂದರೆ ಕನ್ನಡ ಜನತೆಯ ನೈತಿಕ ಮೌಲ್ಯಗಳು, ಆಧ್ಯಾತ್ಮಿಕ ಆಕಾಂಕ್ಷೆಗಳು, ಧಾರ್ಮಿಕ ಅಪೇಕ್ಷೆಗಳು ಮತ್ತು ಇದುವರೆಗೆ ಎಲ್ಲೂ ದಾಖಲಾಗದಿರುವ ಕನ್ನಡ ಚರಿತ್ರೆ ಇವೆಲ್ಲವುಗಳ ಪ್ರತಿಫಲವೇ ಆಗಿದೆ. ಆದ್ದರಿಂದ ಈ ಜಾಗತೀಕರಣದ ಸಂದರ್ಭದಲ್ಲಿ ಭಾಷೆಯ ಅಧ್ಯಯನಗಳಲ್ಲಿ ನಾವು ಹೊಸ ದಾರಿಯನ್ನು ಮತ್ತೆ ಶೋಧಿಸಬೇಕಾದ ಅನಿವಾರ್ಯತೆ ಅಗತ್ಯವಿದೆ. ಕನ್ನಡ ವಿಶ್ವವಿದ್ಯಾಲಯ ಈ ನಿಟ್ಟಿನಲ್ಲಿ ಸ್ಪಂದಿಸುತ್ತಿದೆ.

## ಕಂಬಾರರು ಮತ್ತು ಕನ್ನಡ ವಿಶ್ವವಿದ್ಯಾಲಯ

ಕಂಬಾರರ ಬದುಕು - ವ್ಯಕ್ತಿತ್ವ - ಸಾಧನೆಯ ಬಗ್ಗೆ ಬರೆಯುವಾಗ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಯವನ್ನು ಸೇರ್ಪಡೆಗೊಳಿಸದಿದ್ದರೆ ಆ ಬರವಣಿಗೆಯೇ ಅಪೂರ್ಣ ಎನ್ನಬಹುದು.

ಕಂಬಾರರ ಸಾಹಿತ್ಯಿಕ - ಸಾಂಸ್ಕೃತಿಕ ಸೃಜನಶೀಲತೆ, ಗಾಢ ದೇಸೀ ಪ್ರಜ್ಞೆ ಅವರೊಳಗಿನ ರಂಗಕಲ್ಪನೆ-ರಂಗಪ್ರಜ್ಞೆ ರಂಗಚಿಂತನೆ, ಒಟ್ಟಿನಲ್ಲಿ ಅವರ ಬಹುಮುಖಿ ವ್ಯಕ್ತಿತ್ವವನ್ನು ಗಣನೆಗೆ ತೆಗೆದುಕೊಂಡ ಕರ್ನಾಟಕ ಸರಕಾರ ಅವರಿಗೆ ಕನ್ನಡಿಗರ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟಿ-ಬೆಳೆಸುವ ಮಹತ್ವದ ಜವಾಬ್ದಾರಿಯನ್ನು ಹೊರಿಸಿತು.

ವಿದ್ಯಾರಣ್ಯ ತಪೋಭೂಮಿಯಾಗಿದ್ದ ಹಂಪಿಯ ಹಾಳುಮಂಟಪದಲ್ಲಿ ಕಾರ್ಯನಿರ್ವಹಿಸಲು ತೊಡಗಿದ ಕನ್ನಡ ವಿಶ್ವವಿದ್ಯಾಲಯ ಎರಡು ವರುಷಗಳಲ್ಲೇ ಅಳ್ಳಿಕೆರೆಯ ಹಿನ್ನೀರ ಹಿನ್ನೆಲೆ ಇರುವ 'ವಿದ್ಯಾರಣ್ಯ' ಆವರಣಕ್ಕೆ ಸ್ಥಳಾಂತರಗೊಂಡಿತು. ಕಂಬಾರರ 'ಸಮಸ್ತ ಶಕ್ತಿ'ಯೆಲ್ಲವೂ ಆ ಆವರಣದ ನಿರ್ಮಾಣದಲ್ಲಿ ಅಭಿವ್ಯಕ್ತಗೊಳ್ಳತೊಡಗಿತು.

ಕನ್ನಡ ವಿಶ್ವವಿದ್ಯಾಲಯದ ಕನಸು-ಸಮಸ್ತ ಕನ್ನಡಿಗರ ಕನಸು, ಕನ್ನಡ ಸಂಸ್ಕೃತಿಯ ಕನಸು, ಕನ್ನಡ ಭಾಷೆಯ ಕನಸು-ಎಂದು ಕಂಬಾರರು ವಿನಯಪೂರ್ವಕವಾಗಿ ಹೇಳುತ್ತಲೇ, 'ಇದು ಇಡಿ ದೇಶದಲ್ಲೇ ವಿಭಿನ್ನವಾದ ವಿಶಿಷ್ಟವಾದ, ಅತ್ಯಂತ ಅರ್ಥಪೂರ್ಣವಾದ ವಿಶ್ವವಿದ್ಯಾಲಯವಾಗಬೇಕು' ಎಂಬ ಸುಂದರ ಕನಸೊಂದನ್ನು ಕಟ್ಟಿಕೊಂಡು 'ವಿದ್ಯಾರಣ್ಯ'ದ ಒಳಹೊರಗನ್ನು ತಮ್ಮ ಕನಸಿನಂತೆ, ಕನ್ನಡಿಗರೆಲ್ಲರೂ ಅಭಿನಂದಿಸುವಂತೆ ಕಟ್ಟಿದರು.

ಕನ್ನಡ ವಿಶ್ವವಿದ್ಯಾಲಯದ 'ಒಳಗ'ನ್ನು ಸರಕಾರದ ನೀತಿ ನಿಯಮ, ಕಾಯಿದೆ ಹಾಗೂ ವಿಶ್ವವಿದ್ಯಾಲಯದ ಅಧಿನಿಯಮವನ್ನನುಸರಿಸಿ ಕಟ್ಟಿದರೆ, 'ಹೊರಗ'ನ್ನು ತಮ್ಮ ಕವಿಕಲ್ಪನೆ ರಂಗಕಲ್ಪನೆ-ದೇಸೀ ಪ್ರಜ್ಞೆಯನ್ನು ಧಾರಾಳವಾಗಿ ಹರಿಯಬಿಟ್ಟು ಕಟ್ಟಿದರು. ಬರೀಯ ಕುರುಚಲು ಗಿಡಗಂಟಿ-ಕಲ್ಲುಬಂಡೆಗಳು ತುಂಬಿದ್ದ ಸುತ್ತ ಅತ್ತಿತ್ತ ಗುಡ್ಡಗಳ ಎಲ್ಲೆ ಪಡೆದ ಬರಡು ಭೂಮಿಯನ್ನು ಕಂಬಾರರ ಹುಚ್ಚು ಕನಸಿನ ಪ್ರಭಾವ ; ಇಲ್ಲಿ ಕಲ್ಲು ಮಾತ್ರ ಬೆಳೆಯಬಲ್ಲುದು - ಇಲ್ಲ್ಯಾಕೆ ವಿಶ್ವವಿದ್ಯಾಲಯ?' ಎಂದು ಗೊಣಗಿದ್ದಿದೆ. ಆದರೆ ಕಂಬಾರರು ಅಲ್ಲಿ ವಿದ್ಯೆಯನ್ನು ಸೃಷ್ಟಿಸುವ ಜತೆಗೆ ಹಸಿರು ತೊಟ್ಟಿಕ್ಕಿಸುವ ವನಗಳನ್ನು ಎಬ್ಬಿಸಿದರು. ಈಗ 'ವಿದ್ಯಾರಣ್ಯ'ದೊಳಗೆ ಎಲ್ಲೆಲ್ಲೂ ಹಸಿರದ್ದೇ ಉಸಿರು. ಅಸಂಖ್ಯ ಜೀವಸಂಕುಲಗಳ ತೂಗು ತೊಟ್ಟಿಲಾದವು ಆ ಹಸಿರವನಗಳು.

ಬಳ್ಳಾರಿಯ ಬಿರುಬಿಸಿಲಿಗೆ ಬಳಲಿದ್ದ ಕಲ್ಲು ಬಂಡೆ ಮುಳ್ಳುಪೊದೆ ಗಿಡಗಂಟಿಗಳಲ್ಲಿ ಜೀವಂತಿಕೆ ಉಕ್ಕಿಸಿದ ಕಂಬಾರರು ಕೇವಲ ಆರು ವರ್ಷಗಳ ಕಲ್ಲುಬಂಡೆಗಳಲ್ಲಿ ಹೂವರಳಿಸಿ, ಬರಡು ಭೂಮಿಯಲ್ಲಿ ಹಸಿರು ಕೊನರಿಸಿದರು.

ನೀರಿನ ಸೆಲೆ, ಹಸಿರಿನ ಬಲೆಗೆ ಎಲ್ಲೆಲ್ಲಿಂದಲೋ ಜಾತಿವಾರು ಹಕ್ಕಿ ಪ್ರಾಣಿಗಳು ಲಗ್ಗೆ ಇಟ್ಟವು. ಈ ಪ್ರಕೃತಿ ಚೆಂದಕ್ಕೆ ಬೊಟ್ಟಿಟ್ಟಂತಿರುವ ಅಳ್ಳಿಕೆರೆಯ 'ಹಿನ್ನೀರ' ಹಿಮ್ಮೇಳದಲ್ಲಿ ಕಂಬಾರರ ಕವಿ ಮನಸ್ಸಿಗೆ ಮತ್ತಷ್ಟು ಕನಸುಗಳು ತುಂಬತೊಡಗಿದವು. ಅವರ ಈ ಕನಸುಗಳ ಜೊತೆಗೆ ರಂಗಕಲ್ಪನೆಯೂ ಹೊಸ ಕೆಲಸ ಮಾಡತೊಡಗಿತ್ತು ಎಂಬುದಕ್ಕೆ ಸಾಕ್ಷಿ - ಅವರು 'ವಿದ್ಯಾರಣ್ಯ' ಆವರಣದಲ್ಲಿ ಎಬ್ಬಿಸಿರುವ ವಿಶಿಷ್ಟ ವಿನ್ಯಾಸ ಪರಂಪರಾಗತ ವಾಸ್ತು ಶೈಲಿಯುಳ್ಳ ಕಟ್ಟಡಗಳೇ ಸಾಕ್ಷಿ. ಕಂಬಾರರು ಒಬ್ಬ ಶಿಲ್ಪಿ ಸೌಂದರ್ಯೋಪಾಸಕನ ಮನೋಭೂಮಿಕೆ ಉಳ್ಳವರು ಎಂಬುದು

ಕನ್ನಡಿಗರೆಲ್ಲರಿಗೆ ಮನದಟ್ಟಾಗುವಂತೆ ದೇಸೀಯ ಶೈಲಿಯ ಕಟ್ಟಡಗಳನ್ನು ನಿರ್ಮಿಸಿದರು. ಹಂಪೆಯ ನೆಲದ ಇತಿಹಾಸದ ಹವಾಮಾನ ಸಂಸ್ಕೃತಿಗೆ ಹೊಂದುವಂತಹ ಕಟ್ಟಡಗಳನ್ನು ನಿರ್ಮಿಸಿರುವುದು ಅವರ ಇತಿಹಾಸ ಪ್ರಜ್ಞೆ, ಸಾಂಸ್ಕೃತಿಕ ಪ್ರಜ್ಞೆ, ಸೌಂದರ್ಯ ಪ್ರಜ್ಞೆ, ಕಲಾಕೌಶಲ್ಯವನ್ನು ಬಿಂಬಿಸುವಂತದ್ದು. ವಿಶಿಷ್ಟ ವಿನ್ಯಾಸದ ಕಟ್ಟಡಗಳೇ ಏಕೆ ಪ್ರತಿಯೊಂದು ಕಟ್ಟಡ, ಸಮುಚ್ಚಯ, ಅಧ್ಯಯನ ವಿಭಾಗಗಳಿಗೆ ಅಲ್ಲಿ ನಡೆಯುವ ಕೆಲಸ ಕಾರ್ಯ ಹಾಗೂ ಸಂಶೋಧನೆಗಳಿಗನುಗುಣವಾಗಿ ನಮ್ಮ ಪರಂಪರೆಯನ್ನು ನೆನಪಿಸುವ ಹೆಸರುಗಳು ನಾಮಕರಣಗೊಂಡವು. ಗ್ರಂಥಾಲಯಕ್ಕೆ 'ಅಕ್ಷರ', ಬಯಲು ರಂಗಮಂದಿರಕ್ಕೆ 'ನವರಂಗ', ಸಭಾಂಗಣಕ್ಕೆ 'ಭುವನವಿಜಯ', ಗುಡ್ಡದ ಮೇಲಿನ ವಿಶಾಲ ಅತಿಥಿಗೃಹಕ್ಕೆ 'ಶ್ರೀಶೈಲ', ಅಧ್ಯಯನ ಸಮುಚ್ಚಯಗಳಿಗೆ 'ತ್ರಿಪದಿ', 'ಕೂಡಲ ಸಂಗಮ', 'ತುಂಗಭದ್ರಾ', ಬುಡಕಟ್ಟು ಅಧ್ಯಯನ ಆವರಣಕ್ಕೆ 'ಗಿರಿಸೀಮೆ' ಅಲ್ಲಿಗೆ ಸಾಗುವ ದಾರಿಗೆ 'ಗಿರಿಜಾಡು', ಗಿರಿಸೀಮೆಯ ಚರ್ಚಾವೇದಿಕೆ 'ಚಾವಡಿ', ಕಚೇರಿ ಸಂಬಂಧವಾಗಿ ಸಭೆ ನಡೆಯುವ ಕಟ್ಟಡಕ್ಕೆ 'ಒಡ್ಡೋಲಗ', ಆಡಳಿತ ಕಚೇರಿಗೆ 'ಕ್ರಿಯಾಶಕ್ತಿ', ಪ್ರಸಾರಂಗಕ್ಕೆ 'ಕಾಯಕದ ಮನೆ', ಮುಖ್ಯ ರಸ್ತೆಗಳಿಗೆ 'ಸೂರ್ಯಬೀದಿ', 'ಚಂದ್ರಬೀದಿ', ಶಿಲ್ಪಶಾಲೆಗೆ 'ಜಕ್ಕಣಮಂಟಪ', ಶಿಲ್ಪಗಳಿರುವ ಸಮುಚ್ಚಯಕ್ಕೆ 'ಶಿಲ್ಪವನ' ಇತ್ಯಾದಿ ಹತ್ತು ಹಲವು ವೈವಿಧ್ಯಮಯ ಹೆಸರುಗಳುಳ್ಳ ಕಟ್ಟಡಗಳು ಅಲ್ಲಿವೆ.

ಸಾಂಸ್ಕೃತಿಕ ಅಧ್ಯಯನಕ್ಕೆ ತೊಡಗಿದ್ದ 'ಕನ್ನಡ ಭಾಷೆ ಮತ್ತು ಕನ್ನಡ ಜನಾಂಗದ' ಕನಸಾದ ಕನ್ನಡ ವಿಶ್ವವಿದ್ಯಾಲಯ ಬರೀ ಬಾಹ್ಯ ಸೌಂದರ್ಯವನ್ನು ಮಾತ್ರ ಹೆಚ್ಚಿಸಿಕೊಳ್ಳಲಿಲ್ಲ. ಅದರ ಜೊತೆ ಜೊತೆಗೆ ಕನ್ನಡದ ಸಾಂಸ್ಕೃತಿಕ ಶೃಂಗಾರವನ್ನು ಆಂತರಿಕವಾಗಿ ಬೆಳೆಸತಕ್ಕಂತಹ ಹಲವು ಉಪಯುಕ್ತ ಅಧ್ಯಯನಗಳನ್ನು ಈ ವೈಶಿಷ್ಟ್ಯಪೂರ್ಣವಾದ ಕಟ್ಟಡಗಳೊಳಗೆ ಕೈಗೊಂಡು ನಿಗದಿತ ಅವಧಿಯಲ್ಲಿ ಅಧ್ಯಯನದ ಫಲಿತಾಂಶವನ್ನು ಕನ್ನಡಿಗರಿಗೆ ನೀಡಿರುವುದು ಗಮನಾರ್ಹ.

ಕಂಬಾರರು ತಮ್ಮ ಕನಸಿನಂತೆ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟಿದರು. ಕಂಬಾರರ ಆ ಕನಸಿನಲ್ಲ ಲೋಪದೋಷಗಳಿವೆಯೆಂದು ಅವರ ಆಡಳಿತಾವಧಿಯಲ್ಲಿ (1992-1998) ಹಲವಾರು ತಕರಾರುಗಳು ಅಪಸ್ವರಗಳು ಎದ್ದಿದ್ದವು. ಹತ್ತು ಒಳ್ಳೆಯ ಕೆಲಸಕ್ಕೆ ನಾಕು ತಕರಾರು-ಮಾತುಗಳು ಬರುವುದು ಅಸಹಜವೇನಲ್ಲ. ಕವಿ ಕಂಬಾರರಲ್ಲಿ ಅಸಂಖ್ಯ ಕನಸುಗಳಿವೆ. ಕನಸುಗಳಿಲ್ಲದೆ ಆ ಕವಿ ಉಸಿರಾಡಿದ ಕ್ಷಣವಿರದು. ಆ ಕನಸುಗಳಿಂದಲೇ ಕಂಬಾರರು ಪ್ರಖರ ಪ್ರತಿಭೆಯ ಬರಹಗಾರ ಎಂಬ ಪ್ರಸಿದ್ಧಿಯ ಶಿಖರಕ್ಕೇರಲು ಸಾಧ್ಯವಾದದ್ದು. ಇಂತಹ ಮಹತ್ವದ ಕವಿಯನ್ನು ಕೆಲವೊಮ್ಮೆ ಕೆಲವು ಹುಂಬ ಕನಸುಗಳೂ ಅವುಚಿಕೊಳ್ಳುವುದಿದೆ. ಯಾವುದೋ ಕ್ಷಣ... ಯಾವುದೋ ನಂಬಿಕೆ... ಯಾವುದೋ ಸೂಕ್ಷ್ಮ ಸಂವೇದನೆಗೆ ಅವರ ಕನಸಿನ ಹಕ್ಕಿಗೆ ಸಾವಿರ ರೆಕ್ಕೆಗಳಿದ್ದು ಅದು 'ಚಕೋರಿ'ಯಂತೆ ಗರಿಬಿಚ್ಚಿ ಕುಣಿಯುತ್ತಾ ಕಂಬಾರರ ವಿವೇಚನೆಯ-ಗುರಿಯ ದಾರಿಯನ್ನೇ ತಪ್ಪಿಸಿ ಅವರಿಗೆ ಹುಂಬತನದ ಪಟ್ಟ ಕಟ್ಟುವುದಿದೆ. ಗ್ರಾಮೀಣ ಹಿನ್ನೆಲೆಯಿಂದ ಬಂದು ಈಗ ನಗರವಾಸಿಗಳಾಗಿರುವ ಕಂಬಾರರು ನಗರಕ್ಕೆ ಒಪ್ಪುವಂತಹ ಜಾಣತನ, ಬದುಕುವ ಕಲೆಯನ್ನು ಕಲಿತಿದ್ದರೂ, ಅವರಲ್ಲಿ ಎಲ್ಲೋ ಸೇರಿಕೊಂಡಿರುವ ಹಳ್ಳಿಯ ಮುಗ್ಧತನವು ಅವರ ಕನಸಿನೊಂದಿಗೆ ಸೇರಿಕೊಳ್ಳುವುದಿದೆ. ಅವರನ್ನು ದಾರಿತಪ್ಪಿಸುವುದಿದೆ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಕಂಬಾರರ ಕಾರ್ಯವೈಖರಿಯನ್ನು ಅಲ್ಲೇ ಇದ್ದು ಸೂಕ್ಷ್ಮವಾಗಿ ಗಮನಿಸುತ್ತಿದ್ದ ನಾನು, ಅವರಲ್ಲಿನ ಒಳ್ಳೆಯ ಹಲವು ಕನಸುಗಳ ಜತೆ, ಇನ್ನು ಕೆಲವು 'ಹುಂಬಕನಸು'ಗಳನ್ನೂ ಗಮನಿಸಿದ್ದೇನೆ. ಅದು ಕವಿಯೊಬ್ಬರಲ್ಲಿ ಹುಟ್ಟಲು ಮಾತ್ರ ಸಾಧ್ಯವೇನೋ ಎಂದೂ ನಾನು ಭಾವಿಸಿದ್ದಿದೆ.

ಅಂಥ ಕೆಲವು ಹುಂಬ ಕನಸುಗಳಲ್ಲಿ (ನಾನು ಅರ್ಥೈಸಿಕೊಂಡಂತೆ) ಒಂದು ರಂಗಾದ ಹುಂಬ ಕನಸನ್ನು ಇಲ್ಲಿ ದಾಖಲಿಸುತ್ತೇನೆ.

## ಕಂಬಾರರ ಒಂದು ಹುಂಬ ಕನಸು

ಕುಲಪತಿ ಕಂಬಾರರು ಕಚೇರಿಯಲ್ಲಿದ್ದರೆ ಆಡಳಿತದ ಚರ್ಚೆಯಲ್ಲಿ ಸಂವಾದದಲ್ಲಿ ಸಮಸ್ಯೆಗಳಲ್ಲಿ ಮುಳುಗಿ ಬಿಟ್ಟಿರುತ್ತಾರೆ. ಆದರೆ ಅವರ ಕವಿಪ್ರಜ್ಞೆ ಮಾತ್ರ ಸದಾ ಎಚ್ಚರಿಕೆಯಲ್ಲಿರುತ್ತದೆ. ಸಂಜೆಯಾಗುತ್ತಿದ್ದಂತೆ ಕಂಬಾರರ ಕವಿ ಮನಸ್ಸಿಗೆ ವಿದ್ಯಾರಣ್ಯ ಆವರಣ ಸುತ್ತುವ ಹಂಬಲ. ಕಂಬಾರರು ಹೊರಟು ಬಿಡುತ್ತಿದ್ದರು. ಪ್ರಕೃತಿ ಸುತ್ತುವ... ಹಕ್ಕಿಪಿಕ್ಕಿ ನೋಡುವ ಆತುರದಿಂದ ಅವರು ಧಾವಿಸುತ್ತಿದ್ದುದು ಕೆರೆಗೆ ಅಂಟಿಕೊಂಡಂತಿರುವ ಬಯಲು ರಂಗಮಂದಿರದತ್ತ ಅಥವಾ ಮಲೆನಾಡಿನ ಗಿರಿಸೀಮೆಯತ್ತ.

ಹಾಗೆ ಒಂದು ದಿನ ಕಂಬಾರರ ಪ್ರಕೃತಿ ವೀಕ್ಷಣೆಗಾಗಿ ಗಿರಿಸೀಮೆಗೆ ಹೊರಟಿದ್ದಾರೆ. ದಾರಿ ಇಡೀ ಸಿಗುವ ಮರಗಿಡಗಳು ಅವುಗಳಲ್ಲಿ ಮನೆ ಮಾಡಿಕೊಂಡಿರುವ ಜೀವಸಂಕುಲವನ್ನು ವಿಚಾರಿಸುತ್ತಾ... ಮಾತನಾಡಿಸುತ್ತಾ ಕಂಬಾರರು ಮುಂದುವರಿಯುತ್ತಿದ್ದಂತೆ ಅವರಿಗೆ ಕಂಡಿದ್ದು - ತಗ್ಗು ಬಿದ್ದಿದ್ದ ಗಿಡಗಂಟಿ ಬೆಳೆದಿರುವ ಸುಮಾರು ಒಂದೆಕ್ರೆ ಬಟಾಂ ಬಯಲು ಜಾಗ! ಆ ಕ್ಷಣದಲ್ಲೇ ಕಂಬಾರರೊಳಗಿನ ಕನಸಿನ ಹಕ್ಕಿ ಸಾವಿರ ರೆಕ್ಕೆ ಬಿಡಿಸಿ ಎತ್ತೆತ್ತಲೋ ಹಾರಾಡತೊಡಗಿತು. ಆ ತಗ್ಗು ಭೂಮಿಗೆ ನೀರು ತುಂಬಿಸಿದರೆ... ಹೇಗಿರಬಹುದು ಆ ಕ್ಷಣವೇ ಕಂಬಾರರ ಕವಿ ಮನಸ್ಸೊಳಗೆ ಕನಸಿನ ಪರದೆಯೊಳಗೆ ತುಂಬಿ ಬಂದದ್ದು ಒಂದೆಕ್ರೆ ವಿಸ್ತೀರ್ಣದಲ್ಲಿ ತುಂಬಿ ತುಳುಕುವ ಕೆರೆ! ಕೆರೆಯ ದಡದ ಸುತ್ತಲೂ ವಿವಿಧ ಜಾತಿಯ ಗಿಡಮರಗಳು..., ಆ ಗಿಡ ಮರಗಳತ್ತ ಎಲ್ಲೆಲ್ಲಿಂದಲೂ ಹಾರಿ ಬರುವ ಅಸಂಖ್ಯ ಹಕ್ಕಿಗಳು..., ನೀರಲ್ಲಿ ಈಜುವ ನೂರಾರು ಬಗೆಯ ಮೀನುಗಳು - ಈಜು ಹಕ್ಕಿಗಳು.

ಕಂಬಾರರು ಕ್ಷಣಮಾತ್ರದಲ್ಲಿ ಕಂಡ ಆ ಕೆರೆಯ ಕನಸು ನನಸಾಗದಿದ್ದರೆ ಅವರೊಳಗಿನ ಕವಿ ಕನಸು ಸುಮ್ಮನಿರುವುದಿದೆಯೆ! ಕೆರೆ ನಿರ್ಮಿಸುವುದೆಂದು ತೀರ್ಮಾನವಾಯಿತು. ಕೆರೆಯ ಕೆಲಸ ಮರುವಾರದಲ್ಲೇ ಆರಂಭವಾಯಿತು. ತಗ್ಗು ಭೂಮಿಯನ್ನು ಮತ್ತಷ್ಟು ತಗ್ಗುಗೊಳಿಸಲಾಯಿತು. ಕೆರೆಯ ಏರಿಯ ನಿರ್ಮಾಣವೂ ಮುಗಿಯಿತು. ಇನ್ನು ಬಾಕಿ ಉಳಿದಿರುವುದು ಹನಿ ನೀರಿಲ್ಲದ ಆ ಬರಡು ಭೂಮಿಗೆ ನೀರು ತರಿಸುವ ಕೆಲಸವಷ್ಟೆ ಸರಿ ನೀರೆಲ್ಲಿಂದ ತರಬೇಕು? ಬಾನಲ್ಲಿ ಮೋಡಕಟ್ಟಿಲ್ಲ ಪಕ್ಕದಲ್ಲಿ ಬೇರೆ ನೀರಿನ ಸೆಲೆಯಿಲ್ಲ ಸುಮಾರು ಒಂದೆರಡು ಫರ್ಲಾಂಗ್ ದೂರದಲ್ಲಿ ತುಂಗಭದ್ರೆಯ ನೀರನ್ನು ನೇರ ಆಂಧ್ರಕ್ಕೆ ಒಯ್ಯುವ 'ತುಂಗಭದ್ರಾ ಕಾಲುವೆ'ಯಿದೆ. ಆ ಕಾಲುವೆಯಿಂದ ಡೀಸೆಲ್‌ಪಂಪ್ ಜೋಡಿಸಿ ನೀರು ಹರಿಸುವ ಕೆಲಸ ಆರಂಭವಾಯಿತು. ಅತ್ತ

ಡೀಸೆಲ್ ಸುಡುತ್ತಿದ್ದೆ. ಆದರೆ ಇತ್ತ ಕೆರೆ ತುಂಬುತ್ತಿಲ್ಲ. ಹರಿದು ಬರುವ ನೀರನ್ನೆಲ್ಲ ಬಾಯಾರಿ ಕೂತ ಕೆರೆಯ ಬರಡು ಭೂಮಿ ನುಂಗುತ್ತಿದೆ. ಇದರ ಜತೆಗೆ ಆ ಕಾಲುವೆಗೆ ಸಂಬಂಧಿಸಿದ ಅಧಿಕಾರಿಗಳಿಂದ 'ನೀರು ಕೊಡಲಾರೆವೆಂಬ' ತಕರಾರು. ತಕರಾರಿನ ಬಿಸಿ ಏರುತ್ತಿದ್ದಂತೆ ಕಂಬಾರರು ನೇರ ಹೊರಟಿದ್ದು ತೆಲುಗುದೇಶಕ್ಕೆ. ಹೈದರಾಬಾದ್‌ನಲ್ಲಿ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ನೇರ ಭೇಟಿ ಮಾಡಿದ ಕಂಬಾರರು, ಕನ್ನಡ ವಿಶ್ವವಿದ್ಯಾಲಯದ ಬೆಳವಣಿಗೆ ಕನಸುಗಳು ಬಗ್ಗೆ ವಿವರಿಸಿ ಮುಖ್ಯಮಂತ್ರಿಗಳ ಮನವೊಲಿಸಲು ಸಫಲರಾದರು. ಚಂದ್ರಬಾಬುನಾಯ್ಡು ಅವರು ತಕ್ಷಣವೆ ನೀರಾವರಿಗೆ ಸಂಬಂಧಿಸಿದ ಮಂತ್ರಿಯನ್ನು ಕರೆಸಿ ಕನ್ನಡ ವಿಶ್ವವಿದ್ಯಾಲಯಕ್ಕೆ 2 ಕ್ಯೂಸೆಕ್ಸ್ ನೀರು ಬಿಡುವ ಆದೇಶ ನೀಡುವಂತೆ ಕ್ರಮಕೈಗೊಂಡರು.

ಕನ್ನಡ ವಿಶ್ವವಿದ್ಯಾಲಯದ ಬೆಳವಣಿಗೆಗೆ ಹಾಗೂ ಕಂಬಾರರ ಕನಸಿನ ಕೆರೆ ತುಂಬಲು ತನ್ನ ಕಿರುಗಾಣಿಕೆ ಎಂಬಂತೆ ಆಂಧ್ರದ ಮುಖ್ಯಮಂತ್ರಿ ಈ ರೀತಿ ಸಹಕರಿಸಿದರೂ, ಕೆರೆ ಮಾತ್ರ ತುಂಬುತ್ತಿಲ್ಲ! ಕಾಲುವೆಯಿಂದ ಹರಿದು ಬರುವ ನೀರನ್ನು ಕೆರೆಯ ಒಣಭೂಮಿ ನುಂಗುತ್ತಿರುವುದರ ಜತೆಗೆ ಅದು ಪಕ್ಕದ ರೈತ ಹೊಲ ಬಾವಿಗಳಿಗೂ ನೀರನ್ನು ರವಾನಿಸುತ್ತಿದೆ! ಈ ವಿಚಾರ ಕಂಬಾರ ಕಿವಿಗೂ ಬಿದ್ದಿಲ್ಲ ಕಣ್ಣಿಗೂ ಬಿದ್ದಿಲ್ಲ. ಕೆರೆಯಲ್ಲಂತೂ ನೀರು ತುಂಬುತ್ತಿಲ್ಲ. ಆದರೆ ಕೆರೆಗೆ ಹರಿದು ಬರುವ ನೀರಿಗಿಂತ ಹೆಚ್ಚು ಡೀಸೆಲ್ ಸುಡುತ್ತಿದೆ! ತುಂಬವ ಕೆರೆ ನೋಡಲು ದಿನಾ ಕಂಬಾರರ ಆಗಮನ. ದಿನಾ ನೀರಿನ ಮಟ್ಟ ಅಂಗುಲ ಅಂಗುಲದಷ್ಟೇ ಏರುತ್ತಿದೆ. ಕಂಬಾರರಿಗೆ ಇನ್ನಿಲ್ಲದ ನಿರಾಸೆ. ಈ ನಿರಾಸೆಯ ನಡುವೆಯೇ ಕಡೆ ಪಕ್ಷ ಭಗೀರಥನ ನೆಂಟಸ್ತನ ಮಾಡಿಯಾದರೂ ಕೆರೆಗೆ ನೀರು ತುಂಬಿಸುವ ಮತ್ತು ಆ ಕೆರೆಯ ನೀರಿನ ಮಟ್ಟವನ್ನು ಕಾಯುವ 'ನೀರಗಂಟಿ' ಕಾಯಕವನ್ನು ಕನ್ನಡದ ಕಥೆಗಾರ, ಭಾವಜೀವಿ ಅಮರೇಶ ನುಗಡೋಣಿ ಅವರ ಕೊರಳಿಗೆ ಕಟ್ಟಲಾಯಿತು. ಆದರೂ ನೀರಿನ ಮಟ್ಟ ಏರಲಿಲ್ಲ. ತಕ್ಷಣ ಕಾಲುವೆಯಿಂದ ಮತ್ತಷ್ಟು ನೀರು ವೇಗವಾಗಿ ಹರಿದು ಬರಲೆಂದು ಡೀಸೆಲ್ ಪಂಪ್‌ನ ಬದಲು ವಿದ್ಯುತ್ ಪಂಪು ಜೋಡಿಸಲಾಯಿತು. ನೀರಿನ ರಭಸಕ್ಕೆ ಬರಡು ಭೂಮಿಯ ಬಾಯರಿಕೆಯೂ ನಿಧಾನಕ್ಕೆ ಇಂಗತೊಡಗಿತ್ತೇನೊ? ಒಂದೆರಡು ದಿನಗಳಲ್ಲಿ ನೀರಿನ ಮಟ್ಟ ಏರತೊಡಗಿತ್ತು. ಜತೆಗೆ ಕಂಬಾರರ ಕನಸನ್ನು ಒಂದು ವಾರದ ಮಟ್ಟಿಗಾದರೂ ನನಸು ಮಾಡಲೆಂದು ಎಡಬಿಡದೆ ಮೂರು ದಿನಗಳ ಕಾಲ ಬಾನು ಸೀಳುವಂತೆ ಮಳೆ ಸುರಿಯಿತು. ಕೆರೆ ತುಂಬಿ ತುಳುಕಿತು. ಕಂಬಾರರು ತುಂಬಿದ ಕೆರೆಯನ್ನು ಕಂಡು ಸಂಭ್ರಮಿಸಿದರು. ಆ ಸಂಭ್ರಮದಲ್ಲೇ ಆ ಕೆರೆಗೆ 'ಚೋಮನಕೆರೆ' ಎಂದು ನಾಮಕರಣವಾಯಿತು. ಕಂಬಾರರು ಇತ್ತ ಕೆರೆಗೆ ನಾಮಕರಣ ಮಾಡುತ್ತಿರುವಾಗ ಅಕ್ಕ ಪಕ್ಕದ ಗದ್ದೆಗಳ ರೈತರು ಮುಸಿಮುಸಿ ನಕ್ಕರು. ಕಂಬಾರರ ಕನಸಿನ ಹುಂಬತನಕ್ಕೆ. 'ಅದು ಕಳ್‌ಭೂಮಿ ಕಣಾ... ನೀರನ್ನ ಅಂಗೆ ಭೇಸ್ ಈರ್‍ಕೊಂಬಿಡುತ್ತೆ. ಅಲ್ಲೆಂಗೆ ನೀರ್ ನಿಲ್ತಾವ, ಎಲ್ಡು ದಿನಕ್ಕೆ ನೀರ್ ಭೇಸ್ ಬಸ್ದು ಈ ಕಡಿ ಬರ್ದ್ರೆ ಕೇಳ್ ಮತ್ತೆ' ಎಂದು ಹೇಳುತ್ತ ಆ ಕೆರೆಗೆ ತಾವು ಗಾಳಿಕೆರೆ ಎಂದು ನಾಮಕರಣ ಮಾಡಿದ್ರು. ತುಂಬಿದ ಕೆರೆ, ದಡದ ಮೇಲೆ ಚೋಮನ ಶಿಲ್ಪ, ಅದರ ಸುತ್ತಲೂ ಗಿಡಮರಗಳು ಕಂಬಾರರ ಸಂಭ್ರಮವನ್ನು ಇಮ್ಮಡಿಗೊಳಿಸಿತ್ತು. ಕೆರೆ ತುಂಬಿದ ಎರಡು ದಿನಗಳಲ್ಲೇ ಕೆರೆಗೆ ಸಾವಿರಾರು ಮೀನು ಮರಿಗಳನ್ನು ಬಿಟ್ಟಾಯ್ತು.

ಮೀನು ಬಿಟ್ಟ ಎರಡೇ ಎರಡು ದಿನಕ್ಕೆ ಕಂಬಾರರ 'ಸಂಭ್ರಮ' ಕುಸಿಯ ತೊಡಗಿತ್ತು. ಕೆರೆಯ ನೀರು ಬಸಿದು ಹೋಗುತ್ತಿದೆ. ಕರೆಯ ನೀರಿನ ಮಟ್ಟ ಕುಸಿಯತೊಡಗಿತ್ತು. ಎಷ್ಟು ಪ್ರಯತ್ನಿಸಿದರೂ ಬಸಿಯುವ ನೀರನ್ನು ತಡೆಯಲಾಗುತ್ತಿಲ್ಲ. ಕಾಲುವೆಯಿಂದ ಮತ್ತಷ್ಟು ನೀರು ಹರಿಸಿದರೂ ಕೆರೆಯ ಬಸಿಯುವ ಬುದ್ಧಿ ಬದಲಾಗುತ್ತಿಲ್ಲ. ವಿದ್ಯುತ್ ಬಳಸಿ ಎಷ್ಟೆಂದು ನೀರು ಹರಿಸಲಾದೀತು. ವಾರದೊಳಗೆ ಚೋಮನಕೆರೆ ಬತ್ತಿ ಬಯಲಾಯ್ತು. ಕಂಬಾರರು ಕನಸು ಮುರಿದೋಯ್ತು. ಮೀನು ಮರಿಗಳು ಬೆಳ್ಳಕ್ಕಿಗಳ ಪಾಲಾದವು.

ಯಾವುದೇ ಕೆರೆ ನಿರ್ಮಾಣಕ್ಕೂ, ದೇಸೀಯವಾಗಿ ಪರಂಪರೆಯಿಂದ ಸಾಗಿ ಬಂದಿರುವ ಒಂದು ತಂತ್ರಜ್ಞಾನವಿದೆ ಎಂದು ಗ್ರಾಮೀಣ ಹಿನ್ನೆಲೆಯಿಂದ ಬಂದಿರುವ ಕಂಬಾರರು ಯಾಕೆ ಮರೆತರೋ? ಅವರ ಕನಸುಗಳು ಹೀಗೇ... ಅವರನ್ನು ಕೆಲವೊಮ್ಮೆ ಅಚಾನಕ್ಕಾಗಿ ದಾರಿ ತಪ್ಪಿಸುವುದಿದೆ. ಆದರೆ ಕಂಬಾರರು ತಮ್ಮ ಸುಂದರ ಕನಸುಗಳ ಬಲದಲ್ಲೇ ಕನ್ನಡಿಗರೆಲ್ಲರೂ ಅಭಿನಂಧಿಸುವಂತೆ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟಿದ್ದನ್ನು ಕನ್ನಡ ಜನಾಂಗವೆಂದು ಮರೆಯಲಾರದು.

# ಅನುಬಂಧಗಳು

| | | |
|---|---|---|
| ಜನ್ಮದಿನ | : | ಜನವರಿ 2, 1932 |
| ಜನ್ಮಸ್ಥಳ | : | ಘೋಡಗೇರಿ, ಹುಕ್ಕೇರಿ ತಾಲೂಕು, ಬೆಳಗಾಂ ಜಿಲ್ಲೆ, ಕರ್ನಾಟಕ |
| ವಿದ್ಯಾಭ್ಯಾಸ | : | ಬಿ.ಎ. ಪದವಿ (1958)<br>ಎಂ.ಎ. ಪದವಿ (1962)<br>ಪಿ.ಎಚ್.ಡಿ. ಪದವಿ (ಕರ್ನಾಟಕ ವಿಶ್ವವಿದ್ಯಾಲಯ, 1975) |
| ಅಧ್ಯಾಪನ | : | ಬೆಳಗಾವಿಯ ಕಾಲೇಜಿನಲ್ಲಿ ಅಧ್ಯಾಪಕತ್ವ 1962-1964<br>ಸಾಗರದ ಲಾಲ್‌ಬಹುದ್ದೂರ್ ಶಾಸ್ತ್ರಿ ಕಾಲೇಜಿನಲ್ಲಿ ಅಧ್ಯಾಪಕತ್ವ 1964-1967<br>ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕತ್ವ 1968-1970<br>ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕತ್ವ 1970-1991 |
| ಕುಲಪತಿ ಸ್ಥಾನ | : | ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿ, 1992-1998 |
| ಸಾಂಸ್ಕೃತಿಕ ಸ್ಥಾನಮಾನ | : | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರು 1980-83<br>ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರು, 1983-1991<br>ಮೈಸೂರಿನ 'ರಂಗಾಯಣ' ರೆಪರ್ಟರಿಯ ಸದಸ್ಯರು, 1987-1991<br>ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರು, 1988-1998, 1998-<br>(ಕಾರ್ಯ ನಿರ್ವಾಹಕ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ ಅವಧಿಯನ್ನು ಒಳಗೊಂಡಿದೆ.)<br>ಕೇಂದ್ರ ಸರಕಾರದ ಥಿಯೇಟರ್ ಎಕ್ಸಪರ್ಟ್ ಕಮಿಟಿಯ ಕಾರ್ಯನಿರ್ವಾಹಕ ಸದಸ್ಯರು, 1995<br>ಕೇಂದ್ರ ಸಂಗೀತ-ನಾಟಕ ಅಕಾಡೆಮಿಯ ಸದಸ್ಯರು, 1992-1996, 1998<br>(ಕಾರ್ಯನಿರ್ವಾಹಕ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ ಅವಧಿಯನ್ನು ಒಳಗೊಂಡಿದೆ.)<br>ರಾಷ್ಟ್ರೀಯ ನಾಟಕ ಶಾಲೆಯ ಕಾರ್ಯನಿರ್ವಾಹಕ ಸದಸ್ಯರು ಮತ್ತು ಉಪಾಧ್ಯಕ್ಷರು, 1995-1996<br>ರಾಷ್ಟ್ರೀಯ ನಾಟ ಶಾಲೆಯ (ಎನ್.ಎಸ್.ಡಿ.) ಅಧ್ಯಕ್ಷ, 1996-2000,<br>ಭೋಪಾಲ್, ಭಾರತ ಭವನದ ಥಿಯೇಟರ್ ಎಕ್ಸ್‌ಪರ್ಟ್ ಕಮಿಟಿಯ ಸದಸ್ಯರು |
| ಪ್ರಶಸ್ತಿ ಪುರಸ್ಕಾರಗಳು | : | ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಸನ್ಮಾನ, 1975<br>ಕೇರಳದ 'ಕುಮಾರನ್ ಆಶನ್' ಪ್ರಶಸ್ತಿ 1982<br>ಕೇಂದ್ರ ಸಂಗೀತ-ನಾಟಕ ಅಕಾಡೆಮಿ ಪ್ರಶಸ್ತಿ 1983<br>ನಂದಿಕಾರ್ ಪ್ರಶಸ್ತಿ ಕಲ್ಕತ್ತಾ, 1987<br>ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ 1988 |

| | | |
|---|---|---|
| | | ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1989 |
| | | ಕೆ.ವಿ. ಶಂಕರೇಗೌಡ ಪ್ರಶಸ್ತಿ 1990 |
| | | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1991 (ಸಿರಿಸಂಪಿಗೆ ಕೃತಿ) |
| | | ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ 1993 |
| | | ಮಾಸ್ತಿ ಪ್ರಶಸ್ತಿ 1997 |
| | | ಭಾರತ ಸರಕಾರದ 'ಪದ್ಮಶ್ರೀ' ಪ್ರಶಸ್ತಿ 2001 |
| | | ಕಬೀರ್ ಸಮ್ಮಾನ್, 2002 |
| ಚಲನಚಿತ್ರಗಳಿಗೆ ಪ್ರಶಸ್ತಿ ಪುರಸ್ಕಾರ | : | 1978ರ ಪನೋರಮವನ್ನು ಪ್ರವೇಶಿಸಿದ 'ಕಾಡುಕುದುರೆ'ಗೆ ಉತ್ತಮ ಹಿನ್ನೆಯ ಗಾಯನಕ್ಕಾಗಿ ರಾಷ್ಟ್ರಪ್ರಶಸ್ತಿ |
| | | 'ಸಂಗೀತ' ಚಲನಚಿತ್ರಕ್ಕೆ ತೃತೀಯ ಅತ್ಯುತ್ತಮ ಚಲನಚಿತ್ರವೆಂಬ ರಾಜ್ಯ ಪ್ರಶಸ್ತಿ |
| | | 'ಸಂಗೀತ'ದ ನಿರ್ದೇಶನ, ಕಥೆ, ಸಂಭಾಷಣೆ ಮತ್ತು ನಿರ್ದೇಶನಕ್ಕಾಗಿ ಪ್ರತ್ಯೇಕವಾಗಿ 4 ಪ್ರಶಸ್ತಿಗಳು |
| | | 'ಹರಕೆಯ ಕುರಿ' ಚಲನಚಿತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿ |
| | | 'ಸಿಂಗಾರವ್ವ ಮತ್ತು ಆರಮನೆ' ಚಲನಚಿತ್ರಕ್ಕೆ ಉತ್ತಮ ಪ್ರಾದೇಶಿಕ ಚಿತ್ರವೆಂಬ ರಾಷ್ಟ್ರಪ್ರಶಸ್ತಿ |
| ಕವನ ಸಂಕಲನಗಳು | : | ಮುಗುಳು, 1958 |
| | | ಹೇಳತೇನ ಕೇಳ, 1964 |
| | | ತಕರಾರಿನವರು, 1971 (ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ) |
| | | ಸಾವಿರದ ನೆರಳು, 1979 (ಕೇರಳದ ಅಜಾನ್ ಪ್ರಶಸ್ತಿ) |
| | | ಬೆಳ್ಳಿ ಮೀನು, 1989 |
| | | ಅಕ್ಕುಕ್ಕು ಹಾಡುಗಳೇ, 1993 |
| ಕಾವ್ಯ | : | ಚಕೋರಿ (ಮಹಾಕಾವ್ಯ) 1996 |
| ನಾಟಕಗಳು | : | ಬೆಂಬತ್ತಿದ ಕಣ್ಣು, 1961 |
| | | ನಾರ್ಸಿಸಸ್, 1979 |
| | | ಋಷ್ಯಶೃಂಗ, 1970 |
| | | ಜೋಕುಮಾರಸ್ವಾಮಿ, 1972 (ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ) |
| | | ಚಾಳೇಶ, 1973 |
| | | ಕಿಟ್ಟಿಯ ಕತೆ, 1974 |
| | | ಸಂಗ್ಯಾಬಾಳ್ಯಾ ಅನಬೇಕೋ ನಾಡೊಳಗ, 1975 |
| | | ಜೈ ಸಿದನಾಯಕ (ರಾಜ್ಯ ಸಾಹಿತ್ಯ ಅಕಾಡೆಮಿ ಮತ್ತು ವರ್ಧಮಾನ ಪ್ರಶಸ್ತಿ) |
| | | ನಾಯಿಕತೆ, 1976 (ಸಂಗೀತಾ ಹೆಸರಿನ ಸಿನಿಮಾ, 5 ರಾಜ್ಯ ಪ್ರಶಸ್ತಿ) |
| | | ಖರೋಖರ, 1977 |
| | | ಮತಾಂತರ / ಭಾರತಾಂಬೆ, 1978 |
| | | ಆಲೀಬಾಬ ಮತ್ತು ನಲವತ್ತು ಕಳ್ಳರು, 1980 |

| | | |
|---|---|---|
| | | ಹರಕೆಯ ಕುರಿ, 1983 (ಇದೇ ಹೆಸರಿನ ಸಿನಿಮಾ ರಾಷ್ಟ್ರೀಯ ಪ್ರಶಸ್ತಿ) |
| | | ಸಾಂಬಶಿವ ಪ್ರಹಸನ, 1987 |
| | | ತುಕ್ರನ ಕನಸು, 1989 |
| | | ಹುಲಿಯ ನೆರಳು, 1990 |
| | | ಪುಷ್ಪರಾಣಿ, 1990 |
| | | ಬೆಪ್ಪುತಕ್ಕಡಿ ಬೋಳೇಶಂಕರ, 1991 |
| | | ಸಿರಿಸಂಪಿಗೆ, 1991 (ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ) |
| | | ಮಹಾಮಾಯಿ, 1999 |
| ಕಾದಂಬರಿ | : | ಅಣ್ಣ ತಂಗಿ, 1956 |
| | | ಕರಿಮಾಯಿ, 1975 |
| | | ಸಿಂಗಾರೆವ್ವ ಮತ್ತು ಅರಮನೆ, 1982 (ಉತ್ತಮ ಪ್ರಾದೇಶಿಕ ಚಿತ್ರ) |
| | | ಜೀಕೆ ಮಾಸ್ತರರ ಪ್ರಣಯ ಪ್ರಸಂಗ |
| ಜಾನಪದ ಸಂಶೋಧನೆ ಸಂಪಾದನೆ | : | ಉತ್ತರ ಕರ್ನಾಟಕದ ಜನಪದ ರಂಗಭೂಮಿ, 1965 |
| | | ಸಂಗ್ಯಾಬಾಳ್ಯಾ 1966 |
| | | ಬಣ್ಣಿಸಿ ಹಾಡವ್ವ ಜನ ಬಳಗ 1968 |
| | | ಬಯಲಾಟಗಳು, 1973 |
| | | ಮಾತಾಡೋ ಲಿಂಗವೇ 1973 |
| | | ನಮ್ಮ ಜಾನಪದ 1980 |
| | | ಬಂದೀರೆ ನನ್ನ ಜಡೆವೊಳಗೆ 1981 |
| | | ಕನ್ನಡ ನಾಟಕ ಸಂಪುಟ 1982 |
| | | ಕನ್ನಡ ಜಾನಪದ ವಿಶ್ವಕೋಶ 1985 |
| | | ಲಕ್ಷಾಪತಿ ರಾಜನ ಕತೆ, 1986 |
| | | ಬೇಡರ ಹುಡುಗ ಮತ್ತು ಗಿಳಿ (1989 ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ) |
| | | ಕಾಸಿಗೊಂದು ಸೇರು 1989 |
| | | ನೆಲದ ಮರೆಯ ನಿದಾನ 1993 |
| | | ಬೃಹದ್ದೇಶಿಯ ಚಿಂತನ 2001 |
| | | An anthology of Modern Indian Plays for National School of Drama, 2000, Vol. I, Vol. II |




ಜೋಕುಮಾರಸ್ವಾಮಿ ನಾಟಕದಲ್ಲಿ ಕಂಬಾರರು



ನಾಟಕ ದೃಶ್ಯ : ಜೋಕುಮಾರಸ್ವಾಮಿ



ಹಿಂದಿ : ಮಹಾಮಾಯಿ




ಹಿಂದಿ : ಮಹಾಮಾಯಿ
ನಿರ್ದೇಶನ : ರಾಜೇಂದ್ರನಾಥ



ನಾಟಕ ಸಾಂಬಶಿವ : ನಿರ್ದೇಶನ - ಇಕ್ಬಾಲ್ ಅಹಮದ್



ಸಾಂಬಶಿವ



ಸಾಂಬಶಿವ



ನಾಟಕ ಸಿರಿಸಂಪಿಗೆ : ಭಾನುಭಾರತಿ




ನಾಟಕ : ಅಲೀಬಾಬಾ (ಹಿಂದಿ) ನಿರ್ದೇಶನ - ಬಿ. ವಿ. ಕಾರಂತ (ಎನ್.ಎಸ್.ಡಿ.)




ಅಲೀಬಾಬಾ



ಆಲೀಬಾಬಾ



ರಾಷ್ಟ್ರಪತಿಯವರಿಂದ ಪದ್ಮಶ್ರೀ ಪ್ರಶಸ್ತಿ ಪ್ರದಾನ



ಚಿತ್ರ ನಿರ್ದೇಶಕ : ಕಂಬಾರ



ಕಾಲೇಜಿನಲ್ಲಿ ಅಧ್ಯಾಪಕರಾಗಿ